ಗುರುವಾರ, ಫೆಬ್ರುವರಿ 17, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಂಸ್ಥಾಪನಾ ದಿನ

ನವದೆಹಲಿಯಲ್ಲಿ ಬುಧವಾರ ದೆಹಲಿ ಪೊಲೀಸರ 75ನೇ ಸಂಸ್ಥಾಪನಾ ದಿನಾಚರಣೆ ಪ್ರಯುಕ್ತ ಮಹಿಳಾ ಪೊಲೀಸ್ ಸಿಬ್ಬಂದಿ ಸೈಕಲ್ ಪಥ ಸಂಚಲನ ನಡೆಸಿದರು

Price Starting at ₹ 8.99 Lakh*

Test drive the all-new Kia Carens at your nearest showroom today!

Visit www.kia.com/in | Book Kia Carens | WhatsApp 09319591407 or Call 1800 108 5000 | Booking Amount ₹25 000 (Refundable**)

Carens
From a different world

Meet the all-new Kia Carens. High-tech by design and inspiring by nature, it is futuristic sophistication clothed in bold and edgy armour. The Carens experience is simply incredible, with perfection that belongs to a different world.

ROBUST 10 HI-SAFETY PACKAGE (STANDARD ACROSS ALL VARIANTS)

FIRST-IN-CLASS

6 Airbags, ESC, VSM, BAS, HAC, DBC (Downhill Brake Control), ABS, All Wheels Disc Brakes, Highline Tyre Pressure Monitoring System, and Rear Parking Sensors.

PETROL AND DIESEL ENGINES WITH MULTIPLE TRANSMISSION OPTIONS

BEST-IN-CLASS

Class-leading petrol and diesel engines mated to multiple transmissions for a peppy driving experience.

26.03 CM (10.25") HD TOUCHSCREEN NAVIGATION

BEST-IN-CLASS

Perfectly high-tech way to stay entertained, navigate, and connect with your world.

BOSE PREMIUM SOUND SYSTEM WITH 8 SPEAKERS



FIRST-IN-CLASS

Unparalleled audio experience sets the mood right for those epic voyages.

SKYLIGHT SUNROOF

FIRST-IN-CLASS

Think of it as your portal to a different world.

CABIN SURROUND 64-COLOR AMBIENT MOOD LIGHTING

FIRST-IN-CLASS

Personalisation at its best with 64-color ambient mood lighting to match your mood.

VENTILATED FRONT SEATS

FIRST-IN-CLASS

With days getting hotter, the driving experience gets cooler, while lounging in the lap of luxury.

SMART PURE AIR PURIFIER WITH VIRUS & BACTERIA PROTECTION#

FIRST-IN-CLASS

Clean cabin-air with protection from harmful virus and bacteria.

FULL DIGITAL LCD CLUSTER WITH 10.6 CM (4.2") TFT MULTI-INFORMATION DISPLAY

FIRST-IN-CLASS

High-tech and modern look with all the important information for driving precision.

KIA CONNECT - NEXT GEN CONNECTED CAR TECHNOLOGY

FIRST-IN-CLASS

Unmatched connected car experience with 66 smart features, including OTA Map & System updates.

HOST OF OTHER INSPIRING FEATURES **BOLD & FUTURISTIC EXTERIOR:** Kia Signature Tiger Face with Digital Radiator Grille | Star Map LED DRLs with Crown Jewel LED Headlamps | Star Map LED Tail Lamps | R16 - 40.62 cm (16'') Dual Tone Crystal Cut Alloy Wheels | Front & Rear Parking Sensors **SPACE-AGE & INDULGENT INTERIOR:** 2nd Row One-touch Easy Electric Tumble Seat | Multi-drive Modes - Sport, Normal & Eco | Sporty Paddle Shifters | Smartphone Wireless Charger with Cooling Function | Roof Flushed 2nd & 3rd Row Diffused AC Vents | Rear Door Spot Lamps with Kia Logo Projection | Seat Back Table with Cup Holder and Gadget Mount | Seat Under-tray | Cooling Cup & Can Holders | Easy Push Dashboard Cup Holder & Tray | 5 USB Type-C Ports | Rear Sunshade Curtains | 3rd Row 50:50 Split Seats with Reclining and Full Flat Folding Option

Comfort of home while you roam.

Space is what inspires you to be truly you. That's why the Kia Carens offers you class-leading cabin space with plush 3-row seating comfort in 6 & 7 seater options to carry your world with you.

6 Seater

7 Seater

KIA Service
Connected • Adaptive • Responsive • Engage

High on experiences, low on cost of ownership @ ₹0.37~ per km with many more benefits.

3 Years Unlimited kms Warranty	Extended Warranty up to 5 Years	My Convenience Plus Comprehensive Maintenance Package	Scratch Care Program	IoT Based Smart Services

Wherever you go, we stay with you.	200 City Coverage	350 Consumer Touchpoints	242 Service Workshops	24x7 | 3 Years Nationwide RSA^

Get 10% Cashback (Up to ₹2500) on online bookings with ICICI Bank Credit / Debit Card+

For more information contact: 1800 108 5000
Look for "Kia India" @

Scan to discover more

T&C Apply. *Ex-showroom price all India. ~Maintenance cost of Kia Carens 1.4T GDi in Delhi market for 50 000 kms under pre-defined circumstances. The product shown is for representation purpose only, actual features, colors and specifications as shown may not be part of standard fitment and may vary. Visit your nearest Kia dealership for more details. ^RSA Coverage across India except Andaman & Nicobar Islands and Lakshadweep. Class is defined as 3-row seater car with overall length less than 4 550 mm & height more than 1 680 mm. Kia Connect functionality is dependent on mobile network strength. Smartwatch and mobile phone are not provided with the vehicle. #The tests of protection from Virus & Bacteria are conducted with a defined process, under particular circumstances in a controlled environment and the results may vary. +Offer valid only on online bookings done on Kia India's official website & loan disbursement from ICICI Bank till March 31, 2022. Maximum cashback amount is ₹2 500. Loan & cashback is subject to the terms & conditions of ICICI Bank. **On cancellation of booking, payment made through online mode will be processed after a deduction of ₹250 as a processing charges levied by payment gateway. Kia India Pvt. Ltd. (Formerly known as Kia Motors India Pvt. Ltd.) reserves the right to make any changes with respect to the trims, colors, specifications and other details of any model as mentioned or to discontinue any model or to modify/discontinue any service without prior notice. Kia urges you to follow traffic rules, these are meant to keep you safe on roads. No liability accepted for errors and printing errors.

INNOCEAN-003/22

FOR INFORMATION CONTACT: BANGALORE: PPS KIA, MYSORE ROAD, PH: 6309990010, JSP AUTOCORE, HOSUR ROAD, PH: 9606011244, MARATHAHALLI RING ROAD, PH: 9071077717, TAAPASI KIA, KALYAN NAGAR, PH: 8095537777 VST CENTRAL, PALACE ROAD, PH: 9606988123, YESHWANTHPUR, PH: 9606988124 ADVAITH KIA, LALBAGH MAIN ROAD, PH: 9611006006 EPITOME KIA, WHITEFIELD, PH: 9606970216, YELAHANKA PH: 7406343339, NAARA MOTORS, J.P NAGAR, PH: 7406528200 **BELAGAVI:** NAGSHANTI KIA, PH: 9019928670 **BELLARY:** ATHENA KIA, PH: 6364922831 **BIJAPUR:** KUMAR KIA, PH: 9606458516 **DAVANGERE:** JANSI KIA, PH: 9538018155 **HASSAN:** AADARSH KIA, PH: 9606034050 **HUBLI:** NAGSHANTI KIA, AMARGOL, PH: 9148432469 **GULBARGA:** KUMAR KIA, PH: 7829990763 **KOLAR:** EPITOME KIA, PH: 8951903224 **KUSHALNAGAR:** A.R.M KIA, PH: 9606055314 **MANDYA:** VOLANZO CARS PVT LTD, PH: 9606034070 **MANGALORE:** A.R.M. KIA, PH: 9606013152 **MYSORE:** VOLANZO CARS PVT LTD, VIJAYNAGAR, PH: 9606034060 **SHIMOGA:** JANSI KIA, PH: 9538416666 **TUMKUR:** PPS KIA, PH:6303622210 **UDUPI:** A.R.M. KIA, PH: 9606055296

ದಲಿತ ಸಂತ, ಗುರು ಜಯಂತಿಯಲ್ಲಿ ಬಿಜೆಪಿ, ಕಾಂಗ್ರೆಸ್, ಎಎಪಿ, ಬಿಎಸ್‌ಪಿ ನಾಯಕರು ಭಾಗಿ

ಎಲ್ಲಾ ಪಕ್ಷಗಳಿಂದ ಗುರು ರವಿದಾಸ್ ಭಜನೆ

ವಾರಾಣಸಿ/ನವದೆಹಲಿ (ಪಿಟಿಐ): ಅಸ್ಪೃಶ್ಯತೆ, ಜಾತಿಬೇಧ ಮತ್ತು ಲಿಂಗ ತಾರತಮ್ಯದ ವಿರುದ್ಧ 15–16ನೇ ಶತಮಾನದಲ್ಲಿ ಹೋರಾಡಿದ್ದ ಕವಿ ಮತ್ತು ಸಂತ ಗುರು ರವಿದಾಸ್ ಅವರ ಜಯಂತಿಯಲ್ಲಿ ಪ್ರಮುಖ ಪಕ್ಷಗಳು ಭಾಗಿಯಾಗಿವೆ. ದಲಿತರ ಸಬಲೀಕರಣಕ್ಕಾಗಿ ಶ್ರಮಿಸಿದ್ದ ರವಿದಾಸ್ ಅವರಿಗೆ ಉತ್ತರ ಪ್ರದೇಶ ಮತ್ತು ಪಂಜಾಬ್‌ನಲ್ಲಿ ಲಕ್ಷಾಂತರ ಅನುಯಾಯಿಗಳು ಇದ್ದಾರೆ. ಚುನಾವಣೆ ಮಧ್ಯೆ ಬಂದಿರುವ ರವಿದಾಸ್ ಅವರ ಜಯಂತಿಯನ್ನು ತಮ್ಮ ಪ್ರಚಾರಕ್ಕಾಗಿ ಕಾಂಗ್ರೆಸ್, ಬಿಜೆಪಿ, ಬಿಎಸ್‌ಪಿ ಮತ್ತು ಎಎಪಿ ಬಳಸಿಕೊಂಡಿವೆ.

ಪ್ರತಿ ವರ್ಷದ ಮಾಘ ಪೂರ್ಣಿಮೆ ದಿನದಂದು ಗುರು ರವಿದಾಸ್ ಅವರ ಜಯಂತಿ ಆಚರಿಸಲಾಗುತ್ತದೆ. ರವಿದಾಸ್ ಅವರ ಜನ್ಮಸ್ಥಳವಾದ ವಾರಾಣಸಿಯ ಸೀರ್ ಗೋವರ್ಧನಕ್ಕೆ, ಆ ದಿನದಂದು ಉತ್ತರ ಪ್ರದೇಶ ಮತ್ತು ಪಂಜಾಬ್‌ನಿಂದ ಲಕ್ಷಾಂತರ ಮಂದಿ ಅನುಯಾಯಿಗಳು ಭೇಟಿ ನೀಡುತ್ತಾರೆ. ರವಿದಾಸ್ ಅವರ ಮಂದಿರ ಇರುವೆಡೆಯಲ್ಲಿ ಅನ್ನಸಂತರ್ಪಣೆ, ಭಜನೆ–ಕೀರ್ತನೆ ಕಾರ್ಯಕ್ರಮಗಳು ನಡೆಯುತ್ತವೆ.

ಪಂಜಾಬ್ ವಿಧಾನಸಭೆಗೆ ಫೆಬ್ರುವರಿ 14ರಂದು ಒಂದೇ ಹಂತದಲ್ಲಿ ಮತದಾನ ನಡೆಸಲು ಚುನಾವಣಾ ಆಯೋಗವು ಈ ಮೊದಲು ಸಿದ್ಧತೆ ಮಾಡಿಕೊಂಡಿತ್ತು. ರವಿದಾಸ್ ಜಯಂತಿಗಾಗಿ ರಾಜ್ಯದಿಂದ ಲಕ್ಷಾಂತರ ಮಂದಿ ವಾರಾಣಸಿಗೆ ಹೋಗುವ ಕಾರಣ, ಮತದಾನಕ್ಕೆ ಜನರು ಲಭ್ಯವಿರುವುದಿಲ್ಲ. ಹೀಗಾಗಿ ಫೆಬ್ರುವರಿ 20ಕ್ಕೆ ಮತದಾನವನ್ನು ಆಯೋಗವು ಮುಂದೂಡಿತ್ತು.

ದಲಿತರ ಪ್ರಮುಖ ಗುರುವಾದ ರವಿದಾಸ್ ಅವರ ಅನುಯಾಯಿಗಳಲ್ಲಿ ದಲಿತರದ್ದೇ ಬಹುಸಂಖ್ಯೆ. ಪಂಜಾಬ್‌ನ ಒಟ್ಟು ಮತದಾರರಲ್ಲಿ ರವಿದಾಸ್ ಅವರ ಅನುಯಾಯಿಗಳ ಪ್ರಮಾಣ ಶೇ 12ಕ್ಕೂ ಹೆಚ್ಚು. ಉತ್ತರ ಪ್ರದೇಶದ ಹಲವೆಡೆ ಇವರು ನಿರ್ಣಾಯಕ ಸ್ಥಾನದಲ್ಲಿದ್ದಾರೆ. ಹೀಗಾಗಿ ರಾಜಕೀಯ ಪಕ್ಷಗಳು ಈ ಅವಕಾಶವನ್ನು ತಮ್ಮ ಪ್ರಚಾರಕ್ಕೆ ಬಳಸಿಕೊಳ್ಳುತ್ತಿವೆ. ಎಲ್ಲಾ ಪಕ್ಷಗಳ ನಾಯಕರು ರವಿದಾಸ್ ಅವರನ್ನು ಸ್ಮರಿಸಿಕೊಳ್ಳುತ್ತಿವೆ ಎಂದು ತಜ್ಞರು ವಿಶ್ಲೇಷಿಸಿದ್ದಾರೆ.

ಪಂಜಾಬ್ ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಅವರು ಬುಧವಾರ ಬೆಳಿಗ್ಗೆ ಸೀರ್ ಗೋವರ್ಧನಕ್ಕೆ ಭೇಟಿ ನೀಡಿ ಪ್ರಾರ್ಥನೆ ಸಲ್ಲಿಸಿದ್ದಾರೆ. ನಂತರದ ಕೆಲವೇ ಗಂಟೆಗಳಲ್ಲಿ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಸಹ ಜನ್ಮಸ್ಥಳಕ್ಕೆ ಭೇಟಿ ನೀಡಿದ್ದಾರೆ. ಅಲ್ಲಿ ನಡೆಯುತ್ತಿದ್ದ ಅನ್ನಸಂತರ್ಪಣೆಯಲ್ಲಿ ಯೋಗಿ ಆದಿತ್ಯನಾಥ ಅವರು ಸಹಪಂಕ್ತಿ ಭೋಜನ ಮಾಡಿದ್ದಾರೆ. ತಾವು ಪ್ರಸಾದ ಸ್ವೀಕರಿಸುತ್ತಿರುವ ಮತ್ತು ಪ್ರಾರ್ಥನೆ ಸಲ್ಲಿಸುತ್ತಿರುವ ವಿಡಿಯೊವನ್ನು ಯೋಗಿ ಟ್ವೀಟ್ ಮಾಡಿದ್ದಾರೆ. ಬಿಎಸ್‌ಪಿ ಮುಖ್ಯಸ್ಥೆ ಮತ್ತು ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿ ಮಾಯಾವತಿ ಸಹ ಇಲ್ಲಿಗೆ ಭೇಟಿ ನೀಡಿ ಪ್ರಾರ್ಥನೆ ಸಲ್ಲಿಸಿದ್ದಾರೆ.

ಪಂಜಾಬ್‌ನಲ್ಲಿ ಈ ಬಾರಿ ಸ್ಪರ್ಧೆಗೆ ಇಳಿದಿರುವ ಎಎಪಿ ಸಹ ತನ್ನ ಪ್ರಚಾರ ಕಾರ್ಯಕ್ರಮಗಳಲ್ಲಿ ಗುರು ರವಿದಾಸ್ ಅವರ ಸ್ಮರಣೆ ಮಾಡಿದೆ. ದೆಹಲಿಯ ಎಎಪಿ ಸರ್ಕಾರವು ಫೆಬ್ರುವರಿ 16ರಂದು ಗುರು ರವಿದಾಸ್ ಜಯಂತಿಯ ಅಂಗಾಗಿ ಸರ್ಕಾರಿ ರಜೆ ಘೋಷಿಸಿದೆ.

ಶ್ರೀ ಗುರು ರವಿದಾಸ್ ವಿಶ್ರಾಂತ ಧಾಮ ಮಂದಿರದಲ್ಲಿ ನಡೆದ ಕೀರ್ತನೆ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾಗಿಯಾಗಿದ್ದರು –ಪಿಟಿಐ ಚಿತ್ರ

ಕೀರ್ತನೆಯಲ್ಲಿ ಮೋದಿ

ದೆಹಲಿಯ ಕರೋಲ್‌ಬಾಗ್‌ನಲ್ಲಿರುವ ಶ್ರೀ ಗುರು ರವಿದಾಸ್ ವಿಶ್ರಾಂತ ಧಾಮ ಮಂದಿರಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಬುಧವಾರ ಭೇಟಿ ನೀಡಿ, ಪ್ರಾರ್ಥನೆ ಸಲ್ಲಿಸಿದರು. ಮಂದಿರದಲ್ಲಿ ರವಿದಾಸ್ ಅವರ ಅನುಯಾಯಿಗಳು ನಡೆಸುತ್ತಿದ್ದ ಕೀರ್ತನೆ ಕಾರ್ಯಕ್ರಮದಲ್ಲಿ ಮೋದಿ ಅವರು ಭಾಗಿಯಾಗಿದ್ದಾರೆ.

ಕೀರ್ತನೆ ನಡೆಸುತ್ತಿದ್ದವರ ಜತೆಯಲ್ಲಿ ಕುಳಿತು ಮೋದಿ ಅವರು ಗಿಲಕಿ ನುಡಿಸಿದ್ದಾರೆ. ಮೋದಿ ಅವರ ಭಾಗಿಯಾಗುವಿಕೆಯಿಂದ ಪ್ರೇರಣೆಗೊಂಡು ಮತ್ತಷ್ಟು ಅನುಯಾಯಿಗಳು ಕೀರ್ತನೆ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದಾರೆ. ತಾವು ಕೀರ್ತನೆಯಲ್ಲಿ ಭಾಗಿಯಾದುದರ ವಿಡಿಯೊವನ್ನು ಮೋದಿ ಅವರು ತಮ್ಮ ವೈಯಕ್ತಿಕ ಟ್ವಿಟರ್ ಖಾತೆಯಲ್ಲಿ ಟ್ವೀಟ್ ಮಾಡಿದ್ದಾರೆ. ಈ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.

ಅಲ್ಲದೆ, ತಾವು ಪ್ರಾರ್ಥನೆ ಸಲ್ಲಿಸುತ್ತಿರುವ ವಿಡಿಯೊ ಮತ್ತು ಮಂದಿರದ ಸಂದರ್ಶಕರ ಡೈರಿಯಲ್ಲಿ ತಾವು ಬರೆದ ಪುಟದ ಚಿತ್ರವನ್ನು ಮೋದಿ ಟ್ವೀಟ್ ಮಾಡಿದ್ದಾರೆ.

ಅನ್ನಸಂತರ್ಪಣೆಯಲ್ಲಿ ರಾಹುಲ್, ಪ್ರಿಯಾಂಕಾ ಸೇವೆ

ವಾರಾಣಸಿಯ ಸೀರ್ ಗೋವರ್ಧನ್‌ನಲ್ಲಿ ಗುರು ರವಿದಾಸ್ ಅವರ ಜಯಂತಿಯ ಅಂಗವಾಗಿ ಬುಧವಾರ ನಡೆದ ಅನ್ನಸಂತರ್ಪಣೆಯಲ್ಲಿ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಮತ್ತು ನಾಯಕ ರಾಹುಲ್ ಗಾಂಧಿ ಅವರು ಭಾಗಿಯಾಗಿದ್ದರು.

ಅನ್ನಸಂತರ್ಪಣೆ ವೇಳೆ ಇಬ್ಬರೂ ನಾಯಕರು ಊಟ ಬಡಿಸಿದರು. ಆ ವಿಡಿಯೊವನ್ನು ಕಾಂಗ್ರೆಸ್ ಟ್ವೀಟ್ ಮಾಡಿದೆ. ಸಾವಿರಾರು ಜನರು ವಿಡಿಯೊವನ್ನು ಹಂಚಿಕೊಂಡಿದ್ದಾರೆ. 'ಗುರು ರವಿದಾಸ್ ಅವರ ಜಯಂತಿಯಂದು ಅವರ ಜನ್ಮಸ್ಥಳಕ್ಕೆ ಭೇಟಿ ನೀಡಿದ್ದು ಖುಷಿ ನೀಡಿದೆ. ಅಲ್ಲಿಗೆ ನನ್ನ ಅಣ್ಣನೊಂದಿಗೆ ಹೋಗಿದ್ದು ಮತ್ತಷ್ಟು ಸಂತಸ ನೀಡಿದೆ' ಎಂದು ಪ್ರಿಯಾಂಕಾ ಗಾಂಧಿ ಹೇಳಿದ್ದಾರೆ.

ವಾರಾಣಸಿಯ ಸೀರ್ ಗೋವರ್ಧನದಲ್ಲಿ ನಡೆದ ಅನ್ನಸಂತರ್ಪಣೆಯಲ್ಲಿ ರಾಹುಲ್ ಗಾಂಧಿ ಅವರು ಊಟ ಬಡಿಸಿದರು –ಪಿಟಿಐ ಚಿತ್ರ

ಅಸ್ಪೃಶ್ಯತೆ ಮತ್ತು ಅಸಮಾನತೆ ನಿವಾರಣೆಗಾಗಿ ಗುರು ರವಿದಾಸ್ ಅವರು ತಮ್ಮ ಜೀವನ ಮುಡುಪಾಗಿಟ್ಟಿದ್ದರು. ಅವರ ಜನ್ಮಸ್ಥಳದ ಅಭಿವೃದ್ಧಿಗೆ ನಾನು ಶ್ರಮಿಸುತ್ತೇನೆ
ನರೇಂದ್ರ ಮೋದಿ, ಪ್ರಧಾನಿ

ಗುರು ರವಿದಾಸ್ ಅವರ ಬೋಧನೆಯಿಂದ ಸ್ಫೂರ್ತಿ ಪಡೆದುಕೊಂಡೇ ಪ್ರಧಾನಿ ನರೇಂದ್ರ ಮೋದಿ ಅವರು 'ಎಲ್ಲರ ಜತೆ, ಎಲ್ಲರ ವಿಕಾಸ'ದ ಹಾದಿಯಲ್ಲಿ ನಡೆಯುತ್ತಿದ್ದಾರೆ
ಯೋಗಿ ಆದಿತ್ಯನಾಥ, ಉ.ಪ್ರ. ಸಿಎಂ

ಗುರು ರವಿದಾಸ್ ಮತ್ತು ಅಂಬೇಡ್ಕರ್ ಅವರ ವಿಚಾರಗಳ ಪ್ರೇರಣೆಯಿಂದಲೇ ಎಎಪಿ ದೆಹಲಿಯಲ್ಲಿ ಶಿಕ್ಷಣ ವ್ಯವಸ್ಥೆಯನ್ನು ಮರುರೂಪಿಸಿದೆ
ಸಂಜಯ್ ಸಿಂಗ್, ಎಎಪಿ ನಾಯಕ

ಈ ಎಲ್ಲಾ ಪಕ್ಷಗಳು ದಲಿತರ ಗುರು ರವಿದಾಸ್ ಅವರನ್ನು ಕಡೆಗಣಿಸಿದ್ದವು. ಈಗ ಚುನಾವಣೆ ಕಾರಣಕ್ಕಾಗಿ ದಲಿತರನ್ನು ಓಲೈಸಲು ರವಿದಾಸ್ ಅವರ ಕಾಲಿಗೆ ಬೀಳುತ್ತಿವೆ
ಮಾಯಾವತಿ, ಬಿಎಸ್‌ಪಿ ನಾಯಕಿ

ಒಕ್ಕೂಟ ವ್ಯವಸ್ಥೆ ರಕ್ಷಣೆ ಉದ್ದೇಶ

20ಕ್ಕೆ ಕೆಸಿಆರ್–ಉದ್ಧವ್ ಭೇಟಿ

ಪ್ರಜಾವಾಣಿ ವಾರ್ತೆ

ಕೆಸಿಆರ್

ಉದ್ಧವ್

ಹೈದರಾಬಾದ್: ತೆಲಂಗಾಣ ಮುಖ್ಯಮಂತ್ರಿ ಹಾಗೂ ಟಿಆರ್‌ಎಸ್ ಮುಖ್ಯಸ್ಥ ಕೆ.ಚಂದ್ರಶೇಖರ ರಾವ್ (ಕೆಸಿಆರ್) ಅವರು ಫೆ.20ರಂದು ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರನ್ನು ಭೇಟಿಯಾಗಲಿದ್ದಾರೆ. ಬಿಜೆಪಿಯ ಜನವಿರೋಧಿ ನೀತಿಗಳ ವಿರುದ್ಧ ತಾವು ಆರಂಭಿಸಿರುವ ಅಭಿಯಾನದ ಭಾಗವಾಗಿ ಕೆಸಿಆರ್ ಅವರು ಠಾಕ್ರೆ ಅವರನ್ನು ಭೇಟಿ ಮಾಡಲು ನಿರ್ಧರಿಸಿದ್ದಾರೆ.

ಶಿವಸೇನಾ ಮುಖ್ಯಸ್ಥರೂ ಆಗಿರುವ ಠಾಕ್ರೆ ಅವರು ಕೆಸಿಆರ್ ಅವರಿಗೆ ಬುಧವಾರ ದೂರವಾಣಿ ಕರೆ ಮಾಡಿ, ಮುಂಬೈಗೆ ಬರುವಂತೆ ಆಹ್ವಾನಿಸಿದರು ಎಂದು ತೆಲಂಗಾಣ ಮುಖ್ಯಮಂತ್ರಿ ಕಚೇರಿ ಮೂಲಗಳು ತಿಳಿಸಿವೆ.

ಬಿಜೆಪಿ ನೀತಿಗಳ ವಿರುದ್ಧ ಹೋರಾಟ ಹಾಗೂ ಒಕ್ಕೂಟ ವ್ಯವಸ್ಥೆಯನ್ನು ಎತ್ತಿಹಿಡಿಯುವ ರಾವ್ ಅವರ ಹೋರಾಟಕ್ಕೆ ಸಂಪೂರ್ಣ ಬೆಂಬಲ ನೀಡುವುದಾಗಿ ಠಾಕ್ರೆ ಘೋಷಿಸಿದ್ದಾರೆ. ಕೆಸಿಆರ್ ಜೊತೆಗೆ ಮುಂದಿನ ಕ್ರಮಗಳ ಕುರಿತು ಚರ್ಚಿಸಲಾಗುವುದು ಎಂದು ಠಾಕ್ರೆ ತಿಳಿಸಿದ್ದಾರೆ. ವಿಭಜಕ ಶಕ್ತಿಗಳಿಂದ ದೇಶವನ್ನು ರಕ್ಷಿಸಲು ಸೂಕ್ತ ಸಮಯದಲ್ಲಿ ಕೆಸಿಆರ್ ಮುಂದಾಗಿದ್ದಾರೆ ಎಂದು ಠಾಕ್ರೆ ಅಭಿಪ್ರಾಯಪಟ್ಟಿದ್ದಾರೆ.

ಎನ್‌ಡಿಎ ಸರ್ಕಾರ ಹಾಗೂ ಬಿಜೆಪಿ ವಿರುದ್ಧದ ಹೋರಾಟಕ್ಕೆ ಪ್ರಾದೇಶಿಕ ಪಕ್ಷಗಳನ್ನು ಒಟ್ಟುಗೂಡಿಸುವ ನಿಟ್ಟಿನಲ್ಲಿ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹಾಗೂ ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರನ್ನು ಭೇಟಿ ಮಾಡುವುದಾಗಿ ಕೆಸಿಆರ್ ಭಾನುವಾರ ತಿಳಿಸಿದ್ದರು. ಈ ಹೋರಾಟದಲ್ಲಿ ಬಿಜೆಪಿಯೇತರ ಪಕ್ಷಗಳನ್ನು ಕಲೆಹಾಕಲು ಮುಂದಾಗಿದ್ದೇನೆ ಎಂದು ಅವರು ಹೇಳಿದ್ದರು.

ದೇವೇಗೌಡ, ಮಮತಾ ಬೆಂಬಲ: ಒಕ್ಕೂಟ ವ್ಯವಸ್ಥೆ ರಕ್ಷಣೆಗಾಗಿ ಆರಂಭಿಸಿರುವ ಹೋರಾಟವನ್ನು ಬೆಂಬಲಿಸಿ ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಅವರು ಕೆಸಿಆರ್ ಅವರಿಗೆ ಮಂಗಳವಾರ ಕರೆ ಮಾಡಿದ್ದರು. ಇದೇ ವಿಚಾರವಾಗಿ ಚರ್ಚಿಸಲು ಬೆಂಗಳೂರಿಗೆ ಬರುವುದಾಗಿ ದೇವೇಗೌಡ ಅವರಿಗೆ ಕೆಸಿಆರ್ ತಿಳಿಸಿದ್ದರು.

ಮಮತಾ

ಒಕ್ಕೂಟ ವ್ಯವಸ್ಥೆಯನ್ನು ರಕ್ಷಿಸುವ ನಿಟ್ಟಿನಲ್ಲಿ ತೆಲಂಗಾಣ ಮುಖ್ಯಮಂತ್ರಿ ಕೆಸಿಆರ್ ಹಾಗೂ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರ ಜೊತೆ ಮಾತುಕತೆ ನಡೆಸಿದ್ದೇನೆ ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಈ ಹಿಂದೆ ಹೇಳಿದ್ದರು. ಈ ಕುರಿತು ಮಾತನಾಡಲು ಮಮತಾ ಅವರು ಸದ್ಯದಲ್ಲೇ ಹೈದರಾಬಾದ್‌ಗೆ ಭೇಟಿ ನೀಡುವ ಸಾಧ್ಯತೆಯಿದೆ.

ಕೇಂದ್ರದ ಒತ್ತಡಕ್ಕೆ ಮಣಿದು ರಾಜ್ಯಗಳ ಹಕ್ಕುಗಳನ್ನು ನಾವು ಬಿಟ್ಟುಕೊಡುವುದಿಲ್ಲ. ಯಾವುದೇ ಸವಾಲನ್ನಾದರೂ ಎದುರಿಸುತ್ತೇವೆ
ಎಂ.ಕೆ. ಸ್ಟಾಲಿನ್
ತಮಿಳುನಾಡು ಮುಖ್ಯಮಂತ್ರಿ

ನಾನು ಹೊರಗಿನವಳಲ್ಲ, ಕೌಶಂಬಿ ಸೊಸೆ: ಪಲ್ಲವಿ

ಪ್ರಜಾವಾಣಿ ವಾರ್ತೆ

ಕೌಶಂಬಿ (ಉತ್ತರ ಪ್ರದೇಶ): 'ನಾನು ಹೊರಗಿನವಳಲ್ಲ, ಕೌಶಂಬಿಯ ಸೊಸೆ' ಎಂದು ಅಪ್ನಾ ದಳ (ಕೆ) ಅಭ್ಯರ್ಥಿ ಪಲ್ಲವಿ ಪಟೇಲ್ ಹೇಳಿದ್ದಾರೆ.

ಉತ್ತರ ಪ್ರದೇಶದ ಉಪ ಮುಖ್ಯಮಂತ್ರಿ ಕೇಶವ್ ಪ್ರಸಾದ್ ಮೌರ್ಯ ಅವರ ವಿರುದ್ಧ ಸಿರಾತು ಕ್ಷೇತ್ರದಿಂದ ಪಲ್ಲವಿ ಸ್ಪರ್ಧಿಸುತ್ತಿದ್ದಾರೆ. ಮೌರ್ಯ ಅವರು 'ಸಿರಾತು ಮಗ' ಎಂದು ಹೇಳಿಕೊಳ್ಳುವುದಕ್ಕೆ ತಿರುಗೇಟು ನೀಡಿರುವ ಪಲ್ಲವಿ, 'ಮೌರ್ಯ ಅವರು ಈ ಜಿಲ್ಲೆಯ ಮಗ ಎಂಬುದನ್ನು ನಾನು ಅಲ್ಲಗಳೆಯುವುದಿಲ್ಲ. ಆದರೆ ನಾನು ಮದುವೆ ಆಗಿ ಬಂದಿದ್ದು ಕೌಶಂಬಿಗೆ. ಹಾಗಾಗಿ ನಾನು ಈ ಜಿಲ್ಲೆಯ ಸೊಸೆ' ಎಂದು ಹೇಳಿದ್ದಾರೆ.

'ಕೇಶವ್ ಪ್ರಸಾದ್ ಮೌರ್ಯ ಅವರ ಬಗ್ಗೆ ಜನರು ಅಸಮಾಧಾನ ಹೊಂದಿದ್ದಾರೆ. ಅವರು ಸ್ಪರ್ಧಿಸುತ್ತಿರುವುದು ಜನರ ವಿರುದ್ಧ ಹೊರತು ಎದುರಾಳಿ ಅಭ್ಯರ್ಥಿ ವಿರುದ್ಧ ಅಲ್ಲ. ಇಲ್ಲಿಯ ಜನರಿಗೆ ನಾನೇ ಪ್ರಮುಖ ಆಯ್ಕೆ' ಎಂದು ಹೇಳಿದರು.

ಮೌರ್ಯ ಅವರನ್ನು ನಾನು ಕೆಲಸಕ್ಕೆ ಬಾರದವರು ಎಂದು ಕರೆದಿದ್ದೆ. ಈಗಲೂ ಆ ಮಾತಿಗೆ ಬದ್ಧಳಾಗಿದ್ದೇನೆ. ಜನರಿಗೆ ನೀಡಿದ್ದ ಭರವಸೆಯನ್ನು ಅವರು ಈಡೇರಿಸಿಲ್ಲ
ಪಲ್ಲವಿ ಪಟೇಲ್
ಅಪ್ನಾ ದಳ (ಕೆ) ಅಭ್ಯರ್ಥಿ

ಅಪ್ನಾ ದಳ (ಕೆ) ಮುಖ್ಯಸ್ಥೆ ಪಲ್ಲವಿ ಪಟೇಲ್ ಅವರು, ಕೇಂದ್ರ ಸಚಿವೆ ಮತ್ತು ಅಪ್ನಾದಳ (ಎಸ್) ಅಧ್ಯಕ್ಷೆ ಅನುಪ್ರಿಯಾ ಪಟೇಲ್ ಅವರ ಸೋದರಿ. ಸಮಾಜವಾದಿ ಪಕ್ಷದ ಜೊತೆ ಪಲ್ಲವಿ ಅವರ ಪಕ್ಷ ಚುನಾವಣಾ ಪೂರ್ವ ಮೈತ್ರಿ ಮಾಡಿಕೊಂಡಿದೆ.

ಪ್ರತಾಪಗಡದಲ್ಲಿ ಕೃಷ್ಣಾ ಪಟೇಲ್ ವಿರುದ್ಧ ಕಣಕ್ಕಿಳಿಸಲಾಗಿದ್ದ ಅಪ್ನಾ ದಳ (ಎಸ್) ಅಭ್ಯರ್ಥಿಯನ್ನು ಅನುಪ್ರಿಯಾ ಪಟೇಲ್ ಅವರು ಕಣದಿಂದ ವಾಪಸ್ಸು ಪಡೆದ್ದರು. ಈ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, 'ಅಪ್ನಾ ದಳ (ಎಸ್) ಅಭ್ಯರ್ಥಿಯನ್ನು ಅವರು ಕಣದಿಂದ ವಾಪಸ್ಸು ತೆಗೆದುಕೊಳ್ಳಲಿಲ್ಲ, ಬದಲಾಗಿ ಬಿಜೆಪಿಗೆ ಪ್ರತಾಪಗಡಿದಿಂದ ಸ್ಪರ್ಧಿಸುವ ಅವಕಾಶ ನೀಡಿದರು. ತಾಯಿ ಕುರಿತು ಅನುಪ್ರಿಯಾ ಅವರಿಗೆ ಅಷ್ಟೊಂದು ಗೌರವ ಇದ್ದಿದ್ದರೆ ಅವರ ವಿರುದ್ಧ ಅಭ್ಯರ್ಥಿಯನ್ನು ಕಣಕ್ಕಿಳಿಸುವುದು ಬೇಡ ಎಂದು ಬಿಜೆಪಿಗೆ ಹೇಳುತ್ತಿದ್ದರು' ಎಂದು ಹೇಳಿದ್ದಾರೆ.

ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದ ಅವರು, 'ಬಿಜೆಪಿ ದೃಷ್ಟಿಯಲ್ಲಿ ಚುನಾವಣೆಗೂ ಮುನ್ನ ಎಲ್ಲರೂ ಹಿಂದೂಗಳು. ಚುನಾವಣೆ ಮುಗಿಯುತ್ತಿದ್ದಂತೆ ಅವರಲ್ಲಿ ಅರ್ಧದಷ್ಟು ಜನರು ದಲಿತರು ಮತ್ತು ಉಳಿದವರು ಹಿಂದುಳಿದ ವರ್ಗದವರು' ಎಂದು ಹೇಳಿದರು.

ಮೊದಲ ಮತ್ತು ಎರಡನೇ ಹಂತದ ಮತದಾನ ನಡೆದ ರೀತಿ ನೋಡಿದರೆ ರಾಜ್ಯದಲ್ಲಿ ಬಿಜೆಪಿ ಸೋಲುವುದು ಖಚಿತ. ಈ ಬಾರಿಯ ಚುನಾವಣೆ ನಡೆಯುತ್ತಿರುವುದು ಕಾಮೇರಾ (ದಿನಗೂಲಿ ಕಾರ್ಮಿಕ) ಮತ್ತು ಲೂಟೇರ (ದರೋಡೆಕೋರರು) ನಡುವೆ ಎಂದರು. ಜೊತೆಗೆ, ಈ ಬಾರಿಯ ವಿಧಾನಸಭೆ ಚುನಾವಣೆಯಲ್ಲಿ 403 ಕ್ಷೇತ್ರಗಳಲ್ಲಿ 300ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಎಸ್‌ಪಿ ಗೆಲ್ಲಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಟ್ರ್ಯಾಕ್ಟರ್ ಏರಿ ಪ್ರಿಯಾಂಕಾ ಮತಯಾಚನೆ; ಪಂಜಾಬ್ ಮುಖ್ಯಮಂತ್ರಿ ಚನ್ನಿ, ಸಿಧು ಪರ ಪ್ರಚಾರ

'ಬಿಜೆಪಿ, ಎಎಪಿ ಒಂದೇ ನಾಣ್ಯದ ಎರಡು ಮುಖ'

ಚಂಡೀಗಢ (ಪಿಟಿಐ): ಪಂಜಾಬ್ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿರುವ ಪಕ್ಷದ ಅಭ್ಯರ್ಥಿಗಳ ಪರ ಪ್ರಚಾರ ನಡೆಸಿದ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಅವರು ಬಿಜೆಪಿ ಹಾಗೂ ಆಮ್ ಆದ್ಮಿ ಪಕ್ಷಗಳನ್ನು ತರಾಟೆಗೆ ತೆಗೆದುಕೊಂಡರು. 'ಬಿಜೆಪಿ ಹಾಗೂ ಎಎಪಿ ಒಂದೇ ನಾಣ್ಯದ ಎರಡು ಮುಖಗಳು' ಎಂದು ಅವರು ಆರೋಪಿಸಿದರು.

ಬಿಜೆಪಿ ಪ್ರಚಲಿತಕ್ಕೆ ತಂದಿದ್ದ 'ಗುಜರಾತ್ ಮಾದರಿ' ಹಾಗೂ ಎಎಪಿ ಪ್ರಚುರಪಡಿಸುತ್ತಿರುವ 'ದೆಹಲಿ ಮಾದರಿ'ಗಳು ವಿಫಲವಾಗಿವೆ ಎಂದು ಹೇಳಿದರು. ಎರಡೂ ಪಕ್ಷಗಳು ಹೊಸ ರೀತಿಯ ರಾಜಕೀಯದ ಭರವಸೆ ನೀಡುವ ಮೂಲಕ ಜನರನ್ನು ಮೂರ್ಖರನ್ನಾಗಿಸುತ್ತಿವೆ ಎಂದು ದೂರಿದರು.

ಜನಸಂಪರ್ಕ ಅಭಿಯಾನದ ಭಾಗವಾಗಿ, ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಅವರ ಪರವಾಗಿ ರೂಪ್‌ನಗರ ಜಿಲ್ಲೆಯಲ್ಲಿ ಟ್ರ್ಯಾಕ್ಟರ್ ಹತ್ತಿ ಪ್ರಚಾರ ನಡೆಸಿದ ಪ್ರಿಯಾಂಕಾ, ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷ ನವಜೋತ್ ಸಿಂಗ್ ಸಿಧು ಅವರ ಪರವಾಗಿ ಅಮೃತಸರದಲ್ಲಿ ಮತ ಯಾಚನೆ ಮಾಡಿದರು.

'ಎಎಪಿ ಕಾಂಗ್ರೆಸ್‌ನ ಪಡಿಯಚ್ಚು'

'ಆಮ್ ಆದ್ಮಿ ಪಕ್ಷವು ಕಾಂಗ್ರೆಸ್‌ನ ಪಡಿಯಚ್ಚು. ನಾವು ಪಂಜಾಬ್ ಅನ್ನು ಪಂಜಾಬಿ ದೃಷ್ಟಿಕೋನದಿಂದ ನೋಡಿದರೆ, ಈ ಪಕ್ಷಗಳು ರಾಜಕೀಯ ಮಹತ್ವಾಕಾಂಕ್ಷೆಯಿಂದ ನೋಡುತ್ತಿವೆ' ಎಂದು ಪ್ರಧಾನಿ ನರೇಂದ್ರ ಮೋದಿ ಟೀಕಿಸಿದ್ದಾರೆ. ಪಠಾಣ್‌ಕೋಟ್‌ನಲ್ಲಿ ನಡೆದ ರ‍್ಯಾಲಿಯಲ್ಲಿ ಅವರು ಬಿಜೆಪಿ ಅಭ್ಯರ್ಥಿಗಳ ಪರ ಮತ ಯಾಚಿಸಿದ್ದಾರೆ.

'ನಮಗೆ ಈ ಐದು ವರ್ಷ ಒಂದು ಅವಕಾಶ ನೀಡಿ. ಪಂಜಾಬ್ ಅನ್ನು ಅಭಿವೃದ್ಧಿಪಡಿಸುತ್ತೇವೆ. ಇಲ್ಲಿನ ರೈತರು, ವ್ಯಾಪಾರಿಗಳು ಮತ್ತು ಉದ್ಯಮಿಗಳ ಆದಾಯವನ್ನು ಹೆಚ್ಚಿಸುತ್ತೇವೆ. ಈ ಕಾರಣಕ್ಕಾಗಿ ನೀವು ನಮಗೊಂದು ಅವಕಾಶ ನೀಡಬೇಕು' ಎಂದು ಪ್ರಧಾನಿ ಮೋದಿ ಮತದಾರರನ್ನು ಕೋರಿದ್ದಾರೆ.

ಇತ್ತೀಚೆಗೆ ಜಲಂಧರ್ ರ‍್ಯಾಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಸಿಖ್ಖರ ಟರ್ಬನ್ (ಪೇಟ) ಧರಿಸಿದ್ದನ್ನು ಪ್ರಿಯಾಂಕಾ ಟೀಕಿಸಿದರು. 'ವ್ಯಕ್ತಿಯೊಬ್ಬರು ರಾಜಕೀಯ ವೇದಿಕೆ ಮೇಲೆ ಟರ್ಬನ್ ಧರಿಸಿದ ಕೂಡಲೇ ಅವರು ಸರ್ದಾರ್ ಆಗಲು ಸಾಧ್ಯವಿಲ್ಲ' ಎಂದು ಮೂದಲಿಸಿದರು.

'ಯಾರು ನಿಜವಾದ ಸರ್ದಾರ್ ಎಂಬುದನ್ನು ಅವರಿಗೆ (ಪ್ರಧಾನಿಗೆ) ಅರ್ಥಮಾಡಿಸಿ. ಸಿಖ್ಖರ ಈ ಪೇಟದ ಹಿಂದೆ ಅಪ್ರತಿಮ ಧೈರ್ಯ ಹಾಗೂ ಕಠಿಣ ಪರಿಶ್ರಮ ಇದೆ ಎಂಬುದನ್ನು ತಿಳಿಸಿ. ಈ ಪಂಜಾಬ್ ನಾಡು ಪಂಜಾಬಿಗಳಿಗೆ ಸೇರಿದ್ದು ಎಂದು ತಿಳಿಹೇಳಿ' ಎಂದು ಅವರು ಮತದಾರರಿಗೆ ಕರೆ ನೀಡಿದರು.

ಆರ್‌ಎಸ್‌ಎಸ್‌ನಿಂದ ಆಮ್ ಆದ್ಮಿ ಪಕ್ಷ ಹುಟ್ಟಿದೆ ಎಂದು ಹೇಳಿರುವ ಅವರು, ಎಎಪಿ ಅಳವಡಿಸಿಕೊಂಡಿರುವ ಸಿದ್ಧಾಂತಗಳು ಬಿಜೆಪಿಯ ಸಿದ್ಧಾಂತಗಳನ್ನೇ ಬಹುತೇಕ ಹೋಲುತ್ತವೆ ಎಂದು ಹೇಳಿದ್ದಾರೆ.

'ಪಂಜಾಬ್‌ನಲ್ಲಿ ಪ್ರಮುಖ ಪ್ರತಿಪಕ್ಷವಾಗಿರುವ ಎಎಪಿ, ದೆಹಲಿಯಲ್ಲಿ ಏನೂ ಮಾಡಿಲ್ಲ. ದೆಹಲಿ ಸರ್ಕಾರ ವಿಫಲವಾಗಿದೆ' ಎಂದು ಪ್ರಿಯಾಂಕಾ ಆರೋಪಿಸಿದರು.

'2014ರಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವಾಗ ಗುಜರಾತ್ ಮಾದರಿ ಆಡಳಿತದ ಭರವಸೆ ನೀಡಿತ್ತು. ಬಳಿಕ ಏನಾಯಿತು ಎಂಬುದು ಎಲ್ಲರಿಗೂ ತಿಳಿದಿದೆ. ಈ ಚುನಾವಣೆಯಲ್ಲಿ ಎಎಪಿ ಮಾತನಾಡುತ್ತಿರುವ ದೆಹಲಿ ಮಾದರಿ ಆಡಳಿತದ ಬಗ್ಗೆ ಜನರು ಜಾಗ್ರತೆಯಿಂದ ಇರಬೇಕು' ಎಂದು ಎಚ್ಚರಿಕೆ ನೀಡಿದ್ದಾರೆ.

ಗುಜರಾತ್ ಮಾದರಿಯ ವಾಸ್ತವವನ್ನು ಜನರು ನೋಡಿದ್ದಾರೆ. ಯಾರಿಗೂ ಕೆಲಸ ಸಿಗಲಿಲ್ಲ. ಯಾರ ವ್ಯಾಪಾರವೂ ಏಳಿಗೆ ಕಾಣಲಿಲ್ಲ. ಇದೀಗ ಎಎಪಿ ದೆಹಲಿ ಮಾದರಿಯನ್ನು ಪ್ರಸ್ತಾಪಿಸುತ್ತಿದೆ ಎಂದು ಅವರು ವಿವರಿಸಿದರು.

'ದೆಹಲಿಯಲ್ಲಿ ಆರೋಗ್ಯ, ಶಿಕ್ಷಣ ಅಥವಾ ಉದ್ಯೋಗ ಕ್ಷೇತ್ರದಲ್ಲಿ ಯಾವ ಬೆಳವಣಿಗೆಯೂ ಆಗಿಲ್ಲ. ಇದನ್ನು ಅರ್ಥಮಾಡಿಕೊಳ್ಳಿ' ಎಂದು ಪ್ರಿಯಾಂಕಾ ಹೇಳಿದರು.

'ಹೊರಗಿನಿಂದ ಬಂದಿರುವ ಜನರು ಪಂಜಾಬಿತನದ ಬಗ್ಗೆ ಮಾತನಾಡುತ್ತಾರೆ. ಆದರೆ ನಿಜವಾದ ಪಂಜಾಬಿತನ ಏನೆಂದು ಅವರಿಗೆ ಅರ್ಥಮಾಡಿಸಿ' ಎಂದು ಹೇಳಿದ ಅವರು, ತಾವು ಪಂಜಾಬಿ ಕುಟುಂಬದವರನ್ನು ವಿವಾಹವಾಗಿರುವುದಾಗಿ ತಿಳಿಸಿದರು.

ಸಿಧು ಪರ ಚುನಾವಣಾ ಪ್ರಚಾರ ನಡೆಸಿದ ಪ್ರಿಯಾಂಕಾ ಗಾಂಧಿ ಅವರ ಮೇಲೆ ಹೂಮಳೆಗರೆಯಲಾಯಿತು –ಪಿಟಿಐ ಚಿತ್ರ

ಬಿಜೆಪಿ ನಾಯಕರಿಗೆ 'ವಿಐಪಿ' ಭದ್ರತೆ

ಉತ್ತರ ಪ್ರದೇಶ, ಪಂಜಾಬ್ ವಿಧಾನಸಭೆ ಚುನಾವಣೆ

ನವದೆಹಲಿ (ಪಿಟಿಐ): ವಿಧಾನಸಭಾ ಚುನಾವಣೆ ನಡೆಯುತ್ತಿರುವ ಉತ್ತರ ಪ್ರದೇಶ ಮತ್ತು ಪಂಜಾಬ್‌ನಲ್ಲಿ ಬಿಜೆಪಿಯ 20ಕ್ಕಿಂತಲೂ ಹೆಚ್ಚು ನಾಯಕರಿಗೆ ಕೇಂದ್ರ ಸರ್ಕಾರವು ಗಣ್ಯರಿಗೆ ನೀಡುವ ಭದ್ರತೆ (ವಿಐಪಿ) ಒದಗಿಸಿದೆ ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

ಸಮಾಜವಾದಿ ಪಕ್ಷದ (ಎಸ್‌ಪಿ) ಅಧ್ಯಕ್ಷ ಅಖಿಲೇಶ್ ಯಾದವ್ ಅವರ ವಿರುದ್ಧ ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸುತ್ತಿರುವ ಕೇಂದ್ರ ಸಚಿವ ಬಘೇಲ್ ಅವರಿಗೆ 'ಝಡ್' ಶ್ರೇಣಿಯ ಭದ್ರತೆ ಒದಗಿಸಲಾಗಿದೆ. ಉತ್ತರ ಪ್ರದೇಶದ ಮೈನ್‌ಪುರಿ ಜಿಲ್ಲೆಯಲ್ಲಿ ಬಘೇಲ್ ಅವರ ವಾಹನದ ಮೇಲೆ ಎಸ್‌ಪಿಯ ಗೂಂಡಾಗಳು ದಾಳಿ ನಡೆಸಿದ್ದಾರೆ ಎಂದು ಮಂಗಳವಾರ ತಡರಾತ್ರಿ ಬಿಜೆಪಿ ಆರೋಪಿಸಿತ್ತು. ಹೀಗೆ ಆರೋಪಿಸಿದ ಮರುದಿನವೇ ಈ ಘೋಷಣೆ ಮಾಡಲಾಗಿದೆ. ಭದ್ರತೆ ಪಡೆದಿರುವ ನಾಯಕರಲ್ಲಿ ಕೆಲವರಿಗೆ ಚುನಾವಣಾ ಪ್ರಕ್ರಿಯೆ ಮುಗಿಯುವವರೆಗೆ ಮಾತ್ರ ಭದ್ರತೆ ನೀಡಲಾಗಿದೆ. ಇನ್ನೂ ಕೆಲವರಿಗೆ ಚುನಾವಣೆ ನಂತರವೂ ಭದ್ರತೆ ಮುಂದುವರೆಯಲಿದೆ ಎಂದು ಮೂಲಗಳು ತಿಳಿಸಿವೆ.

ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆ (ಸಿಐಎಸ್‌ಎಫ್) ಮತ್ತು ಕೇಂದ್ರೀಯ ಮೀಸಲು ಪೊಲೀಸ್ ಪಡೆಗೆ (ಸಿಆರ್‌ಪಿಎಫ್) ಭದ್ರತೆ ಒದಗಿಸುವ ಜವಾಬ್ದಾರಿಯನ್ನು ನೀಡಲಾಗಿದೆ.

ಬಘೇಲ್ ಜೊತೆಗೆ ದೆಹಲಿಯ ಬಿಜೆಪಿ ಸಂಸದ, ಗಾಯಕ ಹಂಸರಾಜ್ ಹಂಸ್ ಅವರಿಗೂ ಝಡ್ ಶ್ರೇಣಿಯ ಭದ್ರತೆ ನೀಡಲಾಗಿದೆ. ಉತ್ತರ ಪ್ರದೇಶದ ಭದೋಹಿಯ ಸಂಸದ ರಮೇಶ್ ಚಂದ್ ಬಿಂದ್ ಅವರಿಗೆ 'ಎಕ್ಸ್' ಶ್ರೇಣಿಯ ಭದ್ರತೆ ನೀಡಲಾಗಿದೆ. ಸುಮಾರು 20 ರಾಜಕೀಯ ನಾಯಕರಿಗೆ ಸಿಆರ್‌ಪಿಎಫ್‌ನ ಭದ್ರತೆ ಒದಗಿಸಲಾಗಿದೆ.

ಪಂಜಾಬ್‌ನಲ್ಲಿ ಸುಖ್ವಿಂದರ್ ಸಿಂಗ್ ಬಿಂದ್ರಾ, ಎಸ್‌ಎಡಿ (ಸಂಯುಕ್ತ) ಪಕ್ಷದ ನಾಯಕ ಮತ್ತು ಅಭ್ಯರ್ಥಿ ಪರ್ಮಿಂದರ್ ಸಿಂಗ್ ದಿಂಡ್ಸಾ ಮತ್ತು ಅವ್ತಾರ್ ಸಿಂಗ್ ಝಿರಾ ಅವರಿಗೆ ಭದ್ರತೆ ನೀಡಲಾಗಿದೆ. ಮಾ.10ರಂದು ಮತ ಎಣಿಕೆ ಮುಗಿದ ಬಳಿಕ ಇವರ ಭದ್ರತೆ ಹಿಂಪಡೆಯಲಾಗುವುದು ಎಂದು ಮೂಲಗಳು ತಿಳಿಸಿವೆ.

ಎಸ್‌ಪಿ ಗೂಂಡಾಗಳಿಂದ ದಾಳಿ: ಬಘೇಲ್

'ಮೈನ್‌ಪುರಿ ಜಿಲ್ಲೆ ಕರ್ಹಾಲ್‌ನಿಂದ ಸ್ಪರ್ಧಿಸಿರುವ ಕೇಂದ್ರ ಸಚಿವ ಸತ್ಯಪಾಲ್ ಸಿಂಗ್ ಬಘೇಲ್ ಅವರ ಬೆಂಗಾವಲು ಪಡೆ ಮೇಲೆ ಸಮಾಜವಾದಿ ಪಕ್ಷದ ಗೂಂಡಾಗಳು ದಾಳಿ ನಡೆಸಿದ್ದಾರೆ' ಎಂದು ಉತ್ತರ ಪ್ರದೇಶ ಸರ್ಕಾರದ ಉಪಮುಖ್ಯಮಂತ್ರಿ ಕೇಶವ್ ಪ್ರಸಾದ್ ಮೌರ್ಯ ಅವರು ಆರೋಪಿಸಿದ್ದಾರೆ.

ಸಚಿವ ಬಘೇಲ್ ಅವರು ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಅವರ ವಿರುದ್ಧ ಕಣಕ್ಕಿಳಿದಿದ್ದಾರೆ.

ರಾಹುಲ್ ವಿರುದ್ಧ ವಿವಾದಾತ್ಮಕ ಹೇಳಿಕೆ ಹಿಮಂತ ವಿರುದ್ಧ ಎಫ್‌ಐಆರ್ ದಾಖಲು

ಹೈದರಾಬಾದ್: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ವಿರುದ್ಧ ವಿವಾದಾತ್ಮಕ ಹೇಳಿಕೆ ನೀಡಿದ ಆರೋಪದ ಮೇರೆಗೆ ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರ ವಿರುದ್ಧ ಹೈದರಾಬಾದ್ ಪೊಲೀಸರು ಬುಧವಾರ ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ.

'ತೆಲಂಗಾಣ ಪ್ರದೇಶ ಕಾಂಗ್ರೆಸ್ ಸಮಿತಿ (ಟಿಪಿಸಿಸಿ) ಅಧ್ಯಕ್ಷ ಹಾಗೂ ಪಕ್ಷದ ಸಂಸದ ಎ. ರೇವಂತ್ ರೆಡ್ಡಿ ಅವರು ನೀಡಿದ ದೂರಿನ ಮೇರೆಗೆ ಇಲ್ಲಿನ ಜ್ಯುಬಿಲಿ ಹಿಲ್ಸ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಫೆ. 11ರಂದು ಉತ್ತರಾಖಂಡದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಹಿಮಂತ ಬಿಸ್ವಾ ಶರ್ಮಾ ಅವರು ರಾಹುಲ್ ಗಾಂಧಿ ಅವರ ವಿರುದ್ಧ ಉದ್ದೇಶಪೂರ್ವಕಾಗಿ ವಿವಾದಾತ್ಮಕ ಹೇಳಿಕೆ ನೀಡಿದ್ದಾರೆ' ಎಂದು ರೇವಂತ್ ರೆಡ್ಡಿ ದೂರಿನಲ್ಲಿ ಆರೋಪಿಸಿದ್ದಾರೆ.

'ಕಾನೂನು ಅಭಿಪ್ರಾಯವನ್ನು ಪಡೆದ ನಂತರ ಸಂಬಂಧಿತ ಐಪಿಸಿ ಸೆಕ್ಷನ್‌ಗಳ ಅಡಿಯಲ್ಲಿ ಅಸ್ಸಾಂ ಮುಖ್ಯಮಂತ್ರಿ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಹಿರಿಯ ಪೊಲೀಸರು ಮಾಹಿತಿ ನೀಡಿದ್ದಾರೆ.

2016ರ ಸೆಪ್ಟೆಂಬರ್‌ನಲ್ಲಿ ನಡೆದ ಸರ್ಜಿಕಲ್ ದಾಳಿಗೆ ಸಂಬಂಧಿಸಿದಂತೆ ರಾಹುಲ್ ಗಾಂಧಿ ಅವರು ಕೇಂದ್ರ ಸರ್ಕಾರಕ್ಕೆ ಪುರಾವೆ ಕೇಳಿದ್ದರು. ಇದಕ್ಕೆ ಪ್ರತಿಯಾಗಿ 'ರಾಹುಲ್, ರಾಜೀವ್ ಗಾಂಧಿ ಅವರ ಪುತ್ರ ಎನ್ನುವುದಕ್ಕೆ ಬಿಜೆಪಿ ಎಂದಾದರೂ ಪುರಾವೆ ಕೇಳಿದೆಯೇ?' ಎಂದು ಹಿಮಂತ ಶರ್ಮಾ ಪ್ರಶ್ನಿಸಿದ್ದರು.

ಚುನಾವಣಾ ಕಣದಲ್ಲಿ....

- ಸಮಾಜವಾದಿ ಪಕ್ಷವು ಉತ್ತರ ಪ್ರದೇಶದಲ್ಲಿ ಅಧಿಕಾರಕ್ಕೆ ಬಂದರೆ, ಲಖಿಂಪುರ ಖೇರಿ ಹಿಂಸಾಚಾರಕ್ಕೆ ಕಾರಣರಾದ ಎಲ್ಲರನ್ನೂ ಜೈಲಿಗೆ ಕಳುಹಿಸಲಾಗುವುದು ಎಂದು ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಅವರು ಹೇಳಿದ್ದಾರೆ. ಪ್ರಕರಣದ ಪ್ರಮುಖ ಆರೋಪಿಯಾಗಿರುವ ಕೇಂದ್ರ ಸಚಿವ ಅಜಯ್ ಮಿಶ್ರಾ ಅವರ ಮಗ ಆಶಿಶ್ ಮಿಶ್ರಾ ಅವರು ಜಾಮೀನಿನ ಮೇಲೆ ಹೊರಬಂದಿರುವ ಹಿನ್ನೆಲೆಯಲ್ಲಿ ಅವರು ರಾಜ್ಯ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದ್ದಾರೆ
- ಕೇವಲ ಸ್ಥಳೀಯ ಪಿಸ್ತೂಲ್ ತಯಾರಾಗುತ್ತಿದ್ದ ಲಖನೌ ಇನ್ನು ಮುಂದೆ ಬ್ರಹ್ಮೋಸ್ ಕ್ಷಿಪಣಿ ತಯಾರಿಕೆ ಕೇಂದ್ರವಾಗಿ ಬದಲಾಗಲಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದ್ದಾರೆ. 'ನಾವು ಹೇಳಿದಂತೆ ಮಾಡುತ್ತೇವೆ. ಜಮ್ಮು ಕಾಶ್ಮೀರಕ್ಕೆ ವಿಶೇಷಾಧಿಕಾರ ನೀಡುವ 370ನೇ ವಿಧಿ ರದ್ದು ಮಾಡುವ ಭರವಸೆ ನೀಡಿದ್ದೆವು. ಸಂಸತ್ತಿನಲ್ಲಿ ಬಹುಮತ ಸಿಕ್ಕ ಕೂಡಲೇ ಇದನ್ನು ಈಡೇರಿಸಿದ್ದೇವೆ' ಎಂದು ಅವರು ಹೇಳಿದ್ದಾರೆ. ಮಲಿಹಾಬಾದ್‌ನಲ್ಲಿ ಬಿಜೆಪಿ ಅಭ್ಯರ್ಥಿ ಪರವಾಗಿ ಅವರು ಬುಧವಾರ ಚುನಾವಣಾ ಪ್ರಚಾರ ನಡೆಸಿದರು

ಕಾನ್ಪುರದಲ್ಲಿ ಬುಧವಾರ ನಡೆದ ಬಿಜೆಪಿ ಪ್ರಚಾರ ರ‍್ಯಾಲಿಯಲ್ಲಿ ಕೇಂದ್ರ ಸಚಿವ ರಾಜನಾಥ್ ಸಿಂಗ್ ಅವರಿಗೆ ಪ್ರತಿಮೆ ಉಡುಗೊರೆ ನೀಡಲಾಯಿತು

- ಉತ್ತರ ಪ್ರದೇಶದಲ್ಲಿ ತಮ್ಮ ಪಕ್ಷದ ಪರವಾಗಿ ಮತ ಚಲಾಯಿಸುವಂತೆ ಜನರಿಗೆ ಬೆದರಿಕೆ ಹಾಕಿದ ಆರೋಪದ ಮೇಲೆ ಬಿಜೆಪಿ ಮುಖಂಡ ಟಿ.ರಾಜಾ ಸಿಂಗ್ ಅವರಿಗೆ ಚುನಾವಣಾ ಆಯೋಗ ನೋಟಿಸ್ ನೀಡಿದೆ. ನೋಟಿಸ್‌ಗೆ ಉತ್ತರಿಸಲು 24 ಗಂಟೆಗಳ ಗಡುವು ನೀಡಿದೆ. ತೆಲಂಗಾಣದ ಬಿಜೆಪಿ ಶಾಸಕರೂ ಆಗಿರುವ ಸಿಂಗ್ ಅವರು ಚುನಾವಣಾ ನೀತಿ ಸಂಹಿತೆ, ಭಾರತೀಯ ದಂಡ ಸಂಹಿತೆಯ ನಿಯಮಗಳನ್ನು ಉಲ್ಲಂಘಿಸಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ ಎಂದು ನೋಟಿಸ್‌ನಲ್ಲಿ ಉಲ್ಲೇಖಿಸಲಾಗಿದೆ
- ಉತ್ತರ ಪ್ರದೇಶದ ಶಹಜಹಾನ್‌ಪುರ ಕ್ಷೇತ್ರದ ಮತದಾನ ಮುಕ್ತಾಯವಾದ ಬಳಿಕ ಸೋಮವಾರ ರಾತ್ರಿ ತಮ್ಮ ಮನೆಗಳ ಮೇಲೆ ಬಿಜೆಪಿ ಅಭ್ಯರ್ಥಿ ಸಲೋನಾ ಕುಶ್ವಾಹ ಹಾಗೂ ಅವರ ಬೆಂಬಲಿಗರು ಗುಂಡಿನ ದಾಳಿ ನಡೆಸಿದ್ದಾರೆ ಎಂದು ಎಸ್‌ಪಿ ಅಭ್ಯರ್ಥಿ ರೋಷನ್‌ಲಾಲ್ ವರ್ಮಾ ಅವರ ಪುತ್ರ ಮನೋಜ್ ಕುಮಾರ್ ಅವರು ದೂರು ನೀಡಿದ್ದಾರೆ. ಬಿಜೆಪಿ ಅಭ್ಯರ್ಥಿ ಹಾಗೂ ಬೆಂಬಲಿಗರ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಆದರೆ ಬಿಜೆಪಿ ಕಾರ್ಯಕರ್ತನನ್ನು ಎಸ್‌ಪಿ ಕಾರ್ಯಕರ್ತರು ಥಳಿಸಿದ್ದಾರೆ ಎಂದು ಬಿಜೆಪಿ ಆರೋಪ ಹೊರಿಸಿದೆ

ವನ್ನಿಯರ್ ಮೀಸಲಾತಿ ಪ್ರಕರಣ: ವಿಸ್ತೃತ ಪೀಠಕ್ಕೆ ವರ್ಗಾಯಿಸಲು 'ಸುಪ್ರೀಂ' ನಿರಾಕರಣೆ

ನವದೆಹಲಿ (ಪಿಟಿಐ): ತಮಿಳುನಾಡಿನ ಅತ್ಯಂತ ಹಿಂದುಳಿದ ವನ್ನಿಯರ್ ಸಮುದಾಯದವರಿಗೆ ಸರ್ಕಾರಿ ಉದ್ಯೋಗ ಮತ್ತು ಶೈಕ್ಷಣಿಕ ಸಂಸ್ಥೆಗಳ ಪ್ರವೇಶದಲ್ಲಿ ನೀಡಿದ್ದ ಶೇ 10.5ರಷ್ಟು ಮೀಸಲಾತಿ ರದ್ದುಗೊಳಿಸಿದ ಮದ್ರಾಸ್ ಹೈಕೋರ್ಟ್ ಆದೇಶದ ವಿರುದ್ಧದ ಮೇಲ್ಮನವಿಗಳನ್ನು ವಿಸ್ತೃತ ಪೀಠಕ್ಕೆ ವರ್ಗಾಯಿಸಲು ಸುಪ್ರೀಂಕೋರ್ಟ್ ಬುಧವಾರ ನಿರಾಕರಿಸಿದೆ.

ನ್ಯಾಯಮೂರ್ತಿ ನಾಗೇಶ್ವರ ರಾವ್ ಮತ್ತು ಬಿ.ಆರ್. ಗವಾಯಿ ಅವರನ್ನೊಳಗೊಂಡ ಪೀಠವು, 'ತೀರ್ಪುಗಳನ್ನು ಪರಿಶೀಲಿಸಲಾಗಿದೆ. ಈ ವಿವಾದವನ್ನು ಬಗೆಹರಿಸಲು ವಿಸ್ತೃತ ಪೀಠಕ್ಕೆ ವರ್ಗಾಯಿಸುವ ಅಗತ್ಯವಿಲ್ಲ' ಎಂದು ಹೇಳಿದೆ.

'ಈ ಪ್ರಕರಣವನ್ನು ವಿಸ್ತೃತ ಪೀಠಕ್ಕೆ ವಹಿಸಬೇಕೆಂಬ ವಾದಕ್ಕೆ ನಾವು ಒಲವು ತೋರುವುದಿಲ್ಲ. ನೀವು ನಿಮ್ಮ ವಾದಗಳನ್ನು ಪ್ರಾರಂಭಿಸಬಹುದು' ಎಂದು ಪೀಠ ಹೇಳಿದೆ.ತಮಿಳುನಾಡು ಪರ ವಾದ ಮಂಡಿಸಿದ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ, 'ಪ್ರಕರಣವು ಸಾಂವಿಧಾನಿಕ ಸಮಸ್ಯೆಗಳನ್ನು ಒಳಗೊಂಡಿದ್ದು, ವಿಸ್ತೃತ ಪೀಠದಿಂದ ಪರಿಶೀಲನೆಗೆ ಒಳಪಡಬೇಕು' ಎಂದು ಮಂಗಳವಾರ ಮನವಿ ಸಲ್ಲಿಸಿದ್ದರು. ಮೇಲ್ಮನವಿಗಳನ್ನು ಪರಿಶೀಲಿಸಲು ಈ ಹಿಂದೆ ಸುಪ್ರೀಂ ಕೋರ್ಟ್ ಒಪ್ಪಿಕೊಂಡಿತ್ತು. ಈ ಮೀಸಲಾತಿ ಕೋಟಾದ ಅಡಿಯಲ್ಲಿ ಈಗಾಗಲೇ ನೀಡಿರುವ ಪ್ರವೇಶ ಅಥವಾ ನೇಮಕಾತಿಗಳಿಗೆ ತೊಂದರೆಯಾಗುವುದಿಲ್ಲ ಎಂದು ಪೀಠ ಹೇಳಿದೆ.

ಗೋಡ್ಸೆ ಕುರಿತು ಭಾಷಣ ಸ್ಪರ್ಧೆ; ಅಧಿಕಾರಿ ಅಮಾನತು



ಅಹಮದಾಬಾದ್ (ಪಿಟಿಐ): ಮಹಾತ್ಮ ಗಾಂಧಿ ಅವರ ಹಂತಕ 'ನನ್ನ ಆದರ್ಶ ವ್ಯಕ್ತಿ ನಾಥೂರಾಂ ಗೋಡ್ಸೆ' ವಿಷಯದ ಕುರಿತು ಶಾಲಾ ವಿದ್ಯಾರ್ಥಿಗಳಿಗೆ ಭಾಷಣ ಸ್ಪರ್ಧೆ ಆಯೋಜಿಸಿದ್ದಕ್ಕಾಗಿ ಗುಜರಾತ್ ಸರ್ಕಾರವು, ವಲ್‌ಸಾಡ್ ಜಿಲ್ಲೆಯ ಪ್ರೊಬೇಷನರಿ ಯುವ ಅಭಿವೃದ್ಧಿ ಅಧಿಕಾರಿಯನ್ನು ಬುಧವಾರ ಅಮಾನತುಗೊಳಿಸಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ನನ್ನ ಆದರ್ಶ ವ್ಯಕ್ತಿ ನಾಥೂರಾಂ ಗೋಡ್ಸೆ' ಎಂಬ ವಿಷಯದ ಕುರಿತ ಭಾಷಣ ಸ್ಪರ್ಧೆಯಲ್ಲಿ ವಿದ್ಯಾರ್ಥಿನಿಯೊಬ್ಬಳು ಗೆದ್ದಿದ್ದಾಳೆ ಎಂದು ವಲ್‌ಸಾಡ್ ಜಿಲ್ಲೆಯ ಸ್ಥಳೀಯ ಪತ್ರಿಕೆಗಳು ವರದಿ ಪ್ರಕಟಿಸಿದಾಗ ಈ ವಿಷಯವು ಬುಧವಾರ ಬೆಳಕಿಗೆ ಬಂದಿದೆ.

'ಪ್ರಕರಣ ಬೆಳಕಿಗೆ ಬರುತ್ತಿದ್ದಂತೆಯೇ ಪ್ರೊಬೇಷನರಿ ವರ್ಗ- 2 ಜಿಲ್ಲಾ ಯುವ ಅಭಿವೃದ್ಧಿ ಅಧಿಕಾರಿ ಮಿತಾಬೆನ್ ಗವ್ಲಿ ಅವರನ್ನು ಅಮಾನತುಗೊಳಿಸಲಾಗಿದೆ' ಎಂದು ಗುಜರಾತ್‌ನ ರಾಜ್ಯ ಕ್ರೀಡಾ, ಯುವ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಸಚಿವ ಹರ್ಷ್ ಸಂಘ್ವಿ ತಿಳಿಸಿದ್ದಾರೆ.

'ಈ ಸಂಬಂಧ ವಿಚಾರಣೆಯನ್ನು ಪ್ರಾರಂಭಿಸಲಾಗಿದೆ ಮತ್ತು ಇದಕ್ಕೆ ಜವಾಬ್ದಾರರಾದ ಎಲ್ಲರನ್ನೂ ಅಮಾನತುಗೊಳಿಸಲಾಗುವುದು' ಎಂದೂ ಅವರು ಹೇಳಿದ್ದಾರೆ.

ವಲ್‌ಸಾಡ್ ಜಿಲ್ಲಾ ಯುವ ಅಭಿವೃದ್ಧಿ ಕಚೇರಿಯು ಇಲ್ಲಿನ ಖಾಸಗಿ ಶಾಲೆ ಕುಸುಮ್ ವಿದ್ಯಾಲಯದಲ್ಲಿ ವಿದ್ಯಾರ್ಥಿಗಳಿಗಾಗಿ 'ಮಕ್ಕಳ ಪ್ರತಿಭಾ ಶೋಧ' ಸ್ಪರ್ಧೆಯನ್ನು ಆಯೋಜಿಸಿತ್ತು. ಈ ಸ್ಪರ್ಧೆಯಲ್ಲಿ 25ಕ್ಕೂ ಹೆಚ್ಚು ಶಾಲೆಗಳ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಸ್ಪರ್ಧೆಯಲ್ಲಿ 'ನಾಥೂರಾಂ ಗೋಡ್ಸೆ ನನ್ನ ಆದರ್ಶ' ಎನ್ನುವ ಭಾಷಣ ಸ್ಪರ್ಧೆಯೂ ಇತ್ತು. ಇದರಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಸಂಘಟಕರು ಬಹುಮಾನವನ್ನೂ ನೀಡಿದ್ದರು. ಭಾಷಣ ಸ್ಪರ್ಧೆಯಲ್ಲಿ 'ನಾನು ಆಕಾಶದಲ್ಲಿ ಹಾರುವ ಪಕ್ಷಿಗಳನ್ನು ಮಾತ್ರ ಇಷ್ಟಪಡುತ್ತೇನೆ' ಮತ್ತು 'ನಾನು ವಿಜ್ಞಾನಿಯಾಗುತ್ತೇನೆ ಆದರೆ ಅಮೆರಿಕಕ್ಕೆ ಹೋಗುವುದಿಲ್ಲ' ಎನ್ನುವ ವಿಷಯಗಳೂ ಇದ್ದವು ಎಂದು ಜಿಲ್ಲೆಯ ಪ್ರಾಥಮಿಕ ಶಿಕ್ಷಣಾಧಿಕಾರಿ ತಿಳಿಸಿದ್ದಾರೆ. ಸ್ಪರ್ಧೆಯ ವಿಷಯವು ವಿವಾದಕ್ಕೀಡಾಗುತ್ತಿದ್ದಂತೆಯೇ 'ಇಡೀ ಕಾರ್ಯಕ್ರಮವನ್ನು ಸ್ಥಳೀಯ ಸರ್ಕಾರಿ ಅಧಿಕಾರಿಗಳು ಆಯೋಜಿಸಿದ್ದರು. ಕಾರ್ಯಕ್ರಮಕ್ಕೆ ಶಾಲಾ ಆವರಣವನ್ನು ನೀಡಲಾಗಿತ್ತು. ಗೋಡ್ಸೆ ಸೇರಿದಂತೆ ಯಾವುದೇ ಸ್ಪರ್ಧೆಗೆ ನಮ್ಮ ಶಾಲೆಯು ಯಾವುದೇ ರೀತಿಯಲ್ಲೂ ಜವಾಬ್ದಾರಿಯಲ್ಲ' ಎಂದು ಕುಸುಮ್ ವಿದ್ಯಾಲಯದ ಪ್ರಾಂಶುಪಾಲರಾದ ಅರ್ಚನಾ ದೇಸಾಯಿ ವಿವರಣೆ ನೀಡಿದ್ದಾರೆ.

ಭಾಷಣ ಸ್ಪರ್ಧೆಯ ಕುರಿತು ಮಹಾತ್ಮ ಗಾಂಧೀಜಿ ಅವರ ಮರಿಮೊಮ್ಮಗ ತುಷಾರ್ ಗಾಂಧಿ ಸೇರಿದಂತೆ ಹಲವರು 'ನವ ಭಾರತದಲ್ಲಿ ಕೊಲೆಗಡುಕ ವೀರರು' ಎಂದು ಟ್ವೀಟ್ ಮಾಡಿದ್ದರು. ಈ ಭಾಷಣ ಸ್ಪರ್ಧೆಗೆ ಟ್ವಿಟ್ಟರ್‌ನಲ್ಲಿ ವ್ಯಾಪಕ ಟೀಕೆ ವ್ಯಕ್ತವಾಗಿತ್ತು.

ಗಾಂಧೀಜಿ ಅವರನ್ನು ಹತ್ಯೆ ಮಾಡಿದ ನಾಥೂರಾಂ ಗೋಡ್ಸೆ ಅವರನ್ನು ಆರಾಧಿಸಿದ್ದ ಘಟನೆಗಳು ಈ ಹಿಂದೆಯೂ ಗುಜರಾತ್‌ನ ಸೂರತ್ ಮತ್ತು ಜಾಮ್‌ನಗರದಲ್ಲೂ ನಡೆದಿದ್ದವು.

ಗುರುವಾರ, ಫೆಬ್ರುವರಿ 17, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 48 | ಪುಟ 18
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾವಾಣಿ
ದಿನಪತ್ರಿಕೆಗಳಲ್ಲಿನ ಪ್ರಚಲಿತ ವಿದ್ಯಮಾನಗಳು, ವಿಷಯಾಧಾರಿತ ಕೃತಿಗಳ ಪರಾಮರ್ಶೆಯೊಂದಿಗೆ ಕೆಎಸ್‌ಐಎಸ್‌ಎಫ್ ಸಬ್‌ಇನ್‌ಸ್ಪೆಕ್ಟರ್ ಹುದ್ದೆಯ ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿ ನಡೆಸಬೇಕು...

'ಮುಸ್ಲಿಮರೇ ಗುರಿ – ಧರ್ಮ ರಾಜಕಾರಣ' 7
ಪರೀಕ್ಷೆ ನಡೆಸದೇ ಫಲಿತಾಂಶ: ಪರಿಶೀಲನೆಗೆ ನಾಲ್ಕು ಸಮಿತಿ 8

ಸೆನ್ಸೆಕ್ಸ್	ನಿಫ್ಟಿ	₹/$
57,997 ▼	17,322 ▼	75.09 ▲

ಈಶ್ವರಪ್ಪ ವಿರುದ್ಧ ನಿಲುವಳಿ ಸೂಚನೆ ಮಂಡನೆ • ಸದನದಲ್ಲಿ ತೋಳೇರಿಸಿದ ಸಚಿವರು, ಶಾಸಕರು

ಗುದ್ದಾಟದೆಡೆ ಕೈ–ಕಮಲ 'ಕಲಿ'ಗಳ ನಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರಧ್ವಜದ ಕುರಿತು ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ಇತ್ತೀಚೆಗೆ ನೀಡಿದ ಹೇಳಿಕೆಯು ವಿಧಾನಮಂಡಲದ ಎರಡೂ ಸದನಗಳಲ್ಲಿ ಬುಧವಾರ ಭಾರೀ ಗದ್ದಲ ಮತ್ತು ಕೋಲಾಹಲಕ್ಕೆ ಕಾರಣವಾಯಿತು. ವಿಧಾನಸಭೆಯಲ್ಲಿ ಸಚಿವ ಈಶ್ವರಪ್ಪ ಮತ್ತು ಕಾಂಗ್ರೆಸ್ ಶಾಸಕ ಡಿ.ಕೆ.ಶಿವಕುಮಾರ್ ನಡುವಿನ ಮಾತಿನ ಜಟಾಪಟಿ ವೈಯಕ್ತಿಕ ಮಟ್ಟಕ್ಕೆ ಇಳಿದು ರೋಷಾವೇಶದಿಂದ ಪರಸ್ಪರ ತೋಳೇರಿಸಿಕೊಂಡು ಹೊಡೆದಾಟಕ್ಕೆ ಮುಂದಾಗಿದ್ದೂ ನಡೆದುಹೋಯಿತು.

ವಿಧಾನಪರಿಷತ್ತಿನಲ್ಲಿ ಆಡಳಿತ ಮತ್ತು ವಿರೋಧ ಪಕ್ಷಗಳ ಸದಸ್ಯರ ನಡುವೆ ಬಿರುಸಿನ ವಾಗ್ವಾದದಿಂದಾಗಿ ಇಡೀ ದಿನ ಕಲಾಪ ನಡೆಯಲಿಲ್ಲ. ಈ ವಿಷಯದ ಬಗ್ಗೆ ನಿಲುವಳಿ ಸೂಚನೆ ಮಂಡಿಸಲು ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಅವರಿಗೆ ಸಭಾಪತಿ ಬಸವರಾಜ ಹೊರಟ್ಟಿ ಅವಕಾಶ ನೀಡಲಿಲ್ಲ. ಕಾಂಗ್ರೆಸ್ ಸದಸ್ಯರು ಸಭಾಪತಿ ಪೀಠದ ಮುಂದೆ ಎರಡು ಬಾರಿ ಧರಣಿ ನಡೆಸಿದ್ದರಿಂದ ಕಲಾಪವನ್ನು ಗುರುವಾರಕ್ಕೆ ಮುಂದೂಡಲಾಯಿತು.

'ಕೆಂಪುಕೋಟೆಯಲ್ಲಿ ಕೇಸರಿ ಧ್ವಜ ಹಾರಿಸುತ್ತೇವೆ' ಎಂಬುದಾಗಿ ಈಶ್ವರಪ್ಪ ನೀಡಿದ ಹೇಳಿಕೆ ವಿರುದ್ಧ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ವಿಧಾನಸಭೆಯಲ್ಲಿ ನಿಲುವಳಿ ಸೂಚನೆ ಮಂಡಿಸಿದರು.

'ಇದು ನಿಲುವಳಿ ಸೂಚನೆಯ ವ್ಯಾಪ್ತಿಗೆ ಬರುವುದಿಲ್ಲ' ಎಂದು ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ಪ್ರತಿಪಾದಿಸಿದರು. ಆಗ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಈ ಬಗ್ಗೆ ಈಶ್ವರಪ್ಪ ಹೇಳಿಕೆ ನೀಡುತ್ತಾರೆ ಎಂದು ಪ್ರಕಟಿಸಿದರು. 'ನಾವು ವಿಷಯದ ಬಗ್ಗೆ ಇನ್ನೂ ಚರ್ಚೆಯನ್ನೇ ಮಾಡಿಲ್ಲ' ಎಂದು ಸಿದ್ದರಾಮಯ್ಯ ಹೇಳಿದರು.

ಆಗ ಸಿದ್ದರಾಮಯ್ಯ ಬಳಿಗೆ ಬಂದ ಶಿವಕುಮಾರ್, 'ನಿಲುವಳಿ ಸೂಚನೆಯ ವ್ಯಾಪ್ತಿಗೆ ಈ ವಿಚಾರ ಬರುತ್ತಿಲ್ಲ ಎಂದು ಸಚಿವರು ಹೇಳುತ್ತಿದ್ದಾರಲ್ಲ. ಈಶ್ವರಪ್ಪಗೆ ಈಗ ಮಾತನಾಡಲು ಬಿಡಬೇಡಿ' ಎಂದು ಹೇಳಿ ತಮ್ಮ ಸ್ಥಾನದತ್ತ ನಿರ್ಗಮಿಸಿದರು. ಈ ವೇಳೆ, ಶಿವಕುಮಾರ್ ಅವರನ್ನು ಉದ್ದೇಶಿಸಿ, 'ನೀನೇನು ಹೇಳುವುದು. ಇದು ನಿನ್ನ ಅಪ್ಪನ ಮನೆಯ ಆಸ್ತಿಯಾ' ಎಂದು ಈಶ್ವರಪ್ಪ ಏರಿದ ಧ್ವನಿಯಲ್ಲಿ ಹೇಳಿದರು. ಈ ಮಾತಿನಿಂದ ಕುಪಿತಗೊಂಡ ಶಿವಕುಮಾರ್, 'ತಾಕತ್ತಿದ್ದರೆ ಮುಟ್ಟು' ಎಂದು ಅಬ್ಬರಿಸುತ್ತಾ ತಾವು ನಿಂತ ಜಾಗದಿಂದಲೇ ಆಡಳಿತ ಪಕ್ಷದವರತ್ತ ನುಗ್ಗಲು ಮುಂದಾದರು.

ತಾಕತ್ತಿದ್ದರೆ ಮುಟ್ಟಿ: ಕಾಂಗ್ರೆಸ್‌ನ ಬೈರತಿ ಸುರೇಶ್ ಸೇರಿದಂತೆ ಹಲವು ಸದಸ್ಯರು ಆಕ್ರೋಶದಿಂದ ಓಡಿ ಬಂದು ವಿಧಾನಸಭಾಧ್ಯಕ್ಷರ ಪೀಠದ ಮುಂಭಾಗದಲ್ಲಿ ಜಮಾಯಿಸಿದರು. ಸಚಿವ ಸಿ.ಸಿ.ಪಾಟೀಲ, ಎಂ.ಪಿ. ರೇಣುಕಾಚಾರ್ಯ ಸೇರಿದಂತೆ ಆಡಳಿತ ಪಕ್ಷದ ಕೆಲವು ಸದಸ್ಯರು ಸಹ ತೋಳೇರಿಸಿಕೊಂಡು ಬಂದು 'ತಾಕತ್ತಿದ್ದರೆ ಮುಟ್ಟಿ' ಎಂದು ಪ್ರತಿ ಸವಾಲು ಹಾಕಿದರು.

5ನೇ ಪುಟ ನೋಡಿ

ವಿಧಾನಸಭೆಯಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಸಚಿವ ಕೆ.ಎಸ್. ಈಶ್ವರಪ್ಪ ಹೇಳಿಕೆ ಖಂಡಿಸಿ ರಾಷ್ಟ್ರ ಧ್ವಜ ಹಿಡಿದು ಪ್ರತಿಭಟನೆ ನಡೆಸಿದರು

ರಾಷ್ಟ್ರಧ್ವಜ ಹಿಡಿದು ಪ್ರತಿಭಟನೆ

ವಿಧಾನಸಭೆಯಲ್ಲಿ ಬುಧವಾರ ಮಧ್ಯಾಹ್ನ ಕಾಂಗ್ರೆಸ್ ಶಾಸಕರು ರಾಷ್ಟ್ರಧ್ವಜಗಳನ್ನು ಹಿಡಿದು ಪ್ರತಿಭಟನೆ ನಡೆಸಿದ ಬಗ್ಗೆ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಮತ್ತು ಮುಖ್ಯಮಂತ್ರಿ ಬೊಮ್ಮಾಯಿ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಭೋಜನ ವಿರಾಮದ ಬಳಿಕ ಸದನ ಸಮಾವೇಶಗೊಂಡಾಗ, ಕಾಂಗ್ರೆಸ್ ಸದಸ್ಯರು ತಮ್ಮ ಜತೆ ರಾಷ್ಟ್ರ ಧ್ವಜವನ್ನು ಹಿಡಿದು ಬಂದಿದ್ದರು. ಸಭಾಧ್ಯಕ್ಷರ ಪೀಠದ ಮುಂದೆ ಜಮಾಯಿಸಿ ರಾಷ್ಟ್ರಧ್ವಜವನ್ನು ಪ್ರದರ್ಶಿಸಿ ಧಿಕ್ಕಾರ ಕೂಗಿದರು. ಆಡಳಿತ ಪಕ್ಷದ ವಿರುದ್ಧ ಘೋಷಣೆಗಳನ್ನು ಹಾಕುತ್ತಲೇ, ಧ್ವಜಗಳನ್ನು ಮೇಲಕ್ಕೂ ಕೆಳಕ್ಕೂ ಆಡಿಸಲಾರಂಭಿಸಿದರು. ಇದರಿಂದ ಬೇಸರಗೊಂಡ ಕಾಗೇರಿ, 'ರಾಷ್ಟ್ರಧ್ವಜವನ್ನು ಗೌರವದಿಂದ ಕಾಣಬೇಕು. ಪ್ರತಿಭಟನೆ ಎಂದು ರಾಷ್ಟ್ರಧ್ವಜವನ್ನು ಬೇಕಾಬಿಟ್ಟಿ ಬಳಸುವುದು ಸರಿಯಲ್ಲ. ಶಾಸಕರು ಧ್ವಜ ಸಂಹಿತೆಯ ಪ್ರಕಾರವೇ ನಡೆದುಕೊಳ್ಳಬೇಕು' ಎಂದು ಹೇಳಿದರು.

'ಈಶ್ವರಪ್ಪ ರಾಜೀನಾಮೆಗೆ ಗಡುವು'

ಗುರುವಾರ ಬೆಳಿಗ್ಗೆ 11 ಕ್ಕೆ ಮುನ್ನ ಸಚಿವ ಕೆ.ಎಸ್.ಈಶ್ವರಪ್ಪ ಅವರನ್ನು ಸಂಪುಟದಿಂದ ಕೈಬಿಡಬೇಕು. ಅವರ ಮೇಲೆ ದೇಶದ್ರೋಹದ ಪ್ರಕರಣ ದಾಖಲಿಸಬೇಕು. ಸಂಪುಟದಿಂದ ಕೈಬಿಡದೇ ಇದ್ದರೆ ಸದನದ ಒಳಗೆ ಮತ್ತು ಹೊರಗೆ ಹೋರಾಟ ನಡೆಸಲಾಗುವುದು. ಸಂವಿಧಾನ ರಕ್ಷಣೆ ಮಾಡಬೇಕಿರುವುದು ರಾಜ್ಯಪಾಲರ ಜವಾಬ್ದಾರಿ. ಅವರು ಮುಖ್ಯಮಂತ್ರಿಯವರಿಗೆ ಹೇಳಿ ಈಶ್ವರಪ್ಪ ಅವರನ್ನು ಸಚಿವ ಸ್ಥಾನದಿಂದ ವಜಾ ಮಾಡಲು ನಿರ್ದೇಶನ ನೀಡಬೇಕಿತ್ತು. ಒಂದು ವೇಳೆ ಈಶ್ವರಪ್ಪ ಕ್ಷಮೆ ಕೇಳಿದರೂ ನಾವು ಹೋರಾಟದಿಂದ ಹಿಂದೆ ಸರಿಯುವುದಿಲ್ಲ.

ಸಿದ್ದರಾಮಯ್ಯ, ವಿರೋಧಪಕ್ಷದ ನಾಯಕ

ಚಿರನಿದ್ರೆಗೆ ಜಾರಿದ ಕಣವಿ

ಧಾರವಾಡ: ಚೆಂಬೆಳಕಿನ ಕವಿ ಡಾ. ಚೆನ್ನವೀರ ಕಣವಿ (93) ಅವರು ಕೋವಿಡ್ ಸೋಂಕಿನಿಂದ ಗುಣಮುಖರಾದರೂ, ಬಹು ಅಂಗಾಂಗ ವೈಫಲ್ಯದಿಂದ ಚೇತರಿಸಿಕೊಳ್ಳದೆ ಬುಧವಾರ ಬೆಳಗ್ಗೆ ನಿಧನರಾದರು.

ಪತ್ನಿ ಶಾಂತಾದೇವಿ ಕಣವಿ ಅವರ ಜನ್ಮದಿನದಂದು (ಜ.12) ಸಮಾಧಿಗೆ ತೆರಳಿ ಪೂಜೆ ಸಲ್ಲಿಸಿದ್ದ ಅವರು, ಅಂದೇ ಅನಾರೋಗ್ಯದಿಂದ ಆಸ್ಪತ್ರೆ ಸೇರಿದ್ದರು. ಅವರಿಗೆ ಕೋವಿಡ್ ದೃಢಪಟ್ಟಿತ್ತು. ಕೋವಿಡ್‌ನಿಂದ ಗುಣಮುಖರಾದರೂ ಅವರ ಶ್ವಾಸಕೋಶದಲ್ಲಿನ ಸೋಂಕು ಮತ್ತು ಮೂತ್ರಪಿಂಡ ಸಮಸ್ಯೆ ಅವರನ್ನು ಬಾರದಲೋಕಕ್ಕೆ ಕರೆದೊಯ್ಯಿತು.

ಅವರಿಗೆ ಮಕ್ಕಳಾದ ಶಿವಾನಂದ, ಚಂದ್ರಮೌಳಿ, ಪ್ರಿಯದರ್ಶಿ, ರಂಜನಾ, ಕರುಣಾ ಪ್ರಸಾದ ಇದ್ದಾರೆ. ಪತ್ನಿ, ಲೇಖಕಿ ಶಾಂತಾದೇವಿ ಕಣವಿ ಅವರು 2020ರ ಮೇ 22ರಂದು ನಿಧನರಾಗಿದ್ದಾರೆ.

ಅಂತ್ಯಕ್ರಿಯೆ: ನಾಡೋಜ ಡಾ. ಚೆನ್ನವೀರ ಕಣವಿ ಅವರ ಅಂತ್ಯಕ್ರಿಯೆ ಅಳ್ನಾವರ ರಸ್ತೆಯಲ್ಲಿರುವ ಸೃಷ್ಟಿ ಫಾರ್ಮ್‌ನಲ್ಲಿ ಸಂಜೆ 6.30ರ ಸುಮಾರಿಗೆ ನೆರವೇರಿತು.

ಮಾವಿನತೋಟದಲ್ಲಿರುವ ಪತ್ನಿ ಶಾಂತಾದೇವಿ ಕಣವಿ ಅವರ ಸಮಾಧಿಯ ಪಕ್ಕದಲ್ಲಿ ಚೆನ್ನವೀರ ಕಣವಿ ಅವರ ಅಂತ್ಯಕ್ರಿಯೆ ಸರ್ಕಾರಿ ಗೌರವಗಳೊಂದಿಗೆ ವೀರಶೈವ ಲಿಂಗಾಯತ ಸಂಪ್ರದಾಯದ ಪ್ರಕಾರ ನೆರವೇರಿತು.

ಕಣವಿ ಅವರ ಕುಟುಂಬದವರು ಅಂತಿಮ ವಿಧಿವಿಧಾನಗಳನ್ನು ನೆರವೇರಿಸಿದರು. ಪೊಲೀಸರು ಗಾಳಿಯಲ್ಲಿ ಮೂರು ಸುತ್ತು ಕುಶಾಲು ತೋಪು ಹಾರಿಸಿ ಗೌರವ ವಂದನೆ ಸಲ್ಲಿಸಿದರು.

ಪರಿಚಯ: ಗದಗ ಜಿಲ್ಲೆಯ ಹೊಂಬಳದ ಡಾ. ಕಣವಿ 1928ರ ಜೂನ್ 28ರಂದು ಜನಿಸಿದರು. ತಂದೆ ಸಕ್ಕರಪ್ಪ ಅವರು ಪ್ರಾಥಮಿಕ ಶಾಲೆ ಶಿಕ್ಷಕರು ಹಾಗೂ ತಾಯಿ ಪಾರ್ವತವ್ವ ಗೃಹಿಣಿ. ಊರಲ್ಲಿಯೇ ಅಕ್ಷರಾಭ್ಯಾಸ ಮುಗಿಸಿದ ಕಣವಿ ಅವರು ಮಾಧ್ಯಮಿಕ ಹಾಗೂ ಕಾಲೇಜು ಶಿಕ್ಷಣವನ್ನು ಧಾರವಾಡದಲ್ಲಿ ಪಡೆದರು. ಕರ್ನಾಟಕ ವಿಶ್ವವಿದ್ಯಾಲಯದಿಂದ ಎಂ.ಎ. ಪದವಿ ಪಡೆದರು. ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗ ವಿಭಾಗದ ಕಾರ್ಯದರ್ಶಿಯಾದರು. ನಂತರ ಅದೇ ವಿಭಾಗದ ನಿರ್ದೇಶಕರಾದರು.

15ಕ್ಕೂ ಹೆಚ್ಚು ಕವನ ಸಂಕಲನ, ವಿಮರ್ಶೆ ಹಾಗೂ ಪ್ರಬಂಧ ಸಂಕಲನ, ಮಕ್ಕಳ ಬರಹಗಳು ಸೇರಿದಂತೆ ಹಲವು ಬಗೆಯ ಸಾಹಿತ್ಯ ರಚಿಸಿದ್ದಾರೆ. ಅವರ 'ಜೀವಧ್ವನಿ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರಕಿದೆ. ರಾಜ್ಯೋತ್ಸವ ಪ್ರಶಸ್ತಿ, ಪಂಪ ಪ್ರಶಸ್ತಿ, ನಾಡೋಜ ಗೌರವ, ಬೆಂಗಳೂರು ನಗರ ಸಾರಿಗೆ ಸಂಸ್ಥೆ ನೀಡುವ ನೃಪತುಂಗ ಪ್ರಶಸ್ತಿ, ಎಸ್.ಬಂಗಾರಪ್ಪ ಪ್ರತಿಷ್ಠಾನ ಹಾಗೂ ವಿಚಾರ ವೇದಿಕೆಯ ಸಾಹಿತ್ಯ

11ನೇ ಪುಟ ನೋಡಿ



28-06-1928 - 16-02-2022

ಜಾಗಟೆ, ಗಂಟೆ ಸದ್ದು: ನೋಟಿಸ್ ವಾಪಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇವಸ್ಥಾನಗಳಲ್ಲಿ ಜಾಗಟೆ, ಗಂಟೆ, ಶಂಖ ಊದುವುದರಿಂದ ಶಬ್ದ ಮಾಲಿನ್ಯ ಉಂಟಾಗುತ್ತದೆ ಎಂಬ ಕಾರಣಕ್ಕೆ ನೋಟಿಸ್ ನೀಡಲಾಗಿತ್ತು. ಈ ಸುತ್ತೋಲೆಯನ್ನು ಧಾರ್ಮಿಕ ದತ್ತಿ ಇಲಾಖೆ ಹಿಂಪಡೆದಿದೆ' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದರು.

ವಿಧಾನಸಭೆಯಲ್ಲಿ ಬುಧವಾರ ಶೂನ್ಯ ವೇಳೆಯಲ್ಲಿ ಬಿಜೆಪಿಯ ಸಿ.ಟಿ. ರವಿ ಮತ್ತು ಎಲ್.ಎ.ರವಿಸುಬ್ರಹ್ಮಣ್ಯ ಪ್ರಸ್ತಾಪಿಸಿದ ವಿಷಯಕ್ಕೆ ಉತ್ತರಿಸಿದ ಅವರು, 'ಈಗಾಗಲೇ ಧಾರ್ಮಿಕ ದತ್ತಿ ಇಲಾಖೆ ಹೊರಡಿಸಿದ್ದ ಆದೇಶವನ್ನು ಹಿಂಪಡೆಯಲಾಗಿದೆ. ಈ ಬಗ್ಗೆ ಯಾರಿಗೂ ಗೊಂದಲ ಬೇಡ' ಎಂದು ಸ್ಪಷ್ಟಪಡಿಸಿದರು.

ನಿಗದಿತ ಡೆಸಿಬಲ್ ಶಬ್ದಕ್ಕಿಂತ ಹೆಚ್ಚಿನ ಶಬ್ದ ಉಂಟು ಮಾಡುತ್ತಿದ್ದ ಕಾರಣಕ್ಕೆ ಎಲ್ಲ ಧಾರ್ಮಿಕ ಕೇಂದ್ರಗಳಿಗೂ ನೋಟಿಸ್ ನೀಡಲಾಗಿತ್ತು. ಯಾವುದೇ ಒಂದು ಧರ್ಮ ಅಥವಾ ಸಮುದಾಯವನ್ನು ಗುರಿಯಾಗಿಟ್ಟುಕೊಂಡು ನೋಟಿಸ್ ನೀಡಿರಲಿಲ್ಲ. ಇದರಿಂದ ಕೆಲವು ಗೊಂದಲ ಉಂಟಾಗಿದ್ದರಿಂದ ಈಗ ಆದೇಶವನ್ನು ಹಿಂಪಡೆಯಲಾಗಿದೆ' ಎಂದರು.

ಸಿ.ಟಿ.ರವಿ ಮಾತನಾಡಿ, 'ಸಾವಿರಾರು ವರ್ಷಗಳಿಂದ ದೇವಸ್ಥಾನ ಮತ್ತು ಮನೆಗಳಲ್ಲಿ ಪೂಜೆ, ಪುನಸ್ಕಾರ ಮಾಡುವಾಗ ಶಂಖ ಊದುವುದು, ಗಂಟೆ ಬಾರಿಸುವುದು, ಜಾಗಟೆ ಬಾರಿಸುವುದು ನಡೆದುಕೊಂಡು ಬಂದಿರುವ ಸಂಪ್ರದಾಯ. ಸಾವಿರಾರು ವರ್ಷಗಳಿಂದಲೂ ಈ ಬಗ್ಗೆ ಯಾರೂ ಕೂಡ ತಕರಾರು ತೆಗೆದಿರಲಿಲ್ಲ. ಈಗ ಏಕಾಏಕಿ ಆಕ್ಷೇಪ ಇದೆ. ಇದರ ಹಿಂದೆ ಯಾವುದಾದರೂ ಪಿತೂರಿ ಇದೆಯೇ' ಎಂದು ಪ್ರಶ್ನಿಸಿದರು.

ರವಿಸುಬ್ರಹ್ಮಣ್ಯ, 'ನಾನು 40 ವರ್ಷಗಳಿಂದ ಬೆಂಗಳೂರಿನ ದೊಡ್ಡ ಗಣಪತಿ ದೇವಸ್ಥಾನಕ್ಕೆ ಹೋಗುತ್ತಿದ್ದೇನೆ. ಶಬ್ದ ಮಾಲಿನ್ಯದ ಕಾರಣಕ್ಕೆ ಈಗ ದೇವಸ್ಥಾನಕ್ಕೆ ನೋಟಿಸ್ ನೀಡಲಾಗಿದೆ. ಮಾಲಿನ್ಯ ಉಂಟಾಗುತ್ತಿದೆ ಎಂದು ದೇವಸ್ಥಾನದ ಸುತ್ತಮುತ್ತಲಿನ ನಿವಾಸಿಗಳು ದೂರು ನೀಡಿಲ್ಲ. ಇದರಲ್ಲಿ ಪಿತೂರಿ ಇದೆ' ಎಂದು ಹೇಳಿದರು.

ಜೆಡಿಎಸ್‌ನ ಕೆ.ಎಂ. ಶಿವಲಿಂಗೇಗೌಡ, 'ರಾಜ್ಯದಲ್ಲಿ ಸರ್ಕಾರ ನಡೆಸುವವರು ನೀವೇ. ನೋಟಿಸ್ ನೀಡಿದ್ದು ನಿಮ್ಮ ಸರ್ಕಾರವೇ. ಇದರಲ್ಲಿ ಏನು ಪಿತೂರಿ' ಎಂದು ವ್ಯಂಗ್ಯವಾಗಿ ಕೇಳಿದರು.

ವಿ.ವಿಗಳ ಪದವಿ ಪರೀಕ್ಷೆ ಮುಂದೂಡಲು ಸೂಚನೆ

ಬೆಂಗಳೂರು: ಕೋವಿಡ್ ಹಾಗೂ ಅತಿಥಿ ಉಪನ್ಯಾಸಕರ ಮುಷ್ಕರದಿಂದ ತರಗತಿ ಪಾಠಗಳು ಪೂರ್ಣಗೊಳ್ಳದ ಹಿನ್ನೆಲೆಯಲ್ಲಿ, ಸೆಮಿಸ್ಟರ್ ಪರೀಕ್ಷೆಯನ್ನು ಒಂದು ತಿಂಗಳು ಮುಂದೂಡಲು ಉನ್ನತ ಶಿಕ್ಷಣ ಇಲಾಖೆ ವ್ಯಾಪ್ತಿಯಲ್ಲಿರುವ ಎಲ್ಲ ವಿ.ವಿ.ಗಳ ಕುಲಸಚಿವರಿಗೆ ಸೂಚಿಸಲಾಗಿದೆ.

8ನೇ ಪುಟ ನೋಡಿ

ಕೆನರಾ ಬ್ಯಾಂಕ್
Canara Bank
Government of India Undertaking
Together We Can
ಗೃಹ ಸಾಲ 6.65% ಬಡ್ಡಿ ದರದಲ್ಲಿ
ಆನ್ ಲೈನ್ ನಲ್ಲಿ ಅರ್ಜಿ ಸಲ್ಲಿಸಲು ಸ್ಕ್ಯಾನ್ ಮಾಡಿ ತಕ್ಷಣದ ಅನುಮೋದನೆ ಪಡೆಯಿರಿ
*ಷರತ್ತುಗಳು ಅನ್ವಯಿಸುತ್ತವೆ
1800 425 0018

'ಭದ್ರಾ ಮೇಲ್ದಂಡೆಗೆ ರಾಷ್ಟ್ರೀಯ ಮಾನ್ಯತೆ'

ಪ್ರಜಾವಾಣಿ ವಾರ್ತೆ

ಸಿರಿಗೆರೆ (ಚಿತ್ರದುರ್ಗ): ಭದ್ರಾ ಮೇಲ್ದಂಡೆ ಯೋಜನೆಗೆ ರಾಷ್ಟ್ರೀಯ ಮಾನ್ಯತೆ ನೀಡಲು ಕೇಂದ್ರ ಸರ್ಕಾರ ಬುಧವಾರ ಅನುಮೋದನೆ ನೀಡಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

9ನೇ ಪುಟ ನೋಡಿ

ಉಡುಪಿಯ ಸರ್ಕಾರಿ ಬಾಲಕಿಯರ ಪದವಿಪೂರ್ವ ಕಾಲೇಜಿಗೆ ಬುಧವಾರ ಬಂದ ವಿದ್ಯಾರ್ಥಿನಿಯರು. ಹಿಜಾಬ್ ವಿವಾದ ಶುರುವಾದ ಬಳಿಕ ಮುಚ್ಚಿದ್ದ ಶಾಲೆಗಳು ಪೊಲೀಸ್ ಬಂದೋಬಸ್ತ್ ನೊಂದಿಗೆ ಮತ್ತೆ ಪ್ರಾರಂಭವಾಗಿದೆ.
ಪ್ರಜಾವಾಣಿ ಚಿತ್ರ/ ಇರ್ಷಾದ್ ಮಹಮ್ಮದ್

ಹಿಜಾಬ್: ಕೆಲವೆಡೆ ಪ್ರತಿಭಟನೆ, ಮುಂದುವರಿದ ವಾಕ್ಸಮರ

ತರಗತಿ ಬಹಿಷ್ಕರಿಸಿದ ವಿದ್ಯಾರ್ಥಿನಿಯರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಬುಧವಾರ ಮತ್ತೆ ಆರಂಭಗೊಂಡ ಪದವಿಪೂರ್ವ ಮತ್ತು ಪದವಿ ಕಾಲೇಜುಗಳಿಗೆ ಕೆಲ ಜಿಲ್ಲೆಗಳಲ್ಲಿ ವಿದ್ಯಾರ್ಥಿನಿಯರು ಹಿಜಾಬ್ ಧರಿಸಿಕೊಂಡು ಬಂದಿದ್ದರು. ಹಿಜಾಬ್ ಧರಿಸಿ ತರಗತಿಗಳಿಗೆ ಹಾಜರಾಗಲು ಅವಕಾಶ ನಿರಾಕರಿಸಿದ್ದರಿಂದ, ಹಲವೆಡೆ ಕಾಲೇಜು ಆಡಳಿತ ಮಂಡಳಿಗಳು, ಬೋಧಕರೊಂದಿಗೆ ವಿದ್ಯಾರ್ಥಿನಿಯರು ವಾಗ್ವಾದಕ್ಕೆ ಇಳಿದರು. ಆನಂತರ ಪ್ರತಿಭಟನೆ ಕೂಡ ನಡೆಸಿದರು.

ಹಿಜಾಬ್ ಧರಿಸಲು ಅವಕಾಶ ಸಿಗದೇ ಇದ್ದುದು, ಹಿಜಾಬ್ ತೆಗೆಯಲು ನಿರಾಕರಿಸಿದ ಕಾರಣಗಳಿಂದಾಗಿ ವಿದ್ಯಾರ್ಥಿನಿಯರು ವಾಪಸ್ ಹೋಗಿದ್ದಾರೆ.

ಪೋಷಕರು ಹಾಗೂ ಕೆಲ ಮುಸ್ಲಿಂ ಸಂಘ–ಸಂಸ್ಥೆಗಳ ಪದಾಧಿಕಾರಿಗಳು ವಿದ್ಯಾರ್ಥಿನಿಯರ ಬೆಂಬಲಕ್ಕೆ ನಿಂತಿದ್ದು, ಹಿಜಾಬ್ ಧರಿಸಲು ಅವಕಾಶಕ್ಕೆ ಪಟ್ಟು ಹಿಡಿದರು.

7ನೇ ಪುಟ ನೋಡಿ

ಪ್ರತ್ಯೇಕ ಕೊಠಡಿ

ಮಂಡ್ಯದ ಪಿಇಎಸ್ ಎಂಜಿನಿಯರಿಂಗ್ ಕಾಲೇಜು ಆಡಳಿತ ಮಂಡಳಿಯು, 'ಬುರ್ಖಾ, ಹಿಜಾಬ್ ಧರಿಸಿದವರಿಗೆ ಕಾಲೇಜು ಪ್ರವೇಶಿಸಲು ಅವಕಾಶವಿಲ್ಲ. ಆದರೆ ಹಿಜಾಬ್, ಬುರ್ಖಾ ತೆಗೆಯಲು ಪ್ರತ್ಯೇಕ ಕೊಠಡಿ ವ್ಯವಸ್ಥೆ ಮಾಡಲಾಗಿದ್ದು ಅಲ್ಲಿ ತೆಗೆದು ಬರಬಹುದು' ಎಂದು ತಿಳಿಸಿದೆ. ಬುರ್ಖಾ, ಹಿಜಾಬ್ ಧರಿಸಿದ್ದ ನಾಲ್ವರನ್ನು ಬುಧವಾರ ಕಾಲೇಜು ಗೇಟ್‌ನಲ್ಲಿ ಭದ್ರತಾ ಸಿಬ್ಬಂದಿ ತಡೆದರು. 'ಪದವಿ ಕಾಲೇಜುಗಳಿಗೆ ಸಮವಸ್ತ್ರದ ನಿಯಮವಿಲ್ಲ ಎಂದು ಉನ್ನತ ಶಿಕ್ಷಣ ಸಚಿವರೇ ಸ್ಪಷ್ಟಪಡಿಸಿದ್ದಾರೆ. ಗುರುವಾರದಿಂದ ಪರೀಕ್ಷೆ ಇದ್ದು ಹಾಲ್ ಟಿಕೆಟ್ ಪಡೆದುಕೊಳ್ಳಲು ಒಳಗೆ ಬಿಡದೆ ದಬ್ಬಾಳಿಕೆ ಮಾಡಲಾಗುತ್ತಿದೆ' ಎಂದು ವಿದ್ಯಾರ್ಥಿನಿಯರು ಅಸಮಾಧಾನ ವ್ಯಕ್ತಪಡಿಸಿ, ಹಾಲ್ ಟಿಕೆಟ್ ಪಡೆಯದೆ ತೆರಳಿದರು.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಚಿನಕುರಳಿ
ಪ್ರಕಾಶ್ ಶೆಟ್ಟಿ

ಸಿಎಸ್‌ಎಚ್‌ನ ಸಂಶೋಧಕರ ಲೆಕ್ಕಾಚಾರ

ಕೋವಿಡ್ ಸಾವಿನ ಪ್ರಮಾಣ 6 ಪಟ್ಟು ಅಧಿಕ

ಪ್ರಜಾವಾಣಿ ವಾರ್ತೆ

ನವದೆಹಲಿ: ಭಾರತದಲ್ಲಿ ಕೋವಿಡ್–19ನಿಂದ ಮೃತಪಟ್ಟವರ ಸಂಖ್ಯೆ 32 ಲಕ್ಷದಿಂದ 37 ಲಕ್ಷದಷ್ಟು ಇರಬಹುದು ಎಂದು ಹೊಸ ಸಂಶೋಧನೆ ಹೇಳಿದೆ. ಈ ಸಂಖ್ಯೆಯು ಸರ್ಕಾರದ ಅಧಿಕೃತ ದತ್ತಾಂಶಗಳಿಗಿಂತ ಸುಮಾರು 6–8 ಪಟ್ಟು ಹೆಚ್ಚು.

ಕೋವಿಡ್ ಎರಡನೇ ಅಲೆಯ ಬಳಿಕ ಅಂದರೆ, 2021ರ ನವೆಂಬರ್ ವೇಳೆಗೆ ದೇಶದಲ್ಲಿ ಅಂದಾಜು 37 ಲಕ್ಷದವರೆಗೆ ಸಾವುಗಳು ಸಂಭವಿಸಿವೆ ಎಂದು ದೆಹಲಿಯ ಸಿಎಸ್‌ಎಚ್‌ನ ಸಂಶೋಧಕ ಕ್ರಿಸ್ಟೋಫರ್ ಗುಲ್ಮೊಟೊ ಅವರು ಹೇಳಿದ್ದಾರೆ. ಇದಕ್ಕೆ ಪುರಾವೆಯಾಗಿ ತಮ್ಮ ಅಧ್ಯಯನ ಮಾದರಿಯನ್ನು ಅವರು ಒದಗಿಸಿದ್ದಾರೆ.

2021ರ ನವೆಂಬರ್‌ನಲ್ಲಿ ಅಧಿಕೃತವಾಗಿ 4.59 ಲಕ್ಷ ಸಾವುಗಳು ದಾಖಲಾಗಿದ್ದವು. ಈಗ ಈ ಪ್ರಮಾಣ 5 ಲಕ್ಷದ ಗಡಿ ದಾಟಿದೆ. ಒಂದು ವೇಳೆ 32ರಿಂದ 37 ಲಕ್ಷ ಸಾವುಗಳನ್ನು ಗಣನೆಗೆ ತೆಗೆದುಕೊಂಡರೆ, ಭಾರತವು ವಿಶ್ವದಲ್ಲೇ ಅತಿಹೆಚ್ಚು ಕೋವಿಡ್ ಸಾವುಗಳಿಗೆ ಸಾಕ್ಷಿಯಾಗಲಿದೆ.

ಕೋವಿಡ್ ಮರಣ ದರದ ಮೇಲೂ ಈ ಅಧ್ಯಯನ ಬೆಳಕು ಚೆಲ್ಲಿದೆ. 2021ರ ನವೆಂಬರ್‌ನಲ್ಲಿ ಜಾಗತಿಕ ಸರಾಸರಿ ಕೋವಿಡ್ ಮರಣ ದರ 0.6 (ಪ್ರತೀ 1000 ಜನರಿಗೆ) ಇತ್ತು. ಭಾರತದಲ್ಲಿ ಪ್ರತೀ 1000 ಜನರಿಗೆ 2.3ರಿಂದ 2.6ರಷ್ಟು ಜನ ಮೃತಪಟ್ಟಿದ್ದಾರೆ. ಇದು ಜಾಗತಿಕ ಸರಾಸರಿಗೆ ಹೋಲಿಸಿದರೆ 4 ಪಟ್ಟು ಹೆಚ್ಚು. ದೇಶದ ಮರಣ ದರವನ್ನು ಪರಿಷ್ಕರಿಸಿದರೆ, ಈಗಿರುವ 127ನೇ ಸ್ಥಾನದಿಂದ 13ರಿಂದ 19ನೇ ಸ್ಥಾನಕ್ಕೆ ಭಾರತ ಕುಸಿಯಲಿದೆ.

4 ಜನಸಂಖ್ಯಾ ಮಾದರಿಗಳನ್ನು ಆಯ್ಕೆಮಾಡಿ ವಿಶ್ಲೇಷಿಸಲಾಗಿದೆ. ಒಂದನೆಯದು, ಕೇರಳದ ಸಾಮಾನ್ಯ ಜನಸಂಖ್ಯೆ (26,628 ಕೋವಿಡ್ ಸಾವು), ಎರಡನೆಯದು, ಶಾಸಕರು ಮತ್ತು ಸಂಸದರು (43 ಸಾವುಗಳು), ಮೂರನೆಯದು, ರೈಲ್ವೆ ನೌಕರರು (1,952 ಕೋವಿಡ್ ಸಾವು) ನಾಲ್ಕನೆಯದು, ಕರ್ನಾಟಕದ ಶಿಕ್ಷಕರು (268 ಸಾವು).

ಸಾವಿನ ಅಂದಾಜಿನ ವಿಶ್ವಾಸಾರ್ಹತೆ, ಪ್ರಾದೇಶಿಕ ಪ್ರಾತಿನಿಧ್ಯ, ಜನಸಂಖ್ಯಾ ಗುಣಲಕ್ಷಣಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ನಾಲ್ಕು ಜನಸಂಖ್ಯಾ ವರ್ಗಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಕೇರಳ, ಕರ್ನಾಟಕ ಹಾಗೂ ತಮಿಳುನಾಡನ್ನು ಹೊರತುಪಡಿಸಿದರೆ, ಉಳಿದ ರಾಜ್ಯಗಳಲ್ಲಿ ಸಾವಿನ ದತ್ತಾಂಶ ಲೆಕ್ಕಾಚಾರ ನಿಖರವಾಗಿಲ್ಲ ಎಂದು ಅವರು ಹೇಳಿದ್ದಾರೆ.

ಝಾ ವರದಿಯೂ ಇದನ್ನೇ ಹೇಳಿತ್ತು

2020ರ ಜೂನ್ 1ರಿಂದ 2021ರ ಜುಲೈ1ರವರೆಗೆ ದೇಶದಲ್ಲಿ 32 ಲಕ್ಷ ಕೋವಿಡ್ ಸಾವು ಸಂಭವಿಸಿವೆ ಎಂದು ಟೊರಾಂಟೊ ವಿಶ್ವವಿದ್ಯಾಲಯದ ಪ್ರಭಾತ್ ಝಾ ಮತ್ತು ಅವರ ತಂಡದ ವರದಿ ಅಂದಾಜಿಸಿತ್ತು. ಇದು ಅಧಿಕೃತ ದತ್ತಾಂಶಕ್ಕಿಂತ 6–7 ಪಟ್ಟು ಅಧಿಕ. ಸಾವುಗಳು ದಾಖಲಾಗದಿರುವುದು ಅಥವಾ ಸಾವುಗಳನ್ನು ಇತರೆ ಕಾಯಿಲೆಗಳ ಜೊತೆ ತಳುಕು ಹಾಕುವುದು ಮೊದಲಾದ ಕಾರಣಗಳಿಂದ ಕೋವಿಡ್ ಸಾವುಗಳು ಅಂದಾಜಿಸಿದ್ದಕ್ಕಿಂತ ಎಷ್ಟೋ ಪ್ರಮಾಣದಷ್ಟು ಕಡಿಮೆ ದಾಖಲಾಗಿವೆ ಎಂದು ಝಾ ಹೇಳಿದ್ದರು.

ಈ ಹಿಂದೆ ವರದಿಯಾಗಿದ್ದ ಇಂತಹದ್ದೇ ಅಧ್ಯಯನ ವರದಿಗಳನ್ನು ಕೇಂದ್ರ ಆರೋಗ್ಯ ಸಚಿವಾಲಯ ತಿರಸ್ಕರಿಸಿತ್ತು. ಊಹೆಯ ಆಧಾರದಲ್ಲಿ ಮಾಡಲಾಗಿರುವ ಅಧ್ಯಯನಗಳಲ್ಲಿ ಸಾಕಷ್ಟು ಲೋಪಗಳಿವೆ ಎಂದು ತಿಳಿಸಿತ್ತು.

ಗಮನಿಸಿರಿ ಎಲ್‌ಐಸಿ ಪಾಲಿಸಿದಾರರೇ
ಸಮಯಕ್ಕೆ ಸರಿಯಾಗಿ ಕ್ಲೇಮ್ ಸಂದಾಯ ಮಾಡಲು ನಮಗೆ ಸಹಾಯ ಮಾಡಿ.

ಮೆಚ್ಯುರಿಟಿ ತಾರೀಖು/ಸರ್ವೈವಲ್ ಬೆನಿಫಿಟ್ ತಾರೀಖು, ಇವುಗಳಿಗಾಗಿ ದಯವಿಟ್ಟು ನಿಮ್ಮ ಪಾಲಿಸಿ ದಸ್ತಾವೇಜನ್ನು ಪರಿಶೀಲಿಸಿರಿ

- ವಿವರಗಳೊಂದಿಗೆ ಯಾವುದೇ ಶಾಖೆಯನ್ನು ಸಂಪರ್ಕಿಸಿರಿ
- ಬ್ಯಾಂಕ್ ಅಕೌಂಟ್ (NEFT) ವಿವರಗಳನ್ನು ಒದಗಿಸಿರಿ. NEFT ಮ್ಯಾಂಡೇಟ್ ಫಾರ್ಮ್ ನಮ್ಮ ಎಲ್ಲಾ ಆಫೀಸುಗಳಲ್ಲಿ ಲಭ್ಯವಿದೆ ಅಥವಾ ಎಲ್‌ಐಸಿಯ ವೆಬ್‌ಸೈಟ್ www.licindia.in ನಲ್ಲಿ "Download Form" ಲಿಂಕ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಿ
- NEFT ವಿವರಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸಬಹುದು.
- ಕ್ಲೇಮ್ ಡಿಸ್‌ಚಾರ್ಜ್ ಫಾರ್ಮ್ಸ್ ಮತ್ತು ಪಾಲಿಸಿ ದಸ್ತಾವೇಜನ್ನು ಸಲ್ಲಿಸಿರಿ
- KYC ಸಲ್ಲಿಸಿರಿ ಮತ್ತು ಅಪ್‌ಡೇಟ್ ಮಾಡಿರಿ – ಮನೆಯ ವಿಳಾಸ, ಫೋನ್/ಮೊಬೈಲ್ ನಂ., ಈ–ಮೇಲ್ ಐಡಿ ಮುಂತಾದವುಗಳು.

LICHELP <ಪಾಲಿಸಿ ನಂ.> ಇದನ್ನು 9222492224ಗೆ SMS ಮಾಡಿ ಅಥವಾ licclaims@licindia.comಗೆ ಈಮೇಲ್ ಮಾಡಿ
LIC/PRA/2021-22/47/Kan
ತಕ್ಷಣ ಕ್ಲೇಮ್ ಸೆಟಲ್‌ಮೆಂಟ್‌ಗಾಗಿ ಎಲ್ಲಾ ಅವಶ್ಯಕತೆಗಳೊಂದಿಗೆ ನಿಮ್ಮ ಏಜಂಟ್/ಬ್ರಾಂಚ್‌ನ್ನು ಸಂಪರ್ಕಿಸಿರಿ.
ಕಾಲ್ ಸೆಂಟರ್ ಸರ್ವಿಸ್ (022) 6827 6827
ಡೌನ್‌ಲೋಡ್ ಮಾಡಿರಿ ಎಲ್‌ಐಸಿ ಮೊಬೈಲ್ ಆ್ಯಪ್ "MyLIC"
ಸಂದರ್ಶಿಸಿರಿ: licindia.in
ಕೃತ್ರಿಮ ಫೋನ್ ಕಾಲ್‌ಗಳ ಬಗ್ಗೆ ಮತ್ತು ನಕಲು/ಮೋಸದ ಆಫರ್‌ಗಳ ಬಗ್ಗೆ ಎಚ್ಚರಿಕೆ. ಐಆರ್‌ಡಿಎಐ ಇನ್ಶೂರನ್ಸ್ ಪಾಲಿಸಿಗಳ ಮಾರಾಟ, ಬೋನಸ್ ಘೋಷಣೆ ಅಥವಾ ಪ್ರೀಮಿಯಮ್‌ಗಳ ಹೂಡಿಕೆಗಳಂತ ಚಟುವಟಿಕೆಗಳಲ್ಲಿ ತೊಡಗಿರುವುದಿಲ್ಲ. ಇಂಥ ಫೋನ್ ಕಾಲ್‌ಗಳನ್ನು ಪಡೆಯುವ ಸಾರ್ವಜನಿಕರು ಪೊಲೀಸರಲ್ಲಿ ದೂರು ನೀಡಬೇಕಾಗಿ ವಿನಂತಿ.
ನಮ್ಮನ್ನು ಫಾಲೋ ಮಾಡಿರಿ: LIC India Forever
IRDAI Regn No.: 512
LIC
ಲೈಫ್ ಇನ್ಶೂರನ್ಸ್ ಕಾರ್ಪೊರೇಶನ್ ಆಫ್ ಇಂಡಿಯಾ
LIFE INSURANCE CORPORATION OF INDIA
ಪ್ರತಿ ಕ್ಷಣವೂ ನಿಮ್ಮೊಂದಿಗೆ

ಪರಸ್ಪರ ಅಂತರ ಕಾಯ್ದುಕೊಳ್ಳಿ

ಕಿರಿಯ ಸಹಾಯಕ ಹುದ್ದೆಗಳಿಗೆ ಡಿಪ್ಲೊಮಾ ಮುಗಿಸಿದವರು ಅರ್ಜಿ ಸಲ್ಲಿಸಲು ಸಿಗದ ಅವಕಾಶ

ಪಿಯುಸಿಗೆ ಡಿಪ್ಲೊಮಾ ಸಮವೆಂದು ಪರಿಗಣಿಸದ ಕೆಪಿಟಿಸಿಎಲ್

• ವಿಜಯಕುಮಾರ್ ಎಸ್.ಕೆ.

ಪ್ರಜಾವಾಣಿ ವಿಶೇಷ

ಬೆಂಗಳೂರು: 'ಮೂರು ವರ್ಷಗಳ ಡಿಪ್ಲೊಮಾ ಶಿಕ್ಷಣವು ಪಿಯುಸಿಗೆ ತತ್ಸಮಾನ' ಎಂಬ ಸರ್ಕಾರದ ಆದೇಶವನ್ನು ಪರಿಗಣಿಸದೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ (ಕೆಪಿಟಿಸಿಎಲ್) ನೇಮಕಾತಿ ಪ್ರಕ್ರಿಯೆ ನಡೆಸುತ್ತಿದ್ದು, ಇದರಿಂದ ಡಿಪ್ಲೊಮಾ ಕೋರ್ಸ್ ಮುಗಿಸಿರುವ ಲಕ್ಷಾಂತರ ಉದ್ಯೋಗಾಂಕ್ಷಿಗಳು 'ಕಿರಿಯ ಸಹಾಯಕ' ಹುದ್ದೆಗೆ ಅರ್ಜಿ ಸಲ್ಲಿಸುವ ಅವಕಾಶದಿಂದ ವಂಚಿತರಾಗಿದ್ದಾರೆ.

ಸಹಾಯಕ ಎಂಜಿನಿಯರ್, ಕಿರಿಯ ಎಂಜಿನಿಯರ್, ಕಿರಿಯ ಸಹಾಯಕ ಸೇರಿ 1,492 ಹುದ್ದೆಗಳ ಭರ್ತಿಗೆ ಫೆಬ್ರುವರಿ 1ರಂದು ಕೆಪಿಟಿಸಿಎಲ್ ಅಧಿಸೂಚನೆ ಹೊರಡಿಸಿದೆ. ಆ ಪೈಕಿ 360 ಕಿರಿಯ ಸಹಾಯಕ ಹುದ್ದೆಗಳಿವೆ. ಆನ್‌ಲೈನ್‌ನಲ್ಲಿ ಮೂಲಕವಷ್ಟೇ ಅರ್ಜಿ ಸಲ್ಲಿಸಲು ಅವಕಾಶ ಇದ್ದು, ಅರ್ಜಿ ಸಲ್ಲಿಕೆಗೆ ಮಾರ್ಚ್ 7ರಂದು ಕಡೆಯ ದಿನ. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವಾಗ ವಿದ್ಯಾರ್ಹತೆ ಕಾಲಂನಲ್ಲಿ ದ್ವಿತೀಯ ಪಿಯುಸಿ, ಸಿಬಿಎಸ್‌ಇ ಪಠ್ಯಕ್ರಮದ 12ನೇ ತರಗತಿ, ಐಎಸ್‌ಸಿ ಪಠ್ಯಕ್ರಮದ 12ನೇ ತರಗತಿ ಎಂದಷ್ಟೇ ನಮೂದಿಸಲಾಗಿದೆ. ಡಿಪ್ಲೊಮಾ ಕೋರ್ಸ್ ಮುಗಿಸಿದವರು ಅರ್ಜಿ ಸಲ್ಲಿಸಲು ಯತ್ನಿಸಿ ಅವಕಾಶ ಇಲ್ಲದಿರುವುದನ್ನು ಕಂಡು ಕಂಗಾಲಾಗಿದ್ದಾರೆ. ರಾಜ್ಯದಲ್ಲಿ 85 ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು, 44 ಅನುದಾನಿತ ಮತ್ತು 196 ಖಾಸಗಿ ಪಾಲಿಟೆಕ್ನಿಕ್ ಕಾಲೇಜುಗಳಿವೆ. ಇವುಗಳಿಂದ ಪ್ರತಿವರ್ಷ ಒಂದು ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಡಿಪ್ಲೊಮಾ ಮುಗಿಸಿ ಹೊರಗೆ ಬರುತ್ತಿದ್ದಾರೆ.

ಡಿಪ್ಲೊಮಾ ಮುಗಿಸಿದವರಿಗೆ ಉದ್ಯೋಗಾವಕಾಶ ಕಡಿಮೆ ಎಂಬ ಮನೋಭಾವ ಇದ್ದು, ತೊಡೆದು ಹಾಕಲು ಈ ಕೋರ್ಸ್ ಪಿಯುಸಿಗೆ ತತ್ಸಮಾನ ಎಂಬ ಆದೇಶವನ್ನು 2021ರ ಸೆ.30ರಂದು ರಾಜ್ಯ ಸರ್ಕಾರ ಹೊರಡಿಸಿತು.

'ನೇರ ನೇಮಕಾತಿ ಅಥವಾ ಅನುಕಂಪ ಆಧಾರಿತ ನೇಮಕಾತಿ ಮತ್ತು ಉನ್ನತ ಶಿಕ್ಷಣ ಪಡೆಯಲು ಡಿಪ್ಲೊಮಾವನ್ನು ಪಿಯುಸಿಗೆ ತತ್ಸಮಾನವೆಂದು ಪರಿಗಣಿಸಬೇಕು. ಅವರು ಕನ್ನಡ ಭಾಷಾ ಪರೀಕ್ಷೆ ತೇರ್ಗಡೆ ಹೊಂದಬೇಕಾಗುತ್ತದೆ' ಎಂದು ಆದೇಶದಲ್ಲಿ ತಿಳಿಸಲಾಗಿದೆ.

'ಅದನ್ನು ಆಧರಿಸಿ ನೇಮಕಾತಿ ಪ್ರಕ್ರಿಯೆಗಳು ನಡೆಯುತ್ತಿದ್ದವು. ಕೆಪಿಎಸ್‌ಸಿ ಕೂಡ ಕಿರಿಯ ಸಹಾಯಕರ ಹುದ್ದೆಗಳ ನೇಮಕಾತಿ ಸಂದರ್ಭದಲ್ಲಿ ಡಿಪ್ಲೊಮಾ ವಿದ್ಯಾರ್ಹತೆಯನ್ನು ಪಿಯುಸಿಗೆ ಸಮ ಎಂದು ಪರಿಗಣಿಸಿದೆ. ಈಗ ಕೆಪಿಟಿಸಿಎಲ್ ಈ ಆದೇಶವನ್ನು ಗಣನೆಗೆ ತೆಗೆದುಕೊಳ್ಳದೆ ನೇಮಕಾತಿ ಪ್ರಕ್ರಿಯೆ ಆರಂಭಿಸಿದೆ. ಈ ಬಗ್ಗೆ ಪ್ರಶ್ನೆ ಮಾಡಿದರೆ ಆಡಳಿತ ಮಂಡಳಿಯ ತೀರ್ಮಾನ ಎಂಬ ಉತ್ತರವನ್ನು ಅಧಿಕಾರಿಗಳು ನೀಡುತ್ತಿದ್ದಾರೆ. ಸರ್ಕಾರದ ಆದೇಶಕ್ಕಿಂತ ಕೆಪಿಟಿಸಿಎಲ್ ಆಡಳಿತ ಮಂಡಳಿ ತೀರ್ಮಾನ ದೊಡ್ಡದೇ' ಎಂಬುದು ಉದ್ಯೋಗಾಕಾಂಕ್ಷಿಗಳ ಪ್ರಶ್ನೆ.

'ಕಿರಿಯ ಸಹಾಯಕರ ಹುದ್ದೆಗೆ ಅರ್ಜಿ ಸಲ್ಲಿಸಲು ನಮಗೂ ಅವಕಾಶ ಕಲ್ಪಿಸಬೇಕು. ಅವಕಾಶ ಸಿಗದಿದ್ದರೆ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಲಾಗುವುದು' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಉದ್ಯೋಗಾಕಾಂಕ್ಷಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಆಡಳಿತ ಮಂಡಳಿ ತೀರ್ಮಾನ'

'ಡಿಪ್ಲೊಮಾ ಮುಗಿಸಿದವರು ಕಿರಿಯ ಎಂಜಿನಿಯರ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಬಹುದಾಗಿದೆ. ಹೀಗಾಗಿಯೇ ಕಿರಿಯ ಸಹಾಯಕ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಅವರಿಗೆ ಅವಕಾಶ ಕಲ್ಪಿಸಿಲ್ಲ' ಎಂದು ಕೆಪಿಟಿಸಿಎಲ್ ಆಡಳಿತ ಮತ್ತು ಮಾನವ ಸಂಪನ್ಮೂಲ ವಿಭಾಗದ ಅಧಿಕಾರಿಯೊಬ್ಬರು ತಿಳಿಸಿದರು.

'ಸರ್ಕಾರದ ಆದೇಶ ಹೊರಡಿಸಿರುವುದು ಗಮನದಲ್ಲಿದೆ. ಆಡಳಿತ ಮಂಡಳಿ ಮುಂದೆ ವಿಷಯ ಮಂಡಿಸಲಾಗಿತ್ತು. ಡಿಪ್ಲೊಮಾ ಮುಗಿಸಿದವರಿಗೆ ಕಿರಿಯ ಸಹಾಯಕರ ಹುದ್ದೆಗಳಿಗೆ ಅವಕಾಶ ನೀಡಿದರೆ ಮುಂದಿನ ದಿನಗಳಲ್ಲಿ ಎಂಜಿನಿಯರ್ ಹುದ್ದೆಗೆ ಬಡ್ತಿ ಕೇಳುವ ಸಾಧ್ಯತೆ ಇದೆ. ಆದ್ದರಿಂದ ಅವರನ್ನು ಪರಿಗಣಿಸುವುದು ಬೇಡ ಎಂಬ ನಿರ್ಧಾರವನ್ನು ಆಡಳಿತ ಮಂಡಳಿ ಕೈಗೊಂಡಿದೆ' ಎಂದು ಅವರು 'ಪ್ರಜಾವಾಣಿ'ಗೆ ಸ್ಪಷ್ಟಪಡಿಸಿದರು.

ನಗರದಲ್ಲಿ ಇಂದು

ಅರಣ್ಯ ಭೂಮಿ ಹಕ್ಕು ಹೋರಾಟದ ಸ್ಮರಣ ಸಂಚಿಕೆ ಬಿಡುಗಡೆ: ವಿಧಾನಸಭಾ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ಅತಿಥಿಗಳು–ಸಚಿವರಾದ ಉಮೇಶ ಕತ್ತಿ, ಶ್ರೀನಿವಾಸ ಪೂಜಾರಿ, ಶಾಸಕ ಸತೀಶ ಜಾರಕಿಹೊಳಿ, ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್, ಶಾಸಕ ಎಚ್.ಕೆ.ಪಾಟೀಲ, ರವಿವರ್ಮ ಕುಮಾರ್, ಮುನ್ನುಡಿ ನುಡಿ–ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನದಾಸ್, ಆಯೋಜನೆ–ಅರಣ್ಯ ಭೂಮಿ ಹಕ್ಕು ಹೋರಾಟಗಾರರ ವೇದಿಕೆ, ಸ್ಥಳ–ನೌಕರರ ಭವನ, ಕಬ್ಬನ್ ಉದ್ಯಾನದ ಆವರಣ, ಬೆಳಿಗ್ಗೆ 9

ಕೆ.ಎಂ.ನಂಜಪ್ಪ ಅವರ ಜನ್ಮದಿನದ ಅಂಗವಾಗಿ ರಕ್ತದಾನ ಶಿಬಿರ: ಅತಿಥಿಗಳು–ಎಂ.ಎಸ್.ನಟರಾಜ್, ಅಮಿತಾ ಎಚ್.ವಧಾರ್, ಆರ್.ಇಂದಿರಾ, ಗಾಯತ್ರಿ ಆನಂದ್, ಎಸ್.ಶೇಷನಾರಾಯಣ, ರಾಜು ಚಂದ್ರಶೇಖರ್, ಆಯೋಜನೆ–ಶೇಷಾದ್ರಿಪುರ ವಾಣಿಜ್ಯ ಕಾಲೇಜು, ರೆಡ್‌ಕ್ರಾಸ್, ಸ್ಥಳ–ಕಾಲೇಜು ಸಭಾಂಗಣ, ಮಾಗಡಿ ಮುಖ್ಯರಸ್ತೆ, ಬೆಳಿಗ್ಗೆ 9.30

'ಕರ್ನಾಟಕ ಇತಿಹಾಸ ರಚನೆಯಲ್ಲಿ ಮಸುಕಾದ ಸಂಗತಿಗಳ ಮೇಲೆ ಹೊಸ ಬೆಳಕು' ವಿಚಾರ ಸಂಕಿರಣ: ಉದ್ಘಾಟನೆ–ಪುಟ್ಟಣ್ಣ, ಅತಿಥಿಗಳು–ಗವಿಸಿದ್ಧಯ್ಯ, ಅಧ್ಯಕ್ಷತೆ–ಡಿ.ರಾಜಶೇಖರನ್, ಆಯೋಜನೆ–ಕಾಲೇಜು ಶಿಕ್ಷಣ ಇಲಾಖೆ, ಸ್ಥಳ–ಬಾಪೂಜಿ ಸಭಾಂಗಣ, ಸರ್ಕಾರಿ ಕಲಾ ಕಾಲೇಜು, ಬೆಳಿಗ್ಗೆ 10.30

'ಕಲಾವೈಭವಂ' ಸಂಗೀತ ಮತ್ತು ನೃತ್ಯ ಉತ್ಸವ: ಭರತನಾಟ್ಯ ಪ್ರದರ್ಶನ–ಕರುನಾಡ ಗುರುಕುಲ ತಂಡ, ಆಯೋಜನೆ–ಸೌಂದರ್ಯ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್, ಪುರಂದರ ಇಂಟರ್‌ನ್ಯಾಷನಲ್ ಟ್ರಸ್ಟ್, ಸ್ಥಳ–ಸೌಂದರ್ಯ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸಭಾಂಗಣ, ಸೌಂದರ್ಯ ಬಡಾವಣೆ, ಸಿಡೇದಹಳ್ಳಿ, ಸಂಜೆ 6

ಕಲಾವೈಭವಂ

'ಕಾಂತ ಮತ್ತು ಕಾಂತ' ನಾಟಕ ಪ್ರದರ್ಶನ: ಪ್ರಸ್ತುತಿ–ಸಂಕೇತ್ ನಾಟಕ, ರಚನೆ ಮತ್ತು ನಿರ್ದೇಶನ–ಎಸ್.ಸುರೇಂದ್ರನಾಥ್, ಸ್ಥಳ–ರಂಗಶಂಕರ, ಸಂಜೆ 7 (ಶುಕ್ರವಾರವೂ ಪ್ರದರ್ಶನ ಇರಲಿದೆ)

ಕವನ ಸ್ಪರ್ಧೆ

ಬೆಂಗಳೂರು: ಕನ್ನಡ ಸಂಘರ್ಷ ಸಮಿತಿ ಕವಿ ಗೋವಿಂದ ಪೈ ಅವರ ಜನ್ಮದಿನದ ಪ್ರಯುಕ್ತ ಉದಯೋನ್ಮುಖ ಕವಿ–ಕವಯತ್ರಿಯರಿಗೆ ಕವನ ಸ್ಪರ್ಧೆ ಆಯೋಜಿಸಿದೆ. ಆಸಕ್ತರು ಕನ್ನಡ ನಾಡು, ನುಡಿ, ಸಾಹಿತ್ಯ, ಕನ್ನಡ ನಾಡಿನ ಪರಂಪರೆ ಕುರಿತಾದ ಸ್ವರಚಿತ ಒಂದು ಕವನವನ್ನು ಮಾರ್ಚ್ 3ರೊಳಗೆ ಕಳುಹಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ವಿಳಾಸ: ಎ.ಎಸ್.ನಾಗರಾಜಸ್ವಾಮಿ, ಅಧ್ಯಕ್ಷ, ಕನ್ನಡ ಸಂಘರ್ಷ ಸಮಿತಿ, 1ನೇ ಮುಖ್ಯರಸ್ತೆ, ಅನ್ನಪೂರ್ಣೇಶ್ವರಿ ಬಡಾವಣೆ, ಬೆಂಗಳೂರು.

ಸಂಪರ್ಕ: 9739001410

ಇಂದು ಎಂ.ಟೆಕ್ ತರಗತಿಗಳು ಆರಂಭ

ಬೆಂಗಳೂರು: ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜಿನ (ಯುವಿಸಿಇ) ಮೊದಲನೇ ವರ್ಷದ ಎಂ.ಟೆಕ್ ಮತ್ತು ಎಂ.ಆರ್ಕ್ ತರಗತಿಗಳು ಫೆ.17ರಿಂದ ಆರಂಭವಾಗಲಿವೆ.

ಹೀಗಾಗಿ ಯುವಿಸಿಇಗೆ ಪ್ರವೇಶ ಪಡೆದ ಎಲ್ಲ ಮೊದಲ ಸೆಮಿಸ್ಟರ್ ವಿದ್ಯಾರ್ಥಿಗಳು ತರಗತಿಗಳಿಗೆ ಹಾಜರಾಗಬೇಕು ಎಂದು ಪ್ರಕಟಣೆ ತಿಳಿಸಿದೆ.

ಕರ್ನಾಟಕ ಸರ್ಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ–562 101.

ದೂರವಾಣಿ ಸಂಖ್ಯೆ: ಕಛೇರಿ: 08156–270427 ಫ್ಯಾಕ್ಸ್: 08156–270427 ಇಮೇಲ್ : eemidcbpura@gmail.com

2702 ನೀರು ಕೆರೆಗಳ ದುರಸ್ತಿ ಮತ್ತು ನಿರ್ವಹಣೆ (ನಿರ್ವಹಣೆ) ಅಡಿಯಲ್ಲಿನ ಟೆಂಡರ್ ಪ್ರಕಟಣೆ ಸಂಖ್ಯೆ : 14/2021–22 ದಿನಾಂಕ : 07/02/2022

ಭಾಗ–1: ಅಲ್ಪಾವಧಿ ಟೆಂಡರ್‌ಗಳಿಗಾಗಿ ಅರ್ಜಿ ಆಹ್ವಾನ – ಕೆ.ಡಬ್ಲ್ಯು 1 ಮತ್ತು 2

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ ರವರಿಂದ 2702 ನೀರು ಕೆರೆಗಳ ದುರಸ್ತಿ ಮತ್ತು ನಿರ್ವಹಣೆ (ನಿರ್ವಹಣೆ) ಯೋಜನೆ ಅಡಿಯಲ್ಲಿ ಅನುಮೋದನೆಯಾಗಿರುವ ಕಾಮಗಾರಿಗಳಿಗೆ ಕೆ.ಡಬ್ಲ್ಯೂ 1, ಮತ್ತು 2 ನಿಭಂದನೆಗೊಳಪಟ್ಟಂತೆ ಕರ್ನಾಟಕ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಮೂಲಕ ಏಕ ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಸರ್ಕಾರ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ 1ನೇ, 2ನೇ ಮತ್ತು 3ನೇ (3ನೇ ದರ್ಜೆಗೆ ಸಣ್ಣ ನೀರಾವರಿ ಇಲಾಖೆಯಲ್ಲಿ ನೊಂದಾಯಿತ) ದರ್ಜೆ ಅರ್ಹ ಗುತ್ತಿಗೆದಾರರಿಂದ ಕರೆಯಲಾಗಿದೆ. ಇ.ಎಂ.ಡಿ ಮೊತ್ತ ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ಇದ್ದಂತೆ. ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ 21/02/2022 ಸಾಯಂಕಾಲ 4.00 ಗಂಟೆಯವರೆಗೆ ಟೆಂಡರ್ ತೆರೆಯುವ ದಿನಾಂಕ : 24/02/2022 ಬೆಳಿಗ್ಗೆ 11.00 ಗಂಟೆಯ ನಂತರ (ಸಾಧ್ಯವಾದ್ದಲ್ಲಿ) ಸದರಿ ಕಾಮಗಾರಿಯ ಟೆಂಡರ್‌ಗಳ ಮೊತ್ತ ಅಥವಾ ಇ.ಎಂ.ಡಿ ಯಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಇ–ಪ್ರಕ್ಯೂರ್‌ಮೆಂಟ್‌ನ ಬಿಡ್ ಡಾಕ್ಯೂಮೆಂಟ್‌ನಲ್ಲಿ ನಮೂದಿಸಿರುವ ಮೊತ್ತಗಳು ಅಂತಿಮವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ – 08156–270427 ಮತ್ತು ಇ–ಪ್ರೋಕ್ಯೂರ್‌ಮೆಂಟ್ ಸಹಾಯವಾಣಿ ದೂರವಾಣಿ ಸಂಖ್ಯೆ: 080–25501216 ಮತ್ತು 080–25501227 ರಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ

ಕರ್ನಾಟಕ ಬ್ಯಾಂಕ್ ಲಿಮಿಟೆಡ್

ನಿಮ್ಮ ಪರಿವಾರದ ಬ್ಯಾಂಕ್. ಭಾರತದಾದ್ಯಂತ

ನೋಂದಾಯಿತ ಮತ್ತು ಪ್ರಧಾನ ಕಚೇರಿ, ಪಿ.ಬಿ.ನಂ.599, ಮಹಾವೀರ ಸರ್ಕಲ್, ಕಂಕನಾಡಿ, ಮಂಗಳೂರು–575002. ದಕ್ಷಿಣ ಕನ್ನಡ ಜಿಲ್ಲೆ.	ಫೋನ್: 0824–2228103 ಫ್ಯಾಕ್ಸ್: 0824–2228142 ಇ–ಮೇಲ್: legal.recovery@ktkbank.com ವೆಬ್‌ಸೈಟ್: www.karnatakabank.com ಸಿಐಎನ್: L85110KA1924PLC001128

ಕಾನೂನು ಮತ್ತು ವಸೂಲಾತಿ ವಿಭಾಗ

1) **ಮೆ. ಎಸ್‌ಎಸ್‌ಬಿ ಎಂಟರ್‌ಪ್ರೈಸಸ್,** ಸರ್ವೆ ನಂ. 47/1, ಕಾವೇರಿನಗರ, ತಾತಗುಣಿ ಗ್ರಾಮ, ಕನಕಪುರ ರಸ್ತೆ, ಬೆಂಗಳೂರು–560062. 2) **ಶ್ರೀಮತಿ. ನಾಗೇಶ್ವರಮ್ಮ ಅಂತಪು ಕೋಂ. ಶ್ರೀ. ನಾಗಿರೆಡ್ಡಿ ಅಂತಪು, ಪಾಲುದಾರ: ಮೆ. ಎಸ್‌ಎಸ್‌ಬಿ ಎಂಟರ್‌ಪ್ರೈಸಸ್,** ಡಿ.ನಂ.6–2–464, ಕೋವೂರ್‌ನಗರ, ಅನಂತಪುರ–515001. 3) **ಶ್ರೀಮತಿ. ಚಂದ್ರಿಕಾ ಪಿ ಕೋಂ. ಶ್ರೀ. ನಾಗೇಂದ್ರ ರೆಡ್ಡಿ ಎಂ, ಪಾಲುದಾರ: ಮೆ. ಎಸ್‌ಎಸ್‌ಬಿ ಎಂಟರ್‌ಪ್ರೈಸಸ್,** ಡಿ.ನಂ.6–2–464, ಕೋವೂರ್‌ನಗರ, ಅನಂತಪುರ–515001. 4) **ಶ್ರೀಮತಿ. ಸುಲೋಚನಾ ಎ ಕೋಂ. ಶ್ರೀ. ಸುಧಾಕರ್ ರೆಡ್ಡಿ ಎ,** ಪಾಲುದಾರ: ಮೆ. ಎಸ್‌ಎಸ್‌ಬಿ ಎಂಟರ್‌ಪ್ರೈಸಸ್, ಡಿ.ನಂ.6–2–464, ಕೋವೂರ್‌ನಗರ, ಅನಂತಪುರ–515001. 5) **ಶ್ರೀಮತಿ. ಸಾಯಿ ಐಶ್ವರ್ಯ ಎಲ್ ಸಿ ಕೋಂ. ಶ್ರೀ. ಎಸ್ ಮಹೇಶ್‌ಬಾಬು,** ಪಾಲುದಾರ: ಮೆ. ಎಸ್‌ಎಸ್‌ಬಿ ಎಂಟರ್‌ಪ್ರೈಸಸ್, ಡಿ.ನಂ.9–232, ಗುಲ್ಜಾರ್‌ಪೇಟ್, ಅನಂತಪುರ–515001. 6) **ಶ್ರೀ. ಒಬಿರೆಡ್ಡಿ ಅಂತಪು ಬಿನ್ ಶ್ರೀ. ವೀರನಾರಪ್ಪ ರೆಡ್ಡಿ,** ಡಿ.ನಂ.6–2–464, ಕೋವೂರ್‌ನಗರ, ಅನಂತಪುರ–515001. 7) **ಶ್ರೀಮತಿ. ವೆಂಕಟಲಕ್ಷ್ಮಮ್ಮ ಎ ಕೋಂ. ಶ್ರೀ. ಒಬಿರೆಡ್ಡಿ ಅಂತಪು,** ಡಿ.ನಂ.6–2–464, ಕೋವೂರ್‌ನಗರ, ಅನಂತಪುರ–515001. 8) **ಶ್ರೀ. ನಾಗಿರೆಡ್ಡಿ ಅಂತಪು ಬಿನ್ ಶ್ರೀ. ಒಬಿರೆಡ್ಡಿ ಅಂತಪು,** ಡಿ.ನಂ.6–2–464, ಕೋವೂರ್‌ನಗರ, ಅನಂತಪುರ–515001. 9) **ಶ್ರೀ. ನಾಗೇಶ್ವರ ರೆಡ್ಡಿ ಎ ಬಿನ್ ಶ್ರೀ. ಒಬಿರೆಡ್ಡಿ ಅಂತಪು,** ಡಿ.ನಂ.6–2–464, ಕೋವೂರ್‌ನಗರ, ಅನಂತಪುರ–515001. 10) **ಶ್ರೀ. ಸುಧಾಕರ ರೆಡ್ಡಿ ಎ ಬಿನ್ ಶ್ರೀ. ಒಬಿರೆಡ್ಡಿ ಅಂತಪು,** ಡಿ.ನಂ.6–2–464, ಕೋವೂರ್‌ನಗರ, ಅನಂತಪುರ–515001. 11) **ಶ್ರೀ. ನಾಗೇಂದ್ರ ರೆಡ್ಡಿ ಬಿನ್ ಶ್ರೀ. ಒಬಿರೆಡ್ಡಿ ಅಂತಪು,** ಡಿ.ನಂ.47/2, ತಾತಗುಣಿ ಅಂಚೆ, ಕನಕಪುರ ಮುಖ್ಯರಸ್ತೆ, ಬೆಂಗಳೂರು–560062. 12) **ಶ್ರೀಮತಿ. ಕವಿತಾ ದೇಸಾಯಿ ಕೋಂ. ಶ್ರೀ. ಡಿ ಸಿದ್ದಾರೆಡ್ಡಿ,** ಪಾಲುದಾರ: ಮೆ. ಎಸ್‌ಎಸ್‌ಬಿ ಎಂಟರ್‌ಪ್ರೈಸಸ್, ಫ್ಲ್ಯಾಟ್ ನಂ.305, ಆನಂದ್ ಆಸ್ಪರ್, ಹಾಲಿಡೇ ವಿಲೇಜ್ ರೋಡ್, ಕನಕಪುರ ರಸ್ತೆ, ಬೆಂಗಳೂರು–560062.

ಅನುಕ್ರಮವಾಗಿ 1) **ಪಿಎಸ್‌ಟಿಎಲ್ ಅಕೌಂಟ್ ನಂ.** 0257001800045001 ದಿನಾಂಕ 30.03.2016 ಮೊತ್ತ ರೂ. 144.20 ಲಕ್ಷ, 2) **ಪಿಎಸ್‌ಒಡಿ ಅಕೌಂಟ್ ನಂ.** 0257000600188801 ದಿನಾಂಕ 01.06.2019 ಮೊತ್ತ ರೂ. 100.00 ಲಕ್ಷ ಮತ್ತು 3) **ಪಿಎಸ್‌ಟಿಎಲ್ ಅಕೌಂಟ್ ನಂ.** 0257001800051901 ದಿನಾಂಕ 28.02.2020 ಮೊತ್ತ ರೂ. 15.20 ಲಕ್ಷ ಮೊಬಲಗನ್ನು ಸಾಲಗಾರರಾದ ನಂ. **1] ಮೆ. ಎಸ್‌ಎಸ್‌ಬಿ ಎಂಟರ್‌ಪ್ರೈಸಸ್ ಪ್ರತಿನಿಧಿಸುವ ಪಾಲುದಾರರಾದ ನಂ. 2] ಶ್ರೀಮತಿ. ನಾಗೇಶ್ವರಮ್ಮ ಅಂತಪು, ನಂ. 3] ಶ್ರೀಮತಿ. ಚಂದ್ರಿಕಾ ಪಿ, ನಂ. 4] ಶ್ರೀಮತಿ. ಸುಲೋಚನಾ ಎ, ನಂ. 5] ಶ್ರೀಮತಿ. ಸಾಯಿ ಐಶ್ವರ್ಯ ಎಲ್ ಸಿ ಮತ್ತು ನಂ. 12] ಶ್ರೀಮತಿ. ಕವಿತಾ ದೇಸಾಯಿ ಎಂಬ ನೀವುಗಳು ಪಡೆದುಕೊಂಡಿರುತ್ತೀರಿ ಮತ್ತು ನಂ. 2] ಶ್ರೀಮತಿ. ನಾಗೇಶ್ವರಮ್ಮ ಅಂತಪು, ನಂ. 3] ಶ್ರೀಮತಿ. ಚಂದ್ರಿಕಾ ಪಿ, ನಂ. 4] ಶ್ರೀಮತಿ. ಸುಲೋಚನಾ ಎ, ನಂ. 5] ಶ್ರೀಮತಿ. ಸಾಯಿ ಐಶ್ವರ್ಯ ಎಲ್ ಸಿ, ನಂ. 6] ಶ್ರೀ. ಒಬಿರೆಡ್ಡಿ ಅಂತಪು, ನಂ. 7] ಶ್ರೀಮತಿ. ವೆಂಕಟಲಕ್ಷ್ಮಮ್ಮ ಎ, ನಂ. 8] ಶ್ರೀ. ನಾಗಿ ರೆಡ್ಡಿ ಅಂತಪು, ನಂ. 9] ಶ್ರೀ. ನಾಗೇಶ್ವರ ರೆಡ್ಡಿ ಎ, ನಂ. 10] ಶ್ರೀ. ಸುಧಾಕರ ರೆಡ್ಡಿ ಎ, ನಂ. 11] ಶ್ರೀ. ನಾಗೇಂದ್ರ ರೆಡ್ಡಿ ಮತ್ತು ನಂ. 12] ಶ್ರೀಮತಿ. ಕವಿತಾ ದೇಸಾಯಿ ಎಂಬ ನೀವುಗಳು ನಮ್ಮ ಅನಂತಪುರ ಶಾಖೆಯಲ್ಲಿನ ಸಾಲಗಳಿಗೆ ಜಾಮೀನುದಾರರು/ಸಹ–ಸಾಲಗಾರರಾಗಿದ್ದೀರಿ ಮತ್ತು ಅನುಕ್ರಮವಾಗಿ 28.10.2016 ರಂದು ಜಾರಿಗೊಂಡಂತೆ 1) 28–10–2016, 2) 31–05–2019 ರಂದು ಮತ್ತು 28.10.2016 ರಂದು ಜಾರಿಗೊಂಡಂತೆ 3)** 28–02–2020 ರಂದು ನಿಮ್ಮಗಳ ಉಲ್ಲೇಖಿತ ಸಾಲದ ಖಾತೆಗಳನ್ನು ಅನುತ್ಪಾದಕ ಖಾತೆಗಳೆಂದು ವರ್ಗೀಕರಣ ಮಾಡಲಾಗಿರುತ್ತದೆ ಹಾಗೂ ಸಂಬಂಧಿತ ಪಕ್ಷಗಾರರಿಗೆ ಬ್ಯಾಂಕ್‌ನ ಅಧಿಕೃತ ಅಧಿಕಾರಿಯು ಹಣಕಾಸು ಸ್ವತ್ತುಗಳ ಸಂರಕ್ಷಣೆ ಮತ್ತು ಪುನಃರಚನೆ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆ, 2002ರ ಸೆಕ್ಷನ್ 13(2) ಮತ್ತು (3) ಅಡಿಯಲ್ಲಿ **22.09.2021** ರಂದು ಡಿಮಾಂಡ್ ನೋಟಿಸ್ ಜಾರಿಗೊಳಿಸಿದ್ದರು ಮತ್ತು ಸರ್ಫಾಯಸಿ ಕಾಯ್ದೆ ಅಡಿಯಲ್ಲಿ ಸದರಿ ಸ್ವಾಧೀನ ಸ್ವತ್ತುಗಳನ್ನು ಹರಾಜು ಹಾಕಲಾಗುತ್ತಿದೆ. ಸದರಿ ಡಿಮಾಂಡ್ ನೋಟಿಸ್‌ನ್ನು ಮೇಲ್ಕಾಣಿಸಿದ ವಿಳಾಸಗಳಿಗೆ ಸ್ವೀಕೃತ ರಸೀದಿ ಸಮೇತ ತ್ವರಿತ ಅಂಚೆ ಮುಖಾಂತರ ರವಾನಿಸಲಾಗಿತ್ತು, ಆದರೆ ಬಟವಾಡೆಗೊಳ್ಳದೆ ಮರಳಿ ಬಂದಿರುತ್ತವೆ. ಆದ್ದರಿಂದ, ಸರ್ಫಾಯಸಿ ಕಾಯ್ದೆ, 2002ರ ನಿಯಮಗಳ ಪ್ರಕಾರ ಡಿಮಾಂಡ್ ನೋಟಿಸ್ ಅಂಶಗಳನ್ನು ಈ ಪ್ರಕಟಣೆಯ ಮೂಲಕ ಪ್ರಕಟಿಸಲಾಗುತ್ತಿದೆ. ದಿನಾಂಕ **21.09.2021** ರಂತೆಗಿನ ಸರಾಸರಿ ಬಾಕಿಮೊತ್ತ ವಿವರ ಕೆಳಗಿನಂತಿರುತ್ತದೆ:

ಸ್ವರೂಪ ಮತ್ತು ಅಕೌಂಟ್ ನಂ.	ಉಳಿಕೆ ಬಾಕಿಮೊತ್ತ	ಬಡ್ಡಿದರ (ಮಾಸಿಕ ಸಂಯುಕ್ತ)	ಬಡ್ಡಿ ಆಕರಿಸಬೇಕಾದ ದಿನಾಂಕ
PSOD A/C No. 0257000600188801	Rs.1,17,72,609.96	11.50%	01.09.2021
PSTL A/C No. 0257001800045001	Rs.1,63,74,996.66	11.97%	30.08.2021
PSTL A/c No. 02570001800051901	Rs. 17,85,249.05	11.97%	28.08.2021

ಸದರಿ ಬಾಕಿಮೊತ್ತವನ್ನು ಈ ಪ್ರಕಟಣೆಯ ದಿನಾಂಕದಿಂದ 60 ದಿನಗಳೊಳಗೆ ಪಾವತಿಸಬೇಕೆಂದು ಕರೆ ನೀಡಲಾಗಿದೆ.

ಅಡಮಾನ ಸ್ವತ್ತುಗಳ (ಭದ್ರತಾ ಸ್ವತ್ತು) ಮತ್ತು ಹೈಪೊಥಿಕೇಟೆಡ್ ಸ್ವತ್ತುಗಳ ಸಂಕ್ಷಿಪ್ತ ವಿವರ.

1) ವಾರ್ಡ್ ನಂ.9, ಜನತಾ ಹೋಟೇಲ್, ಗೋಪುರ ಗಡಿಯಾರದ ಹತ್ತಿರ, ತರಕಾರಿ ಮಾರುಕಟ್ಟೆ ಎದುರು, ಅನಂತಪುರ ಮುನಿಸಿಪಲ್ ಕಾರ್ಪೊರೇಶನ್, ಅನಂತಪುರ ಜಿಲ್ಲೆ 515001 ವಿಳಾಸದಲ್ಲಿರುವ ಟಿ.ಎಸ್.ನಂ.481 (ಓಲ್ಡ್), 2028 (ನ್ಯೂ), ಡಿ.ನಂ.9/120 ಹೊಂದಿರುವ 3.95 ಸೆಂಟ್ಸ್ ವಿಸ್ತೀರ್ಣವುಳ್ಳ ವಾಣಿಜ್ಯ ಸ್ವತ್ತಿನ ಎಲ್ಲಾ ಭೂಭಾಗಗಳು ಸೇರಿರುತ್ತವೆ.

2) ಘಟಕ ಮತ್ತು ಯಂತ್ರೋಪಕರಣ – ಹೈಪೊಥಿಕೇಶನ್ ಅಗ್ರೀಮೆಂಟ್

ದಯವಿಟ್ಟು ಗಮನಿಸಿ, ಸೆಕ್ಯೂರ್ಡ್ ಕ್ರೆಡಿಟರ್ ಬ್ಯಾಂಕ್‌ನ ಅಧಿಕೃತ ಅಧಿಕಾರಿ ಆಗಿರುವ ನಾನು, ಸದರಿ ಪ್ರಕಟಣೆಯು ಪ್ರಕಟಗೊಂಡ ದಿನಾಂಕದಿಂದ 60 ದಿನಗಳು ಪೂರ್ಣಗೊಳ್ಳುವುದರೊಳಗೆ ನಿಮ್ಮ ಹೊಣೆಗಾರಿಕೆಗಳನ್ನು ಪಾವತಿಸಲು ವಿಫಲರಾದಲ್ಲಿ ಮೇಲ್ಕಂಡ ಭದ್ರತೆಗಳ ವಿರುದ್ಧ ಜಾರಿ ಹೊರಡಿಸಬೇಕಾಗುತ್ತದೆ.

ಮುಂದುವರಿದಂತೆ, ಸದರಿ ಕಾಯ್ದೆಯ ಸೆಕ್ಷನ್ 13(8) ಅನ್ನು ಪರಿಶೀಲಿಸಲು ಸೂಚಿಸಲಾಗಿದ್ದು, ಇದರಲ್ಲಿ ಅಡಮಾನಗಳನ್ನು ಮರಳಿ ಪಡೆದುಕೊಳ್ಳಲು ಲಭ್ಯವಿರುವ ಕಾಲಾವಕಾಶ ವಿವರ ಇರುತ್ತದೆ ಮತ್ತು ಈ ಅವಕಾಶವು ಹರಾಜು ಪ್ರಕಟಣೆ ಅಥವಾ ಟೆಂಡರ್ ಆಹ್ವಾನ ಪ್ರಕಟಣೆಯನ್ನು ಪ್ರಕಟಿಸುವ ದಿನಾಂಕದೊಳಗೆ ಮಾತ್ರ ಲಭ್ಯವಿರುತ್ತದೆ.

ದಿನಾಂಕ: 16.02.2022 ಸಹಿ/– ಮುಖ್ಯ ಪ್ರಬಂಧಕರು ಮತ್ತು ಅಧಿಕೃತ ಅಧಿಕಾರಿ
ಸ್ಥಳ: ಮಂಗಳೂರು ಕರ್ನಾಟಕ ಬ್ಯಾಂಕ್ ಲಿಮಿಟೆಡ್

ಸತ್ಯಮೇವ ಜಯತೆ

ಭಾರತ ಸರ್ಕಾರ

ಸಂವಹನ ಸಚಿವಾಲಯ, ಟೆಲಿಕಾಂ ಇಲಾಖೆ

ಕರ್ನಾಟಕ LSA

EMF ವಿಕಿರಣದ ಕುರಿತು ಜಾಗೃತಿ ಸಂದೇಶ

ಮೊಬೈಲ್ ಟವರ್‌ಗಳಿಂದ ಇಎಂಎಫ್ ವಿಕಿರಣದ ಹಾನಿಕಾರಕ ಪರಿಣಾಮಗಳ ಎಂದು ಹಲವಾರು ತಪ್ಪು ಸಂದೇಶಗಳನ್ನು ಪ್ರಸಾರ ಮಾಡಲಾಗುತ್ತಿದೆ ಎಂದು ದೂರಸಂಪರ್ಕ ಇಲಾಖೆ (ಡಿಒಟಿ) ಗಮನಕ್ಕೆ ಬಂದಿದೆ. ಈ ಸಂದೇಶಗಳು ನಿಜವಾಗಿಯೂ ಸರಿಯಾಗಿರುವುದಿಲ್ಲ.

ಮೊಬೈಲ್ ಟವರ್‌ಗಳು ಅಯಾನೀಕರಿಸದ ರೇಡಿಯೋ ತರಂಗಾಂತರ ಗಳನ್ನು ಹೊರಸೂಸುತ್ತವೆ ಮತ್ತು ಅತಿ ಕಡಿಮೆ ಶಕ್ತಿಯನ್ನು ಹೊಂದಿರುತ್ತವೆ ಮತ್ತು ಮಾನವರ ಸೇರಿದಂತೆ ಜೀವಂತ ಕೋಶಗಳಿಗೆ ಯಾವುದೇ ರೀತಿಯ ಹಾನಿಯನ್ನುಂಟು ಮಾಡಲು ಅಸಮರ್ಥವಾಗಿವೆ. ದೂರಸಂಪರ್ಕ ಇಲಾಖೆ (DoT) ರೇಡಿಯೋ ಆವರ್ತನ ಕ್ಷೇತ್ರಕ್ಕೆ ವಿಕಿರಣದ ಒಡ್ಡುವಿಕೆಯ ಮಿತಿಗೆ ಮಾನದಂಡಗಳನ್ನು ಸೂಚಿಸಿದೆ. ಅಂದರೆ, ಬೇಸ್ ಸ್ಟೇಷನ್ ಹೊರಸೂಸುವಿಕೆಗಳು, ICNIRP ಸೂಚಿಸಿದ ಮತ್ತು ವಿಶ್ವ ಆರೋಗ್ಯ ಸಂಸ್ಥೆ (WHO) ಶಿಫಾರಸು ಮಾಡಿದ ಸುರಕ್ಷಿತ ಮಿತಿಗಳಿಗಿಂತ 10 ಪಟ್ಟು ಹೆಚ್ಚು ಕಠಿಣವಾಗಿದೆ.

ಬೇಸ್ ಸ್ಟೇಷನ್ ಹೊರಸೂಸುವಿಕೆಗೆ ಸೂಚಿಸಲಾದ ಸುರಕ್ಷಿತ ಮಿತಿಗಳು ವಸತಿ ಪ್ರದೇಶಗಳು, ಶಾಲೆಗಳು, ಆಸ್ಪತ್ರೆಗಳು ಮುಂತಾದ ಸ್ಥಳಗಳಲ್ಲಿ ಮೊಬೈಲ್ ಟವರ್‌ಗಳನ್ನು ಸ್ಥಾಪಿಸಲು ಪ್ರತ್ಯೇಕ ನಿಯಮಗಳನ್ನು ನಿಬಂಧನೆಗಳನ್ನು ಹೊಂದಿದ ಯಾವುದೇ ಅಗತ್ಯವನ್ನು ತೆಗೆದುಹಾಕುತ್ತದೆ ಯಾಕೆಂದರೆ ಈ ಟವರ್‌ಗಳ ಹೊರಸೂಸುವ ವಿಕಿರಣವು ಜೀವಂತ ಕೋಶಕ್ಕೆ ಯಾವುದೇ ಹಾನಿಯನ್ನುಂಟು ಮಾಡಲು ಅಸಮರ್ಥವಾಗಿದೆ.

ಟೆಲಿಕಾಂ ಇಲಾಖೆ (DoT) ಯು ದೂರಸಂಪರ್ಕ ಸೇವಾ ಪೂರೈಕೆದಾರರಿಂದ (TSPs) ಸ್ವಯಂ ಪ್ರಮಾಣ ಪತ್ರವನ್ನು ಸ್ವೀಕರಿಸುವುದು ಮತ್ತು DoT ನ ಕ್ಷೇತ್ರ ಘಟಕಗಳಿಂದ ಯಾದೃಚ್ಛಿಕವಾಗಿ ಆಯ್ಕೆ ಮಾಡಿದ ಒಟ್ಟು ಸೈಟ್‌ಗಳ/ಟವರ್‌ಗಳ 10% ವರೆಗಿನ ಭೌತಿಕ ಆಡಿಟ್ ಸೇರಿದಂತೆ ನಿಗದಿತ ಮಾನದಂಡಗಳನ್ನು ಕಟ್ಟುನಿಟ್ಟಾಗಿ ಅನುಸರಿಸಲು ಉತ್ತಮ-ರಚನಾತ್ಮಕ ಪ್ರಕ್ರಿಯೆಯನ್ನು ಹೊಂದಿದೆ.

ಇದಲ್ಲದೇ ಯಾವುದೇ ನಾಗರಿಕ ಇಲಾಖೆಯು ಸೂಚಿಸಿದ ಸುರಕ್ಷಿತ ಮಿತಿಯನ್ನು ಮೀರಿ ಬೇಡಿಕೆ ಇರುವ ತರಂಗಗಳನ್ನು ಹೊರಸೂಸುವ ಯಾವುದೇ ಮೊಬೈಲ್ ಟವರ್ ಬಗ್ಗೆ ಆತಂಕವನ್ನು ಹೊಂದಿದ್ದರೆ ತರಂಗ್ ಸಂಚಾರ್ ಪೋರ್ಟಲ್ https://tarangsanchar.gov.in/emfportal ನಲ್ಲಿ EMF ಅಳತೆಗಳು/ಪರೀಕ್ಷೆಗೆ ವಿನಂತಿಸಬಹುದು.

ಟೆಲಿಕಾಂ ಇಲಾಖೆ
ಕರ್ನಾಟಕ LSA
ಬೆಂಗಳೂರು–41

davp 06229/11/0003/2122

ಸತ್ಯಮೇವ ಜಯತೆ

ಭಾರತ ಸರ್ಕಾರ

ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ

ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆ

ಸನ್ 2022–23ನೇ ಸಾಲಿನ ನ್ಯಾಷನಲ್ ಓವರ್‌ಸೀಸ್ ಸ್ಕಾಲರ್‌ಶಿಪ್‌ಗಾಗಿ ಆನ್‌ಲೈನ್ ಅರ್ಜಿ ಆಹ್ವಾನ

ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆ, ಭಾರತ ಸರ್ಕಾರ ರವರು ನ್ಯಾಷನಲ್ ಓವರ್‌ಸೀಸ್ ಸ್ಕಾಲರ್‌ಶಿಪ್ ಸ್ಕೀಮ್ ಅಡಿಯಲ್ಲಿ ಪರಿಶಿಷ್ಟ ಜಾತಿ, ಅಧಿಸೂಚಿತ ನೊಮಾಡಿಕ್ ಮತ್ತು ಸೆಮಿ–ನೊಮಾಡಿಕ್ ಪಂಗಡ, ಭೂರಹಿತ ಕೃಷಿ ಕಾರ್ಮಿಕರ ಮತ್ತು ಸಾಂಪ್ರದಾಯಿಕ ಕುಶಲಕರ್ಮಿ ಪ್ರವರ್ಗಗಳ ಕನಿಷ್ಠ ಆದಾಯವುಳ್ಳ ಅಭ್ಯರ್ಥಿಗಳಿಂದ ಸನ್ 2022–23ನೇ ಸಾಲಿಗೆ ವಿದೇಶದಲ್ಲಿ ಮಾಸ್ಟರ್ಸ್ ಮತ್ತು ಪಿಹೆಚ್.ಡಿ ಕೋರ್ಸ್‌ಗಳ ಅಧ್ಯಯನಕ್ಕಾಗಿ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸುವ ಎನ್‌ಓಎಸ್ ಪೋರ್ಟಲ್ ಅನ್ನು ಆರಂಭಿಸುತ್ತಿದ್ದಾರೆ.

ಸದರಿ ಪೋರ್ಟಲ್ ಅರ್ಜಿಗಳ ಆಹ್ವಾನಕ್ಕಾಗಿ 15–2–2022 ರಿಂದ 31–3–2022 ರವರೆಗೆ ತೆರೆದಿರುತ್ತದೆ. ಪೋರ್ಟಲ್ ಲಿಂಕ್ www.nosmsje.gov.in.

ಅರ್ಜಿ ನಮೂನೆಯನ್ನು ಭರ್ತಿ ಮಾಡುವ ಸಂಪೂರ್ಣ ಮಾರ್ಗಸೂಚಿಗಳು ಪೋರ್ಟಲ್‌ನಲ್ಲಿ ಲಭ್ಯ. ಅಭ್ಯರ್ಥಿಗಳು ತಮ್ಮ ಅರ್ಜಿ ಭರ್ತಿ ಮಾಡುವ ಮುನ್ನ, ಸ್ಕೀಮ್‌ನ ಮಾರ್ಗಸೂಚಿಗಳ ಪ್ರಕಾರ ತಮ್ಮ ಅರ್ಹತೆಯನ್ನು ಪರಿಶೀಲಿಸಿಕೊಳ್ಳುವುದು.

davp 38101/11/0021/2122

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)

ವಿಶೇಷ ಭೂಸ್ವಾಧೀನಾಧಿಕಾರಿಗಳು–2, ನಂ.14/3, 1ನೇ ಮಹಡಿ, ಅರವಿಂದಭವನ, ನೃಪತುಂಗ ರಸ್ತೆ, ಬೆಂಗಳೂರು–1

ಸಂಖ್ಯೆ: ಕೆಐಎಡಿಬಿ/ಕೆಆರ್‌ಐಡಿಇ/ಭೂಸ್ವಾ/2202/2021–22 ದಿನಾಂಕ: 14.02.2022

ಸಾರ್ವಜನಿಕ ಪ್ರಕಟಣೆ

(ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966 ರ ವಿಧಿ 28(2) ರನ್ವಯ)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ /ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿನ ಈ ಕೆಳಕಂಡ ಷೆಡ್ಯೂಲ್ ಸ್ವತ್ತುಗಳನ್ನು 2ನೇ ಹಂತದ **"ಬೆಂಗಳೂರು ಉಪ–ನಗರ ರೈಲ್ವೆ ಯೋಜನೆಗಾಗಿ ಕಾರಿಡಾರ್–2 (ಭಾಗ 4)"** ಉದ್ದೇಶಕ್ಕಾಗಿ ಸ್ವಾಧೀನಪಡಿಸಿಕೊಳ್ಳಲು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966 ರ ವಿಧಿ 28(1) ರಡಿ ಪ್ರಾಥಮಿಕ ಅಧಿಸೂಚನೆಯನ್ನು ಸಂಖ್ಯೆ: ಸಿಐ **214** ಎಸ್‌ಪಿಕ್ಯೂ (ಇ) **2021** ದಿನಾಂಕ: **10–02–2022** ನ್ನು ಸರ್ಕಾರವು ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ: 11–02–2022 ರಂದು ಪ್ರಕಟಣೆ ಹೊರಡಿಸಿದೆ. ಈ ಕೆಳಗೆ ವಿವರಿಸಿರುವ ಸ್ವತ್ತುಗಳ ಸಂಬಂಧಪಟ್ಟ ಖಾತೆದಾರರ/ಅನುಭವದಾರರುಗಳಿಗೆ/ಹಿತಾಸಕ್ತ ವ್ಯಕ್ತಿಗಳಿಗೆ ವಿಧಿ 28(2) ರನ್ವಯ ನೋಟಿಸ್ ನೀಡಲಾಗಿದೆ. ಆದರೆ, ಕೆಲವರು ನೋಟಿಸ್ ಪಡೆಯಲು ನಿರಾಕರಿಸಿರುವ ಕಾರಣ ಹಾಗೂ ಕೆಲವು ಸ್ವತ್ತಿನ ಮಾಲೀಕರು ವಾಸವಾಗಿರುವ ನಿಖರವಾದ ವಿಳಾಸ ತಿಳಿಯದ ಕಾರಣ ನೋಟೀಸುಗಳನ್ನು ಜಾರಿ ಮಾಡಲು ಸಾಧ್ಯವಾಗಿರುವುದಿಲ್ಲ. ಆದ ಕಾರಣ ಸ್ವತ್ತಿನ ಮಾಲೀಕರು/ ಹಿತಾಸಕ್ತಿಯುಳ್ಳವರಿಗೆ ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡುವ ಉದ್ದೇಶದಿಂದ ವಿಶೇಷ ಭೂಸ್ವಾಧೀನಾಧಿಕಾರಿಗಳು–2, ಕೆಐಎಡಿಬಿ (ಕೆ.ಆರ್.ಐ.ಡಿ.ಇ.,) ಬೆಂಗಳೂರು ರವರ ಕಛೇರಿಯಲ್ಲಿ **ದಿನಾಂಕ: 14–03–2022 ರಂದು ಬೆಳಿಗ್ಗೆ 11.30 ಗಂಟೆಗೆ** ವಿಚಾರಣೆ ನಿಗಧಿಪಡಿಸಿದೆ. ಸದರಿ ದಿನಾಂಕದಂದು ಸ್ವತ್ತಿನ ಮಾಲೀಕರು/ಹಿತಾಸಕ್ತಿಯುಳ್ಳವರು ಸದರಿ ಭೂಸ್ವಾಧೀನ ಪ್ರಕ್ರಿಯೆಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಈ ಕೆಳಕಂಡ ಅಧಿಕಾರಿಗಳ ರೂಬು ರೂಬು ಖುದ್ದಾಗಿ ಅಥವಾ ಅಧಿಕಾರ ಪಡೆದ ತಮ್ಮ ಪ್ರತಿನಿಧಿಗಳ ಮುಖಾಂತರವಾಗಲಿ ಹಾಜರಾಗಿ ಆಕ್ಷೇಪಣೆ ಸಲ್ಲಿಸಬಹುದು. ನಂತರದ ಅವಧಿಯಲ್ಲಿ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ. ಒಂದು ವೇಳೆ ವಿಚಾರಣೆಗೆ ಗೈರು ಹಾಜರಾದಲ್ಲಿ ಅಥವಾ ಲಿಖಿತ ಆಕ್ಷೇಪಣೆಯನ್ನು ಸಲ್ಲಿಸದಿದ್ದಲ್ಲಿ ಭೂಸ್ವಾಧೀನ ಪ್ರಕ್ರಿಯೆಗೆ ತಮ್ಮ ಆಕ್ಷೇಪಣೆ ಏನೂ ಇಲ್ಲವೆಂದು ಪರಿಭಾವಿಸಿ ಕಾನೂನು ರೀತ್ಯಾ ಮುಂದಿನ ಕ್ರಮ ಕೈಗೊಳ್ಳಲಾಗುವುದು. ಕಲಂ 28(1) ರಲ್ಲಿ ಅಧಿಸೂಚನೆ ಹೊರಡಿಸಿದ ನಂತರ ಸೂಕ್ತ ಪ್ರಾಧಿಕಾರದ ಅನುಮತಿ ಇಲ್ಲದೆ ಸದರಿ ಸ್ವತ್ತುಗಳನ್ನು ಕ್ರಯ, ಕರಾರು, ಭೋಗ್ಯ, ಲೀಸ್, ಅದಲು–ಬದಲು, ಆಧಾರ್, ಹಕ್ಕುಬಿಡುಗಡೆ ವಗ್ಯೆರೆ ಮಾಡುವಂತಿಲ್ಲ ಮತ್ತು ಸದರಿ ಸ್ವತ್ತುಗಳಲ್ಲಿ ಕಟ್ಟಡ–ನಿರ್ಮಾಣ ಮತ್ತಿತರ ಅಭಿವೃದ್ಧಿ ಕಾರ್ಯಗಳನ್ನು ಮಾಡಲು ನಿಷೇಧಿಸಿರುತ್ತದೆ. ಒಂದು ವೇಳೆ ಅಂತಹ ಕಾರ್ಯಗಳನ್ನು ಕೈಗೊಂಡಲ್ಲಿ 1966ರ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ ವಿಧಿ 30 ಅನ್ನು ಓದಿಕೊಳ್ಳುವ ಮೇರೆಗೆ (ಪರಿಹಾರ ಧನ ನಿಗಧಿ ಮಾಡುವಾಗ ಈ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ) ಮತ್ತು ಅಂತಿಮವಾಗಿ ಸ್ವತ್ತುಗಳನ್ನು ಸ್ವಾಧೀನಪಡಿಸಿಕೊಳ್ಳಲಾಗುವುದು ಹಾಗೂ ಕಾನೂನಿನನ್ವಯ ಕ್ರಮ ಜರುಗಿಸಲಾಗುವುದು.

ಷೆಡ್ಯೂಲ್ ಸ್ವತ್ತುಗಳು

ಕ್ರ. ಸಂ	ಖಾತಾದಾರರ ಹೆಸರು	ಗುರುತಿನ ಸಂಖ್ಯೆ	ಎಲ್‌ಎ/ ಸಿಟಿಎಸ್ ಸರ್ವೆ ನಂಬರ್	ಸ್ವತ್ತಿನ ಒಟ್ಟು ವಿಸ್ತೀರ್ಣ	ಭೂಸ್ವಾಧೀನಕ್ಕೆ ಒಳಪಟ್ಟ ವಿಸ್ತೀರ್ಣ ಚ.ಮೀ.
ವಿಚಾರಣೆ ದಿನಾಂಕ: 14–03–2022, ವಿಚಾರಣೆ ಸಮಯ: ಬೆಳಿಗ್ಗೆ 11.30 ರಿಂದ					
ಗ್ರಾಮ: ಲೊಟ್ಟೆಗೊಲ್ಲಹಳ್ಳಿ ಹೋಬಳಿ: ಕಸಬಾ ತಾಲ್ಲೂಕು: ಬೆಂಗಳೂರು ಉತ್ತರ					
1	1. ಕೆ. ರಾಜಕೃಷ್ಣನ್, 2. ಬಿ.ಎಸ್. ಲಕ್ಷ್ಮಣಪ್ಪ, 3. ಸಂಜೀವಪ್ಪ 4. ಮಂಗಳ ಸಂಜೀವಯ್ಯ 5. ವೇರ್‌ಮ್ಯಾನ್ ಶ್ರೀ ಅರ್. ರಂಗರಾಜು 6. ವೈ. ಎಸ್. ವೆಂಕಟಚಾರಿ	C2/R/14/0-5/LOGH/01	21/2ಡಿ	3.19 ಎಕರೆ	12.32
2	1. ಎಸ್ ಕೆ ಭೂಪತೀ & ಬಿ ಆದಿಶಕ್ತಿ 2. ಗೀನ್ನಿ & ವಿನಯ್ ಪ್ರಕಾಶ 3. ಗೀನ್ನಿ & ವಿನಯ್ ಪ್ರಕಾಶ 4. 1. ಮಮ್ಮತ ಎಂ ಒಟ್ಟಗೇರಿ 2. ಮಹೇಶ್ ಎಸ್ ಒಟ್ಟಗೇರಿ 5. ಎನ್.ಅರ್. ಪಟ್ಟಾಬೀರಾಮನ್ 6. ಎನ್.ವೆಂಕಟರಾಮನ್	C2/R/14/0-5/LOGH/02	21/2ಡಿ	334.448	11.89
3	ಎಸ್.ಲಕ್ಷ್ಮಿಕಾಂತ್	C2/R/14/0-5/LOGH/03	21/2ಸಿ	250.838	5.86
4	ಎಸ್.ಗೌರಿಶಂಕರ್	C2/R/14/0-5/LOGH/04	21/2ಬಿ	250.838	5.61
5	ಎಸ್.ಸತ್ಯಪ್ರಕಾಶ್	C2/R/14/0-5/LOGH/05	21/2ಬಿ	294.97	14.53
6	ಎ.ಮುರುಳೀಧರ್	C2/R/14/0-5/LOGH/06	21/2ಎ	267.558	18.24
7	ಜಗದೀಶ್.ವಿ ಮತ್ತು ಶೀಲಾ	C2/R/14/0-5/LOGH/07	21/2ಎ	97.547	20.20
8	ಸಿ.ಪಿ.ಪ್ರಸಾದ್, ಸಿ.ಪಿ.ಪ್ರಕಾಶ್ ಮತ್ತು ಸಿ. ಪಿ.ಪ್ರದೀಪ್	C2/R/14/0-5/LOGH/08	21/2ಎ	84.54	22.65
9	ಡಿ. ಜಿವಾದೀರಾಜ್	C2/R/14/0-5/LOGH/09	21/1	222.96	28.13
10	ಶೈಲಾಜಶ್ರೀಧರ್	C2/R/14/0-5/LOGH/10	21/1	222.96	28.07
11	ಸಿ.ಆರ್. ಶ್ರೀಕಾರ	C2/R/14/0-5/LOGH/11	21/1	222.96	56.75
12	ಇಂದೂ	C2/R/14/0-5/LOGH/12	21/1	222.96	27.19
13	ರಾಜಶೇಖರಯ್ಯ.ಜಿ	C2/R/14/0-5/LOGH/13	21/1	222.96	19.86
14	ದಾನ್‌ಸಿಂಗ್ ಸಿ.ಬಿ. ಮತ್ತು ಜಯಂತೀಬಾಯಿ	C2/R/14/0-5/LOGH/14	21/1	222.96	8.22
15	ಜಯಂತ್.ಟಿ	C2/R/14/0-5/LOGH/15	21/1	222.96	7.36
16	ಶ್ರೀರಾಮ್‌ಗುಪ್ತ	C2/R/14/0-5/LOGH/16	21/1	109.43	21.59
17	ಚಂದ್ರಶೇಖರ್‌ಗುಪ್ತ	C2/R/14/0-5/LOGH/17	21/1	117.591	45.79
18	ಪಿ.ಎನ್.ಬಿ.ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ಮಲ್ಲೇಶ್ವರಂ	C2/R/14/0-5/LOGH/18	21/1	116.127	77.55
19	ಕದೀರ್‌ಅಹಮ್ಮದ್	C2/R/14/0-5/LOGH/19	21/1	97.44	76.50
20	ಕೆ. ರಾಜಕೃಷ್ಣನ್	C2/R/14/0-5/LOGH/20	21/1	65.03	8.90
ಗ್ರಾಮ: ನಾಗಶೆಟ್ಟಿಹಳ್ಳಿ ಹೋಬಳಿ: ಕಸಬಾ ತಾಲ್ಲೂಕು: ಬೆಂಗಳೂರು ಉತ್ತರ					
21	ಶ್ರೀಮತಿ ನೂರ್‌ತಬಸುಮ್	C2/R/13/6-7/LOGH/01	8/1	63.898	37.95
22	ಸೈಯದ್ ಮುಬರಾಕ್ ಮತ್ತು ರೀಹನಾಬೆಗಂ	C2/R/13/6-7/LOGH/02	8/1	183.946	72.69
23	ಶ್ರೀಮತಿ ನಾಗಮ್ಮ	C2/R/13/6-7/LOGH/03	8/1	116.127	25.81
24	ಕಾಲುದಾರಿ	C2/R/13/6-7/LOGH/04	8/1		8.83
ಗ್ರಾಮ: ಯಶವಂತಪುರ ಹೋಬಳಿ: ಕಸಬಾ ತಾಲ್ಲೂಕು: ಬೆಂಗಳೂರು ಉತ್ತರ					
25	ಸ್ಟೀಲ್ ಮ್ಯಾಗ್	C2/r/16/8-9/YPR/01	ಎಲ್.ಎ.ನಂ: 1/ ಸಿಟಿಎಸ್ ನಂ: 1436 ರ ಪೈಕಿ	1,3220.921	8064.19

ಸಹಿ/– ವಿಶೇಷ ಭೂಸ್ವಾಧೀನಾಧಿಕಾರಿ–2, ಕೆ.ಐ.ಎ.ಡಿ.ಬಿ (ಕೆ.ಆರ್.ಐ.ಡಿ.ಇ.,) ನೃಪತುಂಗ ರಸ್ತೆ, ಬೆಂಗಳೂರು

ಎಸ್.ವಿ.ಸಿ. ಕೋ–ಆಪರೇಟಿವ್ ಬ್ಯಾಂಕ್ ಲಿ.

ಪ್ರಧಾನ ಕಛೇರಿ : ಕಾನೂನು ಹಾಗೂ ವಸೂಲಾತಿ ವಿಭಾಗ, ಎಸ್.ವಿ.ಸಿ. ಟವರ್, ನೆಹರು ರಸ್ತೆ, ವಕೋಲ, ಸಾಂಟಾಕ್ರೂಜ್ (ಪೂ), ಮುಂಬೈ–400055.

ಪ್ರಾದೇಶಿಕ ಕಚೇರಿ : ನಂ. 1, ಸೆಂಟ್ರಲ್ ಬ್ಯಾಂಕ್ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018. ದೂರವಾಣಿ : 080–71231027/28/29 & 32

ಶಾಖೆ : ನಂ. 921/66, 28ನೇ ಮುಖ್ಯ ರಸ್ತೆ, 9ನೇ ಬ್ಲಾಕ್, ಜಯನಗರ, ಬೆಂಗಳೂರು – 560069

ಸ್ಥಿರಾಸ್ತಿಯ ಮಾರಾಟಕ್ಕಾಗಿ ನೀಡಲಾಗಿರುವ ಮಾರಾಟ ಸೂಚನೆ

ಭದ್ರತಾ ಆಸಕ್ತಿಯ ಜಾರಿ ಅಧಿನಿಯಮ 2002ರ ಪ್ರಕರಣ 8(6)ರ ನಿಯಮ2002ಅನ್ನು ಓದಿಕೊಂಡಂತೆ ಆರ್ಥಿಕ ಸ್ವತ್ತುಗಳ ಭದ್ರತೆ ಮತ್ತು ಪುನರ್‌ರಚನೆ ಮತ್ತು ಭದ್ರತಾ ಆಸಕ್ತಿಯ ಜಾರಿ ಅಧಿನಿಯಮ 2002ರ ಅನ್ವಯ ಸ್ಥಿರಾಸ್ತಿಯನ್ನು ಮಾರಾಟ ಮಾಡಲು ನೀಡಲಾಗಿರುವ ಇ–ಹರಾಜು ಮಾರಾಟ ನೋಟೀಸ್

ಸಮಸ್ತ ಸಾರ್ವಜನಿಕರಿಗೆ ಹಾಗೂ ಸಾಲಗಾರರಿರು, ಜಾಮೀನುದಾರರು ಮತ್ತು ಅಡಮಾನದಾರರು ಈ ನೋಟೀಸ್ ನೀಡುವ ಮೂಲಕ ತಿಳಿಸುವುದೇನೆಂದರೆ ಈ ಕೆಳಗೆ ತಿಳಿಸಿರುವ ಅಡಮಾನವಿಟ್ಟಿರುವ/ಅಧಿನದಲ್ಲಿರುವ ಸ್ಥಿರಾಸ್ತಿಯನ್ನು ಭದ್ರತಾ ಸಾಲದಾತರಾದ ಎಸ್‌ವಿಸಿ ಕೋ–ಆಪರೇಟೀವ್ ಬ್ಯಾಂಕ್ ಲಿ.,ನ ಅಧಿಕೃತ ಅಧಿಕಾರಿಗಳು ಸ್ವಾಧೀನಕ್ಕೆ ತೆಗೆದುಕೊಂಡಿದ್ದು ಸಾಲಗಾರರಾದ (1) ಮೆ॥ 4 ಕ್ರಿಯೇಷನ್ಸ್, ಒಂದು ನೋಂದಾಯಿತ ಪಾಲುದಾರ ಸಂಸ್ಥೆ, ಪ್ರತಿನಿಧಿಸುವವರು ಅದರ ಪಾಲುದಾರರು: ಶ್ರೀ ಎಂ ಆರ್ ಪ್ರವೀಣ್ ಕುಮಾರ್, ಶ್ರೀ ವೆಂಕಟೇಶ್ ಎಸ್ ಭಾಸ್ಕರ್, ಶ್ರೀ ಡಿ ಗೋಪ ಕುಮಾರ್, ಶ್ರೀ ವಿನಯ್ ಹಾಲಿಡೇ ಆರ್, ಶ್ರೀ ಜಿತೇಂದರ್ ಕುಮಾರ್, ಮೆ॥ ನಾರಾಯಣ್ ಅಪ್ಪರೆಲ್ಸ್ ಪ್ರೈ ಲಿಮಿಟೆಡ್, ಇದರ ನೋಂದಾಯಿತ ಕಚೇರಿ ವಿಳಾಸ: ನಂ. 29, ವಡ್ರಪಾಳ್ಯ, ಜೆ ಪಿ ನಗರ 8ನೇ ಫೇಸ್, 2ನೇ ಬ್ಲಾಕ್, ಗೊಟ್ಟಿಗೆರೆ ಪೋಸ್ಟ್, ಬೆಂಗಳೂರು–560083. (ಸಾಲಗಾರರು / ಜಾಮೀನುದಾರರು) (2) ಮೆ॥ ಒರಿಜೀನ್ ಪ್ರೈವೇಟ್ ಲಿಮಿಟೆಡ್, ಪ್ರತಿನಿಧಿಸುವವರು ಅದರ ನಿರ್ದೇಶಕರು: ಶ್ರೀ ಡಿ.ಪಿ ನಾಗರಾಜ್, ಶ್ರೀ ಎಂ.ಆರ್ ಪ್ರವೀಣ್ ಕುಮಾರ್, ಶ್ರೀ ವೆಂಕಟೇಶ್ ಎಸ್ ಭಾಸ್ಕರ್, ಶ್ರೀ ಡಿ ಗೋಪಕುಮಾರ್, ಶ್ರೀ ಜಿತೇಂದರ್ ಕುಮಾರ್, ಇದರ ನೋಂದಾಯಿತ ಕಚೇರಿ ವಿಳಾಸ: ನಂ. 29, ವಡ್ರಪಾಳ್ಯ, ಜೆ.ಪಿ ನಗರ 8ನೇ ಫೇಸ್, 2ನೇ ಬ್ಲಾಕ್, ಗೊಟ್ಟಿಗೆರೆ ಪೋಸ್ಟ್, ಬೆಂಗಳೂರು–560083. (ಸಾಲಗಾರರು / ಜಾಮೀನುದಾರರು) (3) ಮೆ॥ ನಾರಾಯಣ್ ಅಪ್ಪರೆಲ್ಸ್ ಪ್ರೈ ಲಿಮಿಟೆಡ್, ಪ್ರತಿನಿಧಿಸುವವರು ಅದರ ನಿರ್ದೇಶಕರು : ಶ್ರೀ ಡಿ.ಪಿ ನಾಗರಾಜ್ ಮತ್ತು ಶ್ರೀ ಸತೀಶ್ ಡಿ.ಜಿ ಇದರ ನೋಂದಾಯಿತ ಕಚೇರಿ : ನಂ 14, ಅನ್ನಪೂರ್ಣೇಶ್ವರಿ ಇಂಡಸ್ಟ್ರಿಯಲ್ ಎಸ್ಟೇಟ್, ದೊಡ್ಡಕಲ್ಲಸಂದ್ರ, ಕನಕಪುರ ಮುಖ್ಯ ರಸ್ತೆ, ಬೆಂಗಳೂರು–560062. (ಜಾಮೀನುದಾರರು) (4) ಮೆ॥ ಮೆನಿ ಮೀನ್ಸ್, ಒಂದು ಪಾಲುದಾರ ಸಂಸ್ಥೆ, ಪ್ರತಿನಿಧಿಸುವವರು ಅದರ ಪಾಲುದಾರರು: ಶ್ರೀ ಡಿ.ಪಿ ನಾಗರಾಜ್, ಶ್ರೀ ಡಿ ಗೋಪಕುಮಾರ್, ಶ್ರೀ ವಿನಯ್ ಹಾಲಿಡೇ ಆರ್, ಶ್ರೀ ಎಂ.ಆರ್ ಪ್ರವೀಣ್ ಕುಮಾರ್, ಶ್ರೀ ವೆಂಕಟೇಶ್ ಎಸ್ ಭಾಸ್ಕರ್, ಶ್ರೀ ಜಿತೇಂದರ್ ಕುಮಾರ್, (5) ಮೆ॥ ಸ್ಟುಡಿಯೋ ಸೋರ್ಸ್ ಪ್ರೈ ಲಿಮಿಟೆಡ್, ಪ್ರತಿನಿಧಿಸುವವರು ಅದರ ನಿರ್ದೇಶಕರು : ಶ್ರೀ ಡಿ.ಪಿ ನಾಗರಾಜ್, ಶ್ರೀ ಎಂ ಆರ್ ಪ್ರವೀಣ್ ಕುಮಾರ್, ಶ್ರೀ ವೆಂಕಟೇಶ್ ಎಸ್ ಭಾಸ್ಕರ್, ಇದರ ನೋಂದಾಯಿತ ಕಚೇರಿ ವಿಳಾಸ : ನಂ. 29, ವಡ್ರಪಾಳ್ಯ, ಜೆ.ಪಿ ನಗರ 8ನೇ ಫೇಸ್, 2ನೇ ಬ್ಲಾಕ್, ಗೊಟ್ಟಿಗೆರೆ ಪೋಸ್ಟ್, ಬೆಂಗಳೂರು–560 083. (ಜಾಮೀನುದಾರರು) (6) ಶ್ರೀ ವಿನಯ್ ಹಾಲಿಡೇ ಆರ್, ವಿಳಾಸ: ನಂ. ಜಿ 1403, ಮಂತ್ರಿ ಟ್ರಾಂಕ್ವಿಲ್, ಗುಬ್ಬಲಾಲಾ, ಬೆಂಗಳೂರು–560061. (7) ಶ್ರೀ ಗೋಪ ಕುಮಾರ್ ಡಿ, ವಿಳಾಸ: ನಂ. 6/3, 1ನೇ ಸ್ಟ್ರೀಟ್, ರಾಜೇಶ್ವರಿನಗರ್, ಕೊಳತ್ತೂರ್, ಚೆನ್ನೈ–600099 (8) ಶ್ರೀ ಎಂ ಆರ್ ಪ್ರವೀಣ್ ಕುಮಾರ್ ವಿಳಾಸ: ನಂ. 63, 6ನೇ ಮೇನ್, ಎಂ.ಎಸ್ ರಾಮಯ್ಯ ಸಿಟಿ, 8ನೇ ಫೇಸ್, ಜೆ.ಪಿ ನಗರ, ಬೆಂಗಳೂರು–560076. (ಜಾಮೀನುದಾರರು) (9) ಶ್ರೀ ಥಾಮಸ್ ರಿಚರ್ಡ್ ಸ್ಯಾಮ್ಸನ್, ಇವರು ಮರಣ ಹೊಂದಿದರಿಂದ ಕಾನೂನು ಪ್ರತಿನಿಧಿಸುವವರು: (ಎ) ಶ್ರೀ ವಿನಯ್ ಹಾಲಿಡೇ ಆರ್, S/o ಲೇಟ್ ಶ್ರೀ ಥಾಮಸ್ ರಿಚರ್ಡ್ ಸ್ಯಾಮ್ಸನ್, (ಬಿ) ಶ್ರೀಮತಿ ಅಂಜಲಿ ಪ್ರೇಮಲತಾ W/o ಲೇಟ್ ಶ್ರೀ ಥಾಮಸ್ ರಿಚರ್ಡ್ ಸ್ಯಾಮ್ಸನ್, (ಸಿ) ಮಿಸ್ ಬೀನಾ ಪಾಲ್ D/o ಲೇಟ್ ಶ್ರೀ ಥಾಮಸ್ ರಿಚರ್ಡ್ ಸ್ಯಾಮ್ಸನ್, ಎಲ್ಲರೂ ವಾಸಿಸುವ ವಿಳಾಸ: ನಂ. ಜಿ 1403, ಮಂತ್ರಿ ಟ್ರಾಂಕ್ವಿಲ್, ಗುಬ್ಬಲಾಲಾ, ಬೆಂಗಳೂರು–560061. (ಡಿ) ಮಿಸ್ ನಮ್ರತಾ, D/o ಲೇಟ್ ಶ್ರೀ ಥಾಮಸ್ ರಿಚರ್ಡ್ ಸ್ಯಾಮ್ಸನ್, ವಿಳಾಸ: ಫ್ಲಾಟ್ ನಂ: 23, ಶೃಂಗಾರ್ ಅಪಾರ್ಟ್‌ಮೆಂಟ್ಸ್, 58, 4ನೇ ಮೇನ್, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು–560003. (10) ಶ್ರೀ ಡಿ ಪಿ ನಾಗರಾಜ್, (11) ಶ್ರೀಮತಿ ಶಾಲಿನಿ ನಾಗರಾಜ್, ಇಬ್ಬರೂ ವಾಸಿಸುವ ವಿಳಾಸ: ನಂ. 151, 5ನೇ ಕ್ರಾಸ್, 2ನೇ ಬ್ಲಾಕ್, ಜಯನಗರ, ಬೆಂಗಳೂರು–560011. (12) ಶ್ರೀಮತಿ ಚಿತ್ರಾ ನಾಗರಾಜ್, ನಂ. 28/1, "ಸಮೃದ್ಧಿ ನಿಲಯ", ಪುಟ್ಟಣ್ಣ ರಸ್ತೆ, ಬಸವನಗುಡಿ, ಬೆಂಗಳೂರು–560004. (13) ಶ್ರೀ ಜಿತೇಂದರ್ ಕುಮಾರ್, ನಂ. 53, "ಸನ್ಮಾರ್ಗ", 10ನೇ ಮೇನ್, ಸಿದ್ಧಾರ್ಥ ಲೇಔಟ್, ಮೈಸೂರು–570011. (14) ಶ್ರೀ ಜಾವೇರಿ ಲಾಲ್ ಮರಣ ಹೊಂದಿದರಿಂದ ಕಾನೂನು ಪ್ರತಿನಿಧಿಸುವವರು: (ಎ) ಶ್ರೀಮತಿ ನೀತಾ ಹಿತೇಶ್ ವಿನಾಯ್ಕಿಯ D/o ಲೇಟ್ ಶ್ರೀ ಜಾವೇರಿ ಲಾಲ್, ನಂ. ಬಿ–102, ದೇವ್ ಟ್ರಾಂಕ್ವಿಲ್ ಅಪಾರ್ಟ್‌ಮೆಂಟ್ಸ್, ದೇವ್ ಡಿಪ್ ಅಪಾರ್ಟ್‌ಮೆಂಟ್ಸ್ ಹತ್ತಿರ, ಕೋಟೇಶ್ವರ್ ಭಟ್ ರೋಡ್, ಕೋಟೇಶ್ವರ್, ಅಹ್ಮದಾಬಾದ್ ಸಿಟಿ, ಸಾಬರ್ಮತಿ, ಗುಜರಾತ್–380005. (ಬಿ) ಶ್ರೀಮತಿ ಛಾಯಾ D/o ಲೇಟ್ ಶ್ರೀ ಜಾವೇರಿ ಲಾಲ್, 59/2, ರಾಮ ಐಯಂಗಾರ್ ರಸ್ತೆ, ವಿ ವಿ ಪುರಂ, ಬಸವನಗುಡಿ, ಬೆಂಗಳೂರು–560004. (ಸಿ) ಶ್ರೀಮತಿ ಬಿಂದು ಚೋಪ್ರಾ D/o ಲೇಟ್ ಶ್ರೀ ಜಾವೇರಿ ಲಾಲ್ ನಂ.7, ಚಾಮುಂಡಿ ವಿಹಾರ್ ಲೇಔಟ್, ನಜರ್ಬಾದ್, ಮೈಸೂರು–570010. (ಡಿ) ಜಿತೇಂದ್ರ ಕುಮಾರ್ S/o ಲೇಟ್ ಶ್ರೀ ಜಾವೇರಿ ಲಾಲ್, ನಂ.53, "ಸನ್ಮಾರ್ಗ", 10ನೇ ಮೇನ್, ಸಿದ್ಧಾರ್ಥ ಲೇಔಟ್, ಮೈಸೂರು–570011. (15) ಶ್ರೀಮತಿ ಶೀಲಾ ಎಂ ಆರ್, ಮರಣ ಹೊಂದಿದರಿಂದ ಕಾನೂನು ಪ್ರತಿನಿಧಿಸುವವರು (ಪುತ್ರಿಯರು): (ಎ) ಅನುಶಾ, (ಬಿ) ನಿಮಿಶಾ, ನಂ. 4/2, ಗಿರಿನಗರ 3ನೇ ಕ್ರಾಸ್, ಬೆಂಗಳೂರು–560075. (16) ಶ್ರೀ ವೆಂಕಟೇಶ್ ಎಸ್ ಭಾಸ್ಕರ್, (17) ಶ್ರೀಮತಿ ಅರ್ಚನಾ ವೆಂಕಟೇಶ್, ಇಬ್ಬರೂ ವಾಸಿಸುವ ವಿಳಾಸ : ನಂ.85/3, 24ನೇ ಕ್ರಾಸ್, ಜಯನಗರ 6ನೇ ಬ್ಲಾಕ್, ಬೆಂಗಳೂರು–560082. (18) ಶ್ರೀ ಮಧು ಕುಮಾರ್ ಎಂ.ಆರ್, ನಂ. 581, 52ನೇ ಕ್ರಾಸ್, 3ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು–560010. (ಜಾಮೀನುದಾರರು / ಅಡಮಾನದಾರರು) (19) ಶ್ರೀ ಡಿ.ಜಿ ಸತೀಶ್, ವಿಳಾಸ: ನಂ. 141, 4ನೇ ಕ್ರಾಸ್, 2ನೇ ಬ್ಲಾಕ್, ಜಯನಗರ, ಬೆಂಗಳೂರು–560011. (20) ಶ್ರೀಮತಿ ಡಿ ಎಸ್ ರಾಜೇಶ್ವರಿ, ವಿಳಾಸ: ನಂ. 141, 4ನೇ ಕ್ರಾಸ್, 2ನೇ ಬ್ಲಾಕ್, ಜಯನಗರ, ಬೆಂಗಳೂರು–560011. (ಜಾಮೀನುದಾರರು) ಬ್ಯಾಂಕಿಗೆ ನೀಡಬೇಕಾದ ಬಾಕಿ ಮೊತ್ತ ಮೆ॥ 4 ಕ್ರಿಯೇಷನ್ಸ್ ನಲ್ಲಿ ಖಾತೆ ಸಂಖ್ಯೆ: ಸಿಸಿ/ಜಿಇಎನ್/23, ಟಿಎಲ್/ಬಿಎಲ್/405 & ಟಿಎಲ್/ಬಿಎಲ್/449 ರಲ್ಲಿ ರೂ 13,83,95,858.27 (ರೂ. ಹದಿಮೂರು ಕೋಟಿ ಎಂಭತ್ತಮೂರು ಲಕ್ಷದ ತೊಂಬತ್ತೈದು ಸಾವಿರದ ಎಂಟು ನೂರಾ ಐವತ್ತೆಂಟು ಮತ್ತು ಪೈಸೆ ಇಪ್ಪತ್ತೇಳು ಮಾತ್ರ) ಮತ್ತು ಮೆ॥ ಒರಿಜೀನ್ ಪ್ರೈವೇಟ್ ಲಿಮಿಟೆಡ್ ನಲ್ಲಿ ಖಾತೆ ಸಂಖ್ಯೆ: ಸಿಸಿ/ಜಿಇಎನ್/24/, ಟಿಎಲ್/ಬಿಎಲ್/392, ಟಿಎಲ್/ಬಿಎಲ್/435 & ಟಿಎಲ್/ಬಿಎಲ್/596 ರಲ್ಲಿ ರೂ. 3,84,50,246.95 (ರೂ. ಮೂರು ಕೋಟಿ ಎಂಭತ್ತನಾಲ್ಕು ಲಕ್ಷದ ಐವತ್ತು ಸಾವಿರದ ಎರಡು ನೂರ ನಲವತ್ತಾರು ಮತ್ತು ಪೈಸೆ ತೊಂಬತ್ತೈದು ಮಾತ್ರ) ಹಾಗೂ ಶ್ರೀ ವೆಂಕಟೇಶ್ ಎಸ್, ಭಾಸ್ಕರ್ ಮತ್ತು ಶ್ರೀಮತಿ ಅರ್ಚನಾ ವೆಂಕಟೇಶ್, ಖಾತೆ ಸಂಖ್ಯೆ: ಟಿಎಲ್/ಬಿಎಲ್/386 ರಲ್ಲಿ ರೂ. 12,69,420/– (ರೂ. ಹನ್ನೆರಡು ಲಕ್ಷದ ಅರವತ್ತೊಂಬತ್ತು ಸಾವಿರದ ನಾಲ್ಕು ನೂರಾ ಇಪ್ಪತ್ತು ಮಾತ್ರ) ಐಟಂ ನಂ. 4ಕ್ಕೆ ಅನ್ವಯಿಸುವಂತೆ ಜೊತೆಗೆ ಭವಿಷ್ಯದ ಬಡ್ಡಿ ದಿನಾಂಕ 01.02.2022 ರಿಂದ ಮತ್ತು ಸಂಪೂರ್ಣ ಮೊಬಲಗು ಪಾವತಿಯಾಗುವವರೆಗಿನ ಇತರ ವೆಚ್ಚ, ಖರ್ಚು ಇವುಗಳಿಗೆ ಋಣ ಬಾಧ್ಯರಾಗಿರುತ್ತಾರೆ. ಬಾಕಿಮೊತ್ತವನ್ನು ಪಾವತಿಸದೇ ಇರುವ ಕಾರಣ ಅಡಮಾನವಿಟ್ಟಿರುವ ಆಸ್ತಿಯನ್ನು "ಎಲ್ಲಿದೆಯೋ ಹಾಗೆ" "ಏನಿದೆಯೋ ಹಾಗೆ" "ಹೇಗಿದೆಯೋ ಹಾಗೆ" ಆಧಾರದಲ್ಲಿ ದಿನಾಂಕ: 09.03.2022ರಂದು ಮಾರಾಟ ಮಾಡಲು ಉದ್ದೇಶಿಸಿ ಈ ನೋಟೀಸನ್ನು ನೀಡಿರುತ್ತಾರೆ.

ಪ್ರತಿ ಐಟಂಗಳಿಗೆ ಆಸ್ತಿಯ ಮೀಸಲು ಬೆಲೆ ಮತ್ತು ಮುಂಗಡ ಠೇವಣಿ ಹಣ (ಇಎಂಡಿ) ಮೊತ್ತ ಈ ಕೆಳಗೆ ತಿಳಿಸಲಾಗಿದೆ.

ಸ್ಥಿರಾಸ್ತಿಯ ವಿವರ

ಐಟಂ ನಂ. 1: ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ, ಸ್ಥಿರಾಸ್ತಿಯ ಹೌಸ್ ನಂ. 568, ಬಿಬಿಎಂಪಿ ಖಾತಾ ನಂ. 285/568, ಎಲ್.ಐ.ಜಿ, 1ನೇ ಫೇಸ್, ಯಲಹಂಕ ನ್ಯೂ ಟೌನ್ ಎಕ್ಸಟೆನ್ಶನ್, ಬೆಂಗಳೂರು–560064, ವಿಸ್ತೀರ್ಣ: ಪೂರ್ವದಿಂದ ಪಶ್ಚಿಮಕ್ಕೆ: 50 ಅಡಿ, ಉತ್ತರದಿಂದ ದಕ್ಷಿಣಕ್ಕೆ 35 ಅಡಿ, ಒಟ್ಟು ವಿಸ್ತೀರ್ಣ 1750 ಚದರ ಅಡಿಗಳು, ಬಿಬಿಎಂಪಿ ವಾರ್ಡ್ ನಂ. 4, ಯಲಹಂಕ ಇದರ ಆಡಳಿತ ವ್ಯಾಪ್ತಿಯಲ್ಲಿ. ಜೊತೆಗೆ ಅದರಲ್ಲಿ ನಿರ್ಮಾಣಗೊಂಡಿರುವ ಕಟ್ಟಡ, ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಹೌಸ್ ನಂ. 551, ಉತ್ತರಕ್ಕೆ: ಹೌಸ್ ನಂ. 569 ಮತ್ತು ದಕ್ಷಿಣಕ್ಕೆ: ಹೌಸ್ ನಂ. 567.

ಮೀಸಲು ಬೆಲೆ ರೂ. 155.00 ಲಕ್ಷಗಳು (ರೂ ಒಂದು ಕೋಟಿ ಐವತ್ತೈದು ಲಕ್ಷ ಮಾತ್ರ) ಮತ್ತು ಮುಂಗಡ ಠೇವಣಿ ಹಣ (ಇಎಂಡಿ) ಮೊತ್ತ ರೂ. 15,50,000/– (ರೂ. ಹದಿನೈದು ಲಕ್ಷದ ಐವತ್ತು ಸಾವಿರ ಮಾತ್ರ)

ಐಟಂ ನಂ. 2: ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ, ಸ್ಥಿರಾಸ್ತಿಯ ವಸತಿ ಸೈಟ್ ನಂ. ಎಫ್–49, ಪ್ರಸ್ತುತ ನಿಯೋಜಿಸಲಾಗಿರುವ ಹೊಸ ನಂ. 426/ಎಫ್–49, ವಿಳಾಸ: ಈಗಲ್ ಟನ್, ದಿ ಗಾಲ್ಫ್ ವಿಲೇಜ್, ಬಿಲ್ಲಾಕೆಂಪನಹಳ್ಳಿ, ಶ್ಯಾನಮಂಗಳ, ಮತ್ತು ಬಾನಂದೂರ್ ಗ್ರಾಮಗಳ ವಿವಿಧ ಸರ್ವೇ ನಂಬರ್ ಗಳಿಂದ ರಚಿತಗೊಂಡಿರುತ್ತದೆ, ಬಿಡದಿ ಹೋಬಳಿ, ರಾಮನಗರ ತಾಲೂಕು ಮತ್ತು ಜಿಲ್ಲೆ (ಈ ಮೊದಲು ಬೆಂಗಳೂರು ಗ್ರಾಮಾಂತರ ಜಿಲ್ಲೆ), ವಿಸ್ತೀರ್ಣ : ಪೂರ್ವದಿಂದ ಪಶ್ಚಿಮಕ್ಕೆ : 75 ಅಡಿ, ಉತ್ತರದಿಂದ ದಕ್ಷಿಣಕ್ಕೆ : 36 ಅಡಿ, ಒಟ್ಟು ವಿಸ್ತೀರ್ಣ : 2700 ಚದರ ಅಡಿಗಳು, ಜೊತೆಗೆ ಅದರಲ್ಲಿ ನಿರ್ಮಾಣಗೊಂಡಿರುವ / ನಿರ್ಮಾಣಗೊಳ್ಳಲಿರುವ ಕಟ್ಟಡ, ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಸೈಟ್ ನಂ. ಎಫ್–57, ಉತ್ತರಕ್ಕೆ: ಸಿ.ಎ ನಿವೇಶನ, ದಕ್ಷಿಣಕ್ಕೆ: ಸೈಟ್ ನಂ. ಎಫ್–48.

ಮೀಸಲು ಬೆಲೆ ರೂ. 80.20 ಲಕ್ಷಗಳು (ರೂ. ಎಂಬತ್ತು ಲಕ್ಷದ ಇಪ್ಪತ್ತು ಸಾವಿರ ಮಾತ್ರ) ಮತ್ತು ಮುಂಗಡ ಠೇವಣಿ ಹಣ (ಇಎಂಡಿ) ಮೊತ್ತ ರೂ. 8,02,000/– (ರೂ. ಎಂಟು ಲಕ್ಷದ ಎರಡು ಸಾವಿರ ಮಾತ್ರ)

ಐಟಂ ನಂ. 3: ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ, ಸ್ಥಿರಾಸ್ತಿಯ ಸೈಟ್ ನಂ. ಎಚ್ – 69, ವಿಸ್ತೀರ್ಣ ಪೂರ್ವದಿಂದ ಪಶ್ಚಿಮ : 73.6 ಅಡಿ, ಮತ್ತು ಉತ್ತರದಿಂದ ದಕ್ಷಿಣ : 64 ಅಡಿ, ಒಟ್ಟು ವಿಸ್ತೀರ್ಣ : 4705 ಚದರ ಅಡಿಗಳು, ಜೊತೆಗೆ ಅದರಲ್ಲಿ ನಿರ್ಮಾಣಗೊಂಡಿರುವ / ನಿರ್ಮಾಣಗೊಳ್ಳಲಿರುವ ಕಟ್ಟಡ, ವಿಳಾಸ : ಸರ್ವೇ ನಂ. 392, ವಾಜಮಂಗಳ ಗ್ರಾಮ, ಈಗಲ್ ಬರ್ಗ್, ದಿ ಗಾಲ್ಫ್ ವಿಲೇಜ್, ವಾಜಮಂಗಳ ಗ್ರಾಮ ಪಂಚಾಯತ್ ನ ಆಡಳಿತ ವ್ಯಾಪ್ತಿಯಲ್ಲಿ. (ಸರ್ವೇ ನಂ. 130/1, 130/3, 131/2, 131/3, 143/1, 144/1ಎ, 144/1ಬಿ, 144/3, 145,148/1, 148/3, 149/1, 3 ಮತ್ತು 4, 149/2, 151/2, 151/3, 154, 155/1, 157, 158, 159, 163/1, 165/1, 165/2, 165/3, 166/2, 167/1, 167/2ಃ,167/3, 382, 391(ಪಿ) ಮತ್ತು 392 (ಪಿ) ವಾಜಮಂಗಳ ಗ್ರಾಮ ವ್ಯಾಪ್ತಿ ಮತ್ತು ಸರ್ವೇ ನಂ. 14/1, 14/2, 15/1, 15/2, 16, 35/3, 36/1,36/2,37, 38/3, ಮತ್ತು 4, 38/6, 38/7, 38/9, 42/4, 42/5, 42/6, 42/7, 46/1, 48/1, 48/2, 48/3, 49/1, 49/2 , 49/3, 50/1, 50/2, 50/3, 53/1, 55/2,55/3, 56/2, 56/3, 57, 63/1, 63/2, 64/1, ಮತ್ತು 2, 65/1, ಮತ್ತು 2, 65/6, 65/4, 65/3, 65/5, 66/1, 66/3, 66/2, 66/4, 66/5, 66/6, 66/7,67/1 ಮತ್ತು 2, 68/1, 68/2, 68/3, 69, 70/1, 70/2, 70/3, 70/4, 70/5, 71, 72/3ಬಿ, 73/1, 73/2, 84/1, 87/1, 88/1, 89/3, 89/4, 91/1,91/2, 92/1, 92/2, 92/3, 124/1, 124/2ಎ, 125(ಪಿ), 126/2, 126/3, 126/7, 126/8, 127, 132/1, 132/2, 133, 134/1, 134/2ಎ, 2ಬಿ, ಮತ್ತು 135/2, 138/1, 138/3, 4, 5 ಮತ್ತು 6, 139, 140, 146/2, 147, 148, 148(ಪಿ), 150/1, 150/2, 151, ಮತ್ತು 152/1) ವರಕಾಡು ಗ್ರಾಮ ವ್ಯಾಪ್ತಿಯಲ್ಲಿ, ವರುಣ ಹೋಬಳಿ, ಮೈಸೂರು ಜಿಲ್ಲೆ. ಜೊತೆಗೆ ಸಾಮಾನ್ಯ ಸೌಲಭ್ಯಗಳು, ಅನುಮೋದಿತ ಯೋಜನೆಯಲ್ಲಿ ಸೂಚಿಸಿರುವಂತೆ ರಸ್ತೆ, ಮಳೆನೀರು ಚರಂಡಿ, ಬೀದಿ ದೀಪಗಳು, ನೀರು ಸರಬರಾಜು ಜಾಲ, ಓವರ್ ಹೆಡ್ ಟ್ಯಾಂಕ್ ಚರಂಡಿ ಜಾಲ, ಸಂಸ್ಕರಣಾ ಘಟಕಗಳು, ವಿದ್ಯುಚ್ಛಕ್ತಿ ಜಾಲ, ಲೇಔಟ್ ಸುತ್ತಲೂ ಇರುವ ಕಾಂಪೌಂಡ್ ಗೋಡೆ ಮತ್ತು ಉದ್ಯಾನವನ, ಚಕ್ಕುಬಂದಿ: ಪೂರ್ವಕ್ಕೆ: ಪ್ಲಾಟ್ ನಂ. ಹೆಚ್–70, ಪಶ್ಚಿಮಕ್ಕೆ: ಪ್ಲಾಟ್ ನಂ. ಹೆಚ್–68, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಗಾಲ್ಫ್ ಕೋರ್ಸ್.

ಮೀಸಲು ಬೆಲೆ ರೂ. 72.00 ಲಕ್ಷಗಳು (ರೂ. ಎಪತ್ತೆರಡು ಲಕ್ಷ ಮಾತ್ರ) ಮತ್ತು ಮುಂಗಡ ಠೇವಣಿ ಹಣ (ಇಎಂಡಿ) ಮೊತ್ತ ರೂ. 7,20,000/– (ರೂ. ಏಳು ಲಕ್ಷದ ಇಪ್ಪತು ಸಾವಿರ ಮಾತ್ರ)

ಐಟಂ ನಂ. 4: ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ, ಸ್ಥಿರಾಸ್ತಿಯ ನಂ. 85, ಪ್ರಸ್ತುತ ಹೊಸ ಮುನಿಸಿಪಲ್ ನಂ. 3 ಮತ್ತು ಹೊಸ ಪಿ ಐಡಿ ನಂ. 59–55–3 ನಿಯೋಜಿಸಲಾಗಿದೆ. ವಿಳಾಸ: 24ನೇ ಕ್ರಾಸ್ ರಸ್ತೆ, 6ನೇ ಬ್ಲಾಕ್, ಜಯನಗರ, ಬೆಂಗಳೂರು–560082, ಬಿಬಿಎಂಪಿ ವಾರ್ಡ್ ನಂ. 59, ಯೆಡಿಯೂರ್ ವ್ಯಾಪ್ತಿಗೆ ಬರುತ್ತದೆ. ವಿಸ್ತೀರ್ಣ: ಪೂರ್ವದಿಂದ ಪಶ್ಚಿಮ: 30 ಅಡಿ, ಉತ್ತರದಿಂದ ದಕ್ಷಿಣ: 50 ಅಡಿ, ಒಟ್ಟು ವಿಸ್ತೀರ್ಣ: 1500 ಚದರ ಅಡಿಗಳು. ಜೊತೆಗೆ ಅದರಲ್ಲಿ ನಿರ್ಮಿತಗೊಂಡಿರುವ ಕಟ್ಟಡ, ಚಕ್ಕುಬಂದಿ: ಪೂರ್ವಕ್ಕೆ: ಆಸ್ತಿ ನಂ. 86, ಪಶ್ಚಿಮಕ್ಕೆ: ಆಸ್ತಿ ನಂ. 84, ಉತ್ತರಕ್ಕೆ: ಸೈಟ್ ನಂ. 82 ಮತ್ತು ದಕ್ಷಿಣಕ್ಕೆ: 24ನೇ ಕ್ರಾಸ್.

ಮೀಸಲು ಬೆಲೆ ರೂ. 282.50 ಲಕ್ಷಗಳು (ರೂ. ಎರಡು ಕೋಟಿ ಎಂಬತ್ತೆರಡು ಲಕ್ಷದ ಐವತ್ತು ಸಾವಿರ ಮಾತ್ರ) ಮತ್ತು ಮುಂಗಡ ಠೇವಣಿ ಹಣ (ಇಎಂಡಿ) ಮೊತ್ತ ರೂ. 28,25,000/– (ರೂ. ಇಪ್ಪತ್ತೆಂಟು ಲಕ್ಷದ ಇಪ್ಪತ್ತೈದು ಸಾವಿರ ಮಾತ್ರ)

ಮಾರಾಟದ ಸಂಪೂರ್ಣ ಷರತ್ತು ಮತ್ತು ನಿಯಮಗಳನ್ನು ಭದ್ರತಾ ಸಾಲದಾತರಾದ ಎಸ್‌ವಿಸಿ ಕೋ–ಆಪರೇಟೀವ್ ಬ್ಯಾಂಕ್ ಲಿ., ಒದಗಿಸಿರುವ ವೆಬ್‌ಸೈಟ್: https://www.svcbank.com/Home/Notice-Of-Sale ಲಿಂಕ್‌ನಲ್ಲಿ ಪಡೆಯಲು ಕೋರಲಾಗಿದೆ.

ದಿನಾಂಕ : 14.02.2022 ಸಹಿ/– ಅಧಿಕೃತ ಅಧಿಕಾರಿಗಳು
ಸ್ಥಳ : ಬೆಂಗಳೂರು ಎಸ್.ವಿ.ಸಿ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಶೇ 10ರಷ್ಟು ಮೀಸಲಾತಿ ಜಾರಿಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ಕಲಬುರಗಿ: ‘ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಕೇಂದ್ರ ಸರ್ಕಾರ ಶೇ 10ರಷ್ಟು ಮೀಸಲಾತಿ ಘೋಷಿಸಿದೆ. ರಾಜ್ಯ ಸರ್ಕಾರ ಅದಕ್ಕೆ ಬೇಕಾದ ಸಾಂವಿಧಾನಿಕ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ ಶೀಘ್ರ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಬೇಕು’ ಎಂದು ಪೇಜಾವರ ಮಠದ ವಿಶ್ವಪ್ರಸನ್ನತೀರ್ಥ ಶ್ರೀಪಾದರು ಒತ್ತಾಯಿಸಿದರು.



ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ

ನಗರದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಆರ್ಥಿಕವಾಗಿ ಹಿಂದುಳಿದವರಲ್ಲಿ ಪ್ರತಿಭೆ ಇದ್ದರೂ ಶಿಕ್ಷಣ ಸೇರಿದಂತೆ ಇನ್ನಿತರ ಕ್ಷೇತ್ರಗಳಲ್ಲಿ ಸಾಧನೆ ಮಾಡಲು ತೊಡಕಾಗಿದೆ. ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಸಲ್ಲಬೇಕಾದ ನ್ಯಾಯವನ್ನು ಒದಗಿಸಿಕೊಡಲು ಸರ್ಕಾರ ಮುಂದಾಗಬೇಕು’ ಎಂದರು.

ಲಿಂಗತ್ವ ಅಲ್ಪಸಂಖ್ಯಾತರ ಶೈಕ್ಷಣಿಕ ಹಾಗೂ ಉದ್ಯೋಗದ ಹಕ್ಕಿಗಾಗಿ ಹೋರಾಟ

ಸ್ವಾವಲಂಬಿ ಬದುಕಿಗೆ ‘ಸನಾ’ ಮುನ್ನುಡಿ

• ಮಂಜುಶ್ರೀ ಎಂ. ಕಡಕೋಳ

ಬೆಂಗಳೂರು: ಲಿಂಗತ್ವ ಅಲ್ಪಸಂಖ್ಯಾತರೆಂದರೆ ಲೈಂಗಿಕ ಕಾರ್ಯಕರ್ತರು, ಟ್ರಾಫಿಕ್ ಸಿಗ್ನಲ್‌ಗಳಲ್ಲಿ ಭಿಕ್ಷೆ ಬೇಡುವವರು ಎನ್ನುವ ಚಿತ್ರಣವೇ ಥಟ್ಟನೆ ಕಣ್ಮುಂದೆ ಬರುತ್ತದೆ. ಆದರೆ, ಇಂಥದೊಂದು ಚಿತ್ರಣವನ್ನು ಬದಲಾಯಿಸಲು ಪ್ರಯತ್ನಿಸಿ ಯಶಸ್ವಿಯಾಗಿರುವವರಲ್ಲಿ ಸನಾ ಅವರದ್ದು ವಿಶಿಷ್ಟ ವ್ಯಕ್ತಿತ್ವ.

ಹದಿಹರೆಯದಲ್ಲಿ ಸನಾಗೆ ತಾನು ‘ಅವನಲ್ಲ ಅವಳು’ ಎಂದು ಗೊತ್ತಾದಾಗ ಹೆತ್ತವರಿಂದ ತೀವ್ರ ವಿರೋಧ ವ್ಯಕ್ತವಾಯಿತು. ಮಗ ಸುಮನ್ (ಸನಾ) ಮನಸು ಬದಲಿಸಲು ಪೋಷಕರು ಹೋಗದ ಆಸ್ಪತ್ರೆಗಳಿಲ್ಲ, ಪೂಜೆ ಮಾಡದ ದೇವಸ್ಥಾನಗಳಿಲ್ಲ. ಮನೆ ಬಿಟ್ಟು ಬೀದಿಗಿಳಿದಾಗ ಬಾಣಲೆಯಿಂದ ಬೆಂಕಿಗೆ ಬಿದ್ದ ಅನುಭವ.

‘ಸೆಕ್ಸ್ ವರ್ಕ್’ ಎಂದರೇನು ಎಂದು ಗೊತ್ತಿಲ್ಲದ ದಿನಗಳಲ್ಲಿ 50 ರೂಪಾಯಿಗಾಗಿ ಅನುಭವಿಸಿದ ಹಿಂಸೆ ಹೇಳಲಸಾಧ್ಯ. ಕೊನೆಗೆ ಸನಾ ಅವರ ನೆರವಿಗೆ ಬಂದದ್ದು ಅವರದ್ದೇ ಸಮುದಾಯ. ಬೆಂಗಳೂರಿನಲ್ಲಿದ್ದರೂ ಹೆತ್ತವರಿಗೆ ಮುಖ ತೋರಿಸಲಾಗದೆ ಪುಣೆಗೆ ಹೋದರೆ ಅಲ್ಲಿಯೂ ಪಂಜರದ



ಸನಾ

ಗಿಳಿಯ ಬದುಕೇ. ಹಗಲು–ರಾತ್ರಿ ಎನ್ನದೇ ಭಿಕ್ಷೆ ಬೇಡಿ ತಂದ ದುಡ್ಡನ್ನು ಸಮುದಾಯದ ಮುಖಂಡರಿಗೆ ಒಪ್ಪಿಸುವ ಕಾಯಕ. ಒಂದು ತುತ್ತು ಒಳ್ಳೆಯ ಊಟಕ್ಕೂ ಕೈಚಾಚುವ ಸ್ಥಿತಿ. ಇದಕ್ಕೆ ಸ್ವಾಭಿಮಾನಿ ಮನಸು ಒಪ್ಪದೇ ಇದ್ದಾಗ ಮತ್ತೆ ಬೆಂಗಳೂರಿಗೆ ವಾಪಸ್ ಬಂದ ಸನಾ, ಬದುಕು ಕಟ್ಟಿಕೊಂಡಿದ್ದು ಎನ್‌ಜಿಒವೊಂದರಲ್ಲಿನ ಉದ್ಯೋಗದ ಮೂಲಕ.

ಹೊಟ್ಟೆಯ ಹಸಿವು ನೀಗಿದರೂ ಜ್ಞಾನದ ಹಸಿವು ಮೂಡಿಸಿದ್ದು

ಹೊಸ ಬೆಳಕು

ಕಚೇರಿಯ ವಾತಾವರಣ. ತಾನು ಪದವೀಧರೆ ಅಲ್ಲ ಎನ್ನುವ ಕಾರಣಕ್ಕೆ ಬಡ್ತಿ ವಂಚಿತಳಾದ ಸನಾ ಅವರಿಗೆ ಕಾಡಿದ್ದು ತಾನೂ ಇತರರಂತೆ ಪದವೀಧರೆ ಆಗಬೇಕೆಂಬ ಹಂಬಲ. ರಾಜಧಾನಿಯ ಹಲವು ಪ್ರತಿಷ್ಠಿತ ಕಾಲೇಜುಗಳ ಮೆಟ್ಟಿಲು ಹತ್ತಿಳಿದರೂ ಓದುವ ಇಚ್ಛೆಗೆ ನೀರೆರೆಯಲಿಲ್ಲ. ಸಮುದಾಯದ ಕುರಿತು ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಲು ಹೋಗುತ್ತಿದ್ದ ಸೇಂಟ್ ಜೋಸೆಫ್ಸ್ ಕಾಲೇಜಿನಲ್ಲೇ ಪತ್ರಿಕೋದ್ಯಮದ ಪದವಿಗೆ ಪ್ರವೇಶ.

ಕಾಲೇಜು ಪ್ರವೇಶ ಪಡೆದರೂ ತರಗತಿಯಲ್ಲಿ ಏಕಾಂಗಿ ಭಾವ. ವಿದ್ಯಾರ್ಥಿಗಳೊಡನೆ ನಿರಂತರ ಒಡನಾಟದ ಮೂಲಕ ತಮ್ಮ ಸಮುದಾಯದ ಕುರಿತು ಇದ್ದ ಪೂರ್ವಗ್ರಹಪೀಡಿತ ಮನಃಸ್ಥಿತಿ ಹೋಗಲಾಡಿಸಿದ ಸನಾ, ಇದೀಗ ರಾಜ್ಯದಲ್ಲೇ ಲಿಂಗತ್ವ ಅಲ್ಪಸಂಖ್ಯಾತರಲ್ಲಿ ಪತ್ರಿಕೋದ್ಯಮ ಸ್ನಾತಕೋತ್ತರ ಪದವಿ ಪಡೆದ ಮೊದಲಿಗರು ಎನ್ನುವ ವಿಶೇಷಣಕ್ಕೆ ಭಾಜನರು. ಕಾಲೇಜು ಶುಲ್ಕ ಭರಿಸಲು ಬೆಳ್ಳಿತೆರೆ– ಕಿರುತೆರೆಯಲ್ಲಿ ಅಭಿನಯ ನೆರವಿಗೆ ಬಂದದ್ದನ್ನು ಸ್ಮರಿಸುವ ಸನಾ, ತನ್ನ ಶಿಕ್ಷಣಕ್ಕೆ ನೆರವಾದ ದಾನಿಗಳನ್ನೂ ನೆನಪಿಸಿಕೊಳ್ಳುವುದನ್ನು ಮರೆಯುವುದಿಲ್ಲ. ‘ನಮ್ಮ ಸಮುದಾಯವನ್ನು ಭಿಕ್ಷುಕರು, ಸೆಕ್ಸ್ ವರ್ಕರ್‌ಗಳು’ ಎಂದು ಕೀಳಾಗಿ ನೋಡುತ್ತಿದ್ದ ಇದೇ ಸಮಾಜ ಈಗ ನನ್ನನ್ನು ನಟಿ, ಸಾಮಾಜಿಕ ಕಾರ್ಯಕರ್ತೆ ಎಂದು ಗುರುತಿಸುತ್ತಿದೆ. ನಾವೂ ಘನತೆಯ ಬದುಕು ಕಟ್ಟಿಕೊಳ್ಳಲು ಸಾಧ್ಯ. ಅದಕ್ಕೆ ಶಿಕ್ಷಣ ಅತ್ಯವಶ್ಯಕ’ ಎಂದು ಪ್ರತಿಪಾದಿಸುತ್ತಾರೆ ಸನಾ.

‘ಉದಯ’ ವಾಹಿನಿಯಲ್ಲಿ ಪ್ರಸಾರವಾದ ‘ಯಾರಿವಳು’ ಧಾರಾವಾಹಿಯಲ್ಲಿ ನನ್ನದು ನೆಗೆಟಿವ್ ಪಾತ್ರವಾದರೂ, ಮಗುವೊಂದನ್ನು ರಕ್ಷಿಸುವ ಪಾತ್ರ. ಅಲ್ಲಿನ ಸಂಭಾವನೆಯಿಂದ ನನ್ನ ಜೀವನಕ್ಕೆ ಸಹಾಯಕವಾಯಿತು. ಧಾರಾವಾಹಿಯಲ್ಲೂ ನಾನು ನನ್ನದೇ ಸಮುದಾಯದ ಪ್ರತಿನಿಧಿಯಾಗುವುದಕ್ಕಿಂತ ಇತರ ಪಾತ್ರಗಳಲ್ಲಿ ಅಂದರೆ, ನಾಯಕಿ, ತಾಯಿ, ತಂಗಿ ಪಾತ್ರಗಳಲ್ಲಿ ಅಭಿನಯಿಸುವಾಸೆ’ ಎನ್ನುತ್ತಾರೆ ಅವರು.

ಕಾಲೇಜು ಮೆಟ್ಟಿಲು ಹತ್ತುವಾಗ ನನ್ನದೇ ಸಮುದಾಯದ ಕೆಲವರು, ‘ನಮಗೆ ವಿದ್ಯೆ ಹತ್ತಂಗಿಲ್ಲ. ಸುಮ್ಮನೆ ಯೌವ್ವನ ವ್ಯರ್ಥ ಮಾಡಿಕೊಳ್ಳಬೇಡ’ ಎಂದು ಸಲಹೆ ನೀಡಿದ್ದರು. ಆದರೆ, ಆಗ ನನಗೆ ಸ್ಥೈರ್ಯ ತುಂಬಿದ್ದು ಅನೇಕ ಮಹಿಳಾ ಪರ ಹೋರಾಟಗಾರರು. ನಮ್ಮ ಬಗ್ಗೆ ಸಮಾಜಕ್ಕಿರುವ ಚಿತ್ರಣವನ್ನು ಬದಲಿಸಲು ಶಿಕ್ಷಣ ಅಗತ್ಯವೆಂದು ಮನಗಾಣಿಸಿದರು. ಅವರ ಮಾತಿನಂತೆ ಸ್ನಾತಕೋತ್ತರ ಪದವೀಧರೆಯಾಗಿರುವ ನನ್ನಲ್ಲಿ ಹಿಂದಿಗಿಂತಲೂ ಹೆಚ್ಚು ಆತ್ಮವಿಶ್ವಾಸ, ಬದುಕು ಕಟ್ಟಿಕೊಳ್ಳುವ ಛಲ ಮೂಡಿದೆ’ ಎನ್ನುತ್ತಾರೆ ಸನಾ.

ತನ್ನಂತೆಯೇ ಓದಲು ಇಚ್ಛಿಸುವ ಸಮುದಾಯದವರಿಗೆ ನೆರವಾಗಲು ‘ಸ್ವತಂತ್ರ’ ಎನ್ನುವ ಟ್ರಸ್ಟ್ ಅನ್ನೂ ಸನಾ ಸ್ಥಾಪಿಸಿದ್ದಾರೆ. ಅನೇಕರಿಗೆ ನೆರವು ನೀಡಿರುವ ಅವರು ಇದೀಗ ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ಉನ್ನತ ಅಧಿಕಾರಿಯಾಗುವ ಕನಸು ಹೊತ್ತಿದ್ದಾರೆ. ಅದಕ್ಕಾಗಿ ಸದ್ದಿಲ್ಲದೇ ಸಿದ್ಧತೆ ಆರಂಭಿಸಿರುವ ಸನಾ, ಲಿಂಗತ್ವ ಅಲ್ಪಸಂಖ್ಯಾತರಿಗೆ ಶೈಕ್ಷಣಿಕ, ಉದ್ಯೋಗದ ಹಕ್ಕಿಗಾಗಿ ಕಾನೂನು ಮೂಲಕ ಹಲವು ಹೋರಾಟಗಳಲ್ಲೂ ಪಾಲ್ಗೊಂಡಿದ್ದಾರೆ.

ಅಲೆಮಾರಿ ನಿಗಮಕ್ಕೆ ಬಜೆಟ್‌ನಲ್ಲಿ ₹250 ಕೋಟಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಲೆಮಾರಿ ಮತ್ತು ಅರೆ ಅಲೆಮಾರಿ ಅಭಿವೃದ್ಧಿ ನಿಗಮಕ್ಕೆ ಈ ಬಜೆಟ್‌ನಲ್ಲಿ ₹250 ಕೋಟಿ ಅನುದಾನ ನೀಡಬೇಕು’ ಎಂದು ರಾಜ್ಯ ಅಲೆಮಾರಿ ಮತ್ತು ಅರೆ ಅಲೆಮಾರಿ (ಹಿಂದುಳಿದ ವರ್ಗ ಪ್ರವರ್ಗ–1) ಜನಾಂಗಗಳ ಒಕ್ಕೂಟದ ಅಧ್ಯಕ್ಷ ವಿಠ್ಠಲ ಬಿ.ಗಣಾಚಾರಿ ಆಗ್ರಹಿಸಿದರು.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಅಲೆಮಾರಿ ಮತ್ತು ಅರೆ ಅಲೆಮಾರಿ ಸಮುದಾಯಗಳು ಸಾಮಾಜಿಕ ಜೀವನದಲ್ಲಿ ಸೌಲಭ್ಯಗಳಿಂದ ವಂಚಿತವಾಗಿವೆ. 46 ಜಾತಿಗಳನ್ನು ಒಳಗೊಂಡಂತೆ 75 ಲಕ್ಷ ಜನಸಂಖ್ಯೆ ಹೊಂದಿರುವ ಸಮುದಾಯಕ್ಕೆ ಕೇವಲ ₹5.29 ಲಕ್ಷ ಅನುದಾನ ನೀಡಿರುವುದು ದುರದೃಷ್ಟಕರ’ ಎಂದರು.

‘ಸಮುದಾಯದ ಅಭಿವೃದ್ಧಿಗೆ ನಿಗಮದಿಂದ ಸಾಲ ಸೌಲಭ್ಯ, ತರಬೇತಿ ಕಾರ್ಯಕ್ರಮ, ಆರ್ಥಿಕ ನೆರವು ಸೇರಿದಂತೆ ವಿವಿಧ ಸೌಕರ್ಯಗಳನ್ನು ನೀಡಲು ಬಜೆಟ್‌ನಲ್ಲಿ ನಿರೀಕ್ಷಿತ ಅನುದಾನ ನೀಡಬೇಕು’ ಎಂದು ವಿಠಲ ಗಣಾಚಾರಿ ಅವರು ಆಗ್ರಹಿಸಿದರು.

ಕೆನರಾ ಬ್ಯಾಂಕ್ ಭಾರತ ಸರ್ಕಾರದ ಒಂದು ಉದ್ಯಮ | केनरा बैंक भारत सरकार का उपक्रम | Canara Bank A Government of India Undertaking | Together We Can | ಸ್ವಾತಂತ್ರ್ಯದ ಅಮೃತ ಮಹೋತ್ಸವ

ಶಾಂತಿನಗರ ಶಾಖೆ, ಬೆಂಗಳೂರು

ಸಾರ್ವಜನಿಕ ಪ್ರಕಟಣೆ (ಲಾಕರ್‌ಗಳ ಸ್ಥಳಾಂತರ)

ಗ್ರಾಹಕರು ಹಾಗೂ ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂರೆ, ನಮ್ಮ ಶಾಂತಿನಗರ ಶಾಖೆ, ಡಿಪಿ ಕೋಡ್ : 10457 (14/3, ಹೆಚ್‌ಆರ್‌ಬಿ ಚೇಂಬರ್ಸ್, ಮೊದಲನೇ ಮಹಡಿ, ಆಂಡ್ರಿ ರಸ್ತೆ, ಶಾಂತಿನಗರ, ಬೆಂಗಳೂರು – 560 027)ನಲ್ಲಿ ಸ್ಥಾಪಿಸಲಾದ ಸುರಕ್ಷಿತ ಠೇವಣಿ ಲಾಕರ್‌ಗಳನ್ನು ನಮ್ಮ ಶಾಂತಿನಗರ ಶಾಖೆ, ಡಿಪಿ ಕೋಡ್ : 681 (ಹೊಸ ವಿಳಾಸ: ವಿನಯ್ ಆರ್ಕೇಡ್, ಸಂಖ್ಯೆ 50, ಕೆ.ಎಚ್. ರಸ್ತೆ, ಬಿಎಂಟಿಸಿ ಬಸ್ ನಿಲ್ದಾಣದ ಎದುರು, ಬೆಂಗಳೂರು – 560 027ಗೆ (ಇನ್ನು ಮುಂದೆ ವಿಳಾಸ ಎಂದು ಕರೆಯಲಾಗುವುದು) ದಿನಾಂಕ **17.04.2022**ರಂದು ಸ್ಥಳಾಂತರಿಸಲಾಗುತ್ತದೆ. ಆದ್ದರಿಂದ ದಿನಾಂಕ **18.04.2022**ರಿಂದ ಲಾಕರ್ ಕಾರ್ಯಾಚರಣೆಗಳಿಗೆ ಈ ಮೇಲೆ ತಿಳಿಸಿದ ವಿಳಾಸದಲ್ಲಿ ನಮ್ಮನ್ನು ಭೇಟಿ ಮಾಡಲು ಕೋರಲಾಗಿದೆ. ಲಾಕರ್‌ಗಳ ಸ್ಥಳಾಂತರದಲ್ಲಿ ವಸ್ತುಗಳಿಗೆ ಹಾನಿಯಾಗಬಹುದಾದ ಸಂಭವವಿರುವುದರಿಂದ, ಅವುಗಳನ್ನು ಹಿಂಪಡೆಯಬೇಕಾಗಿ ವಿನಂತಿಸಲಾಗಿದೆ. ಅತ್ಯಂತ ಕಾಳಜಿ ಹಾಗೂ ಎಚ್ಚರಿಕೆ ವಹಿಸಿಯೂ, ಲಾಕರ್ ಬೀರುಗಳ ಸ್ಥಳಾಂತರದಿಂದ, ಲಾಕರ್‌ಗಳಲ್ಲಿ ಇರಿಸಿದಂಥಹ ವಸ್ತುಗಳಿಗೆ ಆಗಬಹುದಾದಂಥಹ ನಷ್ಟ / ಹಾನಿಗೆ, ಬ್ಯಾಂಕ್ ಜವಾಬ್ದಾರವಾಗಿರುವುದಿಲ್ಲ.

ಸಹಿ/–
ಶಾಖಾ ವ್ಯವಸ್ಥಾಪಕರು, ಶಾಂತಿನಗರ ಶಾಖೆ
ಮೊ : 94498 60058

ಸ್ಥಳ : ಬೆಂಗಳೂರು
ದಿನಾಂಕ : 16.02.2022

ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನಕ್ಕೆ ಹೊಂದಿಕೊಂಡಂತೆ ಇರುವ ಜಾಗ

232 ಎಕರೆ ಅರಣ್ಯ ಭೂಮಿ ಖಾಸಗಿ ಪಾಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತರಹಳ್ಳಿ ಹೋಬಳಿಯ ಗುಳಿಕಮಲೆಯಲ್ಲಿ 232 ಎಕರೆ ಅರಣ್ಯ ಭೂಮಿಯನ್ನು ಕಂದಾಯ ಭೂಮಿಯಾಗಿ ಪರಿವರ್ತಿಸಿ ಖಾಸಗಿಯವರಿಗೆ ಹಂಚಿಕೆ ಮಾಡಲಾಗಿದೆ.

ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನಕ್ಕೆ ಹೊಂದಿಕೊಂಡಂತೆ ಇರುವ ಈ ಜಾಗ ನಿರಂತರವಾಗಿ ವಿಸ್ತರಿಸುತ್ತಿರುವ ನಗರ ಮತ್ತು ವನ್ಯಜೀವಿಗಳ ಆವಾಸಸ್ಥಾನವನ್ನು ಬೇರ್ಪಡಿಸಲು ಬಫರ್ ವಲಯವಾಗಿ ಕಾರ್ಯನಿರ್ವಹಿಸುತ್ತಿದೆ.

ದಾಖಲೆಗಳ ಪ್ರಕಾರ, 2013-14ನೇ ಸಾಲಿನಲ್ಲಿ ಅರಣ್ಯ ಇಲಾಖೆಯು ಈ ಜಮೀನಿನ ಮಾಲೀಕತ್ವ ಹೊಂದಿತ್ತು. 1934ರಲ್ಲಿ ಸರ್ಕಾರದಿಂದ ಮಂಜೂರಾದ ಸಿ ಆ್ಯಂಡ್ ಡಿ ಭೂಮಿಯಲ್ಲಿ ಈ ಜಮೀನು ಸೇರಿದ್ದು, ಅರಣ್ಯ ಇಲಾಖೆಗೆ ಸರ್ವೆ ನಂಬರ್ 35ರಲ್ಲಿ 319 ಎಕರೆ 14 ಗುಂಟೆ ಹಾಗೂ ಸರ್ವೆ ನಂಬರ್ 36ರಲ್ಲಿ 184 ಎಕರೆ ಜಾಗ ನೀಡಲಾಗಿದೆ. ನ್ಯಾಯಾಲಯದ ಆದೇಶದ ಮೇರೆಗೆ ಅರಣ್ಯ ಇಲಾಖೆಗೆ ಪಟ್ಟಾ ಕೂಡ ನೀಡಲಾಗಿತ್ತು.

ಆದರೆ, 2014ರ ಸೆಪ್ಟೆಂಬರ್‌ನಲ್ಲಿ ಅಂದಿನ ಬೆಂಗಳೂರು ದಕ್ಷಿಣ ಉಪವಿಭಾಗಾಧಿಕಾರಿ ಎಲ್.ಸಿ. ನಾಗರಾಜ್ ಅವರು ಈ ಜಮೀನು ಕಂದಾಯ ಇಲಾಖೆಗೆ ಸೇರಿದ ‘ಮುಫತ್ ಗೋಮಾಳ’ ಎಂದು ಘೋಷಿಸಿ ಆದೇಶ ಹೊರಡಿಸಿದ್ದರು. ಇದರ ಬೆನ್ನಲ್ಲೇ ಅರಣ್ಯ ಇಲಾಖೆಯ ಹೆಸರಿನಲ್ಲಿದ್ದ ಖಾತೆ ರದ್ದಾಯಿತು.

ಸಾಂದರ್ಭಿಕ ಚಿತ್ರ

ನಂತರ ದಿನಗಳಲ್ಲಿ ಜಮೀನಿನ ಹಕ್ಕುಪತ್ರಕ್ಕಾಗಿ ಹಲವರು ಅರ್ಜಿ ಸಲ್ಲಿಸಿದ್ದು, ಬಳಿಕ ಈ ವಿಷಯ ಅರಣ್ಯ ಇಲಾಖೆಗೆ ತಿಳಿಯಿತು. 2018ರಲ್ಲಿ ಬೆಂಗಳೂರು ನಗರ ಜಿಲ್ಲೆಯ ಅಂದಿನ ಉಪ ಅರಣ್ಯ ಸಂರಕ್ಷಣಾಧಿಕಾರಿ ದೀಪಿಕಾ ಬಾಜಪೈ ಅವರು ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಪತ್ರ ಬರೆದು ಅರಣ್ಯ ಭೂಮಿಯನ್ನು ಅತಿಕ್ರಮಣ ಮಾಡುವ ಪ್ರಯತ್ನಗಳನ್ನು ನಿರ್ಬಂಧಿಸಿದ್ದರು.

‘ಅರಣ್ಯ ಇಲಾಖೆಯ ಕಾಳಜಿಯನ್ನು ಉಪವಿಭಾಗಾಧಿಕಾರಿ ಕೇಳಿಸಿಕೊಳ್ಳಲೇ ಇಲ್ಲ. ಅರಣ್ಯ ಇಲಾಖೆಗೆ ಭೂಮಿ ಮಂಜೂರು ಮಾಡಿರುವ ಬಗ್ಗೆ ಯಾವುದೇ ಅಧಿಸೂಚನೆ ಇಲ್ಲ ಎಂದು ಅವರು ತಮ್ಮದೇ ಆದ ತೀರ್ಮಾನಕ್ಕೆ ಬಂದರು’ ಎಂದು ಮತ್ತೊಬ್ಬ ಅಧಿಕಾರಿ ಹೇಳಿದರು.

1994ರ ಜುಲೈ 20ರಂದು ಸರ್ಕಾರ ಹೊರಡಿಸಿದ್ದ ಮತ್ತೊಂದು ಆದೇಶವನ್ನು ಉಲ್ಲೇಖಿಸಿದ್ದ ದೀಪಿಕಾ ಅವರು, ‘ಈ ಜಮೀನು ಆನೇಕಲ್ ತಾಲ್ಲೂಕಿನ ಭೂತನಹಳ್ಳಿ ಕಿರು ಅರಣ್ಯ ಮತ್ತು ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನಕ್ಕೆ ಹೊಂದಿಕೊಂಡಿದೆ. ಬನ್ನೇರುಘಟ್ಟದಿಂದ ಸಾವನದುರ್ಗ ಅರಣ್ಯಕ್ಕೆ ವಲಸೆ ಹೋಗುವಾಗ ಮತ್ತು ಬರುವಾಗ ಆನೆಗಳ ನಿಲುಗಡೆಗೆ ಇದು ಪ್ರಮುಖ ಕಾರಿಡಾರ್ ಆಗಿದೆ’ ಎಂದೂ ತಿಳಿಸಿದ್ದರು.

‘ಈ ಬಗ್ಗೆ ನಾವು ಕಂದಾಯ ಇಲಾಖೆಗೆ ಪತ್ರ ಬರೆದಿದ್ದೇವೆ. ಪ್ರತಿಕ್ರಿಯೆಗಾಗಿ ಕಾಯುತ್ತಿದ್ದೇವೆ’ ಎಂದು ಬೆಂಗಳೂರು ನಗರ ಡಿಸಿಎಫ್ ಎಸ್.ಎಸ್. ರವಿಶಂಕರ್ ಪ್ರತಿಕ್ರಿಯಿಸಿದರು.

‘ಅರಣ್ಯ ಭೂಮಿ ಒತ್ತುವರಿ ಗಂಭೀರ ವಿಷಯ. ಈ ವಿಷಯ ಈವರೆಗೆ ನನ್ನ ಗಮನಕ್ಕೆ ಬಂದಿಲ್ಲ. ಈ ಬಗ್ಗೆ ಪರಿಶೀಲನೆ ನಡೆಸಿ ಕ್ರಮ ಕೈಗೊಳ್ಳುತ್ತೇನೆ’ ಎಂದು ಬೆಂಗಳೂರು ನಗರ ಜಿಲ್ಲಾಧಿಕಾರಿ ಜೆ.ಮಂಜುನಾಥ್ ತಿಳಿಸಿದರು.

‘ಬೆಂಗಳೂರಿನ ಸುತ್ತಮುತ್ತಲಿನ ಅರಣ್ಯಗಳಿಗೆ ಭೂ ಮಾಫಿಯಾ ದೊಡ್ಡ ಹೊಡೆತ ನೀಡಿದೆ. ಅಕ್ರಮವಾಗಿ ಜಮೀನು ಮಂಜೂರು ಮಾಡಿ ಕೋಟ್ಯಂತರ ರೂಪಾಯಿ ಬೆಲೆ ಬಾಳುವ ವನ್ಯಜೀವಿ ಕಾರಿಡಾರ್‌ಗಳನ್ನು ಫ್ಲ್ಯಾಟ್‌ಗಳಾಗಿ ಪರಿವರ್ತಿಸಲಾಗುತ್ತಿದೆ. ವನ್ಯಜೀವಿ ಮತ್ತು ಮನುಷ್ಯರ ನಡುವೆ ಸಂಘರ್ಷ ಏರ್ಪಟ್ಟಾಗ ಅರಣ್ಯ ಇಲಾಖೆ ಮೇಲೆ ಒತ್ತಡ ತರಲಾಗುತ್ತದೆ’ ಎಂದು ಅರಣ್ಯ ಇಲಾಖೆಯ ಮತ್ತೊಬ್ಬ ಅಧಿಕಾರಿ ಬೇಸರ ವ್ಯಕ್ತಪಡಿಸಿದರು.

ಕೋವಿಡ್: ಆಸ್ಪತ್ರೆ ದಾಖಲಾತಿ ಗಣನೀಯ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೋವಿಡ್ ಹೊಸ ಪ್ರಕರಣಗಳ ಜತೆಗೆ ಆಸ್ಪತ್ರೆ ದಾಖಲಾತಿಯೂ ಗಣನೀಯ ಇಳಿಕೆಯಾಗಿದೆ. ಕೊರೊನಾ ಸೋಂಕಿತರಲ್ಲಿ ಸದ್ಯ 99 ಮಂದಿ ಮಾತ್ರ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಚಿಕಿತ್ಸೆಗೆ ಮೀಸಲಿಟ್ಟಿರುವ 2,142 ಹಾಸಿಗೆಗಳಲ್ಲಿ 2,043 ಹಾಸಿಗೆಗಳು ಖಾಲಿ ಉಳಿದಿವೆ. ಕೋವಿಡ್ ಮೂರನೇ ಅಲೆಯಲ್ಲಿ ದಿನವೊಂದಕ್ಕೆ ನಗರದಲ್ಲಿ 30 ಸಾವಿರದ ಗಡಿ ಸಮೀಪಿಸಿದ್ದ ಹೊಸ ಪ್ರಕರಣಗಳ ಸಂಖ್ಯೆ, ಈಗ ಸಾವಿರಕ್ಕಿಂತಲೂ ಕಡಿಮೆ ಆಗಿದೆ. ಇದರಿಂದಾಗಿ ಸಕ್ರಿಯ ಪ್ರಕರಣಗಳ ಸಂಖ್ಯೆ 10 ಸಾವಿರದ ಗಡಿಯ ಆಸುಪಾಸಿನಲ್ಲಿದೆ. ಸೋಂಕಿತರಲ್ಲಿ ಬಹುತೇಕರು ಮನೆ ಆರೈಕೆಗೆ ಒಳಗಾಗಿದ್ದಾರೆ. ಆಸ್ಪತ್ರೆಗಳಲ್ಲಿ ಸೋಂಕಿತರ ಚಿಕಿತ್ಸೆಗೆ ಮೀಸಲಿಟ್ಟ ಹಾಸಿಗೆಗಳಲ್ಲಿ ಶೇ 4.6 ರಷ್ಟು ಮಾತ್ರ ಭರ್ತಿಯಾಗಿವೆ.

ಏಳು ದಿನಗಳಲ್ಲಿ 50 ಸೋಂಕಿತರು ಆಸ್ಪತ್ರೆಗಳಿಗೆ ದಾಖಲಾಗಿದ್ದಾರೆ. ಕೋವಿಡ್ ಪೀಡಿತರಲ್ಲಿ ಬೌರಿಂಗ್ ಹಾಗೂ ಎಂ.ಎಸ್. ರಾಮಯ್ಯ ಆಸ್ಪತ್ರೆಯಲ್ಲಿ ತಲಾ 21 ಮಂದಿ, ಸೇಂಟ್ ಜಾನ್ಸ್ ವೈದ್ಯಕೀಯ ಕಾಲೇಜಿನಲ್ಲಿ 12 ಮಂದಿ, ಬೆಂಗಳೂರು ಬ್ಯಾಪ್ಟಿಸ್ಟ್ ಆಸ್ಪತ್ರೆಯಲ್ಲಿ ಏಳು ಮಂದಿ, ಜಯನಗರ ಸಾರ್ವಜನಿಕ ಆಸ್ಪತ್ರೆ ಹಾಗೂ ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ತಲಾ ಐವರು, ಮಣಿಪಾಲ್ ಆಸ್ಪತ್ರೆಯಲ್ಲಿ ನಾಲ್ವರು ಹಾಗೂ ಯಶವಂತಪುರದ ಕೊಲಂಬಿಯಾ ಏಷ್ಯಾ ಆಸ್ಪತ್ರೆಯಲ್ಲಿ ಮೂವರಿಗೆ ಚಿಕಿತ್ಸೆ ಒದಗಿಸಲಾಗುತ್ತಿದೆ.

ಸಾಮಾನ್ಯ ಹಾಸಿಗೆಯಲ್ಲಿ 21, ತೀವ್ರ ನಿಗಾ ಘಟಕದ (ಐಸಿಯು) ಹಾಸಿಗೆಯಲ್ಲಿ 35, ಎಚ್.ಡಿ.ಯು ಹಾಸಿಗೆಯಲ್ಲಿ 29 ಹಾಗೂ ವೆಂಟಿಲೇಟರ್ ಸಹಿತ ಐಸಿಯು ಹಾಸಿಗೆಯಲ್ಲಿ 14 ಮಂದಿ ಚಿಕಿತ್ಸೆ ಪಡೆಯುತ್ತಿದ್ದಾರೆ.







ನಾಳೆ ಪ್ರತಿಭಟನೆ

ಬೆಂಗಳೂರು: ಕಾಮಗಾರಿಗೆ ಬಿಲ್ ಪಾವತಿಗೆ ಸಂಬಂಧಿಸಿ ಬಿಬಿಎಂಪಿ ವಿಶೇಷ ಆಯುಕ್ತರು (ಹಣಕಾಸು) ಕಿರುಕುಳ ನೀಡುತ್ತಿದ್ದಾರೆ ಎಂದು ಆರೋಪಿಸಿ ಗುತ್ತಿಗೆದಾರರು ಮತ್ತು ಗುತ್ತಿಗೆ ನೌಕರರ ಜಂಟಿ ಕ್ರಿಯಾ ವೇದಿಕೆ ಶುಕ್ರವಾರ ವಿಶೇಷ ಆಯುಕ್ತರ ವಿರುದ್ಧ ಪ್ರತಿಭಟನೆ ನಡೆಸಲು ನಿರ್ಧರಿಸಿದೆ.

ಎನ್‌ಎಸ್‌ಎಸ್ ಸ್ವಯಂಸೇವಕರನ್ನು 10 ಲಕ್ಷಕ್ಕೆ ಹೆಚ್ಚಿಸುವ ಗುರಿ

ಬೆಂಗಳೂರು: ರಾಜ್ಯದ ಕಾಲೇಜುಗಳಲ್ಲಿ ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್‌ಎಸ್) ಘಟಕಗಳ ಸಂಖ್ಯೆಯನ್ನು ಹೆಚ್ಚಿಸಿ, ಆ ಮೂಲಕ ಸ್ವಯಂಸೇವಕರ ಸಂಖ್ಯೆಯನ್ನು 10 ಲಕ್ಷಕ್ಕೆ ಏರಿಸುವ ಕುರಿತು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಮತ್ತು ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ಸಚಿವ ಡಾ. ನಾರಾಯಣಗೌಡ ಚರ್ಚೆ ನಡೆಸಿದರು.

ವಿಶ್ವವಿದ್ಯಾಲಯಗಳ ಕುಲಪತಿಗಳು ಹಾಗೂ ಎನ್‌ಎಸ್‌ಎಸ್ ಸಂಯೋಜಕರ ಜೊತೆ ಇಬ್ಬರೂ ಸಚಿವರು ವಿಡಿಯೊ ಸಂವಾದ ನಡೆಸಿದರು. ಈ ಸಂದರ್ಭದಲ್ಲಿ ಸಚಿವರಿಬ್ಬರು ಎನ್‌ಎಸ್‌ಎಸ್ ಸ್ವಯಂಸೇವಕರ ಸಂಖ್ಯೆಯನ್ನು 10 ಲಕ್ಷಕ್ಕೆ ಹೆಚ್ಚಿಸುವ ಗುರಿ ಹೊಂದಲಾಗಿದೆ ಎಂದರು.

‘ರಾಷ್ಟ್ರೀಯ ಸೇವಾ ಯೋಜನೆ ಕೇಂದ್ರ ಸರ್ಕಾರದ ಯೋಜನೆಯಾಗಿದ್ದು, ರಾಜ್ಯದಲ್ಲಿ 2,78,200 ಸ್ವಯಂಸೇವಕರನ್ನು ನೋಂದಣಿ ಮಾಡಿಸುವ ಗುರಿ ನೀಡಲಾಗಿತ್ತು. ಅದನ್ನು ಮೀರಿ ಈಗಾಗಲೇ 5 ಲಕ್ಷ ನೋಂದಾಯಿತ ಸ್ವಯಂಸೇವಕರಿದ್ದಾರೆ. ಹೊಸ ಶಿಕ್ಷಣ ನೀತಿಯಲ್ಲಿ ಎನ್‌ಎಸ್‌ಎಸ್ ಪಠ್ಯದ ಭಾಗ. ಹೀಗಾಗಿ, ಪ್ರತಿಯೊಂದು ಕಾಲೇಜೂ ಇದಕ್ಕೆ ಒಳಪಡುತ್ತದೆ’ ಎಂದು ಸಚಿವ ಅಶ್ವತ್ಥನಾರಾಯಣ ವಿವರಿಸಿದರು.

‘ಎನ್‌ಎಸ್‌ಎಸ್ ಸ್ವಯಂಸೇವಕರು ಶ್ರಮದಾನದ ಜೊತೆಗೆ ಆರೋಗ್ಯ ಅರಿವು, ಸರ್ಕಾರದ ಹಲವು ಯೋಜನೆಗಳ ಬಗ್ಗೆ ಜಾಗೃತಿ ಮೂಡಿಸುವ ಕೆಲಸ ಮಾಡುತ್ತಿದ್ದಾರೆ. ಈ ಸ್ವಯಂಸೇವಕರ ಸಂಖ್ಯೆ ಹೆಚ್ಚಿಸುವುದರಿಂದ ಹೆಚ್ಚಿನ ಸೇವಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸಹಕಾರಿಯಾಗಲಿದೆ’ ಎಂದು ನಾರಾಯಣಗೌಡ ತಿಳಿಸಿದರು..

ಡ್ರಗ್ಸ್ ಜಪ್ತಿ: ಇಬ್ಬರು ಪೆಡ್ಲರ್‌ಗಳ ಬಂಧನ

ಬೆಂಗಳೂರು: ಎಚ್‌ಎಎಲ್ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ಮಾದಕ ವಸ್ತುಗಳನ್ನು ಸಂಗ್ರಹಿಸಿಟ್ಟು ಕಾಲೇಜು ವಿದ್ಯಾರ್ಥಿಗಳು, ಸಾಫ್ಟ್‌ವೇರ್ ಕಂಪನಿ ಉದ್ಯೋಗಿಗಳು ಹಾಗೂ ಇತರರಿಗೆ ಮಾರಾಟ ಮಾಡುತ್ತಿದ್ದ ಆರೋಪದ ಮೇಲೆ ಇಬ್ಬರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ಕೇರಳದ ಸಮೀರ್ (28) ಹಾಗೂ ಶಬ್ಬೀರ್ (26) ಬಂಧಿತರು. ಇವರಿಂದ ಕೃತ್ಯಕ್ಕೆ ಬಳಸಿದ್ದ 2 ಮೊಬೈಲ್, ₹3 ಲಕ್ಷ ಮೌಲ್ಯದ 52 ಗ್ರಾಂ ಎಂ.ಡಿ.ಎಂ.ಎ ಹಾಗೂ ಇತರ ವಸ್ತುಗಳನ್ನು ಜಪ್ತಿ ಮಾಡಲಾಗಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಬಾಡಿಗೆಗೆ ಪಡೆದಿದ್ದ ಮನೆಯಲ್ಲಿ ಆರೋಪಿಗಳು ಮಾದಕ ವಸ್ತು ಸಂಗ್ರಹಿಸಿಟ್ಟಿರುವ ಬಗ್ಗೆ ಖಚಿತ ಮಾಹಿತಿ ಲಭಿಸಿತ್ತು' ಎಂದರು,

ಪದ್ಮಶ್ರೀ ಪುರಸ್ಕೃತರಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಸನ್ಮಾನ

'ಸಾಹಿತ್ಯದ ಶಕ್ತಿ ಸಮಾಜ ಒಡೆಯಬಾರದು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮನುಷ್ಯ ಸಹಜವಾಗಿ ವೈಚಾರಿಕ ಭಿನ್ನಾಭಿಪ್ರಾಯ ಇದ್ದೇ ಇರುತ್ತದೆ. ಆದರೆ, ಅದು ಇನ್ನೊಬ್ಬರ ನಡುವಿನ ಪ್ರೀತಿ ವಿಶ್ವಾಸದ ಕೊಂಡಿಯನ್ನು ಸಡಿಲ ಮಾಡಬಾರದು. ಸಾಹಿತ್ಯದ ಶಕ್ತಿಯಿದೆ ಎಂಬ ಕಾರಣಕ್ಕೆ ಅನೇಕರು ಸಮಾಜವನ್ನು ಒಡೆದು, ವಿಷಬೀಜ ಬಿತ್ತುತ್ತಾರೆ' ಎಂದು ವಿಧಾನಸಭೆ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ತಿಳಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ನಗರದಲ್ಲಿ ಬುಧವಾರ ಹಮ್ಮಿಕೊಂಡಿದ್ದ 2022ನೇ ಸಾಲಿನ ಪದ್ಮಶ್ರೀ ಪುರಸ್ಕೃತರಿಗೆ ಅಭಿನಂದನಾ ಸಮಾರಂಭದಲ್ಲಿ ಅಬ್ದುಲ್ ಖಾದರ್ ನಡಕಟ್ಟಿನ್, ಅಮ್ಮೈ ಮಹಾಲಿಂಗ ನಾಯ್ಕ್, ಡಾ.ಸಿದ್ಧಲಿಂಗಯ್ಯ ಅವರ ಪರವಾಗಿ ಪತ್ನಿ ರಮಾ ಸಿದ್ಧಲಿಂಗಯ್ಯ ಮತ್ತು ಸುಬ್ಬಣ್ಣ ಅಯ್ಯಪ್ಪನ್ ಅವರನ್ನು ಗೌರವಿಸಿ ಮಾತನಾಡಿದರು.

'ಪದ್ಮಶ್ರೀ ಪುರಸ್ಕೃತ' (ಕುಳಿತವರು ಎಡದಿಂದ) ಅಬ್ದುಲ್ ಖಾದರ್ ನಡಕಟ್ಟಿನ್, ಅಮ್ಮೈ ಮಹಾಲಿಂಗ ನಾಯಕ್, ಡಾ. ಸಿದ್ಧಲಿಂಗಯ್ಯ ಅವರ ಪರವಾಗಿ ಪತ್ನಿ ರಮಾ ಸಿದ್ಧಲಿಂಗಯ್ಯ ಮತ್ತು ಸುಬ್ಬಣ್ಣ ಅಯ್ಯಪ್ಪನ್ ಅವರನ್ನು ಗೌರವಿಸಲಾಯಿತು. (ನಿಂತವರು ಎಡದಿಂದ) ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ಅಶೋಕ ಎನ್. ಚಲವಾದಿ, ಇಲಾಖೆಯ ಕಾರ್ಯದರ್ಶಿ ಮಂಜುಳಾ ಎನ್., ಸಂಸದ ತೇಜಸ್ವಿ ಸೂರ್ಯ, ವಿಶ್ವೇಶ್ವರ ಹೆಗಡೆ ಕಾಗೇರಿ, ವಿ. ಸುನೀಲ್ ಕುಮಾರ್ ಮತ್ತು ಇಲಾಖೆ ನಿರ್ದೇಶಕ ಎಸ್. ರಂಗಪ್ಪ ಇದ್ದಾರೆ —ಪ್ರಜಾವಾಣಿ ಚಿತ್ರ

'ಸಮಾಜದಲ್ಲಿ ಭೇದ-ಭಾವ ನಿರ್ಮಿಸಿ, ಸ್ವಾರ್ಥ ಸಾಧಿಸಿಕೊಳ್ಳುವ ಅನೇಕರನ್ನು ನೋಡುತ್ತಿದ್ದೇವೆ. ಇಂತಹ ಸಂದರ್ಭದಲ್ಲಿ ನಮಗೆ ಕವಿ ಡಾ. ಸಿದ್ಧಲಿಂಗಯ್ಯ ಅಂತಹವರು ಆದರ್ಶರಾಗುತ್ತಾರೆ. ಅವರು ಸಾಹಿತ್ಯದ ಕೊಡುಗೆಯ ಮೂಲಕ ಈ ಸಮಾಜದಲ್ಲಿ ನಾವು ಅಣ್ಣ ತಮ್ಮಂದಿರ ರೀತಿ ಮುಂದೆ ಹೋಗಬೇಕೆಂದು ತೋರಿಸಿಕೊಟ್ಟರು. ಸಮಾಜಕ್ಕೆ ಈ ರೀತಿ ರಚನಾತ್ಮಕ ಕೊಡುಗೆ ನೀಡಬೇಕು' ಎಂದು ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನೀಲ್ ಕುಮಾರ್, 'ಕೇಂದ್ರ ಸರ್ಕಾರ ಈ ವರ್ಷ ಕರ್ನಾಟಕದ ಐವರನ್ನು 'ಪ್ರದ್ಮಶ್ರೀ ಪ್ರಶಸ್ತಿ'ಗೆ ಆಯ್ಕೆ ಮಾಡಿದೆ. ದೊಡ್ಡ ಪ್ರಮಾಣದಲ್ಲಿ ಪರಿಚಯ ಆಗದ ಮೌನ ಸಾಧಕರನ್ನು ಈ ಪ್ರಶಸ್ತಿಗೆ ಪುರಸ್ಕರಿಸಲಾಗುತ್ತಿದೆ. ಇದರಿಂದ ಪ್ರಶಸ್ತಿಯ ಮೌಲ್ಯವೂ ಹೆಚ್ಚುತ್ತಿದೆ. ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಅಂಗವಾಗಿ 'ಅಮೃತ ಭಾರತಿಗೆ ಕನ್ನಡದ ಆರತಿ' ಎಂಬ ಶೀರ್ಷಿಕೆಯಡಿ ವರ್ಷಪೂರ್ತಿ ಕಾರ್ಯಕ್ರಮ ನಡೆಸಲಾಗುವುದು' ಎಂದು ಹೇಳಿದರು.

'ಕೃಷಿ ಆವಿಷ್ಕಾರಕ್ಕೆ ಆದ್ಯತೆ ಸಿಗಲಿ'

'ಕೃಷಿ ಕ್ಷೇತ್ರದಲ್ಲಿ ನಡೆಸಿದ ಆವಿಷ್ಕಾರ ಗುರುತಿಸಲಾಗಿದೆ. ಪ್ರಶಸ್ತಿ ಬಂದಿದೆ ಎಂದಾಗ ನಂಬಲು ಸಾಧ್ಯವಾಗಲಿಲ್ಲ. ನಮ್ಮ ದೇಶ ಅಭಿವೃದ್ಧಿಯಾಗಬೇಕಾದರೆ ರೈತರಿಗೆ ಪ್ರೋತ್ಸಾಹ ನೀಡಬೇಕು. ಕೃಷಿ ಚಟುವಟಿಕೆಗೆ ಸಹಕಾರಿಯಾಗುವ ಯಂತ್ರಗಳನ್ನು ಆವಿಷ್ಕಾರ ಮಾಡಬೇಕು. ಯಾವ ವ್ಯಕ್ತಿಯಿಂದ ದೇಶಕ್ಕೆ ಒಳ್ಳೆಯದಾಗುತ್ತದೆಯೋ ಅಂತಹವರನ್ನು ಗುರುತಿಸಿದರೆ ದೇಶ ಇನ್ನಷ್ಟು ಪ್ರಗತಿ ಹೊಂದಲಿದೆ' ಎಂದು 'ಪದ್ಮಶ್ರೀ ಪ್ರಶಸ್ತಿ' ಪುರಸ್ಕೃತ ಅಬ್ದುಲ್ ಖಾದರ್ ನಡಕಟ್ಟಿನ್ ತಿಳಿಸಿದರು.

ಸುಬ್ಬಣ್ಣ ಅಯ್ಯಪ್ಪನ್, 'ಜೀವನದಲ್ಲಿ ಅರ್ಧಕ್ಕೂ ಅಧಿಕ ವರ್ಷ ಕರ್ನಾಟಕದ ಹೊರಗಡೆಯೇ ಇರಬೇಕಾಯಿತು. ಎಲ್ಲಿಯೇ ಹೋದರೂ ಕರ್ನಾಟಕದವನು ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದೆ. ಪ್ರಶಸ್ತಿ ಬಂದಿರುವುದು ಖುಷಿ ತಂದಿದೆ' ಎಂದು ಹೇಳಿದರು.

ಸುದ್ದಿ 2 ನಿಮಿಷ

ಕಾನೂನು ಚೌಕಟ್ಟಿನಲ್ಲಿ ಜಗದೀಶ್ ಹೋರಾಟ ಮಾಡಲಿ

ಬೆಂಗಳೂರು: 'ವಕೀಲ ಜಗದೀಶ್ ಕೆ.ಎನ್.ಮಹಾದೇವ್ ಅವರು ವಕೀಲರ ವಿರುದ್ಧ ಫೇಸ್‌ಬುಕ್‌ನಲ್ಲಿ ವಿಡಿಯೊ ಮಾಡುವ ಬದಲು ಭ್ರಷ್ಟಾಚಾರದ ವಿರುದ್ಧ ಕಾನೂನಿನ ಚೌಕಟ್ಟಿನಲ್ಲಿ ಹೋರಾಟ ನಡೆಸಲಿ' ಎಂದು ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ ಹೇಳಿದರು.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,'ನಗರದ ಸಿವಿಲ್ ಕೋರ್ಟ್ ಆವರಣದಲ್ಲಿ ವಕೀಲ ಜಗದೀಶ್ ಅವರ ವಿಷಯದಲ್ಲಿ ನಡೆದಿರುವ ಘಟನೆಗಳು ಖಂಡನೀಯ. ಆದರೆ, ಕೋರ್ಟ್ ಆವರಣದಲ್ಲಿ ವಕೀಲರನ್ನು ತೆಗಳುತ್ತಾ, ಪ್ರಚೋದನಕಾರಿ ವಿಡಿಯೊಗಳನ್ನು ಮಾಡುತ್ತಾ ವಕೀಲರ ಹಾಗೂ ವೃತ್ತಿಯ ಬಗ್ಗೆ ಅವಹೇಳಕಾರಿಯಾಗಿ ಮಾತನಾಡಿದ್ದು ಸರಿಯಲ್ಲ' ಎಂದರು.

'ಜಗದೀಶ್ ಅವರು ಪೊಲೀಸ್ ಅಧಿಕಾರಿ ವಿರುದ್ಧ ಹೋರಾಡುವುದನ್ನು ಮರೆತು ವಕೀಲರ ಮೇಲೆ ಸಮರ ಸಾರಿದ್ದಾರೆ. ಫೇಸ್‌ಬುಕ್ ಹಾಗೂ ಕೋರ್ಟ್ ಆವರಣದಲ್ಲೂ ಅದೇ ದಾಟಿಯ ಅವಾಚ್ಯ ಪದಗಳನ್ನು ಬಳಸಿದರು. ವಕೀಲರ ವಿರುದ್ಧ ಬಳಸಿದ ಪದಗಳೆಲ್ಲ ಆಕ್ಷೇಪಾರ್ಹ' ಎಂದರು.

'ಜಗದೀಶ್ ಅವರ ಮಾತುಗಳಿಂದ ವಕೀಲರು ಬೇಸರಗೊಂಡರು. ಘಟನೆಗೆ ತಾರ್ಕಿಕ ಅಂತ್ಯ ನೀಡುವ ಉದ್ದೇಶದಿಂದ ವಕೀಲರೆಲ್ಲ ಸೇರಿ ಜಗದೀಶ್ ವಿರುದ್ಧ ಕ್ರಮ ಕೈಗೊಳ್ಳುವಂತೆ ಪೊಲೀಸ್ ಕಮಿಷನರ್‌ಗೆ ದೂರು ನೀಡಿದೆವು. ಅದರಂತೆ ಪೊಲೀಸರು ಜಗದೀಶ್ ಅವರನ್ನು ಬಂಧಿಸಿ ಕಾನೂನು ಕ್ರಮ ಜರುಗಿಸಿದ್ದಾರೆ' ಎಂದರು.

ಒಂದೇ ದಿನ 2 ಪರೀಕ್ಷೆ: ಅಭ್ಯರ್ಥಿಗಳಲ್ಲಿ ಗೊಂದಲ

ಬೆಳಗಾವಿ: ಕೆಪಿಎಸ್‌ಸಿ ಹಾಗೂ ಕೆಇಎ ಪರೀಕ್ಷೆಗಳು ಒಂದೇ ದಿನ ಅಂದರೆ ಮಾರ್ಚ್ 12ರಂದು ನಿಗದಿಯಾಗಿರುವುದರಿಂದ ಅಭ್ಯರ್ಥಿಗಳು ಗೊಂದಲಕ್ಕೆ ಒಳಗಾಗಿದ್ದಾರೆ. ಒಂದು ಪರೀಕ್ಷೆಗೆ ಹಾಜರಾದರೆ, ಮತ್ತೊಂದು ಅವಕಾಶ ಕೈತಪ್ಪುವ ಭೀತಿಯಲ್ಲಿದ್ದಾರೆ.

ಈ ಬಗ್ಗೆ 'ಪ್ರಜಾವಾಣಿ'ಯೊಂದಿಗೆ ಅಳಲು ತೋಡಿಕೊಂಡ ಅಭ್ಯರ್ಥಿಯೊಬ್ಬರು, 'ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ಸರ್ಕಾರಿ ನೌಕರರ ಇಲಾಖೆ ಪರೀಕ್ಷೆಯನ್ನು ಮಾರ್ಚ್ 7ರಿಂದ 12ರವರೆಗೆ ನಿಗದಿಪಡಿಸಿದೆ. ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸಹಾಯಕ ಪ್ರಾಧ್ಯಾಪಕರ ಹುದ್ದೆ ನೇಮಕಾತಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಮಾರ್ಚ್ 12ರಿಂದ 16ರವರೆಗೆ ಪರೀಕ್ಷೆ ನಿಗದಿಗೊಳಿಸಿದೆ. ಏಕಕಾಲಕ್ಕೆ ಎರಡೂ ಪರೀಕ್ಷೆ ಇರುವುದರಿಂದ ಇಕ್ಕಟ್ಟಿಗೆ ಸಿಲುಕಿದ್ದೇವೆ' ಎಂದು ತಿಳಿಸಿದರು. 'ಕೆಪಿಎಸ್‌ಸಿಯವರು ಒಂದು ತಿಂಗಳ ಮುಂಚೆಯೇ ನಿಗದಿಪಡಿಸಿದ್ದಾರೆ. ಆದರೆ, ಕೆಇಎ ಫೆ.15ರಂದು ಪರೀಕ್ಷಾ ವೇಳಾಪಟ್ಟಿ ಪ್ರಕಟಿಸಿದೆ. ಅಭ್ಯರ್ಥಿಗಳ ಹಿತದೃಷ್ಟಿಯಿಂದ, ಮಾರ್ಚ್ 12ರಂದು ನಡೆಯಲಿರುವ ಪರೀಕ್ಷೆಯನ್ನು ಮುಂದೂಡಬೇಕು' ಎಂದು ಕೋರಿದರು.

ಮೈಸೂರಿನಿಂದ ಜಾಥಾ ನಡೆಸಿದ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಆಗ್ರಹ

'ಹಗರಣ: ಕೆಪಿಎಸ್‌ಸಿ ತಕ್ಷಣ ರದ್ದುಪಡಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನೇಮಕಾತಿಗಳಲ್ಲಿ ನಡೆದಿರುವ ಅಕ್ರಮ, ಅವ್ಯವಹಾರ ಹಾಗೂ ಭ್ರಷ್ಟಾಚಾರಗಳಿಗೆ ಕೆಪಿಎಸ್‌ಸಿಯೇ ಮೂಲ ಕಾರಣ. ಹೀಗಾಗಿ ಸರ್ಕಾರವು ಕೆಪಿಎಸ್‌ಸಿಯನ್ನೇ ರದ್ದುಗೊಳಿಸಿ ಯುಪಿಎಸ್‌ಸಿ ಮಾದರಿಯಲ್ಲಿ ನೇಮಕಾತಿಗೆ ಕ್ರಮ ಕೈಗೊಳ್ಳಲಿ' ಎಂದು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಆಗ್ರಹಿಸಿದೆ.

ಕೆಪಿಎಸ್‌ಸಿಯನ್ನು ಭ್ರಷ್ಟಮುಕ್ತಗೊಳಿಸಲು ಒತ್ತಾಯಿಸಿ ಮೈಸೂರಿನಿಂದ ಜಾಥದ ಮೂಲಕ ನಗರಕ್ಕೆ ಬಂದ ವೇದಿಕೆ ಸದಸ್ಯರು ಮೌರ್ಯ ವೃತ್ತದ ಗಾಂಧಿ ಪ್ರತಿಮೆ ಬಳಿ ಮಂಗಳವಾರ ಪ್ರತಿಭಟನೆ ನಡೆಸಿದರು.

'1998, 1999 ಹಾಗೂ 2004ರ ಕೆಎಎಸ್ ನೇಮಕಾತಿಗಳನ್ನು ಸರಿಪಡಿಸಬೇಕು. ಈ ಸಂಬಂಧ ನ್ಯಾಯಾಲಯಗಳು ನೀಡಿರುವ ಆದೇಶಗಳನ್ನು ಪಾಲಿಸಬೇಕು. ಅವುಗಳ ಜಾರಿಗೆ ಮುಂದಾಗಬೇಕು. ಹಲವು ಹಗರಣಗಳಿಂದಾಗಿ ಸಾರ್ವಜನಿಕರಿಗೆ ಕೆಪಿಎಸ್‌ಸಿ ಮೇಲಿನ ವಿಶ್ವಾಸ ಕಡಿಮೆಯಾಗಿದ್ದು, ಅದನ್ನು ಪರಿಪಡಿಸುವ ಕೆಲಸ ಆಗಬೇಕು' ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

'ಸಿಐಡಿ ಹಾಗೂ ಸತ್ಯಶೋಧನ ಸಮಿತಿ ಗುರುತಿಸಿರುವ, ಗ್ರೂಪ್ 'ಎ' ಹಾಗೂ 'ಬಿ' ಹುದ್ದೆಗಳಿಗೆ ನೇಮಕಗೊಂಡು ಸೇವೆಯಲ್ಲಿರುವ ಅಧಿಕಾರಿಗಳನ್ನು ನ್ಯಾಯಾಲಯದ ಆದೇಶದಂತೆ ವಜಾಗೊಳಿಸಬೇಕು. ಐಎಎಸ್ ಹುದ್ದೆಗಳಿಗೆ ಪದೋನ್ನತಿ ಹೊಂದಲು ಅರ್ಹರಾಗಿರುವ ಪ್ರತಿಭಾವಂತ ಅಭ್ಯರ್ಥಿಗಳ ಹೆಸರನ್ನು ರಾಜ್ಯ ಸರ್ಕಾರ ಕೂಡಲೇ ಶಿಫಾರಸು ಮಾಡಬೇಕು' ಎಂದು ವೇದಿಕೆಯ ರಾಜ್ಯ ಘಟಕದ ಅಧ್ಯಕ್ಷ ಕೆ.ಎಸ್.ಶಿವರಾಮು ಆಗ್ರಹಿಸಿದರು.

ಕಾಂಗ್ರೆಸ್ ಮುಖಂಡ ಬಿ.ಕೆ. ಚಂದ್ರಶೇಖರ್, ಮುಖ್ಯಮಂತ್ರಿ ಚಂದ್ರು, ಮುಖಂಡರಾದ ಲೋಕೇಶ್ ಕುಮಾರ್, ಮಹೇಂದ್ರ ಕಾಗಿನೆಲೆ, ಡಿ.ಪಿ.ಪ್ರಕಾಶ್, ಆರ್.ಕೆ.ರವಿ, ಮೈಸೂರು ಜಿಲ್ಲಾ ಸವಿತಾ ಸಮಾಜದ ಅಧ್ಯಕ್ಷ ಎನ್.ಆರ್.ನಾಗೇಶ್, ಮೈಸೂರು ಜಿಲ್ಲಾ ಉಪ್ಪಾರರ ಸಂಘದ ಅಧ್ಯಕ್ಷ ಯೋಗೇಶ್ ಉಪ್ಪಾರ್ ಇದ್ದರು.

ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಸದಸ್ಯರು ಮೌರ್ಯ ವೃತ್ತದ ಗಾಂಧಿ ಪ್ರತಿಮೆ ಎದುರು ಮಂಗಳವಾರ ಪ್ರತಿಭಟನೆ ನಡೆಸಿದರು —ಪ್ರಜಾವಾಣಿ ಚಿತ್ರ

ಅಂಬೇಡ್ಕರ್ ಚಿತ್ರಕ್ಕೆ ಅಗೌರವ: ಫೆ.19ಕ್ಕೆ ಪ್ರತಿಭಟನಾ ರ‍್ಯಾಲಿ

ಬೆಂಗಳೂರು:'ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ನ್ಯಾಯಾಧೀಶ ಮಲ್ಲಿಕಾರ್ಜುನ ಗೌಡ ಅವರಿಂದ ಅಗೌರವ ಖಂಡಿಸಿ ಇದೇ 19ರಂದು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಿಂದ ವಿಧಾನಸೌಧ ಎದುರಿನ ಅಂಬೇಡ್ಕರ್ ಪ್ರತಿಮೆವರೆಗೆ ಪ್ರತಿಭಟನಾ ರ‍್ಯಾಲಿ ಹಮ್ಮಿಕೊಳ್ಳಲಾಗಿದೆ' ಎಂದು ಸಂವಿಧಾನ ರಕ್ಷಣಾ ಮಹಾ ಒಕ್ಕೂಟ ತಿಳಿಸಿದೆ.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ಪದಾಧಿಕಾರಿ ಬಿ.ಗೋಪಾಲ್, 'ಅಂಬೇಡ್ಕರ್ ಅವರಿಗೆ ಅವಮಾನ ಮಾಡಿದ ನ್ಯಾಯಾಧೀಶರ ಮೇಲೆ ಯಾವುದೇ ಕ್ರಮ ಕೈಗೊಂಡಿಲ್ಲ. ಹಲವು ಸಂಘಟನೆಗಳು ಪ್ರತಿಭಟನೆ ನಡೆಸಿದರೂ ಕ್ರಮಕ್ಕೆ ಮುಂದಾಗಿಲ್ಲ. ಈ ಧೋರಣೆ ಖಂಡಿಸಿ ಪ್ರತಿಭಟನೆ ಹಮ್ಮಿಕೊಂಡಿದ್ದೇವೆ. ರಾಜ್ಯದ ವಿವಿಧ ಜಿಲ್ಲೆಗಳಿಂದ ಸುಮಾರು 20 ಸಾವಿರ ಜನ ಪ್ರತಿಭಟನೆಯಲ್ಲಿ ಸೇರಲಿದ್ದಾರೆ' ಎಂದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

ST SOPHIA Convent School (CBSE) Nagarabhavi requires trained experienced Female Nursery teachers, Academic Coordinators and Teachers for the academic year 2022-23 to teach Mathematics, Science, Social science, English, and Hindi for primary and High school. Walk-in interview scheduled on Saturday 19th February 2022 principal@stsophiaconvent.org 9243031872

Multiple Vacancy

REAL ESTATE Company Required Marketing Executive, Telecaller, Receptionist, Experience in Real Estate field or other Marketing Field/fresher also welcome, Earn 50K Per month, place:Bangalore. Call: 7676343099, 9019800999

REQUIRED, TEAMLEADER, Telecaller, Backend & Field executive For Banking Loan collection (salary upto 20,000- 25,000). Direct recruitment to company Contact: 9620206756, 9620200756.

Part-Time Jobs

WORK FROM Home, Earn 30- 50K per month. Age:32+, PUC and above. Malleshwaram. 7899493370

A REPUTED MNC Company Will Provide Work From Home 30 to 35K Contact: 7019215243/ 9886641282

Hospital & Medical Jobs

FULL TIME Dental Assistant needed for the reputed Clove Dental chain of clinics. Role includes travelling to different clinics in 8km radius whenever required. Benefits: PF, ESI, travel reimbursement when sent to multiple clinics. Base location: Kanakapura and Basaveshwara Nagar. Contact on: 8971773888/ 9611546440/ 8309552991.

REAL ESTATE SELLING

Agricultural Land

Nelamangala

AGRICULTURE FARM Land Sale 2 acres 28 -36 lacs per acre Nelemangala -Marrur 9945080017, 8310414614

Residential/ Commercial

Wilson Garden

PROPERTY FOR Sale. #13 1st Main SR Nagar Bangalore -560027. Total area:2716sqft. Ph: 9945340314, 9480439830.

RENTAL PROPERTIES

Accommodation Available

General

RENT: 50000 sqft independent Building (With compound Wall) situated in a Prime locality of Mangalore having Two Lifts (12 persons capacity), 120 KV Generator,Ample Parking area, suitable for BPOs, Nursing Homes, Nursing Colleges, Pre-Schools, Schools, Colleges, Hotels/Lodging, Hostels is available at reasonable Rent. Contact:82175 27620 / 9353969886

BUSINESS

Business Offers

Finance

WANTED BUSINESS Partner Non Veg Hotel 10 Lakhs Investment Monthly Income 2.5 Lakhs: 9606701007/ 8892501007

NRI'S INVESTMENT And Finance Available On Low Interest Against Properties, Land & Building, Sites, Flats, Converted& Agriculture Lands Call: 7411265189

PERSONAL

Change of Name

I, PRATHIBHA Devi. P W/o. G. Prabhakar residing at No. 145, 9th cross, Soudamini Layout, Bangalore- 560062 my name has been entered differently as PRATHIBHA DEVI. G.I @ PRATHIBHA @ PRATHIBHA. P @ PRATHIBHA DEVI. P., in various documents. Hereby declaring my actual & correct name as PRATHIBHA DEVI. P vide affidavit dated 15/02/2022 before notary Ambreshappa., Bengaluru.

I, PRAMOD S/o. Ravi Rajan residing at No. 1D, Ravipadma Nilaya, Hanumanthappa Layout, Hurulichikkanahalli, Bangalore North, Tarabanahalli, Bangalore- 560090 have changed my name to R. PRAMOD vide affidavit dated 16/02/2022 before notary V. Rajashekhara., Bangalore.

I, PUSHPALATHA PUTTASIDDAPPA #405, Saimeadows, 2nd Cross, Ayyappa Layout, Yalahanka, Bengaluru-64, have changed my name to PUSHPA ANANTHA Vide affidavit dated 16-02-2022 before notary B.M. Chandrashekar, Bangalore.

I, MARY METILDA BENEDICT W/O BENEDICT Residing No. B205, Satwis Ville, Kalkere, Horamavu Post Bangalore-560113 have changed my name to METILDA Vide Affidavit Dated: 16/02/2022 sworn before notary Uday Kumar .K

I, DHANIK GOWDA, Residing at E-497, chikkabidarakallu, Bengaluru-73 have changed my name as DHANIK GOWDA. R, vide affidavit dated-16/2/2022 before Notary Aunradha.D, Bengaluru

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

GM-Advertisement

PUBLIC NOTICE

PUBLIC NOTICE

Our client intends to purchase the Schedule Mentioned Property from its absolute owner, Mr. DEEPAK KUMAR, Aged about 51 years, S/o. Binayak Choudhary & Mrs. BANDANA KUMAR, Aged about 49 years, W/o. Deepak Kumar, Both residing together at No. 953, 27th 'A' Main, 9th Block, Jayanagar, Bangalore – 560 069. The public are hereby given notice that any person/s or body incorporate claiming any right, title or interest of any nature or having any lien, charge or enforceable right in respect of the schedule property or anybody having objection to the transaction may put forth their claims in writing with the undersigned together with supporting documents within 15 days from this date, failing which it will be presumed that no valid claims or objections subsist in respect of the schedule property and the same is free from all encumbrances.

SCHEDULE PROPERTY

All that piece and parcel of land and building standing thereon bearing Site No. 147, situated in Sarakki, V Phase, J.P.Nagar, measuring East to West : 9.14 mts North to South: 12.19 mts Bounded on, East By : Site No. 146; West by : Site No. 148; North by : Road and; South by: Private Property.

SNEHA.M.P
ADVOCATE
D.R.P.BABU & ASSOCIATES,
No.87, "Shreshta Bumi",
U-203, 2nd Floor, Opp., BIT,
K.R.Road, Bangalore-560 004.
Mob: 9886375098.

ROUNAQH

PUBLIC NOTICE

This is to inform the general public that our clients have negotiated with (1) Smt.Radha, W/o. Late. S. Krishnan, resident of Bengaluru, to purchase the schedule property. Any person(s) claiming any right, title or interest of whatsoever nature over the schedule property is/are hereby called upon to contact the undermentioned Advocate with supporting documents within 8 days from the date of this publication. In the event no such claim(s) is received within the stipulated time, it shall be lawful for our clients to presume that there are no valid claim(s) adverse to Smt. Radha, W/o. S. Krishnan right, title and interest in the schedule property and proceed with the proposed sale transaction.

SCHEDULE PROPERTY

Item No.1: Land in Sy.No.20 totally measuring 4 acres 25 guntas, (including 10 guntas of karab); Item No.2: Land in Sy.No.21, totally measuring 5 acres 23 guntas, (including 10 guntas of karab); Item No.3: Land Sy.No.44/1, measuring 3 acres 31 guntas, all three properties are situated at Bandapura village, Bidarahalli Hobli, Bengaluru East Taluk.

KALAIVANI .P, Advocate
Mobile: 97417 71949

DH DECCAN HERALD ಪ್ರಜಾವಾಣಿ

BOOK YOUR REAL ESTATE

Classified Advertisement In Deccan Herald & Prajavani

SATURDAY & SUNDAY COMBO OFFER

Ordinary Per word	Bold Per word	Ordinary Semi Display Per word	Bold Semi Display Per word	Single Col CD Per sqcm
80	125	95	155	570

For More Details Contact:
Ph:080- 45557160 | 163 | 164 | M: 9880856233 | 9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com
condition apply*

ಪಿಟಿಸಿಎಲ್: ತಿದ್ದುಪಡಿ ಬದಲು ಸುತ್ತೋಲೆ ಹೊರಡಿಸಿದ ಸರ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್‌ಸಿ/ಎಸ್‌ಟಿ ಭೂ ಪರಭಾರೆ ನಿಷೇಧ ಕಾಯ್ದೆ (ಪಿಟಿಸಿಎಲ್) ಸಮಗ್ರ ತಿದ್ದುಪಡಿಗೆ ಹೋರಾಟಗಳು ನಡೆಯುತ್ತಿದ್ದರೆ, ಕಾಯ್ದೆಯ ಮೂಲ ಉದ್ದೇಶಕ್ಕೆ ಧಕ್ಕೆಯಾಗದಂತೆ ಪ್ರಕರಣಗಳನ್ನು ಇತ್ಯರ್ಥಪಡಿಸುವಂತೆ ಕಂದಾಯ ಇಲಾಖೆ ಸುತ್ತೋಲೆ ಹೊರಡಿಸಿದೆ.

1979ರಲ್ಲಿ ಜಾರಿಗೆ ಬಂದ ಕಾಯ್ದೆಯ ಪ್ರಕಾರ, ಪರಿಶಿಷ್ಟರಿಗೆ ಮಂಜೂರಾಗುವ ಜಮೀನುಗಳನ್ನು ಪರಭಾರೆ ಮಾಡಲು ಸರ್ಕಾರದ ಪೂರ್ವಾನುಮತಿ ಅತ್ಯವಶ್ಯ ಎಂಬ ಷರತ್ತು ಇದೆ. ಕಾಯ್ದೆ ಉಲ್ಲಂಘಿಸಿ ಭೂಮಿ ಪರಭಾರೆ ಆಗಿದ್ದಲ್ಲಿ ಮರು ಮಂಜೂರಾತಿ ಕೋರಿ ಮೂಲ ಮಂಜೂರಾತಿದಾರರು ಅಥವಾ ಅವರ ವಾರಸುದಾರರು ಉಪವಿಭಾಗಾಧಿಕಾರಿಗೆ ಅರ್ಜಿ ಸಲ್ಲಿಸಲು ಕಾಲಮಿತಿ ಇರಲಿಲ್ಲ.

ನೆಕ್ಕಂಟಿ ರಾಮಲಕ್ಷ್ಮಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ 'ಸಮುಚಿತ ಸಮಯದೊಳಗೆ ಅರ್ಜಿ ಸಲ್ಲಿಸಬೇಕು' ಎಂದು 2017ರ ಅಕ್ಟೋಬರ್ 26ರಲ್ಲಿ ತಿಳಿಸಿತು. 'ಇದಾದ ಬಳಿಕ ಪಿಟಿಸಿಎಲ್ ಕಾಯ್ದೆ ಉಲ್ಲಂಘನೆಯಾಗಿದೆ ಎಂದು ಉಪವಿಭಾಗಾಧಿಕಾರಿ, ಜಿಲ್ಲಾಧಿಕಾರಿ ನ್ಯಾಯಾಲಯಗಳಲ್ಲಿ ಸಲ್ಲಿಕೆಯಾಗುತ್ತಿರುವ ಅರ್ಜಿಗಳಲ್ಲಿ ಪರಿಶಿಷ್ಟರಿಗೆ ವಿರುದ್ಧವಾದ ಆದೇಶಗಳು ಹೊರ ಬೀಳುತ್ತಿವೆ. ಆದ್ದರಿಂದ ಕಾಯ್ದೆಗೆ ಸಮಗ್ರ ತಿದ್ದುಪಡಿ ತರಬೇಕು' ಎಂಬುದು ದಲಿತ ಸಂಘಟನೆಗಳ ಒತ್ತಾಯ.

ಈ ನಡುವೆ ಸರ್ಕಾರ ಫೆ.15ರಂದು ಸುತ್ತೋಲೆಯೊಂದನ್ನು ಹೊರಡಿಸಿದೆ. ಪರಿಶಿಷ್ಟ ಜಾತಿ ಮತ್ತು ಪಂಗಡದವರು ಭೂರಹಿತರಾಗದೇ ಇರುವುದನ್ನು ಗಮನದಲ್ಲಿಟ್ಟುಕೊಂಡು ಇತ್ಯರ್ಥಪಡಿಸುವಂತೆ ಸೂಚಿಸಿದೆ.

'ಈ ಸುತ್ತೋಲೆ ಹೊರಡಿಸುವ ಮೂಲಕ ಹೋರಾಟಗಾರರ ಮೂಗಿಗೆ ತುಪ್ಪ ಸವರುವ ಕೆಲಸವನ್ನು ಸರ್ಕಾರ ಮಾಡಿದೆ. ಕಾಯ್ದೆಗೆ ಸಮಗ್ರ ತಿದ್ದುಪಡಿ ತರುವ ಬದಲು ಸುತ್ತೋಲೆ ಹೊರಡಿಸಿ ಕೈತೊಳೆದುಕೊಳ್ಳಲು ಯತ್ನಿಸಿದೆ. ಇದರ ವಿರುದ್ಧ ಮಾರ್ಚ್ ಮೊದಲ ವಾರದಲ್ಲಿ ಸಂತ್ರಸ್ತರ ಕುಟುಂಬ ಸಮೇತ ಅಹೋರಾತ್ರಿ ಪ್ರತಿಭಟನೆ ನಡೆಸಲಾಗುವುದು' ಎಂದು ಪಿಟಿಸಿಎಲ್ ಕಾಯ್ದೆ ಸಂರಕ್ಷಣಾ ಸಮಿತಿಯ ಮಂಜುನಾಥ್ ಅವರು ತಿಳಿಸಿದರು.

ಸಹಕಾರ ಬ್ಯಾಂಕ್ ಹಗರಣ: ಸಿಬಿಐಗೆ ನೀಡಲು ಆಗ್ರಹ

ಬೆಂಗಳೂರು: 'ಶ್ರೀಗುರು ರಾಘವೇಂದ್ರ ಕ್ರೆಡಿಟ್ ಕೋ ಆಪರೇಟಿವ್ ಬ್ಯಾಂಕ್‌ನ ಅಧ್ಯಕ್ಷ ರಾಮಕೃಷ್ಣ ಅವರನ್ನು ಜಾರಿ ನಿರ್ದೇಶನಾಲಯ (ಇಡಿ) ವಶಕ್ಕೆ ಪಡೆದಿದೆ. 2 ವರ್ಷಗಳ ನಿರಂತರ ಹೋರಾಟಕ್ಕೆ ಜಯ ಸಿಕ್ಕಿದ್ದು, ಸರ್ಕಾರ ಈ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಲೇಬೇಕು' ಎಂದು ಶ್ರೀಗುರು ರಾಘವೇಂದ್ರ ಕ್ರೆಡಿಟ್ ಕೋ-ಆಪರೇಟಿವ್ ಬ್ಯಾಂಕ್ ಷೇರುದಾರರು ಮತ್ತು ಠೇವಣಿದಾರರ ಹಿತರಕ್ಷಣಾ ವೇದಿಕೆಯ ಮಹಾ ಪೋಷಕ ಶಂಕರ ಗುಹಾ ದ್ವಾರಕನಾಥ್ ಬೆಳ್ಳೂರು ಆಗ್ರಹಿಸಿದರು.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಹಗರಣದ ಸೂತ್ರಧಾರ ಕೆ.ರಾಮಕೃಷ್ಣ ಅವರನ್ನು ಬಂಧಿಸಿರುವುದು ಸಮಾಧಾನಕರ ವಿಚಾರ. ಆದರೆ, ಇದಕ್ಕೆ ಎರಡು ವರ್ಷ ಸಮಯ ಬೇಕಾಯಿತು. ಹಗರಣದ ತನಿಖೆಯನ್ನು ಸಿಬಿಐಗೆ ನೀಡಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಆದೇಶಿಸಬೇಕು' ಎಂದು ಒತ್ತಾಯಿಸಿದರು.

'ಪ್ರಕರಣದ ಸಂಪೂರ್ಣ ತನಿಖೆ ಸಿಬಿಐನಿಂದಲೇ ಆಗಬೇಕು. ಹಗರಣಕ್ಕೆ ಯಾವ ರಾಜಕೀಯ ವ್ಯಕ್ತಿಗಳ ಬೆಂಬಲ ಇತ್ತು ಎನ್ನುವುದು ತನಿಖೆಯಿಂದ ಹೊರಬರಬೇಕಿದೆ. ಬಸವನಗುಡಿ ವ್ಯಾಪ್ತಿಯಲ್ಲಿ ಇಂತಹ ಹಗರಣಗಳು ಸಾಕಷ್ಟು ನಡೆದಿವೆ. ಈ ಬಗ್ಗೆ ಸ್ಥಳೀಯ ಶಾಸಕರು ಹಾಗೂ ಸಂಸದರು ಕಂಡೂ ಕಾಣದಂತಿದ್ದಾರೆ. ಠೇವಣಿದಾರರ ಹಣ ವಾಪಸ್ ಆಗುವ ತನಕ, ಎಲ್ಲ ತಪ್ಪಿತಸ್ಥರಿಗೆ ಶಿಕ್ಷೆ ಆಗುವವರೆಗೂ ಹೋರಾಟ ಮುಂದುವರಿಯಲಿದೆ' ಎಂದರು.

ನಾಲ್ವರನ್ನು ಬಲಿ ಪಡೆಯಿತು 'ಲಾಂಗ್ ಡ್ರೈವ್'

ಪ್ರಜಾವಾಣಿ ವಾರ್ತೆ

ಹೊಸಕೋಟೆ: ಕೋಲಾರ ರಸ್ತೆಯ ರಾಷ್ಟ್ರೀಯ ಹೆದ್ದಾರಿ 75 ಅಟ್ಟೂರು ಗೇಟ್ ಬಳಿ ಮಂಗಳವಾರ ತಡರಾತ್ರಿ ಕಾರೊಂದು ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು ಲಾರಿಗೆ ಅಪ್ಪಳಿಸಿದ್ದು, ಕಾರಿನಲ್ಲಿದ್ದವರಲ್ಲಿ ನಾಲ್ವರು ವಿದ್ಯಾರ್ಥಿಗಳು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಇಬ್ಬರು ಗಾಯಗೊಂಡಿದ್ದಾರೆ.

ಭರತ್ (22), ಸಿರಿಲ್ (21), ವೈಷ್ಣವಿ (22), ವೆಂಕಟ್(20) ಸಾವನ್ನಪ್ಪಿದ ವಿದ್ಯಾರ್ಥಿಗಳು.ಯುವತಿ ಬೆಂಗಳೂರಿನ ವಿಲ್ಸನ್ ಗಾರ್ಡನ್ ನಿವಾಸಿ ಮತ್ತು ಆಂಧ್ರ ಪ್ರದೇಶದ ಚಿತ್ತೂರು, ಕಡಪಾ ಹಾಗೂ ಒಂಗುಲದ ವಿದ್ಯಾರ್ಥಿಗಳು ಬೆಂಗಳೂರಿನಲ್ಲಿ ಕಾಲೇಜು ವ್ಯಾಸಂಗ ಮಾಡುತ್ತಿದ್ದರು ಎಂದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ. ಅಂಕಿರೆಡ್ಡಿ, ಕೃಷ್ಣಶ್ರೀ ಎಂಬ ಇನ್ನಿಬ್ಬರು ವಿದ್ಯಾರ್ಥಿಗಳು ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಆರು ವಿದ್ಯಾರ್ಥಿಗಳು ಕಾರಿನಲ್ಲಿ ಮಂಗಳವಾರ ರಾತ್ರಿ ಬೆಂಗಳೂರಿನಿಂದ ಕೋಲಾರ ರಸ್ತೆಯ ನರಸಾಪುರದ ಬಳಿಯ 'ಕಾಫಿ ಡೇ'ಗೆ ಲಾಂಗ್ ಡ್ರೈವ್ ತೆರಳಿದ್ದರು. ಊಟ ಮುಗಿಸಿ ರಾತ್ರಿ 2.30ಕ್ಕೆ ಬೆಂಗಳೂರಿಗೆ ವಾಪಸ್ ಹೊರಟಾಗ ಕಾರು, ರಸ್ತೆ ವಿಭಜಕಕ್ಕೆ ಗುದ್ದಿ ಪಲ್ಟಿ ಹೊಡೆದು, ಕೋಲಾರ ಕಡೆ ಹೊರಟಿದ್ದ ಲಾರಿಗೆ ಡಿಕ್ಕಿ ಹೊಡೆದಿದೆ. ಕಾರು ನಜ್ಜುಗುಜ್ಜಾಗಿದ್ದು, ನಾಲ್ವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ಶವಗಳನ್ನು ಪೋಷಕರಿಗೆ ಹಸ್ತಾಂತರಿಸಲಾಗಿದೆ. ಸ್ಥಳಕ್ಕೆ ಎಸ್.ಪಿ ವಂಶಿಕೃಷ್ಣ ಮತ್ತು ಹೆಚ್ಚುವರಿ ಎಸ್.ಪಿ ಲಕ್ಷ್ಮಿ ಗಣೇಶ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ನಗರ ಯೋಜನಾ ತಜ್ಞರು, ಆರ್‌ಡಬ್ಲ್ಯುಎಗಳ ಒತ್ತಾಯ

ನಗರ ಮಹಾ ಯೋಜನೆ- ಬಿಎಂಪಿಸಿ ರೂಪಿಸಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಥಳೀಯ ಯೋಜನಾ ಪ್ರದೇಶಕ್ಕಾಗಿ ಪರಿಷ್ಕೃತ ನಗರ ಮಹಾಯೋಜನೆ (ಆರ್‌ಎಂಪಿ) 2041 ಸಿದ್ಧಪಡಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ಸಲಹಾಸಂಸ್ಥೆಗಳ ಆಯ್ಕೆಗೆ ಟೆಂಡರ್ ಕರೆದಿರುವುದಕ್ಕೆ ಆಕ್ಷೇಪ ವ್ಯಕ್ತವಾಗಿದೆ.

ಪ್ರಾಧಿಕಾರದ ಈ ಕ್ರಮಕ್ಕೆ ವಿರೋಧ ವ್ಯಕ್ತಪಡಿಸಿರುವ ನಗರ ಯೋಜನೆ ತಜ್ಞರು, ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಸ್ಥೆಗಳು (ಆರ್‌ಡಬ್ಲ್ಯುಎ) ಮತ್ತು ನಮ್ಮ ಬೆಂಗಳೂರು ಪ್ರತಿಷ್ಠಾನದವರು (ಎನ್‌ಬಿಎಫ್) ಬೆಂಗಳೂರು ಮಹಾನಗರ ಯೋಜನಾ ಸಮಿತಿಯೇ (ಬಿಎಂಪಿಸಿ) ನಗರ ಮಹಾಯೋಜನೆಯನ್ನು ರೂಪಿಸಬೇಕೇ ವಿನಃ ಬಿಡಿಎ ಅಥವಾ ಇತರ ಯಾವುದೇ ಸಂಸ್ಥೆಗಳಲ್ಲ ಎಂದು ಪ್ರತಿಪಾದಿಸಿದ್ದಾರೆ. ಈ ಕುರಿತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ನಗರಾಭಿವೃದ್ಧಿ ಸಚಿವ ಬಿ.ಎ. ಬಸವರಾಜ್ ಹಾಗೂ ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ಅವರಿಗೆ ಮನವಿ ಸಲ್ಲಿಸಿದ್ದಾರೆ.

ನಮ್ಮ ಬೆಂಗಳೂರು ಪ್ರತಿಷ್ಠಾನದ ಪ್ರಧಾನ ವ್ಯವಸ್ಥಾಪಕ ವಿನೋದ್ ಜೇಕಬ್, 'ನಗರ ಮಹಾಯೋಜನೆ 2041 ನಗರದ ಅಭಿವೃದ್ಧಿ ಮತ್ತು ಬೆಳವಣಿಗೆಯ ಕುರಿತು ವಿಸ್ತೃತ ಚೌಕಟ್ಟನ್ನು ಹೊಂದಿರಬೇಕು. ನಗರಾಡಳಿತಕ್ಕಾಗಿ ಸ್ಥಳೀಯ ಆಡಳಿತ ಸಂಸ್ಥೆಗಳ ಒಂದು ಅಂಗಸಂಸ್ಥೆಯಾದ ಬಿಎಂಪಿಸಿಯನ್ನೂ ಇದರ ಸಿದ್ಧತೆ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳಬೇಕು. ನಗರ ಮತ್ತು ಪಟ್ಟಣ ಯೋಜನೆ ರೂಪಿಸಲು ನೆರವಾಗುವ ಅಧಿಕಾರವನ್ನು ಸಂವಿಧಾನದ 74ನೇ ತಿದ್ದುಪಡಿಯ ಪ್ರಕಾರ ಬಿಎಂಪಿಸಿಗೆ ನೀಡಲಾಗಿದೆ. ನಗರದ ಅಭಿವೃದ್ಧಿ ಕಾರ್ಯಗಳು ಸಹಜ ಮತ್ತು ಪ್ರಾಮಾಣಿಕವಾಗಿ ನಡೆಯಲು ಸಾಧ್ಯವಾಗುವಂತೆ ಹತ್ತು ವರ್ಷಗಳ ಯೋಜನೆಯನ್ನು ರೂಪಿಸುವಂತೆ 1961ರ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯೂ ಸೂಚಿಸಿದೆ. ನಗರ ಮಹಾಯೋಜನೆ ಮತ್ತು ಪ್ರಾದೇಶಿಕ ಯೋಜನೆಗಳು ಪರಸ್ಪರ ಪೂರಕವಾಗಿದ್ದು, ಯೋಜನೆ ಜಾರಿಗೆ ಜಂಟಿ ಪ್ರಯತ್ನಕ್ಕೆ ನೆರವಾಗುತ್ತವೆ' ಎಂದು ಅಭಿಪ್ರಾಯಪಟ್ಟರು.

ಸಿಟಿಜನ್ಸ್ ಆ್ಯಕ್ಷನ್ ಫೋರಂನ ವಿಜಯನ್ ಮೆನನ್, 'ಸಾಂವಿಧಾನಿಕವಾಗಿ, ಕಾನೂನಾತ್ಮಕವಾಗಿ ಮತ್ತು ಆಡಳಿತಾತ್ಮಕವಾಗಿಯೂ ವಿಫಲವಾಗಿರುವ ನಗರ ಮಹಾ ಯೋಜನೆಯಂತಹ ಹೊಣೆರಹಿತ ಪ್ರಕ್ರಿಯೆಗಳಿಗೆ ಬಿಡಿಎ ಮತ್ತು ಸರ್ಕಾರ ತೆರಿಗೆದಾರರ ಹಣವನ್ನು ಪೋಲು ಮಾಡುತ್ತಿವೆ' ಎಂದು ಆರೋಪಿಸಿದರು.

ಬೆಂಗಳೂರು ಪ್ರಜಾ ವೇದಿಕೆಯ ಅಧ್ಯಕ್ಷ ಡಿ.ಎಸ್. ರಾಜಶೇಖರ್, 'ಪರಿಷ್ಕೃತ ನಗರ ಮಹಾಯೋಜನೆ 2031 ರೂಪಿಸಿದ ಸಲಹಾ ಸಂಸ್ಥೆಗಳಿಗೆ ಕೋಟ್ಯಂತರ ರೂಪಾಯಿ ವ್ಯಯ ಮಾಡಿದ್ದಕ್ಕೆ ಯಾರು ಹೊಣೆ. ತೆರಿಗೆದಾರರ ಈ ಹಣವನ್ನು ಹೇಗೆ ವಸೂಲಿ ಮಾಡಲಾಗುತ್ತದೆ ಎಂಬುದನ್ನು ಕೇಳಬೇಕಾಗುತ್ತದೆ' ಎಂದರು.

'ಆರ್‌ಎಂಪಿಯನ್ನು ಬಿಎಂಪಿಸಿ ರೂಪಿಸಬೇಕೇ ವಿನಃ ಬಿಡಿಎ ಅಲ್ಲ. ಅಂತಿಮವಾಗಿ ಬೆಂಗಳೂರಿನ ನಾಗರಿಕರ ಮೇಲೆಯೇ ಇದು ಪರಿಣಾಮ ಬೀರುವುದರಿಂದ ಅವರ ಸಲಹೆಗಳನ್ನು ಏಕೆ ಪಡೆದಿಲ್ಲ. ಬಿಡಿಎಯ ಈ ಕ್ರಮಕ್ಕೆ ಒಪ್ಪಿಗೆ ಸೂಚಿಸಿದ ಸಂಸ್ಥೆಗಳು ಯಾವುವು ಎಂಬುದನ್ನೂ ನಾವು ತಿಳಿಯಬೇಕು' ಎಂದರು.

'ತಜ್ಞರನ್ನು ಒಳಗೊಂಡ ಬಿಎಂಪಿಸಿ ರಚಿಸಿ'

'ಒಂದು ನಗರವಾಗಿ ಸಮಗ್ರ ಅಭಿವೃದ್ಧಿ ಕಾಣುವಲ್ಲಿ ಬೆಂಗಳೂರು ಯಶಸ್ವಿ ಆಗಿಲ್ಲ. ವ್ಯಾಪಕ ಭ್ರಷ್ಟಾಚಾರ ಮತ್ತು ಬಿಡಿಎ, ಬಿಬಿಎಂಪಿ, ಜಲಮಂಡಳಿಯಂತಹ ಸಂಸ್ಥೆಗಳ ವೈಫಲ್ಯಗಳೇ ಇದಕ್ಕೆ ಕಾರಣ. ಆರ್‌ಎಂಪಿ 2041 ಸಿದ್ಧಪಡಿಸುವ ಹೊಣೆಯನ್ನು ಮತ್ತೆ ಬಿಡಿಎಗೆ ವಹಿಸಿದ್ದು ದುರಂತ. ರಾಜ್ಯ ಸರ್ಕಾರವು ಸಂವಿಧಾನದ 74ನೇ ತಿದ್ದುಪಡಿಯನ್ವಯ ಕ್ರಮ ಕೈಗೊಳ್ಳಬೇಕು. ಅಗತ್ಯ ತಜ್ಞರನ್ನೊಳಗೊಂಡ ಬಿಎಂಪಿಸಿಯನ್ನು ರಚಿಸಬೇಕು' ಎಂದು ವರ್ತೂರು ರೈಸಿಂಗ್ ಸಂಘಟನೆಯ ಜಗದೀಶ ರೆಡ್ಡಿ ಒತ್ತಾಯಿಸಿದರು.

ತುಮಕೂರು ರಸ್ತೆ ಮೇಲ್ಸೇತುವೆಯಲ್ಲಿ ಭಾರಿ ವಾಹನ ನಿಷೇಧ • ಲಘು ವಾಹನ ಸಂಚಾರ ಆರಂಭ

ಹೆಚ್ಚಲಿದೆ ಕೆಳಗಿನ ರಸ್ತೆಗಳ ಮೇಲೆ ಒತ್ತಡ

• ಪ್ರವೀಣ್ ಕುಮಾರ್ ಪಿ.ವಿ.



ತುಮಕೂರು ರಸ್ತೆ ಮೇಲ್ಸೇತುವೆಯಲ್ಲಿ ಲಘು ವಾಹನಗಳ ಸಂಚಾರಕ್ಕೆ ಬುಧವಾರ ಅವಕಾಶ ಕಲ್ಪಿಸಲಾಯಿತು – ಪ್ರಜಾವಾಣಿ ಚಿತ್ರ

ಬೆಂಗಳೂರು: ತುಮಕೂರು ರಸ್ತೆಯ ಎಲಿವೇಟೆಡ್ ಕಾರಿಡಾರ್‌ನಲ್ಲಿ (ಶಿವಕುಮಾರ ಸ್ವಾಮೀಜಿ ಮೇಲ್ಸೇತುವೆ) ಭಾರಿ ವಾಹನಗಳ ಸಂಚಾರವನ್ನು ನಿಷೇಧ ಮುಂದುವರಿಸಲು ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರ (ಎನ್‌ಎಚ್‌ಎಐ) ನಿರ್ಧರಿಸಿದೆ.

ನಗರದಲ್ಲಿ ಸರಕು ಸಾಗಣೆ ವಾಹನಗಳ ಸಂಚಾರ ದಟ್ಟಣೆ ಅತಿ ಹೆಚ್ಚು (ಶೇ 29ರಷ್ಟು) ಇರುವುದು ಇದೇ ರಸ್ತೆಯಲ್ಲಿ. ಸರಕು ಸಾಗಣೆ ವಾಹನಗಳು ಈ ಮೇಲ್ಸೇತುವೆಯ ಮೂಲಕ ಹಾದು ಹೋಗಲು ಅವಕಾಶ ಕಲ್ಪಿಸದಿದ್ದರೆ, ಕೆಳಗಿನ ರಸ್ತೆಗಳು ಮತ್ತು ಸರ್ವಿಸ್ ರಸ್ತೆಗಳ ಮೇಲೆ ಸಂಚಾರ ದಟ್ಟಣೆಯ ಒತ್ತಡ ಹೆಚ್ಚಲಿದೆ.

ಈ ಮೇಲ್ಸೇತುವೆಯ 102 ಮತ್ತು 103ನೇ ಕಂಬಗಳ ನಡುವೆ ತಾಂತ್ರಿಕ ದೋಷ ಕಾಣಿಸಿಕೊಂಡಿತ್ತು. ಹಾಗಾಗಿ ಈ ಮೇಲ್ಸೇತುವೆ ಮೇಲೆ ವಾಹನ ಸಂಚಾರವನ್ನು 2021ರ ಡಿ. 25ರಿಂದ ನಿರ್ಬಂಧಿಸಲಾಗಿತ್ತು. ದುರಸ್ತಿ ಕಾಮಗಾರಿ ಬಳಿಕ ಈ ಮೇಲ್ಸೇತುವೆಯನ್ನು ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್ಸಿ) ತಜ್ಞರ ತಂಡ ಪರಿಶೀಲಿಸಿದೆ. ಬುಧವಾರದಿಂದ ಲಘು ವಾಹನಗಳು ಈ ರಸ್ತೆಯನ್ನು ಬಳಸಬಹುದು. ಆದರೆ, ಭಾರಿ ವಾಹನ ಸಂಚಾರಕ್ಕೆ ಈ ಮೇಲ್ಸೇತುವೆ ಸುರಕ್ಷಿತವಲ್ಲ ಎಂದು ಐಐಎಸ್ಸಿ ತಜ್ಞರ ತಂಡ ಶಿಫಾರಸು ಮಾಡಿದೆ. ಹಾಗಾಗಿ ಬುಧವಾರದಿಂದಲೇ ಲಘು ವಾಹನಗಳು ಇದನ್ನು ಬಳಸುವುದಕ್ಕೆ ಅವಕಾಶ ಕಲ್ಪಿಸಲಾಗಿದೆ.

ನಗರ ಭೂಸಾರಿಗೆ ನಿರ್ದೇಶನಾಲಯ ಸಿದ್ಧಪಡಿಸಿದ್ದ ಸಮಗ್ರ ಸಂಚಾರ ಯೋಜನೆ ವರದಿ ಪ್ರಕಾರ, ಬಿಬಿಎಂಪಿ ವ್ಯಾಪ್ತಿಯ ಪ್ರಮುಖ ಹೆದ್ದಾರಿಗಳಲ್ಲಿ ನಗರಕ್ಕೆ ಸರಕು ಸಾಗಣೆ ವಾಹನಗಳು (ಟ್ರಕ್ ಮತ್ತು ಮಲ್ಟಿ ಆಕ್ಸಿಲ್ ವಾಹನಗಳು) ಅತಿ ಹೆಚ್ಚು ಪ್ರಮಾಣದಲ್ಲಿ ಪ್ರವೇಶಿಸುವುದು ತುಮಕೂರು ರಸ್ತೆ ಮೂಲಕ. ಹೊಸೂರು ರಸ್ತೆ ನಂತರದ ಸ್ಥಾನದಲ್ಲಿದೆ. ಈ ರಸ್ತೆಯನ್ನು ಬಳಸುವ ಶೇ 29ರಷ್ಟು ವಾಹನಗಳು ಭಾರಿ ವಾಹನಗಳಾಗಿವೆ. ಭಾರಿ ವಾಹನಗಳು ಮೇಲ್ಸೇತುವೆ ಬಳಸಲು ಸಾಧ್ಯವಾಗದಿದ್ದರೆ ಅದರಿಂದ ಭಾರಿ ಸಮಸ್ಯೆ ಸೃಷ್ಟಿಯಾಗಲಿದೆ ಎಂದು ಆತಂಕ ವ್ಯಕ್ತಪಡಿಸುತ್ತಾರೆ ಲಾರಿ ಮಾಲೀಕರು.

'ಮೇಲ್ಸೇತುವೆಯ ಮೂಲಕ ಸಾಗಿದರೆ ಪ್ರತಿ ಲಾರಿಗೆ ನಾಲ್ಕರಿಂದ ಐದು ಲೀಟರ್‌ಗಳಷ್ಟು ಡೀಸೆಲ್ ಉಳಿತಾಯವಾಗುತ್ತದೆ. ಈ ಮೇಲ್ಸೇತುವೆಯನ್ನು ಬಳಸಲು ಅವಕಾಶ ನೀಡದಿದ್ದರೆ ಇಲ್ಲಿ ಸಂಚಾರ ದಟ್ಟಣೆ ಹೆಚ್ಚಲಿದೆ. ಭಾರಿ ವಾಹನಗಳು ತಾಸುಗಟ್ಟಲೆ ರಸ್ತೆಯಲ್ಲೇ ಉಳಿಯಬೇಕಾಗುತ್ತದೆ. ಇದರಿಂದ ಭಾರಿ ಪ್ರಮಾಣದಲ್ಲಿ ಇಂಧನ ನಷ್ಟ ಅನುಭವಿಸಬೇಕಾಗುತ್ತದೆ' ಎಂದು ಕರ್ನಾಟಕ ಲಾರಿ ಮಾಲೀಕರ ಮತ್ತು ಏಜೆಂಟರ ಸಂಘಗಳ ಒಕ್ಕೂಟದ ಅಧ್ಯಕ್ಷ ಜಿ.ಆರ್.ಷಣ್ಮುಖಪ್ಪ ತಿಳಿಸಿದರು.

'ಪೀಣ್ಯ ಕೈಗಾರಿಕಾ ಪ್ರದೇಶಕ್ಕೂ ಸರಕು ಸಾಗಿಸುವ ವಾಹನಗಳು ಈ ಮೇಲ್ಸೇತುವೆಯನ್ನೇ ಬಳಸುತ್ತವೆ. ಈಗ ಲಘು ವಾಹನಗಳ ಸಂಚಾರಕ್ಕೆ ಮೇಲ್ಸೇತುವೆಯನ್ನು ಮುಕ್ತಗೊಳಿಸಿದ್ದರಿಂದ ಶೇ 30ರಷ್ಟು ಸಮಸ್ಯೆ ಮಾತ್ರ ಬಗೆಹರಿದಿದೆ. ಈ ಮೇಲ್ಸೇತುವೆಯನ್ನು ಆದಷ್ಟು ಬೇಗ ದುರಸ್ತಿಪಡಿಸಬೇಕು. ಇಲ್ಲದಿದ್ದರೆ ದಾಸರಹಳ್ಳಿ ಕ್ಷೇತ್ರದ ಒಳರಸ್ತೆಗಳ ಮೇಲೂ ಒತ್ತಡ ಹೆಚ್ಚಲಿದೆ' ಎಂದು ಶಾಸಕ ಆರ್.ಮಂಜುನಾಥ್ ತಿಳಿಸಿದರು.

19.5 ಕಿ.ಮೀ ಉದ್ದದ ತುಮಕೂರು ರಸ್ತೆ ಕಾರಿಡಾರ್ ಅನ್ನು 12 ವರ್ಷಗಳ ಹಿಂದೆ ಅಭಿವೃದ್ಧಿಪಡಿಸಲಾಗಿತ್ತು. ₹ 775.7 ಕೋಟಿ ವೆಚ್ಚದ ಈ ಕಾಮಗಾರಿಯನ್ನು ನವಯುಗ ಕನ್‌ಸ್ಟ್ರಕ್ಷನ್ಸ್ ಸಂಸ್ಥೆಯು ನಿರ್ವಹಿಸಿತ್ತು. 4.5 ಕಿ.ಮೀ ಉದ್ದದ ಮೇಲ್ಸೇತುವೆ ನಿರ್ಮಾಣವೂ ಈ ಯೋಜನೆಯ ಭಾಗವಾಗಿದೆ.2007ರ ಮೇ 9ರಂದು ಗುತ್ತಿಗೆ ಕರಾರು ಒಪ್ಪಂದ ನಡೆದಿತ್ತು. ಅದೇ ವರ್ಷ ನವೆಂಬರ್ 2ರಂದು ಈ ಕಾರಿಡಾರ್‌ನ ಕಾಮಗಾರಿ ಆರಂಭವಾಗಿತ್ತು. 2010ರ ಆಗಸ್ಟ್‌ನಲ್ಲಿ ಈ ಕಾರಿಡಾರ್ ಅನ್ನು ಸಾರ್ವಜನಿಕ ಬಳಕೆಗೆ ಮುಕ್ತಗೊಳಿಸಲಾಗಿತ್ತು. ತುಮಕೂರು ರಸ್ತೆ ಕಾರಿಡಾರ್ 4.5 ಕಿ.ಮೀ ಉದ್ದದ ನಾಲ್ಕು ಪಥಗಳ ಎತ್ತರಿಸಿದ ಮಾರ್ಗ, ಉಳಿದ ಕಡೆ ಆರು ಪಥಗಳ ಹೆದ್ದಾರಿ ಹಾಗೂ ಇಕ್ಕೆಲಗಳಲ್ಲಿ ಸರ್ವಿಸ್ ರಸ್ತೆಗಳನ್ನು ಒಳಗೊಂಡಿದೆ.

ಹೆದ್ದಾರಿ: ಸರಕು ಸಾಗಣೆ ವಾಹನಗಳ ಪ್ರಮಾಣ

ಹೆದ್ದಾರಿ	(24 ಗಂಟೆಗಳಲ್ಲಿ)		ದಟ್ಟಣೆ ಅವಧಿಯಲ್ಲಿ	
	ಸಂಚರಿಸುವ ಪ್ರಯಾಣಿಕ ವಾಹನಗಳು (ಶೇ)	ಸರಕು ಸಾಗಣೆ ವಾಹನಗಳು (ಶೇ)	ಸಂಚರಿಸುವ ಪ್ರಯಾಣಿಕ ವಾಹನಗಳು (ಶೇ)	ಸರಕು ಸಾಗಣೆ ವಾಹನಗಳು (ಶೇ)
ತುಮಕೂರು ರಸ್ತೆ	26,753 (71%)	10,927 (29%)	1,278 (71%)	525 (29%)
ಬಳ್ಳಾರಿ ರಸ್ತೆ	50,929 (94%)	3,216 (6%)	2,914 (97%)	91 (3%)
ಮಾಗಡಿ ರಸ್ತೆ	36,275 (87%)	5,358 (13%)	2,043 (94%)	130 (6%)
ಹೊಸೂರು ರಸ್ತೆ	54,957 (77%)	16,417 (23%)	3,099 (83 %)	634 (17%)
ಮೈಸೂರು ರಸ್ತೆ	27,489 (81%)	6,447 (19%)	1,687 (88%)	231 (12%)
ಹಳೆ ಮದ್ರಾಸ್ ರಸ್ತೆ	48,647 (84%)	9,377 (16%)	1,295 (74%)	461 (26%)

'ಟೋಲ್ ಸಂಗ್ರಹ ಕೈಬಿಡದಿದ್ದರೆ ಮುಷ್ಕರ'

'ತುಮಕೂರು ರಸ್ತೆಯ ಮೇಲ್ಸೇತುವೆಯಲ್ಲಿ ವಾಹನ ಸಂಚಾರ ನಿಷೇಧಿಸಿ ಒಂದೂವರೆ ತಿಂಗಳುಗಳಾಗಿವೆ. ಆದರೂ ಟೋಲ್ ಸಂಗ್ರಹ ಮುಂದುವರಿದಿತ್ತು. ಇದಕ್ಕೆ ವಿರೋಧ ವ್ಯಕ್ತಪಡಿಸಿದರೂ ಟೋಲ್ ಸಂಗ್ರಹವನ್ನು ಸ್ಥಗಿತಗೊಳಿಸಿಲ್ಲ. ಇನ್ನು ಸರಕು ಸಾಗಣೆ ವಾಹನಗಳಿಂದ ಇಲ್ಲಿ ಟೋಲ್‌ನಲ್ಲಿ ಪ್ರತಿ ಟ್ರಿಪ್‌ಗೆ ₹ 400ರಷ್ಟು ಶುಲ್ಕ ಸಂಗ್ರಹಿಸಲಾಗುತ್ತಿದೆ. ಇನ್ನು ಟೋಲ್ ಪಾವತಿಸಲು ಸಾಧ್ಯವಿಲ್ಲ. ಟೋಲ್ ಸಂಗ್ರಹ ಸ್ಥಗಿತಗೊಳಿಸದಿದ್ದರೆ ಲಾರಿ ಮಾಲೀಕರು ಮುಷ್ಕರ ನಡೆಸುವುದು ಅನಿವಾರ್ಯ' ಎಂದು ಜಿ.ಆರ್. ಷಣ್ಮುಖಪ್ಪ ತಿಳಿಸಿದರು.

ಕೇಬಲ್ ಸಮಸ್ಯೆ– ತಜ್ಞರು ಏನನ್ನುತ್ತಾರೆ?

'ಒಂದು ಕಂಬದಿಂದ ಇನ್ನೊಂದು ಕಂಬದ ನಡುವೆ ಜೋಡಿಸುವ ಸೆಗ್ಮೆಂಟ್‌ನಲ್ಲಿ ತೂತು ಮಾಡಿ ಕೇಬಲ್ ತೂರಿಸಿ ಎಳೆದು ಬೋಲ್ಟ್ ಹಾಕಲಾಗುತ್ತದೆ. ಕೇಬಲ್‌ಗಳನ್ನು ಎಳೆದು ಕಟ್ಟದ ಜಾಗವನ್ನು ಕಾಂಕ್ರೀಟ್‌ನಿಂದ ತುಂಬಿ ಗಟ್ಟಿಗೊಳಿಸಲಾಗುತ್ತದೆ. ತುಮಕೂರು ರಸ್ತೆ ಮೇಲ್ಸೇತುವೆಯಲ್ಲಿ ಅಳವಡಿಸಿದ ನಾಲ್ಕೈದು ಕೇಬಲ್‌ಗಳಲ್ಲಿ ಕೆಲವು ಶಿಥಿಲವಾಗಿರುವ ಸಾಧ್ಯತೆ ಇದೆ' ಎಂದು ನಿವೃತ್ತ ಎಂಜಿನಿಯರ್ ಒಬ್ಬರು ವಿವರಿಸಿದರು.

'ಇದನ್ನು ಕಳಪೆ ಕಾಮಗಾರಿ ಎಂದು ಹೇಳಲು ಆಗದು. ಕೇಬಲ್ ಗುಣಮಟ್ಟದಿಂದ ಕೂಡಿರದಿದ್ದರೆ ಅಥವಾ ಅದರಲ್ಲಿ ದೋಷವಿದ್ದರೆ ಈ ರೀತಿ ಆಗುವ ಸಾಧ್ಯತೆ ಇದೆ. ಇದಕ್ಕೆ ಕೇಬಲ್ ಪೂರೈಸಿದ ಏಜೆನ್ಸಿಯೂ ಹೊಣೆಯಾಗುತ್ತದೆ' ಎಂದರು.

'ಕೇಬಲ್‌ಗಳು ಸೆಗ್ಮೆಂಟ್‌ಗಳ ತೂಕ ಹಾಗೂ ವಾಹನಗಳ ತೂಕಗಳೆರಡನ್ನೂ ತಾಳಿಕೊಳ್ಳಬೇಕು. ಈ ಸೇತುವೆಯನ್ನು ಎಷ್ಟು ತೂಕವನ್ನು ತಾಳಿಕೊಳ್ಳುವುದಕ್ಕೆ ವಿನ್ಯಾಸಗೊಳಿಸಲಾಗಿದೆಯೋ ಅದಕ್ಕಿಂತ ಒಂದೂವರೆ ಪಟ್ಟು ಹೆಚ್ಚು ತೂಕವನ್ನು ತಾಳಿಕೊಳ್ಳುವ ಸಾಮರ್ಥ್ಯವನ್ನು ಮೇಲ್ಸೇತುವೆಗಳು ಹೊಂದಿರುತ್ತವೆ. 72 ಟನ್ ತೂಕ ತಾಳಿಕೊಳ್ಳುವಂತೆ ಮೇಲ್ಸೇತುವೆಯನ್ನು ವಿನ್ಯಾಸಗೊಳಿಸಿದರೆ, ಅದು 110 ಟನ್ ತೂಕವನ್ನು ತಾಳಿಕೊಳ್ಳುವ ಸಾಮರ್ಥ್ಯ ಹೊಂದಿರಬೇಕು. ಕೇಬಲ್‌ಗಳು ಶಿಥಿಲಗೊಳ್ಳುವುದರ ಜೊತೆಗೆ ಸೆಗ್ಮೆಂಟ್‌ಗಳಲ್ಲೂ ಬಿರುಕು ಕಾಣಿಸಿಕೊಂಡಿದ್ದರೆ, ಅವುಗಳನ್ನು ದುರಸ್ತಿಪಡಿಸುವುದು ತುಂಬಾ ಕಷ್ಟ. ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಂತಹ ಸಂಸ್ಥೆಯ ಮೇಲ್ವಿಚಾರಣೆಯಲ್ಲಿ ನಡೆದಿರುವ ಈ ಕಾಮಗಾರಿಯಲ್ಲಿ ಈ ರೀತಿ ಆಗಿದೆ ಎಂದರೆ ನಂಬಲಾಗುತ್ತಿಲ್ಲ' ಎಂದು ಅಚ್ಚರಿ ವ್ಯಕ್ತಪಡಿಸಿದರು.

'ಬಿರುಕು ಕಾಣಿಸಿಕೊಂಡರೆ ಇಡೀ ಸೆಗ್ಮೆಂಟ್ ಅನ್ನು ಬದಲಾಯಿಸಬೇಕಾಗುತ್ತದೆ. ಹೊಸ ಕಾಮಗಾರಿ ಅನುಷ್ಠಾನ ಸುಲಭ, ಆದರೆ, ದುರಸ್ತಿ ಮಾಡುವುದು ಬಹಳ ಕಷ್ಟ' ಎಂದರು.

ಕಾರ್ಮಿಕರಿಗೆ ಅನ್ಯಾಯ: ಹೋರಾಟದ ಎಚ್ಚರಿಕೆ

ಬೆಂಗಳೂರು: 'ಉದ್ಯಮಿಗಳು, ಬಂಡವಾಳಶಾಹಿಗಳು ಹಾಗೂ ಖಾಸಗಿ ಕಂಪನಿಗಳು ಕಾರ್ಮಿಕರಿಗೆ ಕನಿಷ್ಠ ವೇತನ ಮತ್ತು ಮೂಲಸೌಲಭ್ಯಗಳನ್ನು ನೀಡುತ್ತಿಲ್ಲ. ಬಡ ಕಾರ್ಮಿಕರಿಗೆ ಆಗುತ್ತಿರುವ ಅನ್ಯಾಯದ ವಿರುದ್ಧ ಹೋರಾಟ ನಡೆಸಲಾಗುವುದು' ಎಂದು ಕರುನಾಡ ವಿಜಯಸೇನೆ ರಾಜ್ಯ ಘಟಕದ ಅಧ್ಯಕ್ಷ ಎಚ್.ಎನ್. ದೀಪಕ್ ಎಚ್ಚರಿಕೆ ನೀಡಿದರು.

ಕರುನಾಡ ವಿಜಯಸೇನೆ ರಾಜ್ಯ ಘಟಕದ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮದಲ್ಲಿ ನೇಮಕಾತಿ ಆದೇಶ ಪತ್ರಗಳನ್ನು ವಿತರಣೆ ಮಾಡಿ ಮಾತನಾಡಿದರು. 'ಸರೋಜಿನಿ ಮಹಿಷಿ ವರದಿಯನ್ನು ಜಾರಿಗೊಳಿಸಿ, ಖಾಸಗಿ ಸೇರಿದಂತೆ ಎಲ್ಲಾ ಕಂಪನಿಗಳಲ್ಲಿ ಕನ್ನಡಿಗರಿಗೆ ಉದ್ಯೋಗ ಮೀಸಲಾತಿ ನೀಡಬೇಕು. ಸರ್ಕಾರಗಳು ಕನ್ನಡಪರ ಹೋರಾಟಗಾರರನ್ನು ಗೌರವಯುತವಾಗಿ ನೋಡಿಕೊಳ್ಳಬೇಕು. ಮೇಕೆದಾಟು ಮತ್ತು ಮಹಾದಾಯಿ ಯೋಜನೆ, ನಂಜುಂಡಪ್ಪ ವರದಿ ಅನುಷ್ಠಾನಕ್ಕೆ ಕ್ರಮ ವಹಿಸಬೇಕು' ಎಂದು ಆಗ್ರಹಿಸಿದರು.

ಕರುನಾಡ ವಿಜಯಸೇನೆಯ ಕಾರ್ಮಿಕ ರಾಜ್ಯ ಘಟಕದ ನೂತನ ಅಧ್ಯಕ್ಷ ನೆ.ಲ.ರಾಮ್ ಪ್ರಸಾದ್ ಗೌಡ, 'ದೇಶದಲ್ಲಿ ಪ್ರತಿ ವರ್ಷ 7 ಲಕ್ಷಕ್ಕೂ ಹೆಚ್ಚು ಕಾರ್ಮಿಕರು ಉದ್ಯೋಗ ಕಳೆದುಕೊಳ್ಳುತ್ತಿದ್ದಾರೆ. ಕಾರ್ಮಿಕರ ಬದುಕು ಮೂರಾಬಟ್ಟೆಯಾಗಿದೆ. ಸರ್ಕಾರಗಳು ಕಾರ್ಮಿಕರನ್ನು ರಕ್ಷಣೆ ಮಾಡದೆ ಉದ್ಯಮಿಗಳ ಪರವಾಗಿ ನಿಂತು, ಅವರ ಬದುಕನ್ನು ಕಸಿದುಕೊಳ್ಳುತ್ತಿದೆ' ಎಂದು ಆರೋಪಿಸಿದರು.

ರಾಜ್ಯ ಯುವಘಟಕದ ಅಧ್ಯಕ್ಷ ಆರ್.ಎಸ್. ಮಹೇಶ್, ಉಪಾಧ್ಯಕ್ಷ ಸಚ್ಚಿದಾನಂದ ಮೂರ್ತಿ, ರಾಜ್ಯ ಘಟಕದ ಸಂಘಟನಾ ಕಾರ್ಯದರ್ಶಿ ಬಿ.ಮೋಹನ್ ಕುಮಾರ್, ರಾಜ್ಯ ಸಂಚಾಲಕ ವಾಸುದೇವ್, ಬೆಂಗಳೂರು ನಗರ ಜಿಲ್ಲಾ ಘಟಕದ ಅಧ್ಯಕ್ಷ ವಿಜಯ್ ಕುಮಾರ್, ಪ್ರಚಾರ ಸಮಿತಿ ಅಧ್ಯಕ್ಷೆ ರೇಣುಕಾ ಪ್ರಸಾದ್ ಇದ್ದರು.

ಮಮತಾಗೆ '1000 ವಿಮೆನ್ ಆಫ್ ಏಷ್ಯಾ' ಪ್ರಶಸ್ತಿ

ಪ್ರಶಸ್ತಿಯೊಂದಿಗೆ ಮಮತಾ

ಬೆಂಗಳೂರು: ನಗರದ ಕೆಎಲ್‌ಇ ಫಾರ್ಮಸಿ ಕಾಲೇಜಿನ ಪ್ರಾಧ್ಯಾಪಕಿ ಹಾಗೂ ಎನ್‌ಎಸ್‌ಎಸ್ ಕಾರ್ಯಕ್ರಮ ಅಧಿಕಾರಿ ಎ.ಮಮತಾ ಅವರು '1000 ವಿಮೆನ್ ಆಫ್ ಏಷ್ಯಾ' ಪ್ರಶಸ್ತಿ ಪಡೆದಿದ್ದಾರೆ.

2021ನೇ ಸಾಲಿನ ವಿಮೆನ್ನೋವೇಟರ್ ಜಾಗತಿಕ ಸಮ್ಮೇಳನದಲ್ಲಿ 'ಶಿಕ್ಷಣ ತಜ್ಞೆ ಮತ್ತು ಸಾಮಾಜಿಕ ಹೋರಾಟಗಾರ್ತಿ' ವಿಭಾಗದಲ್ಲಿ ಅವರಿಗೆ ಪ್ರಶಸ್ತಿ ಲಭಿಸಿದೆ.

ಸಾವಿರಾರು ಭಕ್ತರ ಸಮ್ಮುಖದಲ್ಲಿ ಆಂಜನೇಯ ಸ್ವಾಮಿ ರಥೋತ್ಸವ ನಡೆಯಿತು

ಹೇರೋಹಳ್ಳಿ ಆಂಜನೇಯ ಸ್ವಾಮಿ ಬ್ರಹ್ಮ ರಥೋತ್ಸವ

ಕೆಂಗೇರಿ: ಹೇರೋಹಳ್ಳಿ ಆಂಜನೇಯ ಸ್ವಾಮಿ ಬ್ರಹ್ಮ ರಥೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ಬುಧವಾರ ವಿಜೃಂಭಣೆಯಿಂದ ಜರುಗಿತು.

ಬೆಳಿಗ್ಗೆಯಿಂದಲೇ ಆಂಜನೇಯ ಮೂರ್ತಿಗೆ ವಿವಿಧ ಪೂಜಾ ಕೈಂಕರ್ಯ ನೆರವೇರಿಸಿದ ಅರ್ಚಕರು, ಹೇರೋಹಳ್ಳಿಯ ಪ್ರಮುಖ ರಸ್ತೆಗಳಲ್ಲಿ ಮೂರ್ತಿಯ ಮೆರವಣಿಗೆ ಮಾಡಿದರು. ಸಾವಿರಾರು ಸಂಖ್ಯೆಯಲ್ಲಿ ಸೇರಿದ್ದ ಭಕ್ತರು ರಥವನ್ನು ಎಳೆದು ಕೃತಾರ್ಥರಾದರು.

ರಥೋತ್ಸವದಲ್ಲಿ ಪಾಲ್ಗೊಂಡಿದ್ದ ಸಚಿವ ಎಸ್.ಟಿ.ಸೋಮಶೇಖರ್ ಮಾತನಾಡಿ, 'ವಿವಿಧ ಜಾತಿ, ಭಾಷೆಯ ಜನರ ನಡುವೆ ಸಾಮರಸ್ಯ ಬೆಸೆಯುವ ಸಲುವಾಗಿ ಜಾತ್ರೆ, ಹಬ್ಬ ಮೊದಲಾದ ಆಚರಣೆಗಳನ್ನು ಅನಾದಿ ಕಾಲದಿಂದಲೂ ಆಚರಿಸಿಕೊಂಡು ಬರಲಾಗುತ್ತಿದೆ. ಜನರು ಇಂತಹ ಶುಭ ಕಾರ್ಯಕ್ರಮಗಳ ಮೂಲಕ ಒಂದಾಗಿ ಸಮಾಜದ ಬೆಳವಣಿಗೆಗೆ ದುಡಿಯಬೇಕು' ಎಂದರು.

ಆತ್ಮರಾಮ ಸ್ವಾಮಿ ಬ್ರಹ್ಮರಥೋತ್ಸವ ಸ್ಥಗಿತ

ದಾಬಸ್ ಪೇಟೆ: ಕೊರೊನಾ ಹಿನ್ನೆಲೆಯಲ್ಲಿ ತಾಲ್ಲೂಕು ಆಡಳಿತದಿಂದ ಅನುಮತಿ ದೊರೆಯದ ಕಾರಣ ನೆಲಮಂಗಲ ತಾಲ್ಲೂಕಿನ ನರಸೀಪುರ ತೋಪಿನಲ್ಲಿರುವ 'ಅತ್ಮರಾಮ ಬ್ರಹ್ಮರಥೋತ್ಸವ' ಸ್ಥಗಿತಗೊಂಡಿದೆ.

ಪ್ರತಿವರ್ಷ ಫೆಬ್ರುವರಿಯಲ್ಲಿ ಬರುವ ಹುಣ್ಣಿಮೆಯಂದು ಇಲ್ಲಿ ಬ್ರಹ್ಮರಥೋತ್ಸವ ನಡೆಸಲಾಗುತ್ತಿತ್ತು. ಮೊದಲನೇ ಅಲೆ ವೇಳೆಗೆ ರಥೋತ್ಸವ ಮುಗಿದಿತ್ತು. ಕಳೆದ ವರ್ಷ ಇನ್ನೂ ಎರಡನೇ ಅಲೆ ಕಾಣಿಸಿಕೊಳ್ಳದ್ದರಿಂದ, ಕೊರೊನಾ ಮುಂಜಾಗ್ರತಾ ಕ್ರಮ ಅನುಸರಿಸಿ ರಥೋತ್ಸವಕ್ಕೆ ಅನುಮತಿ ನೀಡಲಾಗಿತ್ತು. ಆದರೆ, ಈ ಬಾರಿ ಮೂರನೆಯ ಅಲೆಯು ಡಿಸೆಂಬರ್ ತಿಂಗಳಿನಿಂದಲೇ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಸರ್ಕಾರ ಜಾತ್ರಾ ಕಾರ್ಯಕ್ರಮಗಳಿಗೆ ಅನುಮತಿ ನೀಡಿಲ್ಲ. ಮೂಲ ದೇವರಿಗೆ ಬೆಳಗಿನಿಂದಲೇ ಶಾಸ್ತ್ರೋಕ್ತವಾಗಿ ಅಭಿಷೇಕ, ಅಲಂಕಾರಗಳನ್ನು ಮಾಡಿ ಪೂಜೆ ನೆರವೇರಿಸಲಾಯಿತು. ಮೆರವಣಿಗೆ ದೇವರಿಗೆ ಅಲಂಕಾರ ಮಾಡಿ ಮಣೆವು ಹಾಕಿ, ರಥಬೀದಿಯಲ್ಲಿ ವಾದ್ಯಗೋಷ್ಠಿ ಸಹಿತ ಮೆರವಣಿಗೆ ನಡೆಸಿ, ದೇವಾಲಯದಲ್ಲಿಟ್ಟು ಭಕ್ತರಿಗೆ ಪೂಜೆ ಮಾಡಿಕೊಡಲಾಯಿತು.

'ಒಡಕು ಮೂಡಿಸುವ ಶಕ್ತಿಗಳ ವಿರುದ್ಧ ಒಟ್ಟಾಗಿ ಹೋರಾಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಧರ್ಮದ ಹೆಸರಿನಲ್ಲಿ ಮನಸ್ಸುಗಳನ್ನು ಒಡೆಯುವ ಹಾಗೂ ವಿಷಬೀಜ ಬಿತ್ತುವ ದುಷ್ಟ ಶಕ್ತಿಗಳ ವಿರುದ್ಧ ವಿದ್ಯಾರ್ಥಿಗಳು ಒಗ್ಗಟ್ಟಾಗಿ ಹೋರಾಡಬೇಕು' ಎಂದು ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಎ.ಮುರಿಗೆಪ್ಪ ತಿಳಿಸಿದರು.

ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿ–ಕರ್ನಾಟಕ (ಎಐಎಸ್‌ಇಸಿ) ಹಮ್ಮಿಕೊಂಡಿದ್ದ 'ರಾಜ್ಯದ ಪ್ರಸಕ್ತ ಶೈಕ್ಷಣಿಕ ಸಮಸ್ಯೆಗಳು ಹಾಗೂ ಸವಾಲುಗಳು' ಕುರಿತ ರಾಜ್ಯಮಟ್ಟದ ವೆಬಿನಾರ್‌ನಲ್ಲಿ ಮಂಗಳವಾರ ಮಾತನಾಡಿದರು.

'ಶಿಕ್ಷಣ ಕ್ಷೇತ್ರವು ಹಲವು ಸಮಸ್ಯೆಗಳನ್ನು ಎದುರಿಸುತ್ತಿದೆ. ಅತಿಥಿ ಉಪನ್ಯಾಸಕರು ಕೆಲಸ ಕಳೆದುಕೊಳ್ಳುತ್ತಿದ್ದಾರೆ. ಪರೀಕ್ಷೆಗಳು ಸಮೀಪಿಸುತ್ತಿದ್ದರೂ ಪಠ್ಯಕ್ರಮ ಪೂರ್ಣಗೊಂಡಿಲ್ಲ. ವಿದ್ಯಾರ್ಥಿಗಳು ಧರ್ಮಾಚರಣೆಯ ಬದಲು ಜ್ಞಾನಾರ್ಜನೆಗೆ ತೊಡಕಾಗಿರುವ ಇಂತಹ ಸಮಸ್ಯೆಗಳ ವಿರುದ್ಧ ಧ್ವನಿ ಎತ್ತಬೇಕು' ಎಂದು ಆಗ್ರಹಿಸಿದರು.

ಸೇಂಟ್ ಜೋಸೆಫ್ ಸಂಸ್ಥೆಯ ಸಂವಹನ ಮತ್ತು ಮಾಧ್ಯಮ ಅಧ್ಯಯನ ವಿಭಾಗದ ನಿರ್ದೇಶಕ ರಿಚರ್ಡ್ ರೇಗೋ, 'ನೂತನ ರಾಷ್ಟ್ರೀಯ ಶಿಕ್ಷಣ ನೀತಿಯು (ಎನ್‌ಇಪಿ) ದೇಶ ವಿಭಜಿಸುತ್ತದೆ. ಎಳೆಯ ಮನಸ್ಸುಗಳನ್ನು ಅರಳಿಸುವ ಬದಲು ಕಮರಿಸುತ್ತಿದೆ. ಶಿಕ್ಷಣ ಕ್ಷೇತ್ರದಲ್ಲಿ ಸರ್ಕಾರ ಹಾಗೂ ಧರ್ಮಗಳ ಅಕ್ರಮ ಪ್ರವೇಶಕ್ಕೆ ರಹದಾರಿ ಮಾಡಿಕೊಡಲಿದೆ. ಈ ನೀತಿಯ ವಿರುದ್ಧ ಗಟ್ಟಿ ಧ್ವನಿ ಎತ್ತಬೇಕು' ಎಂದರು.

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ (ಮೈಸೂರು) ಮಾಜಿ ನಿರ್ದೇಶಕಿ ಪ್ರೀತಿ ಶುಭಚಂದ್ರ, 'ಹಿಜಾಬ್ ಮತ್ತು ಕೇಸರಿ ಶಾಲು ಸಂಘರ್ಷದ ಆಚೆಗೆ ನಾವು ಶಿಕ್ಷಣವನ್ನು ನೋಡಬೇಕು. ಅಂಬೇಡ್ಕರ್ ಆಶಯದಂತೆ ಸಂಘಟಿತರಾಗಬೇಕು. ಶಿಕ್ಷಿತರಾಗುವ ಮೂಲಕ ಅನ್ಯಾಯಗಳ ವಿರುದ್ಧ ಹೋರಾಡಬೇಕು' ಎಂದು ತಿಳಿಸಿದರು.

ಎಐಎಸ್‌ಇಸಿ ರಾಜ್ಯ ಘಟಕದ ಅಧ್ಯಕ್ಷ ಪ್ರೊ. ಅಲ್ಲಮಪ್ರಭು ಬೆಟ್ಟದೂರು, 'ನಮ್ಮನ್ನು ಆಳುವವರು ಹಿಜಾಬ್ ಸಮಸ್ಯೆ ಸೃಷ್ಟಿಸಿದ್ದಾರೆ. ಬಹುಸಂಸ್ಕೃತಿಯ ಮೇಲೆ ಏಕ ಸಂಸ್ಕೃತಿ ಹೇರ ಹೊರಟಾಗ ಇಂತಹ ಸಮಸ್ಯೆಗಳು ತಲೆದೋರುತ್ತವೆ' ಎಂದು ಹೇಳಿದರು.

ಎಐಎಸ್‌ಇಸಿ ರಾಜ್ಯ ಘಟಕದ ಉಪಾಧ್ಯಕ್ಷ ವಿ.ಎನ್.ರಾಜಶೇಖರ್, ರಾಜ್ಯ ಘಟಕದ ಕಾರ್ಯದರ್ಶಿ ಎಸ್.ಜಿ.ಮಹೇಶ್, ಹೈದರಾಬಾದ್‌ನ ಸಿಯಾಸತ್ ಉರ್ದು ದಿನಪತ್ರಿಕೆಯ ವ್ಯವಸ್ಥಾಪಕ ಸಂಪಾದಕ ಜಹೀರುದ್ದೀನ್ ಅಲಿಖಾನ್ ಇದ್ದರು.

ಚಿತ್ರಾವಳಿ

ಕೆ.ಆರ್‌.ಪುರದ ಮೇಡಹಳ್ಳಿಯ ಕೋದಂಡರಾಮ ದೇವಸ್ಥಾನದ ಬ್ರಹ್ಮ ರಥೋತ್ಸವ ಕಾರ್ಯಕ್ರಮದಲ್ಲಿ ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ ಪಾಲ್ಗೊಂಡು ಪೂಜೆ ಸಲ್ಲಿಸಿದರು. ಶ್ರೀ ಕೋದಂಡರಾಮ ಸೇವಾ ಸಮಿತಿ ಅಧ್ಯಕ್ಷ ಕೋದಂಡರಾಮಯ್ಯ, ಬಿಜೆಪಿ ಮುಖಂಡರಾದ ಜಯಪ್ರಕಾಶ್, ಜಗದೀಶ್, ಕೃಷ್ಣಮೂರ್ತಿ, ಎಂ ರಮೇಶ್, ಕೆ.ಮಂಜುನಾಥ್ ಇದ್ದರು.

ದಿನದಿಂದ ದಿನಕ್ಕೆ ಬೇಸಿಗೆಯ ತಾಪಮಾನ ಹೆಚ್ಚಾಗುತ್ತಿರುವುದುರಿಂದ ಬೆಂಗಳೂರಿನ ವಿಜಯನಗರ ರಸ್ತೆಯಲ್ಲಿ ವ್ಯಾಪಾರಸ್ಥರು ಕಲ್ಲಂಗಡಿ ಹಣ್ಣುಗಳನ್ನು ಜೋಡಿಸುತ್ತಿರುವ ದೃಶ್ಯ ಬುಧವಾರ ಕಂಡುಬಂತು ಪ್ರಜಾವಾಣಿ ಚಿತ್ರ/ ರಂಜು ಪಿ

ಶೇಷಗಿರಿ ರಾವ್ ಹೆಸರಲ್ಲಿ ಪ್ರಶಸ್ತಿ ಸ್ಥಾಪಿಸಿ; ಮನು ಬಳಿಗಾರ್ ಒತ್ತಾಯ

ಪ್ರಜಾವಾಣಿ ವಾರ್ತೆ

ಮನು ಬಳಿಗಾರ್

ಬೆಂಗಳೂರು: 'ನಾಡು, ನುಡಿಯ ಏಳಿಗೆಗೆ ಶ್ರಮಿಸಿದ ವಿಮರ್ಶಕ ಪ್ರೊ. ಎಲ್.ಎಸ್. ಶೇಷಗಿರಿ ರಾವ್ ಅವರ ಹೆಸರಿನಲ್ಲಿ ಸರ್ಕಾರ ಪ್ರಶಸ್ತಿ ಸ್ಥಾಪಿಸಬೇಕು' ಎಂದು ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ನಿಕಟಪೂರ್ವ ಅಧ್ಯಕ್ಷ ಮನು ಬಳಿಗಾರ್ ಅವರು ಒತ್ತಾಯಿಸಿದರು.

ಕರ್ನಾಟಕ ವಿಕಾಸ ರಂಗ ಹಾಗೂ ಕನ್ನಡ ಗೆಳೆಯರ ಬಳಗ ಜಂಟಿಯಾಗಿ ನಗರದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ 'ಕನ್ನಡ ಬಾವುಟ ಹಾರಿಸಿದವರು– ನೆನಪಿನ ಮಾಲೆ' ಉದ್ಘಾಟಿಸಿ ಅವರು ಮಾತನಾಡಿದರು.

'ಶೇಷಗಿರಿ ರಾವ್ ಅವರು 'ಭಾರತ-ಭಾರತಿ' ಗ್ರಂಥವನ್ನು ಹೊರತರುವ ಮೂಲಕ 525 ಗಣ್ಯರ ಸಾಧನೆಗಳನ್ನು ಪರಿಚಯಿಸಿದರು. ಅವರು ಕನ್ನಡದ ಮಹಾತಪಸ್ವಿ. ಅವರ ಕನ್ನಡ ಸೇವೆಯನ್ನು ಸ್ಮರಿಸಲು ಪ್ರಶಸ್ತಿ ಸ್ಥಾಪಿಸಬೇಕು. ಪ್ರತಿವರ್ಷ ವಿಮರ್ಶಕರೊಬ್ಬರಿಗೆ ಈ ಪ್ರಶಸ್ತಿಯನ್ನು ನೀಡಬೇಕು' ಎಂದು ಹೇಳಿದರು.

ಕನ್ನಡ ಗೆಳೆಯರ ಬಳಗದ ಸಂಚಾಲಕ ರಾ.ನಂ.ಚಂದ್ರಶೇಖರ್, 'ಎಲ್.ಎಸ್.ಎಸ್. ಅವರು 22ನೇ ವಯಸ್ಸಿನಲ್ಲೇ ಕರ್ನಾಟಕ ಏಕೀಕರಣ ಚಳವಳಿಯಲ್ಲಿ ಭಾಗವಹಿಸಿದ್ದರು. ಕನ್ನಡಪರ ಹೋರಾಟಗಳಲ್ಲಿ ಪಾಲ್ಗೊಂಡು, ನಾಡು–ನುಡಿಯ ಶ್ರೇಯೋಭಿವೃದ್ಧಿಗೆ ದುಡಿದರು.' ಎಂದು ಬಳಿಗಾರ್ ತಿಳಿಸಿದರು.

ಕರ್ನಾಟಕ ವಿಕಾಸ ರಂಗದ ಅಧ್ಯಕ್ಷ ವ.ಚ. ಚನ್ನೇಗೌಡ, '80ರ ದಶಕದಲ್ಲಿ ನಡೆದ ಗೋಕಾಕ್ ಚಳವಳಿ, ಸರೋಜಿನಿ ಮಹಿಷಿ ವರದಿ ಜಾರಿ ಚಳವಳಿ, ಶಾಸ್ತ್ರೀಯ ಭಾಷಾ ಸ್ಥಾನಮಾನಕ್ಕಾಗಿ ನಡೆದ ಹೋರಾಟ ಸೇರಿದಂತೆ ವಿವಿಧ ಚಳವಳಿಯಲ್ಲಿ ಶೇಷಗಿರಿರಾವ್ ಭಾಗವಹಿಸಿದ್ದರು. ಕನ್ನಡಕ್ಕೆ ಧಕ್ಕೆ ಬಂದಾಗ ಅವರು ಸೆಟೆದು ನಿಲ್ಲುತ್ತಿದ್ದರು' ಎಂದು ಅವರು ಹೇಳಿದರು.

ಸಂಶೋಧಕ ಆರ್. ಶೇಷಶಾಸ್ತ್ರಿ, 'ಶೇಷಗಿರಿ ರಾವ್ ಅವರು ಕನ್ನಡ ವಿಮರ್ಶಾ ಕ್ಷೇತ್ರದ ದೈತ್ಯಶಕ್ತಿ. ವಿಮರ್ಶಾ ಕ್ಷೇತ್ರದಲ್ಲಿ ಅವರು ಮಾಡಿರುವ ಕೆಲಸ ಅವಿಸ್ಮರಣೀಯ' ಎಂದು ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ನಿಧನ ವಾರ್ತೆ

ಪ್ರೊ.ಬಿ.ಸಿ.ರಾಜಣ್ಣ



ಬೆಂಗಳೂರು: ಯೂನಿವರ್ಸಿಟಿ ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜಿನ (ಯುವಿಸಿಇ) ನಿವೃತ್ತ ಪ್ರಾಂಶುಪಾಲ ಪ್ರೊ.ಬಿ.ಸಿ. ರಾಜಣ್ಣ (98) ಮಂಗಳವಾರ ರಾತ್ರಿ ನಿಧನರಾದರು.

ಅವರಿಗೆ ಪತ್ನಿ, ಪುತ್ರ, ಪುತ್ರಿ ಇದ್ದಾರೆ. ಹೆಬ್ಬಾಳದ ಸಾರ್ವಜನಿಕ ಸ್ಮಶಾನದಲ್ಲಿ ಅಂತ್ಯಕ್ರಿಯೆ ಬುಧವಾರ ನಡೆಯಿತು. ಯುವಿಸಿಇಯಿಂದ ನಿವೃತ್ತಿಯಾದ ನಂತರ ಬೆಂಗಳೂರಿನ ಅಂಬೇಡ್ಕರ್ ಎಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲರಾಗಿಯೂ ಅವರು ಕಾರ್ಯನಿರ್ವಹಿಸಿದ್ದರು.

ಬೆಂಗಳೂರಿನ ವಸಂತ ನಗರದ ಕುಂಚಿಟಿಗರ ಸಾರ್ವಜನಿಕ ವಿದ್ಯಾರ್ಥಿ ನಿಲಯದ ಅಧ್ಯಕ್ಷರಾಗಿ 15 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದ ಅವರು, ಸಹಸ್ರಾರು ಬಡ ಹಿಂದುಳಿದ ಗ್ರಾಮೀಣ ವಿದ್ಯಾರ್ಥಿಗಳಿಗೆ ಉಚಿತ ವಿದ್ಯಾರ್ಥಿನಿಲಯ ವ್ಯವಸ್ಥೆ ಕಲ್ಪಿಸಿದ್ದರು.

'ಭವೇಶಾನಂದರಿಗೂ ಮಠಕ್ಕೂ ಸಂಬಂಧವಿಲ್ಲ'

ಬೆಂಗಳೂರು: 'ಹಿಜಾಬ್ ವಿವಾದ ಕುರಿತು ಹೇಳಿಕೆ ನೀಡಿರುವ ಕಾರವಾರದ ಶ್ರೀರಾಮಕೃಷ್ಣ ಆಶ್ರಮದ ಭವೇಶಾನಂದ ಸ್ವಾಮೀಜಿಗೂ ಕೋಲ್ಕತ್ತದಲ್ಲಿರುವ ಶ್ರೀರಾಮಕೃಷ್ಣ ಮಠ ಮತ್ತು ಮಿಷನ್‌ಗೂ ಯಾವುದೇ ಸಂಬಂಧವಿಲ್ಲ' ಎಂದು ಬಸವನಗುಡಿಯ ರಾಮಕೃಷ್ಣ ಮಠದ ಅಧ್ಯಕ್ಷ ಸ್ವಾಮಿ ನಿತ್ಯಸ್ಥಾನಂದಜೀ ಮಹಾರಾಜ್ ಹೇಳಿದ್ದಾರೆ.

'ಕಾರವಾರದ ರಾಮಕೃಷ್ಣ ಆಶ್ರಮ ಒಂದು ಸ್ವತಂತ್ರ ಸಂಸ್ಥೆ. ಭವೇಶಾನಂದ ಸ್ವಾಮೀಜಿ ರಾಮಕೃಷ್ಣ ಮಠ ಮತ್ತು ಮಿಷನ್‌ಗೆ ಸೇರಿದವರಲ್ಲ. ಹಾಗಾಗಿ ಅವರ ಹೇಳಿಕೆಗಳನ್ನು ರಾಮಕೃಷ್ಣ ಮಠ ಮತ್ತು ಮಿಷನ್‌ನ ಹೇಳಿಕೆ ಅಥವಾ ನಿಲುವು ಎಂದು ಭಾವಿಸಬಾರದು' ಎಂದೂ ತಿಳಿಸಿದ್ದಾರೆ.

ಡಿಎನ್‌ಎಲ್‌ಎ: 52 ಉಗ್ರರು ಶರಣು

ಗುವಾಹಟಿ (ಪಿಟಿಐ): ದಿಮ್ಸಾ ನ್ಯಾಷನಲ್ ಲಿಬರೇಷನ್ ಆರ್ಮಿ (ಡಿಎನ್‌ಎಲ್‌ಎ) ಸಂಘಟನೆಗೆ ನಾಲ್ವರು ಮಹಿಳೆಯರು ಸೇರಿದಂತೆ 52 ಉಗ್ರರು ಶರಣಾಗಿದ್ದು, ತಮ್ಮ ಬಳಿಯಿದ್ದ ಶಸ್ತ್ರಾಸ್ತ್ರಗಳನ್ನು ಅಸ್ಸಾಂನ ಕರ್ಬಿ ಆಂಗ್ಲಾಂಗ್ ಜಿಲ್ಲಾಡಳಿತಕ್ಕೆ ಒಪ್ಪಿಸಿದ್ದಾರೆ ಎಂದು ಬುಧವಾರ ಪೊಲೀಸರು ತಿಳಿಸಿದರು.

ಕರ್ನಾಟಕ ಸರ್ಕಾರ
ತೋಟಗಾರಿಕೆ ಇಲಾಖೆ
ಕರ್ನಾಟಕ ರಾಜ್ಯ ತೋಟಗಾರಿಕೆ ಮಿಷನ್ ಏಜೆನ್ಸಿ (ರಿ)
ಮಿಷನ್ ನಿರ್ದೇಶಕರ ಕಛೇರಿ, ಲಾಲ್‌ಬಾಗ್, ಬೆಂಗಳೂರು–560004 ದೂ.: 080–26577304
ಸಂಖ್ಯೆ: ಮಿನಿ/ಕರಾತೋಮಿಏ/ಕಾನಿ/ಏನಿ1/24/2021–22 ದಿನಾಂಕ: 07.02.2022
ಇ–ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ರೂಪದಲ್ಲಿ ಮಾತ್ರ)
ಕರ್ನಾಟಕ ರಾಜ್ಯ ತೋಟಗಾರಿಕೆ ಮಿಷನ್ ಏಜೆನ್ಸಿ ಕಛೇರಿಗೆ ಹೊರಗುತ್ತಿಗೆ ಆಧಾರದ ಮೇಲೆ ಎರಡು ವರ್ಷಗಳ ಕಾಲ 2022–23, 2023–24ನೇ ಸಾಲಿನ ಮಾನವ ಸಂಪನ್ಮೂಲವನ್ನು ಒದಗಿಸಲು ಏಜೆನ್ಸಿಯನ್ನು ಆಯ್ಕೆ ಮಾಡಲು ಉದ್ದೇಶಿಸಿದ್ದು, ಅರ್ಹ ನೋಂದಾಯಿತ ಸಂಸ್ಥೆಗಳಿಂದ e-procurement ಟೆಂಡರ್‌ಗಳನ್ನು ಆಹ್ವಾನಿಸಿದೆ. ವೆಬ್‌ಸೈಟ್ ಮೂಲಕ ಟೆಂಡರ್ ದಾಖಲಾತಿಗಳನ್ನು ದಿನಾಂಕ: 08.02.2022 ರಿಂದ 09.03.2022 ಸಾಯಂಕಾಲ 5.00 ಗಂಟೆಯೊಳಗೆ ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ http://eproc.karnataka.gov.in ನಲ್ಲಿ ಪಡೆಯಬಹುದಾಗಿರುತ್ತದೆ.
ಸಹಿ/– ಕಾರ್ಯನಿರ್ವಾಹಕ ನಿರ್ದೇಶಕರು, ಕ.ರಾ.ತೋ.ಮಿ.ಏ., ಬೆಂಗಳೂರು
ವಾಸಾಸಂಇ/ಬೆಂ.ನ/ಶಿರಡಿಸಾಯಿ/3413/2021–22
ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.
ಸಂ: ಬೆಂಅಪ್ರಾ/ಕಾನಿಅ/ವಿದ್ಯುತ್/ ಟೆಂ–299/2021–22 ದಿನಾಂಕ: 14.02.2022
ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಇಲ್ಲಿ ಎಂಟರ್‌ಪ್ರೈಸ್ ರಿಸಾಲ್ವ್ ಪ್ಲಾನಿಂಗ್ (ಇಆರ್‌ಪಿ) ಸಲ್ಯೂಷನ್ ಅನುಷ್ಠಾನಕ್ಕಾಗಿ ಅನುಷ್ಠಾನ ಏಜೆನ್ಸಿಯ ಆಯ್ಕೆಗಾಗಿ ಬೆಂಅಪ್ರಾ ಅಲ್ಪಾವಧಿ ಟೆಂಡರುಗಳನ್ನು ಆಹ್ವಾನಿಸಿದೆ.
ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಸ್ತಾವೇಜನ್ನು ಸಲ್ಲಿಸುವ ಅವಧಿ: 16.02.2022 ರಿಂದ (2) ಬಿಡ್ ಪೂರ್ವ ವಿಚಾರಣೆಗಳನ್ನು ಸ್ವೀಕರಿಸುವ ಕಡೆಯ ದಿನಾಂಕ ಮತ್ತು ಸಮಯ: 22.02.2022, 11:00 ಗಂಟೆಗೆ. (3) ಬಿಡ್ ಪೂರ್ವ ಸಭೆ ದಿನಾಂಕ ಮತ್ತು ಸಮಯ: 23.02.2022, 15:30 ಗಂಟೆಗೆ. (4) ಅಗತ್ಯ ಕಾಗದಪತ್ರಗಳ ಜೊತೆಗೆ ಬಿಡ್ ಸಲ್ಲಿಸುವ ಕಡೆಯ ದಿನಾಂಕ ಮತ್ತು ಸಮಯ: 17.03.2022, 17:00 ಗಂಟೆಗೆ. (5) ಮೊದಲನೇ ಲಕೋಟೆ (ತಾಂತ್ರಿಕ ಬಿಡ್) ತೆರೆಯುವ ದಿನಾಂಕ ಮತ್ತು ಸಮಯ: 19.03.2022, 17:00 ಗಂಟೆಗೆ.
ಹೆಚ್ಚಿನ ವಿವರಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: http://www.eproc.karnataka.gov.in ನೋಡಿ ಅಥವಾ ಕಾರ್ಯನಿರ್ವಾಹಕ ಅಭಿಯಂತರರು (ವಿದ್ಯುತ್) ಇವರ ಕಚೇರಿ, ಬೆಂಅಪ್ರಾ, ಟಿ. ಚೌಡಯ್ಯ ರಸ್ತೆ, ಕುಮಾರಪಾರ್ಕ್ ಪಶ್ಚಿಮ, ಬೆಂಗಳೂರು ಇಲ್ಲಿ ಸಂಪರ್ಕಿಸಿ. ಸಂಪರ್ಕ ಸಂ: +919845630164.
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು (ವಿ), ವಿದ್ಯುತ್ ವಿಭಾಗ, ಬೆಂಅಪ್ರಾ, ಬೆಂಗಳೂರು
BDA/PRO/TN/22/2021-22

ನಗರಸಭಾ ಕಾರ್ಯಾಲಯ
ರಾಬರ್ಟ್‌ಸನ್‌ಪೇಟೆ, ಕೆಜಿಎಫ್
ದೂರವಾಣಿ ಸಂ: 08153–260256,
E-mail: itstaff_ulb_robertsonpet@yahoo.com
ಸಂಖ್ಯೆ: ನಸರಾ/ಸ.ಅ/ಇ–ಪ್ರೊಕ್/ಸಿಆರ್/02/2021–22 ದಿನಾಂಕ:01.02.2022
ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ) (ದ್ವಿ–ಲಕೋಟೆ ಪದ್ಧತಿ)
ರಾಬರ್ಟ್‌ಸನ್‌ಪೇಟೆ ನಗರಸಭಾ ವ್ಯಾಪ್ತಿಯಲ್ಲಿ ಎಸ್.ಎಫ್.ಸಿ ವಿಶೇಷ ಅನುದಾನದ ಅಡಿಯಲ್ಲಿ ಹಾಗೂ ಡೆ ನಲ್ಮ್ ಅನುದಾನದ ಕೆಲಸಗಳಿಗಾಗಿ ಅರ್ಹ ನೋಂದಾಯಿತ ಸಿವಿಲ್ ಗುತ್ತಿಗೆದಾರರು/ಏಜೆನ್ಸಿಗಳಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕ ಅಧಿನಿಯಮ (ಕೆ.ಟಿ.ಪಿ.ಪಿ–1999 ನಿಯಮಗಳು 2000) ಅನ್ವಯ ಐಟಂವಾರು ದರಗಳ ದ್ವಿ–ಲಕೋಟೆ ಪದ್ಧತಿ ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ. ಗುತ್ತಿಗೆದಾರರು ಟೆಂಡರ್‌ಗಳನ್ನು ದಿನಾಂಕ: 17.02.2022ರ ಅಪರಾಹ್ನ 5.00 (17.00) ಗಂಟೆಒಳಗೆ ಸಲ್ಲಿಸತಕ್ಕದ್ದು, ಸದರಿ ಟೆಂಡರ್‌ನ ತಾಂತ್ರಿಕ ಬಿಡ್‌ನ್ನು ದಿನಾಂಕ: 18.02.2022 ರಂದು ಸಂಜೆ 5.00 (17.00) ಗಂಟೆಗೆ ತೆರೆಯಲಾಗುವುದು. ಸದರಿ ಟೆಂಡರ್‌ನ ಆರ್ಥಿಕ ಬಿಡ್‌ನ್ನು ದಿನಾಂಕ: 19.02.2022 ರಂದು ಸಂಜೆ 5.00 ಗಂಟೆಗೆ (17.00) (ಸಾಧ್ಯವಾದಲ್ಲಿ) ತೆರೆಯಲಾಗುವುದು.
ಆಯಾ ಕಾಮಗಾರಿಗಳಿಗೆ ಅನ್ವಯಿಸುವ ಟೆಂಡರ್ ದಾಸ್ತಾವೇಜಿನ ನಿಯಮಾವಳಿಗಳಿಗೆ ಒಳಪಟ್ಟಿರುತ್ತದೆ. ಹೆಚ್ಚಿನ ಮಾಹಿತಿಗಳನ್ನು ತಾಂತ್ರಿಕ ಶಾಖೆ ನಗರಸಭೆ ರಾಬರ್ಟ್‌ಸನ್‌ಪೇಟೆ ರವರನ್ನು ಸಂಪರ್ಕಿಸಿ ಪಡೆಯಬಹುದು. ದೂರವಾಣಿ ಸಂ: 08153–260256.
ಕಾಮಗಾರಿಗಳ ವಿವರ: (1) DMA/2021-22/OW/WORK_INDENT121372. ಅಂದಾಜು ಮೊತ್ತ: ರೂ. 178.36 ಲಕ್ಷಗಳು. ಇ.ಎಂ.ಡಿ ಮೊತ್ತ: ರೂ. 2,68,000/-. ಅನ್ವಯಿಸುವ ದಸ್ತಾವೇಜು: KW-4. ಗುತ್ತಿಗೆದಾರರ ದರ್ಜೆ: Class-III and above. (2) CMC/KGF/AE/TND/02/2021-22. ಅಂದಾಜು ಮೊತ್ತ: ರೂ. 19.87 ಲಕ್ಷಗಳು. ಇ.ಎಂ.ಡಿ ಮೊತ್ತ: ರೂ. 50,000/-. ಅನ್ವಯಿಸುವ ದಸ್ತಾವೇಜು: Sevice Document. ಗುತ್ತಿಗೆದಾರರ ದರ್ಜೆ: Approved Agency.
ಸೂಚನೆ:–ಮೇಲ್ಕಾಣಿಸಿದ ದಿನಾಂಕಗಳಲ್ಲಿ ಸಾರ್ವತ್ರಿಕ ರಜೆ ಎಂದು ಘೋಷಣೆ ಮಾಡಿದ್ದಲ್ಲಿ ರಜಾದಿನದ ಮುಂದಿನ ಕೆಲಸದ ದಿನಾಂಕವನ್ನು ಪರಿಗಣಿಸಿಕೊಳ್ಳತಕ್ಕದ್ದು, ಹಾಗೂ ಮೇಲ್ಕಂಡ ಟೆಂಡರ್‌ಗಳಿಗೆ ನಿಗಧಿಪಡಿಸಿದ ಸಮಯದಲ್ಲಿ ಯಾರೂ ಭಾಗವಹಿಸದಿದ್ದ ಸಂದರ್ಭದಲ್ಲಿ ಏಳು ದಿನಗಳ ಅಧಿಕ ಅವಧಿಯನ್ನು ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ಅಳವಡಿಸಿದೆ. ತಿದ್ದುಪಡಿ ಪ್ರಕಟಣೆಗಳು ಇದ್ದಲ್ಲಿ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.
ಸಹಿ/- (ಡಾ. ವಳ್ಳಲ್ ಮುನಿಸ್ವಾಮಿ) ಅಧ್ಯಕ್ಷರು ನಗರಸಭೆ ರಾಬರ್ಟ್‌ಸನ್‌ಪೇಟೆ
ಸಹಿ/- (ಶ್ರೀಮತಿ ದೇವಿ) ಉಪಾಧ್ಯಕ್ಷರು ನಗರಸಭೆ ರಾಬರ್ಟ್‌ಸನ್‌ಪೇಟೆ
ಸಹಿ/- (ಶ್ರೀ ಜಿ. ನವೀನ ಚಂದ್ರ) ಪೌರಾಯುಕ್ತರು ನಗರಸಭೆ ರಾಬರ್ಟ್‌ಸನ್‌ಪೇಟೆ
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ379/ಎಂ.ಸಿ.ಎ/2021–22
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ, ಕರ್ನಾಟಕ
ನಂ. 1/14, 2ನೇ ಮಹಡಿ, ಸಿಲ್ವರ್ ಜ್ಯೂಬಿಲಿ ಬ್ಲಾಕ್, ಯುನಿಟಿ ಬಿಲ್ಡಿಂಗ್, ಸಿ.ಎಸ್.ಐ ಕಾಂಪೌಂಡ್, 3ನೇ ಕ್ರಾಸ್, ಮಿಷನ್ ರಸ್ತೆ, ಬೆಂಗಳೂರು–560027.
ದೂರವಾಣಿ ನಂ.: 080–22249798/22249799
ಸಂಖ್ಯೆ: ರೇರಾ/ಮಾಧ್ಯಮ/10/2021–22 ದಿನಾಂಕ : 16.02.2022
ಅಧಿಸೂಚನೆ
ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದಲ್ಲಿ ಮೂರು ಜನ ತೀರ್ಪು ಬರಹಗಾರರನ್ನು (ಜಡ್ಜ್‌ಮೆಂಟ್ ರೈಟರ್) ಗುತ್ತಿಗೆಯಾಧರಿಸಿ ನೇಮಿಸಿಕೊಳ್ಳಲು ಪ್ರಾಧಿಕಾರವು ಉದ್ದೇಶಿಸಿದೆ.
ಷರತ್ತು ಮತ್ತು ನಿಬಂಧನೆಗಳು : (1) ಉಚ್ಚ ನ್ಯಾಯಾಲಯಗಳಲ್ಲಿ, ಜಿಲ್ಲಾ ನ್ಯಾಯಾಲಯಗಳಲ್ಲಿ, ಅಧೀನ ನ್ಯಾಯಾಲಯಗಳಲ್ಲಿ ಜಡ್ಜ್‌ಮೆಂಟ್ ರೈಟರ್ ಆಗಿ ಕಾರ್ಯ ನಿರ್ವಹಿಸಿ, ನಿವೃತ್ತಿ ಅಥವಾ ಸ್ವಯಂ ನಿವೃತ್ತಿಯಾಗಿರುವವರು ಮಾತ್ರ ಅರ್ಜಿ ಸಲ್ಲಿಸುವುದು. (2) ಕನಿಷ್ಠ 10 ವರ್ಷಗಳ ಕಾಲ ಜಡ್ಜ್‌ಮೆಂಟ್ ರೈಟರ್ ಆಗಿ ಕಾರ್ಯ ನಿರ್ವಹಿಸಿರಬೇಕು. (3) 65 ವರ್ಷ ಮೀರಿರಬಾರದು ಹಾಗೂ ಆರೋಗ್ಯವಂತರಾಗಿರತಕ್ಕದ್ದು. (4) ಇಂಗ್ಲೀಷ್ ಭಾಷೆಯ ಶೀಘ್ರಲಿಪಿಯಲ್ಲಿ ಪರಿಣಿತರಾಗಿರತಕ್ಕದ್ದು. ಕನ್ನಡ ಶೀಘ್ರಲಿಪಿಯನ್ನು ಬಲ್ಲವರಿಗೆ ಆದ್ಯತೆ ನೀಡಲಾಗುವುದು. (5) ಕನ್ನಡ ಹಾಗೂ ಇಂಗ್ಲೀಷ್ ಭಾಷೆಗಳಲ್ಲಿ ನೈಪುಣ್ಯತೆ ಹೊಂದಿರಬೇಕು. (6) ಸಮಿತಿಯು ಅಭ್ಯರ್ಥಿಗಳ ಪ್ರಾವೀಣ್ಯತೆ ಮತ್ತು ಕೌಶಲ್ಯವನ್ನು ಪರೀಕ್ಷಿಸುವ ಮೂಲಕ ಆಯ್ಕೆ ಮಾಡಲಾಗುವುದು. (7) ಅರ್ಜಿ ಸಲ್ಲಿಸುವ ಆಸಕ್ತರು, ಸ್ವವಿವರಗಳಾದ ಹೆಸರು, ಭಾವ ಚಿತ್ರ, ಅಂಚೆ ವಿಳಾಸ, ಮೊಬೈಲ್ ನಂಬರ್, ಇ–ಮೇಲ್, ವಿವರಗಳೊಂದಿಗೆ ಸಲ್ಲಿಸಬೇಕಾದ ದಾಖಲೆಗಳು : ಜನ್ಮ ದಿನಾಂಕದ ದಾಖಲಾತಿ, ಸೇವೆಯಿಂದ ಬಿಡುಗಡೆ ಹೊಂದಿದ ಪತ್ರ, ಅನುಭವ ಪತ್ರ. (8) ಹೆಚ್ಚಿನ ಮಾಹಿತಿಗಾಗಿ ರೇರಾ ವೆಬ್‌ಪೋರ್ಟಲ್ rera.karnataka.gov.in ನ್ನು ವೀಕ್ಷಿಸಬಹುದು. (9) ಸದರಿ ಗುತ್ತಿಗೆ ನೇಮಕಾತಿಯು ತಾತ್ಕಾಲಿಕವಾಗಿದ್ದು, ಗುತ್ತಿಗೆ ಅವಧಿಯನ್ನು ಮುಂದುವರೆಸುವ ಅಥವಾ ರದ್ದುಪಡಿಸುವ ಅಧಿಕಾರವನ್ನು ಪ್ರಾಧಿಕಾರ ಹೊಂದಿರುತ್ತದೆ. (10) ಅಧಿಸೂಚನೆಯನ್ನು ಒಪ್ಪುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಈ ಪ್ರಾಧಿಕಾರ ಹೊಂದಿರುತ್ತದೆ. (11) ಅರ್ಜಿ ಸಲ್ಲಿಸುವವರು ನೋಂದಾಯಿತ ಅಂಚೆ ಮೂಲಕ ಅಥವಾ ಖುದ್ದಾಗಿ ದಿನಾಂಕ : 23.02.2022ರ ಸಂಜೆ 5.00 ಘಂಟೆಯೊಳಗೆ ಅರ್ಜಿ ಸಲ್ಲಿಸಬಹುದು, ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
ಲಕೋಟೆಯ ಮೇಲೆ "ಜಡ್ಜ್‌ಮೆಂಟ್ ರೈಟರ್ ಹುದ್ದೆಗಾಗಿ ಅರ್ಜಿ" ಎಂದು ಸ್ಪಷ್ಟವಾಗಿ ನಮೂದಿಸಬೇಕು.
ಸಹಿ/– ಕಾರ್ಯದರ್ಶಿ, ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ ಬೆಂಗಳೂರು.
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಸಹಾಯಕ ಪ್ರಾಧ್ಯಾಪಕರ ಹುದ್ದೆ ಹಾಗೂ ಕೆಎಸ್‌ಆರ್‌ಪಿ-ಐಆರ್‌ಬಿ ಹುದ್ದೆಗಳಿಗಾಗಿ ಸ್ಪರ್ಧಾತ್ಮಕ ಪರೀಕ್ಷೆ

ಕೆಎಸ್‌ಐಎಸ್‌ಎಫ್ ಸಬ್‌ಇನ್‌ಸ್ಪೆಕ್ಟರ್ ಹುದ್ದೆಗಾಗಿ ಸ್ಪರ್ಧಾತ್ಮಕ ಪರೀಕ್ಷೆ

ಆಕರ ಗ್ರಂಥಗಳ ಅಧ್ಯಯನಕ್ಕಿರಲಿ ಆದ್ಯತೆ

ಕೆ. ಎಚ್. ಮಂಜುನಾಥ

ರಾಜ್ಯ ಪೊಲೀಸ್ ಇಲಾಖೆಯ ಕರ್ನಾಟಕ ಕೈಗಾರಿಕಾ ಭದ್ರತಾ ಪಡೆಯಲ್ಲಿ (ಕೆಎಸ್‌ಐಎಸ್‌ಎಫ್) ಖಾಲಿಯಿರುವ 63 ಸಬ್ ಇನ್‌ಸ್ಪೆಕ್ಟರ್ ಹುದ್ದೆಗಳ ನೇಮಕಾತಿಗಾಗಿ ಸ್ಪರ್ಧಾತ್ಮಕ ಪರೀಕ್ಷೆ ನಡೆಸುತ್ತಿದ್ದು, ಈ ಸಂಬಂಧ ಇತ್ತೀಚೆಗೆ ಅಧಿಸೂಚನೆ ಹೊರಡಿಸಿದೆ. ಸ್ಪರ್ಧಾತ್ಮಕ ಪರೀಕ್ಷೆಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕು. ಅರ್ಜಿ ಸಲ್ಲಿಕೆಗೆ ಕೊನೆ ದಿನ ಮಾರ್ಚ್ 3.

> ದಿನಪತ್ರಿಕೆಗಳಲ್ಲಿನ ಪ್ರಚಲಿತ ವಿದ್ಯಮಾನಗಳು, ವಿಷಯಾಧಾರಿತ ಕೃತಿಗಳ ಪರಾಮರ್ಶೆಯೊಂದಿಗೆ ಕೆಎಸ್‌ಐಎಸ್‌ಎಫ್ ಸಬ್‌ಇನ್‌ಸ್ಪೆಕ್ಟರ್ ಹುದ್ದೆಯ ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿ ನಡೆಸಬೇಕು.

ದೇಹದಾರ್ಢ್ಯ ಪರೀಕ್ಷೆ ಮತ್ತು ಲಿಖಿತ ಪರೀಕ್ಷೆಗಳ ಮೂಲಕ ಆಯ್ಕೆ ನಡೆಯುತ್ತದೆ. ದೇಹದಾರ್ಢ್ಯ ಪರೀಕ್ಷೆಯಲ್ಲಿ ಯಶಸ್ವಿಯಾದ ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆ ನಡೆಸಲಾಗುತ್ತದೆ.

ಪರೀಕ್ಷೆ ಸ್ವರೂಪ

ಈ ಪರೀಕ್ಷೆಯಲ್ಲಿ ಪದವಿ ತರಗತಿ ಹಂತದ ವಿಷಯಗಳನ್ನು ಒಳಗೊಂಡ ಎರಡು ಪ್ರಶ್ನೆ ಪತ್ರಿಕೆಗಳಿರುತ್ತವೆ.

ಪತ್ರಿಕೆ-1: ಈ ಪತ್ರಿಕೆಯಲ್ಲಿ ಎರಡು ಭಾಗಗಳಿವೆ. ಮೊದಲ ಭಾಗದಲ್ಲಿ ಕನ್ನಡ ಅಥವಾ ಇಂಗ್ಲಿಷ್‌ನಲ್ಲಿ ಪ್ರಬಂಧ ರಚನೆ ಇರುತ್ತದೆ. ಇದಕ್ಕೆ 30 ಅಂಕಗಳು. ಎರಡನೇ ಭಾಗದಲ್ಲಿ ಕನ್ನಡದಿಂದ ಇಂಗ್ಲಿಷ್ ಹಾಗೂ ಇಂಗ್ಲಿಷ್‌ನಿಂದ ಕನ್ನಡಕ್ಕೆ ಭಾಷಾಂತರವಿರುತ್ತದೆ. ಇದಕ್ಕೆ 20 ಅಂಕಗಳು. ಒಟ್ಟು 50 ಅಂಕಗಳು. ಪರೀಕ್ಷೆಯ ಅವಧಿ ಒಂದು ಗಂಟೆ. ಇದರಲ್ಲಿ ಕನಿಷ್ಠ ಅಂಕಗಳು ಇರುವುದಿಲ್ಲ.

ಪತ್ರಿಕೆ-2: ಈ ಪತ್ರಿಕೆಯಲ್ಲಿ ಸಾಮಾನ್ಯ ಅಧ್ಯಯನ ವಿಭಾಗದಲ್ಲಿ, ಎ)ಸಾಮಾನ್ಯ ಜ್ಞಾನ ಬಿ) ವಿಜ್ಞಾನ, ಸಿ) ಭೂಗೋಳ, ಡಿ)ಆಧುನಿಕ ಭಾರತೀಯ ಇತಿಹಾಸ, ಇ)ಸ್ವಾತಂತ್ರ್ಯ ಚಳವಳಿ ಮತ್ತು ಎಫ್) ಭಾರತೀಯ ಸಂವಿಧಾನದ ಮೂಲಭೂತ ಹಕ್ಕುಗಳು ಮತ್ತು ನಿರ್ದೇಶನಾತ್ಮಕ ತತ್ವಗಳು–ಈ ವಿಷಯಗಳ ಪ್ರಶ್ನೆಗಳಿರುತ್ತವೆ

ಸಾಮಾನ್ಯ ಬೌದ್ಧಿಕ ಸಾಮರ್ಥ್ಯ ವಿಭಾಗದಲ್ಲಿ ಎ)ಗಣನಾಕೌಶಲ, ಬಿ)ಪ್ರಾದೇಶಿಕ ಮನ್ನಣೆ ಕೌಶಲ್ಯ ಗ್ರಹಿಸುವಿಕೆ, ಸಿ) ತೀರ್ಮಾನ ಡಿ)ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯ ಮತ್ತು ನೈತಿಕ ಶಿಕ್ಷಣ ವಿಷಯಗಳ ಪ್ರಶ್ನೆಗಳಿರುತ್ತವೆ.

ಇದು ಬಹು ಆಯ್ಕೆ(Multiple Choice), ವಸ್ತುನಿಷ್ಠ (objective) ಮಾದರಿಯದಾಗಿದ್ದು, 150 ಅಂಕಗಳ, ಒಂದೂವರೆ ಗಂಟೆ ಅವಧಿಯ ಪರೀಕ್ಷೆ. ಪ್ರತಿ ತಪ್ಪು ಉತ್ತರಕ್ಕೆ ಅಂತಹುದೇ ಪ್ರಶ್ನೆಯ ಸರಿ ಉತ್ತರದ ಶೇ 25 (0.375) ರಷ್ಟು ಅಂಕಗಳನ್ನು ಕಳೆಯಲಾಗುತ್ತದೆ..

ಏನನ್ನು ಓದಬೇಕು?

ಪರೀಕ್ಷೆ ಬರೆಯುವವರು, ಇತಿಹಾಸ (ಕರ್ನಾಟಕ ಮತ್ತು ಭಾರತೀಯ ಸಾಂಸ್ಕೃತಿ ಇತಿಹಾಸ), ಭೂಗೋಳ, ಭಾರತೀಯ ಅರ್ಥ ಶಾಸ್ತ್ರ, ವಿಜ್ಞಾನ, ಬೌದ್ಧಿಕ ಸಾಮರ್ಥ್ಯ, ಕಂಪ್ಯೂಟರ್, ವಿಜ್ಞಾನ/ಮಾಹಿತಿ ತಂತ್ರಜ್ಞಾನ ಹಾಗೂ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್, ಪ್ರಚಲಿತ ವಿದ್ಯಮಾನಗಳು, ಸಾಮಾನ್ಯ ಜ್ಞಾನ- ಇಷ್ಟು ವಿಷಯಗಳನ್ನು ಓದಬೇಕು. ಎನ್‌ಸಿಇಆರ್‌ಟಿಯ 11 ಮತ್ತು 12ನೇ ತರಗತಿಯ ಇತಿಹಾಸ, ಸಂವಿಧಾನ, ವಿಜ್ಞಾನ ಮತ್ತು ಭಾರತೀಯ ಅರ್ಥಶಾಸ್ತ್ರಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಪರಾಮರ್ಶಿಸಬೇಕು.

ಪರೀಕ್ಷೆ ಹಾಗೂ ಅರ್ಜಿ ಸಲ್ಲಿಸುವ ಕುರಿತ ಹೆಚ್ಚಿನ ಮಾಹಿತಿಗೆ http://ksisfsi21.ksponline.co.in/ ಜಾಲತಾಣ ನೋಡಿ

(ನಿರ್ದೇಶಕರು, ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು)

ವಯೋಮಿತಿ, ಅರ್ಹತೆ

- ಪದವಿ ಅಥವಾ ತತ್ಸಮಾನ ಪದವಿ ಪೂರೈಸಿದ ಅಭ್ಯರ್ಥಿಗಳು ಈ ಪರೀಕ್ಷೆ ಬರೆಯಲು ಅರ್ಹರು.
- **ವಯೋಮಿತಿ:** ಕನಿಷ್ಠ ವಯೋಮಿತಿ 21 ವರ್ಷ. ಗರಿಷ್ಠ ವಯೋಮಿತಿ ಎಸ್.ಸಿ, ಎಸ್.ಟಿ ಹಾಗೂ ಇತರೆ ಒಬಿಸಿ ಅಭ್ಯರ್ಥಿಗಳಿಗೆ ಗರಿಷ್ಠ 28 ವರ್ಷಗಳು ಹಾಗೂ ಇತರೆ ವರ್ಗಕ್ಕೆ 26 ವರ್ಷಗಳು.
- ಸೇವಾನಿರತ ಅಭ್ಯರ್ಥಿಗಳಲ್ಲಿ ಎಸ್.ಸಿ ಮತ್ತು ಎಸ್.ಟಿ ಹಾಗೂ ಒಬಿಸಿ ಅಭ್ಯರ್ಥಿಗಳಿಗೆ 40 ವರ್ಷ ಹಾಗೂ ಇತರೆ ವರ್ಗದ ಅಭ್ಯರ್ಥಿಗಳಿಗೆ 35 ವರ್ಷ ಗರಿಷ್ಠ ವಯೋಮಿತಿ ಇದೆ. ಅರ್ಜಿಗೆ ಸಂಬಂಧಿಸಿದ ವಿಚಾರಕ್ಕೆ ಸಹಾಯವಾಣಿ 080-22943346ಗೆ ಸಂಪರ್ಕಿಸಬಹುದು.

ಪ್ರಜಾವಾಣಿ ನೋಡಿಯೊ
ಕೆಎಸ್‌ಐಎಸ್‌ಎಫ್ ಪರೀಕ್ಷೆಗೆ ಅಗತ್ಯವಿರುವ ಆಕರ ಗ್ರಂಥಗಳಿಗಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾದರಿ ಪ್ರಶ್ನೋತ್ತರಗಳು

ಸಾಮಾನ್ಯ ಜ್ಞಾನ

ಭಾಗ-9

ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ವಿಶೇಷ ಮೀಸಲು ಸಬ್-ಇನ್‌ಸ್ಪೆಕ್ಟರ್ (ಕೆಎಸ್‌ಆರ್‌ಪಿ ಮತ್ತು ಐಆರ್‌ಬಿ) ಹುದ್ದೆಗಳು ಹಾಗೂ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ನೇಮಕಾತಿಗಾಗಿ ಸ್ಪರ್ಧಾತ್ಮಕ ಪರೀಕ್ಷೆಗಳು ಶೀಘ್ರದಲ್ಲೇ ನಡೆಯಲಿವೆ. ಎರಡೂ ಪರೀಕ್ಷೆಗಳಲ್ಲಿರುವ 'ಸಾಮಾನ್ಯ ಜ್ಞಾನ' ವಿಷಯಕ್ಕೆ ಸಂಬಂಧಿಸಿದ ಮಾದರಿ ಪ್ರಶ್ನೋತ್ತರಗಳನ್ನು ಇಲ್ಲಿ ನೀಡಲಾಗಿದೆ.

1) ಇತ್ತೀಚೆಗೆ ನಿಧನರಾದ ಕನ್ನಡದ ಕಬೀರ ಎಂದೇ ಪ್ರಸಿದ್ಧರಾದ 'ಇಬ್ರಾಹಿಂ ಸುತಾರ' ಅವರು ಯಾವ ಜಿಲ್ಲೆಯವರು?

ಎ) ಬಾಗಲಕೋಟೆ ಜಿಲ್ಲೆ ಮಹಾಲಿಂಗಪುರದವರು
ಬಿ) ಬೀದರ್ ಔರಾದ್
ಸಿ) ಉತ್ತರ ಕನ್ನಡದ ಹಳಿಯಾಳದವರು
ಡಿ) ಚಿಕ್ಕಮಗಳೂರಿನ ಮೂಡಿಗೆರೆಯವರು.

ಉತ್ತರ: ಎ

2) ಕೇಂದ್ರ ಸರ್ಕಾರದ ನ್ಯಾಷನಲ್ ವಾಟರ್ ಮಿಷನ್ ಯೋಜನೆಯ 'ಕ್ಯಾಚ್ ದಿ ರೈನ್' ಅಡಿಯಲ್ಲಿ ದೇಶದಲ್ಲಿ ಅತಿಹೆಚ್ಚು ಕಾಮಗಾರಿಗಳನ್ನು ನಡೆಸಿರುವ ರಾಜ್ಯ ಯಾವುದು?

ಎ) ಉತ್ತರ ಪ್ರದೇಶ ಬಿ) ತೆಲಂಗಾಣ
ಸಿ) ಮಹಾರಾಷ್ಟ್ರ ಡಿ) ಕರ್ನಾಟಕ

ಉತ್ತರ: ಡಿ

3) ಜನವರಿ 26ರಂದು ದೆಹಲಿಯಲ್ಲಿ ನಡೆದ ಗಣರಾಜ್ಯೋತ್ಸವ ಪಥಸಂಚಲನದಲ್ಲಿ ಭಾಗವಹಿಸಿದ್ದ ಸ್ತಬ್ಧಚಿತ್ರಗಳ ವಿಜೇತರ ಪಟ್ಟಿಯಲ್ಲಿ ಉತ್ತರ ಪ್ರದೇಶ ಮೊದಲ ಸ್ಥಾನ ಪಡೆದರೆ, ದ್ವಿತೀಯ ಸ್ಥಾನ ಪಡೆದ ರಾಜ್ಯ ಯಾವುದು?

ಎ) ಪಶ್ಚಿಮ ಬಂಗಾಲ ಬಿ) ಕರ್ನಾಟಕ
ಸಿ) ಪಂಜಾಬ್ ಡಿ) ಕೇರಳ

ಉತ್ತರ: ಬಿ

4) ಈ ಕೆಳಗೆ ತಿಳಿಸಿರುವ ಯಾವ ಸಂಗೀತಗಾರರಿಗೆ ಪ್ರತಿಷ್ಠಿತ ಕಾಳಿದಾಸ ಸಮ್ಮಾನ್ ಪುರಸ್ಕಾರ ನೀಡಿ ಗೌರವಿಸಲಾಗಿದೆ?

1) ಪಂಡಿತ್ ಮಲ್ಲಿಕಾರ್ಜುನ ಮನಸೂರ
2) ಪಂಡಿತ್ ಕುಮಾರ ಗಂಧರ್ವ
3) ಪ್ರೊ. ಎಂ. ವೆಂಕಟೇಶ ಕುಮಾರ್
4) ಪಂಡಿತ್ ಪುಟ್ಟರಾಜ ಗವಾಯಿ

ಉತ್ತರ ಸಂಕೇತಗಳು

ಎ) 1, 2 ಮತ್ತು 4 ಬಿ) 1, 2 ಮತ್ತು 3
ಸಿ) 1, 2.3 ಮತ್ತು 4 ಡಿ) 2, 3, ಮತ್ತು 4

ಉತ್ತರ:ಸಿ

5) ಪಾಕ್ ಆಕ್ರಮಿತ ಕಾಶ್ಮೀರದಲ್ಲಿ 6ನೇ ಶತಮಾನದಲ್ಲಿ ಸ್ಥಾಪಿತವಾರುವ ಸರ್ವಜ್ಞ ಪೀಠವೆಂದೂ ಕರೆಯುವ ಶಾರದಾ ದೇವಸ್ಥಾನವನ್ನು ಹಾಳುಗೆಡವಲಾಗಿದೆ. ಅದೇ ಮಾದರಿಯ ನೂತನ ಶಾರದಾ ಪೀಠವನ್ನು ಎಲ್ಲಿ ಪುನರ್ ನಿರ್ಮಿಸಲಾಗುತ್ತಿದೆ?

ಎ) ಕಾಶ್ಮೀರದಲ್ಲಿರುವ ಕುಪ್ವಾರ ಜಿಲ್ಲೆಯ ತೀತ್ವಾಲ್ ಗ್ರಾಮದ ಬಳಿಯ ಕಿಶನ್‌ಗಂಗಾ ನದಿ ತೀರದಲ್ಲಿ
ಬಿ) ಕರ್ನಾಟಕದ ಚಿಕ್ಕಮಗಳೂರಿನ ಶೃಗೇರಿಯಲ್ಲಿ
ಸಿ) ಪಂಜಾಬ್‌ನ ಭಿಟಿಂಡಾದ ಜಲ್ವಾರ್ ಗ್ರಾಮದಲ್ಲಿ
ಡಿ) ಮೇಲಿನ ಎಲ್ಲಿಯೂ ಅಲ್ಲ

ಉತ್ತರ: ಎ

6) ಹರಿಸಿಂಗ್ ನಲ್ವಾ ಪ್ರತಿಮೆ ತೆರವು ಈ ಕೆಳಗಿನ ಯಾವ ದೇಶದಲ್ಲಿ ಭಾರಿ ಪ್ರತಿಭಟನೆಗೆ ಕಾರಣವಾಯ್ತು?

ಎ) ನೇಪಾಳ ಬಿ) ಪಾಕಿಸ್ತಾನ
ಸಿ) ಶ್ರೀಲಂಕಾ ಡಿ) ಬಾಂಗ್ಲಾದೇಶ

ಉತ್ತರ:ಬಿ

7) ಬೀಜಿಂಗ್‌ನಲ್ಲಿ ನಡೆದ ಚಳಿಗಾಲದ ಒಲಿಂಪಿಕ್ಸ್ ಕ್ರೀಡಾ ಕೂಟದಲ್ಲಿ ಭಾಗವಹಿಸಿದ ಏಕೈಕ ಭಾರತೀಯ ಯಾರು?

ಎ) ಆರಿಫ್ ಮೊಹಮ್ಮದ್ ಖಾನ್
ಬಿ) ಸಂಗೀತಾ ಸಿಂಗ್ ಬೋಪಟ್ಸಿ
ಸಿ) ಹರೀಶ ಬಿ ಜಿ
ಡಿ) ಜಗ್‌ಜೀತ್ ಸಿಂಗ್ ಮಾನ್

ಉತ್ತರ: ಎ

8) ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣವು 2031ರಲ್ಲಿ ನಿವೃತ್ತಿ ಆಗಲಿದೆ. ಇದನ್ನು ಈ ಕೆಳಗಿನ ಯಾವ ಸ್ಥಳದಲ್ಲಿ ಮುಳುಗಿಸಲಾಗುತ್ತದೆ?

ಎ) ಇಂದಿರಾ ಪಾಯಿಂಟ್
ಬಿ) ಪಾಯಿಂಟ್ ನೆಮೊ
ಸಿ) ಮರಿನಾ ಖಾರಿ
ಡಿ) ಮೇಲಿನ ಯಾವುದೂ ಅಲ್ಲ

ಉತ್ತರ: ಬಿ

ಮಾಹಿತಿ: Spardha Bharati UPSC ಯೂಟ್ಯೂಬ್ ಚಾನೆಲ್

ನಿಮಗಿದು ಗೊತ್ತೆ?

ಆಸ್ಟ್ರೇಲಿಯಾವನ್ನು ಯಾರು ಕಂಡುಹಿಡಿದರು?

ಆಸ್ಟ್ರೇಲಿಯಾ ವಿಶ್ವದ ಅತಿಚಿಕ್ಕ ಖಂಡ. ಆದರೆ ಅದು ಅತ್ಯಂತ ದೊಡ್ಡ ದ್ವೀಪ. ಅದರ ಒಟ್ಟು ವಿಸ್ತೀರ್ಣ ಸುಮಾರು 8 ಸಾವಿರ ಚ.ಕಿ.ಮೀ.

ದಕ್ಷಿಣ ಗೋಳಾರ್ಧದಲ್ಲಿ ಒಂದು ದೊಡ್ಡ ಖಂಡವಿದೆಯೆಂದು ಮಧ್ಯ ಯುಗದಲ್ಲಿ ಜನರು ಮಾತನಾಡಿಕೊಳ್ಳುತ್ತಿದ್ದರು. ಆದರೆ ಯಾರು ಅದನ್ನು ಕಂಡುಹಿಡಿದಿರಲಿಲ್ಲ. ಹಾಗಾಗಿ ಅದನ್ನು ಅಪರಿಚಿತ ಖಂಡವೆಂದು ಕರೆಯುತ್ತಿದ್ದರು. ಜನರಲ್ಲಿ ಆ ಖಂಡ ಹೇಗಿರಬಹುದು, ಅಲ್ಲಿ ಜನವಸತಿ ಇರಬಹುದೇ ಎಂಬುದನ್ನು ತಿಳಿಯುವ ಕುತೂಹಲವಿತ್ತು.

16ನೇ ಶತಮಾನದಲ್ಲಿ ಐರೋಪ್ಯ ದೇಶಗಳು ತಮ್ಮ ವಾಣಿಜ್ಯ ಸಂಬಂಧಗಳನ್ನು ವಿಸ್ತರಿಸಿಕೊಳ್ಳಲು ಹೊಸ ಪ್ರದೇಶಗಳನ್ನು ಹುಡುಕುತ್ತಿದ್ದವು. 1606ರಲ್ಲಿ ಡಚ್ಚರು, ಆಸ್ಟ್ರೇಲಿಯಾಕ್ಕೆ ಹೋದರು. ಆ ಖಂಡಕ್ಕೆ ಭೇಟಿ ಕೊಟ್ಟವರಲ್ಲಿ ಅವರೇ ಮೊದಲಿಗರು. ಅವರು ಡೈಫ್ ಕೆನ್ ಎಂಬ ಹಡಗಿನಲ್ಲಿ ಪ್ರಯಾಣಿಸಿದ್ದರು. ಉತ್ತರ ಆಸ್ಟ್ರೇಲಿಯಾ ತೀರದಾಚೆ. ಈ ಹಡಗನ್ನು ಲಂಗರು ಹಾಕಲಾಗಿತ್ತು. ಈ ಹಡಗಿನ ಕ್ಯಾಪ್ಟನ್ ವರ್ಗದಲ್ಲಿ ಕೆಲವರು ನೀರನ್ನು ಹುಡುಕುತ್ತಾ ತೀರ ಪ್ರದೇಶಕ್ಕೆ ಹೋದರು. ಆದರೆ ಅಲ್ಲಿದ್ದ ಕ್ರೂರ ಸ್ಥಳೀಯರು, ಅವರನ್ನು ಅಲ್ಲಿಂದ ಓಡಿಸಿದರು. ಅನಂತರ ಈ ಖಂಡದ ಇತರ ಯಾವ ಭಾಗವನ್ನು ಪರಿಶೋಧಿಸದೇ ಡೈಫ್‌ಕೆನ್ ನೌಕೆಯು ಅಲ್ಲಿಂದ ವಾಪಸಾಯಿತು.

1642ರಲ್ಲಿ ಡಚ್ ಆಡಳಿತ, ಕ್ಯಾಪ್ಟನ್ ಎಬೆಲ್ ಟಾಸ್ಮಾನ್ ಎಂಬಾತನನ್ನು ಈ ಖಂಡದ ಮತ್ತಷ್ಟು ಪರಿಶೋಧನೆಗಾಗಿ ಕಳಿಸಿಕೊಟ್ಟಿತು. ಆಸ್ಟ್ರೇಲಿಯಾದ ಉತ್ತರ ಕರಾವಳಿಯ ಬಗ್ಗೆ ಅವರು ಹೆಚ್ಚಿನ ಮಾಹಿತಿ ಸಂಗ್ರಹಿಸಿದರು. ಈಗಲೇ ಟಾಸ್ಮೇನಿಯಾ ಎಂದು ಕರೆಯಲಾಗುವ ದ್ವೀಪವನ್ನೂ ಟಾಸ್ಮಾನ್ ಪತ್ತೆ ಹಚ್ಚಿದರು. ನ್ಯೂಜಿಲೆಂಡ್ ದೇಶವನ್ನೂ ಇವರೇ ಕಂಡು ಹಿಡಿದಿದ್ದು.

1770ರಲ್ಲಿ ಇಂಗ್ಲೆಂಡ್‌ನ ಕ್ಯಾಪ್ಟನ್ ಜೇಮ್ಸ್ ಕುಕ್ ಆಸ್ಟ್ರೇಲಿಯಾದ ಪೂರ್ವ ಕರಾವಳಿಯನ್ನು ಪತ್ತೆ ಹಚ್ಚಿದ. ಈ ಪ್ರದೇಶಕ್ಕೆ ಅವನು ನ್ಯೂ ಸೌತ್ ವೇಲ್ಸ್ ಎಂದು ಹೆಸರಿಟ್ಟ. 1788ರಲ್ಲಿ ಸಿಡ್ನಿಯಲ್ಲಿ, ಇಂಗ್ಲಿಷರು ಮೊಟ್ಟ ಮೊದಲ ವಸಾಹತನ್ನು ಸ್ಥಾಪಿಸಿದರು. ಹಾಗಾದರೆ ಮೊದಲು ನೆಲೆಸಿದ್ದವರು ಯಾರು? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಸುಮಾರು 20 ಸಾವಿರ ವರ್ಷಗಳ ಹಿಂದೆ, ಈಗಿನ ಆಸ್ಟ್ರೇಲಿಯಾ ಎಂದು ಕರೆಯಲಾಗುವ ಖಂಡದಲ್ಲಿ ಟಾಸ್ಮೊನಾಯಿಡ್ ಎಂಬ ಜನ ವಾಸವಾಗಿದ್ದರು. ಅವರ ಮೈ ಬಣ್ಣ ಕಪ್ಪಗಿತ್ತು. ತಲೆಯಲ್ಲಿ ಗುಂಗುರು ಕೂದಲಿತ್ತು. ಈ ಜನಾಂಗದವರು ನ್ಯೂಗಿನಿಯಿಂದ ಹೋಗಿ, ಆಸ್ಟ್ರೇಲಿಯಾದಲ್ಲಿ ನೆಲೆಸಿದ್ದರು. ಅದೇ ಕಾಲದಲ್ಲೇ ದಕ್ಷಿಣ ಭಾರತದಿಂದ ಹೋಗಿದ್ದ ಆಸ್ಟ್ರಲಾಯಿಡ್ ಎಂಬ ಮತ್ತೊಂದು ಜನಾಂಗದವರು ಅಲ್ಲಿ ನೆಲೆಸಿದ್ದರು. ಈ ನಾಡಿಗಾಗಿ, ಎರಡೂ ಜನಾಂಗಗಳ ನಡುವೆ ಹೋರಾಟ ಪ್ರಾರಂಭವಾಯಿತು. ಈ ಹೋರಾಟದಲ್ಲಿ ಟಾಸ್ಮೊನಾಯಿಡ್ ಜನಾಂಗದವರನ್ನು ಹೊರಗಟ್ಟಲಾಯಿತು. ಅನಂತರ ಮತ್ತೊಂದು ದ್ವೀಪಕ್ಕೆ ಹೋಗಿ ನೆಲೆಸಿದರು. ಅದನ್ನೇ ಈಗ ನಾವು ಟಾಸ್ಮೇನಿಯಾ ಎಂದು ಕರೆಯುತ್ತೇವೆ. ಆಸ್ಟ್ರಲಾಯಿಡ್ ಜನಾಂಗದವರು ಅಲ್ಲೇ ಉಳಿದುಕೊಂಡರು. ಅವರೇ ಆಸ್ಟ್ರೇಲಿಯಾದ ಮೂಲ ನಿವಾಸಿಗಳು. ಇಂದು ಆಸ್ಟ್ರೇಲಿಯಾ ಅತ್ಯಂತ ಹೆಚ್ಚು ಅಭಿವೃದ್ಧಿಗೊಂಡಿರುವ ಅತ್ಯಾಧುನಿಕ ಖಂಡಗಳಲ್ಲಿ ಒಂದು. ಆ ಖಂಡದ ನಿವಾಸಿಗಳು ಸ್ವಾವಲಂಬಿಗಳಾಗಿದ್ದಾರೆ.

ಪ್ರಜಾವಾಣಿ ನೋಡಿಯೊ
'ಸಾಮಾನ್ಯಜ್ಞಾನ' ಕುರಿತ ಇನ್ನಷ್ಟು ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ಉದ್ಯೋಗ ವಾರ್ತೆ

ಯುಐಡಿಎಐನಲ್ಲಿ 11 ಹುದ್ದೆಗಳು

ಭಾರತೀಯ ವಿಶಿಷ್ಟ ಗುರುತು ಪ್ರಾಧಿಕಾರವು (ಯುಐಡಿಎಐ) ವಿವಿಧ ಹುದ್ದೆಗಳ ಭರ್ತಿಗೆ ಅರ್ಜಿಗಳನ್ನು ಆಹ್ವಾನಿಸಿದೆ. ಆಸಕ್ತ ಮತ್ತು ಅರ್ಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು.
ಹುದ್ದೆಗಳು: ಡೆಪ್ಯೂಟಿ ಡೈರೆಕ್ಟರ್, ಅಸಿಸ್ಟೆಂಟ್ ಡೈರೆಕ್ಟರ್
ವಿದ್ಯಾರ್ಹತೆ: ಹುದ್ದೆಗೆ ಅನುಗುಣವಾಗಿ ವಿದ್ಯಾರ್ಹತೆಯನ್ನು ನಿಗದಿ ಮಾಡಲಾಗಿದೆ.
ವಯೋಮಿತಿ: ಗರಿಷ್ಠ 56 ವರ್ಷ (ಜನವರಿ 24, 2022ಕ್ಕೆ ಅನುಗುಣವಾಗುವಂತೆ)
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಫೆ. 24, 2022
ಅರ್ಜಿ ಸಲ್ಲಿಕೆಯ ವಿಳಾಸ: Unique Identification Authority of India (UIDAI), Aadhaar Complex, NTI Layout, Tata Nagar, Kodigehalli, Technology Centre, Bengaluru - 560092.
ಹೆಚ್ಚಿನ ಮಾಹಿತಿಗೆ: uidai.gov.in

ಕ್ಯಾಬಿನೆಟ್ ಸೆಕ್ರೆಟರಿಯೇಟ್ ಡೆಪ್ಯುಟಿ ಫೀಲ್ಡ್

ಆಫೀಸರ್(ಗ್ರೂಪ್ ಬಿ, ನಾನ್ ಗೆಜೆಟೆಡ್) ಹುದ್ದೆಗಳ ನೇಮಕಾತಿಗಾಗಿ ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ.
ಅರ್ಜಿ ಸಲ್ಲಿಸಲು ಮಾ. 4 ಕೊನೆಯ ದಿನ.
ಅರ್ಹತೆ: ಅಭ್ಯರ್ಥಿಗಳಿಗೆ ನಿರ್ದಿಷ್ಟ ಭಾಷೆಯ ವಿಷಯದಲ್ಲಿ ಪದವಿ ಅಥವಾ ಎರಡು ವರ್ಷಗಳ ಡಿಪ್ಲೊಮಾ ಪಾಸಾಗಿರಬೇಕು. ಸ್ಥಳೀಯ ಭಾಷೆಯಲ್ಲಿ ಪ್ರವೀಣರಾಗಿರಬೇಕು. 21 ವರ್ಷದಿಂದ 30ರ ವಯೋಮಾನದವರು ಅರ್ಜಿ ಸಲ್ಲಿಸಬಹುದು.
ಅಭ್ಯರ್ಥಿಗಳು ಅರ್ಜಿಯನ್ನು ಅಗತ್ಯವಿರುವ ಪ್ರಮಾಣಪತ್ರಗಳು ಮತ್ತು ಎರಡು ಸ್ವಯಂ-ದೃಢೀಕರಿಸಿದ ಇತ್ತೀಚಿನ ಪಾಸ್‌ಪೋರ್ಟ್ ಗಾತ್ರದ ಬಣ್ಣದ ಭಾವಚಿತ್ರದೊಂದಿಗೆ ಪೋಸ್ಟ್ ಬ್ಯಾಗ್ ನಂ. 001, ಲೋಧಿ ರೋಡ್ ಹೆಡ್ ಪೋಸ್ಟ್ ಆಫೀಸ್, ನವದೆಹಲಿ-110003 ಗೆ ಕಳುಹಿಸಬೇಕು.
ಹೆಚ್ಚಿನ ಮಾಹಿತಿಗೆ https://cabsec.gov.in/ ನೋಡಿ.

ಬಿಡಿಎಯಲ್ಲಿ ಹುದ್ದೆಗಳು

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಖಾಲಿ ಇರುವ ಹುದ್ದೆಗಳ ಭರ್ತಿಗೆ ಅರ್ಜಿ ಆಹ್ವಾನಿಸಿದೆ. ಆಸಕ್ತ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು.
ಹುದ್ದೆ: ಕಾನೂನು ಅಧಿಕಾರಿ (ಲೀಗಲ್ ಆಫೀಸರ್)
ವಿದ್ಯಾರ್ಹತೆ ಹಾಗೂ ವಯೋಮಿತಿ: ಬಿಡಿಎ ನೇಮಕಾತಿ ನಿಯಮಗಳ ಅನ್ವಯ ವಿದ್ಯಾರ್ಹತೆ ಹಾಗೂ ವಯೋಮಿತಿ ನಿಗದಿ ಮಾಡಲಾಗಿದೆ.
ಆಯ್ಕೆ ಪ್ರಕ್ರಿಯೆ: ಲಿಖಿತ ಪರೀಕ್ಷೆ ಹಾಗೂ ಸಂದರ್ಶನದ ಮೂಲಕ ಆಯ್ಕೆ ಮಾಡಲಾಗುತ್ತದೆ.
ಅರ್ಜಿ ಸಲ್ಲಿಕೆಯ ವಿಳಾಸ: Commissioner, Bangalore Development Authority, Bengaluru, Karnataka
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಫೆಬ್ರುವರಿ 25, 2022
ಹೆಚ್ಚಿನ ಮಾಹಿತಿಗೆ: eng.bdabangalore.org

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

Poem -5

Jazz Poem Two

English

ಎಸ್ಸೆಸ್ಸೆಲ್ಸಿ

1. Physical appearance of the Jazz player does not match with his artistic character. Explain. OR Give a short description of the Jazz player. OR What qualities of the Jazz player do you appreciate? OR

Describe the two faces of Jazz player as a pathetic figure and a commanding artist.

The Jazz player has a rough unshaven face and sagging stomach. He is a simple man who wears a faded blue shirt, a loose neck tie, and an old jacket. His run down shoes have paper in them. Across his chest an old alto Saxophone is supported from his neck by wire coat hanger. The Jazz player as a pathetic figure having weary expression on his face. He keeps his head down and lifeless. When he lifts the saxophone to his lips and tells the world that he was sent here to preach the Black Gospel. He had the natural gift of playing the saxophone eloquently as a commanding artist. When he started to play, forgets the material life and makes the people to listen the music to be happy. He gives happiness to the people though he is sad.



2. What was the special gift possessed by the Jazz player? How did it change his feelings?

Jazz player had the natural gift of playing the saxophone eloquently as a commanding artist. When he started to play, forgets the material life and makes the people to listen the music to be happy. He is able to give happiness to the people though he is sad. He issilent in speech but eloquent in music like a bird flying higher and higher. The music changed his feelings that he lost himself in forgetting all his worries.

3. "His run down shoes have paper in them and his rough unshaven face shows pain."

a) Why does he have paper in the shoes?

Jazz is a poor man. His shoes are old and torn.

b) What does the 'rough unshaven face' suggest?

It suggests that he had lost interest in life because of worries.

c) Why his appearance was like so?

He was a poor man with lot of miseries and worries.

4. "He is no longer a man, no not even a Black man, but (yeah!) a Bird."

a) What is the figure of speech used here? Metaphor

b) What do these lines suggest?

Jazz may be poor but when he plays, go higher and higher like a bird.

c) What does 'no longer a man' mean here?

As Jazz begins to play saxophone, he is changed into a bird.

Annappa Shetty, MA,M.Ed,
SRP in English, Hassan

ಮಾದರಿ ಪ್ರಶ್ನೋತ್ತರ

ವಿದ್ಯುತ್ ಕ್ಷೇತ್ರ ಮತ್ತು ವಿದ್ಯುತ್ ವಿಭವ

ಭೌತಶಾಸ್ತ್ರ

ಪಿಯುಸಿ

7) ನಾವು ವಿದ್ಯುತ್ ಕೇತ್ರ ಮತ್ತು ವಿದ್ಯುತ್ ವಿಭವಕ್ಕೆ ಸಂಬಂಧಿಸಿದ ಎರಡು ಮಹತ್ವಪೂರ್ಣ ತೀರ್ಮಾನಕ್ಕೆ ಬರಬಹುದು. ಅವು ಯಾವುವು?

ಉತ್ತರ:-ನಾವು ವಿದ್ಯುತ್ ಕೇತ್ರ ಮತ್ತು ವಿದ್ಯುತ್ ವಿಭವಕ್ಕೆ ಸಂಬಂಧಿಸಿದ ಎರಡು ಮಹತ್ವಪೂರ್ಣ ತೀರ್ಮಾನಕ್ಕೆ ಬರಬಹುದು. ಅವು ಯಾವುವು?

(i) ಎಲ್ಲಿ ವಿಭವದಲ್ಲಿ ಹೆಚ್ಚು ಇಳಿಕೆ ಇರುತ್ತದೆಯೋ, ವಿದ್ಯುತ್ ಕ್ಷೇತ್ರವು ಆ ದಿಕ್ಕಿನಲ್ಲಿ ಇರುತ್ತದೆ

(ii) ಯಾವುದೇ ಬಿಂದುವಿನಲ್ಲಿ ವಿದ್ಯುತ್ ಕ್ಷೇತ್ರದ ಪರಿಮಾಣವು, ಆ ಬಿಂದುವಿನ ಸಮವಿಭವ ಮೇಲ್ಮೈಗೆ ಲಂಬವಾಗಿ ವಿಭವದ ಪರಿಮಾಣದಲ್ಲಿ ಪ್ರತಿ ಸ್ಥಳಪಲ್ಲಟಕ್ಕೆ ಆದ ಬದಲಾವಣೆಯಾಗಿರುತ್ತದೆ

8) ಒಂದು ವಸ್ತುವಿನ ಅಣುವು 10–29 Cm ನಷ್ಟು ಶಾಶ್ವತ ದ್ವಿಧ್ರುವ ಮಹತ್ವವನ್ನು ಹೊಂದಿದೆ. ಪರಿಮಾಣವುಳ್ಳ ಶಕ್ತಿಶಾಲಿಯಾದ ಸ್ಥಿರ ವಿದ್ಯುತ್ ಕ್ಷೇತ್ರದಲ್ಲಿ ಒಂದು ಪದಾರ್ಥದ ಒಂದು ಮೋಲ್ (ಕನಿಷ್ಠ ತಾಪಮಾನದಲ್ಲಿ) ವನ್ನು ದೃಢೀಕರಿಸಲಾಗಿದೆ. ಹಠಾತ್ತಾಗಿ ಕ್ಷೇತ್ರದ ದಿಕ್ಕನ್ನು 60º ಕೋನದಷ್ಟು ಬದಲಾಯಿಸಲಾಗಿದೆ. ಕ್ಷೇತ್ರದ ಹೊರದಿಕ್ಕಿನಲ್ಲಿ ದ್ವಿಧ್ರುವಗಳನ್ನು ಪಂಕ್ತಿಯಲ್ಲಿಡಲು ಬೇಕಾದ ಶಾಖವನ್ನು ಲೆಕ್ಕ ಹಾಕಿ ಸರಳತೆಗಾಗಿ ವಸ್ತುವಿನ ಧೃವೀಕರಣ ಶೇ 100 ಎಂದು ಊಹಿಸಿ.

ಉತ್ತರ:

ಇಲ್ಲಿ ಪ್ರತಿಯೊಂದು ಅಣುವಿನ ದ್ವಿಧ್ರುವ ಭ್ರಾಮಕ = 10^{-29} Cm ಪದಾರ್ಥದ ಒಂದು ಮೋಲ್‌ನಲ್ಲಿ 6×10^{23} ಅಣುಗಳಿರುತ್ತದೆ, ಆದ್ದರಿಂದ ಎಲ್ಲಾ ಅಣುಗಳ ದ್ವಿಧ್ರುವ ಭ್ರಾಮಕ,

$p = 6 \times 10^{23} \times 10^{-29}$ Cm $= 6 * 10^{-6}$ Cm

ಪ್ರಾರಂಭದ ವಿಭವಶಕ್ತಿ , $U_i = -pE \cos \theta$

$= -6\times10^{-6}\times10^{6} \cos 0^{o} = -6$ J

ಅಂತಿಮ ವಿಭವಶಕ್ತಿ (θ= 60 ಆದಾಗ),

$U_f = -6 \times 10^{-6} \times 10^{6} \cos 60^{o} = -3$ J

ವಿಭವಶಕ್ತಿಯಲ್ಲಿಯ ವ್ಯತ್ಯಾಸ $= -3\text{ J} - (-6\text{J}) = 3$ J

ಆದ್ದರಿಂದ ಇಲ್ಲಿ ವಿಭವ ಶಕ್ತಿಯು ನಷ್ಟವಾಗಿದೆ. ಪದಾರ್ಥಗಳಿಂದ ದ್ವಿಧ್ರುವಗಳನ್ನು ಪಂಕ್ತಿಯಲ್ಲಿಡಲು ಶಾಖದ ರೂಪದಲ್ಲಿ ಈ ಶಕ್ತಿಯು ಬಿಡುಗಡೆಯಾಗುವುದು

9) ವಾಹಕಗಳ ಸ್ಥಿರವಿದ್ಯುತ್‌ಗೆ ಸಂಬಂಧಿಸಿದ ಕೆಲವು ಮಹತ್ವಪೂರ್ಣ ಪರಿಣಾಮಗಳನ್ನು ತಿಳಿಸಿ.

ಉತ್ತರ:- ವಾಹಕಗಳ ಸ್ಥಿರವಿದ್ಯುತ್‌ಗೆ ಸಂಬಂಧಿಸಿದ ಕೆಲವು ಮಹತ್ವಪೂರ್ಣ ಪರಿಣಾಮಗಳು.

- **ವಾಹಕದ ಒಳಭಾಗದಲ್ಲಿ ಸ್ಥಿರವಿದ್ಯುತ್ ಕ್ಷೇತ್ರವು ಶೂನ್ಯವಾಗಿರುತ್ತದೆ**

ತಟಸ್ಥ ಅಥವಾ ಆವೇಶಭರಿತವಾದ ವಾಹಕವನ್ನು ತೆಗೆದುಕೊಳ್ಳೋಣ. ಅಲ್ಲಿ ಯಾವುದೋ ಒಂದು ಸ್ಥಿರ ವಿದ್ಯುತ್ ಕ್ಷೇತ್ರವೂ ಅಥವಾ ವಾಹಕದ ಮೂಲಕ ಯಾವುದೇ ವಿದ್ಯುತ್ ಪ್ರವಾಹ ಇಲ್ಲದಿರುವಾಗ, ವಾಹಕದ ಒಳಭಾಗದ ಎಲ್ಲೆಡೆ ವಿದ್ಯುತ್ ಕ್ಷೇತ್ರವು ಶೂನ್ಯವಾಗಿರುತ್ತದೆ. ಈ ತತ್ವವನ್ನ ವಾಹಕವನ್ನು ವ್ಯಾಖ್ಯಾನಿಸುವ ಒಂದು ಗುಣವೆಂದು ಪರಿಗಣಿಸಬಹುದು. ವಾಹಕವು ಮುಕ್ತ ಎಲೆಕ್ಟ್ರಾನ್‌ಗಳನ್ನ ಹೊಂದಿರುತ್ತದೆ. ಎಲ್ಲಿಯವರೆಗೆ ವಿದ್ಯುತ್ ಕ್ಷೇತ್ರವು ಶೂನ್ಯವಾಗುವುದಿಲ್ಲವೋ ಅಲ್ಲಿಯವರೆಗೆ ಆವೇಶವಾಹಗಳು ಒಂದು ಬಲವನ್ನು ಅನುಭವಿಸುತ್ತವೆ ಮತ್ತು ಚಲಿಸುತ್ತವೆ. ಸ್ಥಿರ ಸ್ಥಿತಿಯಲ್ಲಿ ಈ ಮುಕ್ತ ಆವೇಶಗಳು ಯಾವ ರೀತಿ ವಿತರಿಸಲ್ಪಟ್ಟಿರುತ್ತವೆ ಎಂದರೆ, ವಾಹಕದ ಒಳಭಾಗದ ಎಲ್ಲೆಡೆಯಲ್ಲಿ ವಿದ್ಯುತ್ ಕ್ಷೇತ್ರವು ಶೂನ್ಯವಾಗಿರುವಂತೆ. ವಾಹಕದ ಒಳ ಭಾಗದಲ್ಲಿ ವಿದ್ಯುತ್ ಕ್ಷೇತ್ರವು ಶೂನ್ಯವಾಗಿರುತ್ತದೆ.

- **ಆವೇಶಭರಿತ ವಾಹಕದ ಮೇಲ್ಮೈ ಮೇಲೆ, ಪ್ರತಿಯೊಂದು ಬಿಂದುವಿನಲ್ಲಿಯೂ ವಿದ್ಯುತ್ ಕ್ಷೇತ್ರವು ಮೇಲ್ಮೈಗೆ ಲಂಬವಾಗಿರುತ್ತದೆ.**

Eಯು ಮೇಲ್ಮೈಗೆ ಲಂಬವಾಗಿರದಿದ್ದಲ್ಲಿ ಮೇಲ್ಮೈಗೆ ಸಮನಾಂತರವಾಗಿ Eಯ ಶೂನ್ಯವಲ್ಲದ ಘಟಕವಿರಬೇಕು. ಮೇಲ್ಮೈ ಮೇಲಿನ ಮುಕ್ತ ಆವೇಶಗಳು ಬಲವನ್ನು ಅನುಭವಿಸುತ್ತವೆ ಮತ್ತು ಚಲಿಸುತ್ತವೆ. ಆದ್ದರಿಂದ ಸ್ಥಿರ ಸ್ಥಿತಿಯಲ್ಲಿ Eಯು ಯಾವುದೇ ಸ್ಪರ್ಷರೇಖೀಯ ಘಟಕವು ಇರಲು ಸಾಧ್ಯವಿಲ್ಲ. ಈ ಪ್ರಕಾರವಾಗಿ ಯಾವುದೇ ಆವೇಶ ಭರಿತ ವಾಹಕದ ಮೇಲ್ಮೈ ಮೇಲೆ ಪ್ರತಿಯೊಂದು ಬಿಂದುವಿನಲ್ಲಿಯೂ ವಿದ್ಯುತ್ ಕ್ಷೇತ್ರವು ಮೇಲ್ಮೈಗೆ ಲಂಬವಾಗಿರಲೇಬೇಕು.

- **ಸ್ಥಿರ ಸ್ಥಿತಿಯಲ್ಲಿ ವಾಹಕದ ಒಳಭಾಗದಲ್ಲಿ ಯಾವುದೇ ಹೆಚ್ಚುವರಿ ಆವೇಶವು ಇರಲು ಸಾಧ್ಯವಿಲ್ಲ.**

ತಟಸ್ಥವಾಹಕದ ಯಾವುದೇ ಸಣ್ಣ ಘನ ಆಯತಾಂಶ ಅಥವಾ ಕ್ಷೇತ್ರಿಯ ಅಂಶದಲ್ಲಿ ಧನಾತ್ಮಕ ಮತ್ತು ಋಣಾತ್ಮಕ ಆವೇಶಗಳು ಸಮಾನ ಪರಿಮಾಣದಲ್ಲಿರುತ್ತದೆ. ಯಾವುದೇ ವಾಹಕವನ್ನು ಅವೇಶಿತಗೊಳಿಸಿದಾಗ, ಸ್ಥಿರ ಸ್ಥಿತಿಯಲ್ಲಿ ಹೆಚ್ಚುವರಿ ಆವೇಶವು ಕೇವಲ ವಾಹಕದ ಮೇಲ್ಮೈ ಮೇಲೆ ಇರುತ್ತವೆ. ಇದು 'ಗಾಸ್'ನ ನಿಯಮದಿಂದ ಸ್ಪಷ್ಟವಾಗಿದೆ. ವಾಹಕದ ಒಳಗಿನ ಯಾವುದೇ ಬಿಂದು ಯಾದೃಚ್ಛಿಕ ಘನ ಅಂಶ vಯನ್ನು ತೆಗೆದುಕೊಳ್ಳೋಣ. ಘನಾಂಶ vಯನ್ನು ಮುಚ್ಚಿದ ಮೇಲ್ಮೈ Sನ ಮೇಲೆ ಸ್ಥಿರವಿದ್ಯುತ್ ಕ್ಷೇತ್ರವು ಶೂನ್ಯವಾಗಿರುತ್ತದೆ. ಆದ್ದರಿಂದ S ಮೂಲಕ ಹಾದು ಹೋಗುವ ವಿದ್ಯುತ್ ಕ್ಷೇತ್ರೀಯ ರೇಖೆಗಳ ಹರಿವು ಶೂನ್ಯವಾಗಿರುತ್ತದೆ. ಅದ್ದರಿಂದ ಗಾಸ್ ನಿಯಮದ ಪ್ರಕಾರ Sನ ಯಾವುದೇ ಆವೇಶವನ್ನು ಸುತ್ತುವರಿದಿರುವುದಿಲ್ಲ. ಆದರೆ ಮೇಲ್ಮೈ S ನ್ನು ನಿಮ್ಮ ಇಷ್ಟದ ಪ್ರಕಾರ ಎಷ್ಟು ಚಿಕ್ಕದಾಗಿ ಮಾಡಲು ಸಾಧ್ಯವೋ ಅಷ್ಟು ಚಿಕ್ಕದಾಗಿ ಮಾಡಬೇಕು. ಅರ್ಥಾತ್ ಘನ ಅಂಶ v ಯು ಕಣ್ಮರೆಯಾಗುವಷ್ಟು. ಇದರರ್ಥ ವಾಹಕದ ಒಳಭಾಗದಲ್ಲಿ ಯಾವುದೇ ನಿವ್ವಳ ಆವೇಶ ಇರಲು ಸಾಧ್ಯವಿಲ್ಲ. ಮತ್ತು ಯಾವುದೇ ಹೆಚ್ಚುವರಿ ಆವೇಶವಿದ್ದರೆ ಅದು ಮೇಲ್ಮೈ ಮೇಲೆಯೇ ಇರತಕ್ಕದ್ದು.

- **ವಾಹಕದ ಎಲ್ಲಾ ಆಯತನಗಳಲ್ಲಿ ವಿಭವವು ಸ್ಥಿರಾಂಕವಾಗಿರತ್ತವೆ. ಅದರ ಬೆಲೆಯು ಮೇಲ್ಮೈ ಯ ವಿಭವಕ್ಕೆ ಸಮಾನವಾಗಿರುತ್ತದೆ. (ಒಳಭಾಗದಷ್ಟೇ).**

ಇದು ಮೇಲೆ ಹೇಳಿದ ಪರಿಣಾಮ 1 ಮತ್ತು 2ನ್ನು ಅನುಸರಿಸುತ್ತದೆ. ಏಕೆಂದರೆ ವಾಹಕದ ಒಳಗೆ $E=0$ ಮತ್ತು ಅದರ ಮೇಲ್ಮೈ ಮೇಲೆ ಯಾವುದೇ ಸ್ಪರ್ಷರೇಖೆಯ ಘಟಕವಿರುವುದಿಲ್ಲ. ಆದ್ದರಿಂದ ಇದರ ಒಳಗೆ ಅಥವಾ ಮೇಲ್ಮೈ ಮೇಲೆ ಯಾವುದೇ ಸಣ್ಣ ಅವೇಶವನ್ನು ಚಲಿಸುವಂತೆ ಮಾಡಲು ಯಾವುದೇ ಕೆಲಸವಾಗುವುದಿಲ್ಲ. ವಾಹಕದ ಒಳಗೆ ಅಥವಾ ಅದರ ಮೇಲ್ಮೈ ಮೇಲಿನ ಎರಡು ಬಿಂದುಗಳ ಮಧ್ಯೆ ಯಾವುದೇ ವಿಭವಾಂತರವಿರುವುದಿಲ್ಲ. ಇದೇ ಇಚ್ಛಿತ ಪರಿಣಾಮ. ವಾಹಕವು ಆವೇಶಿತವಾಗಿದ್ದರೆ, ವಿದ್ಯುತ್ ಕ್ಷೇತ್ರವು ವಾಹಕಕ್ಕೆ ಲಂಬವಾಗಿರುತ್ತದೆ. ಇದರರ್ಥ ವಾಹಕದ ಮೇಲ್ಮೈ ಮೇಲೆ ಮತ್ತು ಹೊರಭಾಗದ ಬಿಂದುವಿನಲ್ಲಿ ವಿಭವವು ಬೇರೆ ಬೇರೆಯಾಗಿರುತ್ತದೆ.

ಯಾವುದೇ ಯಾದೃಚ್ಛಿಕ ಆಕಾರ, ಆಕೃತಿ ಮತ್ತು ಆವೇಶ ವಿನ್ಯಾಸವನ್ನು ಹೊಂದಿರುವ ವಾಹಕಗಳ ಸಂರಚನೆಯಲ್ಲಿ, ಪ್ರತಿಯೊಂದು ವಾಹಕವು ಒಂದು ಸ್ಥಿರ ಮೌಲ್ಯವುಳ್ಳ ವಿಭವವನ್ನು ಹೊಂದಿದ್ದರೂ ಸಹ, ಈ ಸ್ಥಿರಮೌಲ್ಯವು ಒಂದು ವಾಹಕದಿಂದ ಇನ್ನೊಂದು ವಾಹಕಕ್ಕೆ ವ್ಯತ್ಯಾಸವಿರಬಹುದು

ಸಹಕಾರ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

ಪ್ರಜಾವಾಣಿ ನೋಡಿಯೊ
ದ್ವಿತೀಯ ಪಿಯುಸಿ ಗಣಿತಶಾಸ್ತ್ರದ 'ಮ್ಯಾಟ್ರಿಕ್ಸ್' ವಿಷಯದ ಮಾದರಿ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ನಿಲುವಳಿ ಸೂಚನೆ ತಿರಸ್ಕರಿಸಿದ ಸಭಾಪತಿ ಬಸವರಾಜ ಹೊರಟ್ಟಿ: ಕಾಂಗ್ರೆಸ್ ಸದಸ್ಯರ ಧರಣಿ

ರಾಷ್ಟ್ರಧ್ವಜ: ಪರಿಷತ್‌ನಲ್ಲೂ ವಾಗ್ವಾದ, ಗದ್ದಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರಧ್ವಜದ ಕುರಿತು ಸಚಿವ ಕೆ.ಎಸ್. ಈಶ್ವರಪ್ಪ ನೀಡಿರುವ ಹೇಳಿಕೆ ವಿಧಾನಪರಿಷತ್‌ನಲ್ಲೂ ಬುಧವಾರ ಗದ್ದಲ ಸೃಷ್ಟಿಸಿತು. ಆಡಳಿತ ಮತ್ತು ವಿರೋಧ ಪಕ್ಷಗಳ ಸದಸ್ಯರ ನಡುವೆ ಬಿರುಸಿನ ವಾಗ್ವಾದ ನಡೆದಿದ್ದರಿಂದ ಇಡೀ ದಿನ ಕಲಾಪ ನಡೆಯಲಿಲ್ಲ.

ಈ ವಿಷಯದ ಬಗ್ಗೆ ನಿಲುವಳಿ ಸೂಚನೆ ಮಂಡಿಸಲು ಪರಿಷತ್‌ನಲ್ಲಿನ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಅವರಿಗೆ ಸಭಾಪತಿ ಬಸವರಾಜ ಹೊರಟ್ಟಿ ಅವಕಾಶ ನೀಡಲಿಲ್ಲ.

ಕಾಂಗ್ರೆಸ್ ಸದಸ್ಯರು ಸಭಾಪತಿ ಪೀಠದ ಮುಂದೆ ಎರಡು ಬಾರಿ ಧರಣಿ ನಡೆಸಿದ್ದರಿಂದ ಕಲಾಪವನ್ನು ಗುರುವಾರಕ್ಕೆ ಮುಂದೂಡಲಾಯಿತು.

ಬೆಳಿಗ್ಗೆ ಕಲಾಪ ಆರಂಭವಾಗುತ್ತಿದ್ದಂತೆ ವಿಷಯ ಪ್ರಸ್ತಾಪಿಸಿದ ಬಿ.ಕೆ. ಹರಿಪ್ರಸಾದ್, 'ಕೆಂಪು ಕೋಟೆ ಮೇಲೆ ಕೇಸರಿ ಧ್ವಜ ಹಾರಿಸುವುದಾಗಿ ಹೇಳಿಕೆ ನೀಡುವ ಮೂಲಕ ಸಚಿವ ಈಶ್ವರಪ್ಪ ರಾಷ್ಟ್ರಧ್ವಜಕ್ಕೆ ಅವಮಾನ ಮಾಡಿದ್ದಾರೆ. ಈ ಬಗ್ಗೆ ಚರ್ಚೆಗಾಗಿ ನಿಯಮ 59ರ ಅಡಿಯಲ್ಲಿ ನಿಲುವಳಿ ಸೂಚನೆ ಮಂಡಿಸಲು ಅವಕಾಶ ನೀಡಬೇಕು. ಈಶ್ವರಪ್ಪ ಅವರನ್ನು ಸಂಪುಟದಿಂದ ವಜಾಗೊಳಿಸಿ ದೇಶದ್ರೋಹ ಪ್ರಕರಣ ದಾಖಲಿಸಿ ಬಂಧಿಸಬೇಕು' ಎಂದು ಒತ್ತಾಯಿಸಿದರು.

ಕಾಂಗ್ರೆಸ್‌ನ ಸಲಿಂ ಅಹಮದ್ ಮತ್ತು ಪ್ರಕಾಶ್ ಕೆ. ರಾಥೋಡ್ ಅವರು ದನಿಗೂಡಿಸಿದಾಗ ಬಿಜೆಪಿ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದ್ದರು.

ಸಚಿವ ಕೆ.ಎಸ್.ಈಶ್ವರಪ್ಪ ಅವರನ್ನು ಸಂಪುಟದಿಂದ ವಜಾಗೊಳಿಸಬೇಕು ಎಂದು ಆಗ್ರಹಿಸಿ ಕಾಂಗ್ರೆಸ್ ಸದಸ್ಯರು ವಿಧಾನ ಪರಿಷತ್‌ನಲ್ಲಿ ಬುಧವಾರ ಸಭಾಪತಿ ಪೀಠದ ಮುಂದೆ ಧರಣಿ ನಡೆಸಿದರು —ಪ್ರಜಾವಾಣಿ ಚಿತ್ರ

ಸದನದಲ್ಲಿ ಗದ್ದಲ ಉಂಟಾಗಿದ್ದರಿಂದ ಸಭಾಪತಿ ಬಸವರಾಜ ಹೊರಟ್ಟಿ ಅವರು ಕಲಾಪವನ್ನು 10 ನಿಮಿಷಗಳ ಕಾಲ ಮುಂದೂಡಿದರು.

ಕಲಾಪ ಮತ್ತೆ ಆರಂಭವಾದಾಗ ಹರಿಪ್ರಸಾದ್ ಅವರು, 'ಸಾಂವಿಧಾನಿಕ ಹುದ್ದೆ ಹೊಂದಿರುವ ಸಚಿವರ ಪ್ರಚೋದನಾಕಾರಿ ಹೇಳಿಕೆ ದೇಶದ ಏಕತೆಯನ್ನು ಛಿದ್ರಗೊಳಿಸುವ ಹುನ್ನಾರವಾಗಿದೆ. ತ್ರಿವರ್ಣ ಧ್ವಜವನ್ನು ಆರೆಸ್ಸೆಸ್, ಜನಸಂಘ ಮತ್ತು ಬಿಜೆಪಿ ಕೂಡಾ ಒಪ್ಪಿಕೊಂಡಿಲ್ಲ' ಎಂದು ಆರೋಪಿಸಿದರು.

ಈ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ ಸಚಿವರಾದ ಕೋಟ ಶ್ರೀನಿವಾಸ ಪೂಜಾರಿ, ಬಿ.ಸಿ. ನಾಗೇಶ್ ಮತ್ತು ಇತರ ಸದಸ್ಯರು, 'ನಾಗಪುರದ ಹೆಸರನ್ನು ಅವಹೇಳನಕಾರಿಯಾಗಿ ಮತ್ತು ವ್ಯಂಗ್ಯವಾಗಿ ಹೇಳುವ ಮೂಲಕ ಹರಿಪ್ರಸಾದ್ ಅವರು ಅವಮಾನ ಮಾಡಿದ್ದಾರೆ' ಎಂದರು.

'ಅಂಬೇಡ್ಕರ್ ಅವರ ಜನ್ಮಸ್ಥಳಕ್ಕೂ ಅವಮಾನ ಮಾಡುತ್ತಿದ್ದಾರೆ' ಎಂದು ಬಿಜೆಪಿಯ ವೈ.ಎ. ನಾರಾಯಣಸ್ವಾಮಿ ಹೇಳಿದರು. ಆಗ ಪ್ರತಿಕ್ರಿಯಿಸಿದ ಹರಿಪ್ರಸಾದ್ ಅವರು, 'ಅಂಬೇಡ್ಕರ್ ಅವರು ಜನಿಸಿದ್ದು ನಾಗಪುರದಲ್ಲಿ ಅಲ್ಲ. ಅಂಬೇಡ್ಕರ್ ಜನ್ಮ ಸ್ಥಳ ಮಧ್ಯಪ್ರದೇಶದ ಇಂದೋರ್ ಜಿಲ್ಲೆಯ ಮಹೂದಲ್ಲಿ. ಇದೂ ಗೊತ್ತಿಲ್ಲವೇ?' ಎಂದರು.

ಈಶ್ವರಪ್ಪ ಅವರನ್ನು ಸಮರ್ಥಿಸಿಕೊಂಡ ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ, 'ಈಶ್ವರಪ್ಪ ಅವರ ಹೇಳಿಕೆಯಲ್ಲಿ ಯಾವ ತಪ್ಪೂ ಇಲ್ಲ. 200–300 ವರ್ಷಗಳ ನಂತರ ನಡೆಯಬಹುದಾದ ಘಟನೆಯ ಬಗ್ಗೆ ಅವರು ಹೇಳಿದ್ದಾರೆ. ರಾಜಕೀಯ ಕಾರಣಕ್ಕೆ ತೇಜೋವಧೆ ಮಾಡುತ್ತಿರುವುದರಿಂದ ನಿಲುವಳಿ ಸೂಚನೆ ತಿರಸ್ಕರಿಸಬೇಕು' ಎಂದು ಕೋರಿದರು.

ನಂತರ, ನಿಲುವಳಿ ಸೂಚನೆ ತಿರಸ್ಕರಿಸಿರುವುದಾಗಿ ಸಭಾಪತಿ ಪ್ರಕಟಿಸಿದರು. ಇದರಿಂದ, ಆಕ್ರೋಶ ವ್ಯಕ್ತಪಡಿಸಿದ ಕಾಂಗ್ರೆಸ್ ಸದಸ್ಯರು, ಪೀಠದ ಮುಂದೆ ಧರಣಿ ನಡೆಸಿದ್ದರಿಂದ ಕಲಾಪವನ್ನು ಮಧ್ಯಾಹ್ನಕ್ಕೆ ಮುಂದೂಡಲಾಯಿತು.

ಮಧ್ಯಾಹ್ನದ ಕಲಾಪ ಸೇರಿದಾಗ ಕವಿ ಚೆನ್ನವೀರ ಕಣವಿ ಮತ್ತು ಮಾಜಿ ಶಾಸಕ ಎಚ್.ಡಿ. ಚೌಡಯ್ಯ ಅವರ ನಿಧನಕ್ಕೆ ಸಂತಾಪ ಸೂಚಿಸಲಾಯಿತು. ಕಾಂಗ್ರೆಸ್ ಸದಸ್ಯರು ಮತ್ತೆ ಧರಣಿ ಮುಂದುವರಿಸಿದರು. ಈ ಮಧ್ಯೆಯೇ ಪ್ರಶ್ನೋತ್ತರ ಕಲಾಪ ನಡೆಯಿತು. ಬಳಿಕ ಕಲಾಪವನ್ನು ಸಭಾಪತಿ ಗುರುವಾರಕ್ಕೆ ಮುಂದೂಡಿದರು.

ಸದನದಲ್ಲಿ ಸದಸ್ಯರ ಮಾತು

- ಸದನದ ಮರ್ಯಾದೆ ತೆಗೆಯಬೇಡಿ. ನಿಮಗೆ ಹೇಳೋರು, ಕೇಳೋರು ಯಾರು ಇಲ್ಲವೇ?

  ಬಸವರಾಜ ಹೊರಟ್ಟಿ, ವಿಧಾನ ಪರಿಷತ್ ಸಭಾಪತಿ
- ಭಾರತಾಂಬೆಯ ಹಾಲು ಕುಡಿದ ನಾವು ಕಾಶ್ಮೀರದ ಲಾಲ್‌ಚೌಕ್‌ನಲ್ಲಿ ರಾಷ್ಟ್ರಧ್ವಜ ಹಾರಿಸಿದ್ದೇವೆ.

  ಭಾರತಿ ಶೆಟ್ಟಿ, ಬಿಜೆಪಿ ಸದಸ್ಯೆ
- ಸಚಿವ ಈಶ್ವರಪ್ಪ ಕ್ಷಮೆ ಕೇಳಲಿ. ಸಚಿವ ಸಂಪುಟದಿಂದ ಅವರನ್ನು ವಜಾಗೊಳಿಸಿ, ಆ ಮೂಲಕ ನಿಮ್ಮ ದೇಶಭಕ್ತಿ ತೋರಿಸಿ.

  ಸಿ.ಎಂ. ಇಬ್ರಾಹಿಂ, ಕಾಂಗ್ರೆಸ್ ಸದಸ್ಯ
- ಈಶ್ವರಪ್ಪ ಅವರಿಗೆ ನಾಚಿಕೆಯಾಗಬೇಕು. ಇದು ಬಿಜೆಪಿ ಸಂಸ್ಕೃತಿಯಾ? ಇವರ ಮೇಲೆ ದೇಶದ್ರೋಹದ ಪ್ರಕರಣ ದಾಖಲಿಸಬೇಕು.

  ಸಲೀಂ ಅಹಮದ್, ಕಾಂಗ್ರೆಸ್ ಸದಸ್ಯ
- ಸಂವಿಧಾನದ ಆಶಯಗಳನ್ನು ಗಾಳಿಗೆ ತೂರಿ ಸಚಿವ ಈಶ್ವರಪ್ಪ ಹೇಳಿಕೆ ನೀಡಿದ್ದಾರೆ.

  ಪ್ರಕಾಶ್ ಕೆ. ರಾಥೋಡ್, ಕಾಂಗ್ರೆಸ್ ಸದಸ್ಯ
- ಗೋಲಿಬಾರ್‌ಗೆ ಎದೆವೊಡ್ಡಿ ರಾಷ್ಟ್ರಧ್ವಜ ಹಾರಿಸಿದ ಪಕ್ಷ ಬಿಜೆಪಿ. ನಿಲುವಳಿ ಸೂಚನೆಯಲ್ಲಿ ಹುರುಳಿಲ್ಲ

  ಜೆ.ಸಿ. ಮಾಧುಸ್ವಾಮಿ, ಕಾನೂನು ಸಚಿವ

'ಪದವಿ ಕಾಲೇಜುಗಳಲ್ಲಿ ಸಮವಸ್ತ್ರ ಕಡ್ಡಾಯ ಅಲ್ಲ'

ಬೆಂಗಳೂರು: 'ರಾಜ್ಯದ ಪದವಿ ಕಾಲೇಜುಗಳಲ್ಲಿ ಸಮವಸ್ತ್ರ ಕಡ್ಡಾಯ ಮಾಡಿಲ್ಲ. ಈ ವಿಷಯದಲ್ಲಿ ಹೈಕೋರ್ಟ್ ಆದೇಶವನ್ನು ಪಾಲನೆ ಮಾಡುತ್ತಿದ್ದೇವೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸ್ಪಷ್ಟಪಡಿಸಿದರು.

ವಿಧಾನಸಭೆಯಲ್ಲಿ ಬುಧವಾರ ಶೂನ್ಯ ವೇಳೆಯಲ್ಲಿ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, 'ಪದವಿ ಕಾಲೇಜುಗಳಲ್ಲಿ ಸಮವಸ್ತ್ರ ಕಡ್ಡಾಯ ಅಲ್ಲ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಚಾಮರಾಜನಗರದಲ್ಲಿ ಹೇಳಿಕೆ ನೀಡಿದ್ದಾರೆ. ಈ ಬಗ್ಗೆ ಮುಖ್ಯಮಂತ್ರಿ ಸ್ಪಷ್ಟನೆ ನೀಡಬೇಕು' ಎಂದು ಒತ್ತಾಯಿಸಿದರು.

ಬಸವರಾಜ ಬೊಮ್ಮಾಯಿ ಉತ್ತರಿಸಿ, 'ಉನ್ನತ ಶಿಕ್ಷಣ ಸಚಿವರು ವಾಸ್ತವಾಂಶ ಹೇಳಿದ್ದಾರೆ. ಅದು ಸರ್ಕಾರದ ನಿಲುವು ಸಹ ಹೌದು' ಎಂದು ಹೇಳಿದರು.

'ನೀವು ಯಾವ ಉದ್ದೇಶದಿಂದ ಈ ಪ್ರಶ್ನೆ ಕೇಳಿದ್ದೀರಿ ಎಂಬುದು ಗೊತ್ತು. ಈ ವಿಚಾರವನ್ನು ಹೆಚ್ಚು ಬೆಳೆಸಲು ಹೋಗುವುದಿಲ್ಲ' ಎಂದೂ ಅವರು ಹೇಳಿದರು.

'14 ಜಿಲ್ಲೆಗಳಲ್ಲಿ ಗ್ರಾಮಲೆಕ್ಕಿಗರ ಹುದ್ದೆ ಭರ್ತಿಗೆ ಅನುಮತಿ'

ಬೆಂಗಳೂರು: 'ಕಂದಾಯ ಇಲಾಖೆಯಲ್ಲಿ ಗ್ರೂಪ್ 'ಸಿ' ವೃಂದದ ಗ್ರಾಮಲೆಕ್ಕಿಗರ ಹುದ್ದೆಗಳನ್ನು ಭರ್ತಿ ಮಾಡಲು 14 ಜಿಲ್ಲೆಗಳಿಗೆ ಅನುಮತಿ ನೀಡಲಾಗಿದೆ' ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಬಿಜೆಪಿಯ ಎಸ್.ವಿ. ಸಂಕನೂರ ಅವರ ಪ್ರಶ್ನೆಗೆ ಉತ್ತರಿಸಿದ ಅವರು, 'ಉಳಿದ ಜಿಲ್ಲೆಗಳಲ್ಲಿ ಖಾಲಿ ಇರುವ ಗ್ರಾಮ ಲೆಕ್ಕಿಗರ ಹುದ್ದೆಗಳನ್ನು ಭರ್ತಿ ಮಾಡಲು ಸಹಮತಿ ನೀಡುವಂತೆ ಆರ್ಥಿಕ ಇಲಾಖೆಯನ್ನು ಕೋರಲಾಗಿದೆ' ಎಂದರು.

'ಆಯಾ ಜಿಲ್ಲೆಗಳಲ್ಲಿ ಮಂಜೂರಾದ ಗ್ರಾಮಲೆಕ್ಕಿಗರ ಹುದ್ದೆಗಳಲ್ಲಿ ಶೇ 30ಕ್ಕಿಂತ ಹೆಚ್ಚಿನ ಹುದ್ದೆಗಳು ಖಾಲಿ ಇದ್ದರೆ ನೇರ ನೇಮಕಾತಿ ಮೂಲಕ ಭರ್ತಿ ಪ್ರಕ್ರಿಯೆ ಆರಂಭಿಸುವಂತೆ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಖಾಲಿ ಇರುವ ಬೆರಳಚ್ಚುಗಾರರು ಮತ್ತು ವಾಹನ ಚಾಲಕರು ಮತ್ತು ಇತರ ಗ್ರೂಪ್ 'ಡಿ' ಹುದ್ದೆಗಳನ್ನು ಹೊರಗುತ್ತಿಗೆ ಆಧಾರದಲ್ಲಿ ಭರ್ತಿ ಮಾಡಿಕೊಳ್ಳಲು ಕ್ರಮವಹಿಸಲಾಗುತ್ತಿದೆ' ಎಂದೂ ವಿವರಿಸಿದರು.

'ರಾಜ್ಯದಲ್ಲಿ 31 ಕಂದಾಯ ಜಿಲ್ಲೆಗಳು ಮತ್ತು 53 ಉಪ ವಿಭಾಗಗಳಿವೆ. ಸಿಬ್ಬಂದಿ ಕೊರತೆ ಇದ್ದು, ತಹಶೀಲ್ದಾರ್ ಗ್ರೂಪ್ 'ಎ' ಹುದ್ದೆಗಳನ್ನು ತಹಶೀಲ್ದಾರ್ ಗ್ರೇಡ್–2 ವೃಂದದಿಂದ ಬಡ್ತಿ ಮೂಲಕ ತುಂಬಲಾಗುವುದು. ತಹಶೀಲ್ದಾರ್ ಗ್ರೂಪ್ 'ಬಿ' ಹುದ್ದೆಗಳನ್ನು ಶೇ 50ರಷ್ಟು ನೇರ ನೇಮಕಾತಿಯಿಂದ ಶೇ 50ರಷ್ಟು ಬಡ್ತಿ ಮೂಲಕ ತುಂಬಬೇಕಿದೆ. ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಹೆಚ್ಚಿನ ಸಮಯ ಅಗತ್ಯವಿದೆ. ಹೀಗಾಗಿ, ಈ ಹುದ್ದೆಗಳಿಗೆ ಶಿರಸ್ತೇದಾರರ ವೃಂದದಿಂದ ನಿಯಮ 32ರ ಅಡಿ ಸ್ವತಂತ್ರ ಪ್ರಭಾರದಲ್ಲಿರಿಸಿ ತುಂಬಲಾಗುತ್ತಿದೆ' ಎಂದು ಹೇಳಿದರು.

ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪಟ್ಟು

'ಈಶ್ವರಪ್ಪ ವಿರುದ್ಧ ದೇಶದ್ರೋಹದ ಪ್ರಕರಣ ದಾಖಲಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರ ಧ್ವಜಕ್ಕೆ ಅಪಚಾರ ಎಸಗಿರುವ ಸಚಿವ ಕೆ.ಎಸ್.ಈಶ್ವರಪ್ಪ ಅವರನ್ನು ತಕ್ಷಣ ಸಚಿವ ಸಂಪುಟದಿಂದ ವಜಾಗೊಳಿಸಿ, ಅವರ ಮೇಲೆ ದೇಶದ್ರೋಹ ಪ್ರಕರಣ ದಾಖಲಿಸಿ ತನಿಖೆ ನಡೆಸಬೇಕು ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆಗ್ರಹಿಸಿದರು.

'ಕೆಂಪು ಕೋಟೆಯಲ್ಲಿ ಕೇಸರಿ ಧ್ವಜ ಹಾರಿಸುತ್ತೇವೆ' ಎಂಬ ಈಶ್ವರಪ್ಪ ಹೇಳಿಕೆ ವಿರುದ್ಧ ವಿಧಾನಸಭೆಯಲ್ಲಿ ಬುಧವಾರ ನಿಲುವಳಿ ಸೂಚನೆ ಮಂಡಿಸಿದ ಅವರು, 'ಈಶ್ವರಪ್ಪ ಅವರು ದೇಶದ್ರೋಹದ ಹೇಳಿಕೆ ನೀಡಿ ವಾರ ಕಳೆದರೂ ಸರ್ಕಾರ ಯಾವ ರೀತಿಯ ಕ್ರಮ ಕೈಗೊಂಡಿಲ್ಲ. ನನ್ನ ಪ್ರಕಾರ, ಮುಖ್ಯಮಂತ್ರಿಗಳೇ ಅವರನ್ನು ಸ್ವಯಂಪ್ರೇರಿತರಾಗಿ ಮಂತ್ರಿಮಂಡಲದಿಂದ ವಜಾ ಮಾಡಬೇಕಿತ್ತು. ಆದರೆ, ವಜಾ ಮಾಡಿಲ್ಲ' ಎಂದರು. ಹೀಗೆ ಹೇಳುತ್ತಿದ್ದಾಗ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನಗುತ್ತಾ ಕುಳಿತಿದ್ದರು.

'ದೆಹಲಿಯಲ್ಲಿ ನಡೆಯುತ್ತಿದ್ದ ರೈತ ಚಳವಳಿಯ ಸಂದರ್ಭದಲ್ಲಿ ರಾಷ್ಟ್ರ ಧ್ವಜದ ಕೆಳಗೆ ರೈತ ಧ್ವಜ ಹಾರಿಸಿದ ಕಾರಣಕ್ಕೆ ಅಲ್ಲಿದ್ದ ರೈತರ ಮೇಲೆ ದೇಶದ್ರೋಹ ಪ್ರಕರಣ ದಾಖಲಿಸಿ ಬಂಧಿಸಲಾಗಿತ್ತು. ಅದೇ ಕೆಲಸವನ್ನು

ಸಿದ್ದರಾಮಯ್ಯ

ಈಶ್ವರಪ್ಪ ಅವರ ಮೇಲೂ ಮಾಡಬೇಕಲ್ಲವೇ? ಒಬ್ಬ ಮಂತ್ರಿಯಾಗಿ ರಾಷ್ಟ್ರಧ್ವಜಕ್ಕೆ ಗೌರವ ಸೂಚಿಸುವುದಿಲ್ಲ ಎಂದರೆ ನಿಜಕ್ಕೂ ನಾಚಿಕೆಗೇಡಿನ ವಿಚಾರ. ಇಂಥವರಿಗೆ ಒಂದು ಕ್ಷಣವೂ ಆ ಹುದ್ದೆಯಲ್ಲಿ ಮುಂದುವರೆಯುವ ನೈತಿಕತೆ ಇಲ್ಲ' ಎಂದು ಅವರು ಅಭಿಪ್ರಾಯಪಟ್ಟರು.

'ರೈತರು ಹಾರಿಸಿದ್ದು ಖಾಲಿಸ್ತಾನ ಧ್ವಜ' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದರು. ಈ ವೇಳೆ, ಆಡಳಿತ ಪಕ್ಷ ಹಾಗೂ ಕಾಂಗ್ರೆಸ್ ಸದಸ್ಯರ ನಡುವೆ ಜಟಾಪಟಿ ನಡೆಯಿತು. 'ಇಂತಹ ಅಜ್ಞಾನಿ ಗೃಹ ಸಚಿವರನ್ನು ನಾವು ನೋಡಿಲ್ಲ' ಎಂದು ಕಾಂಗ್ರೆಸ್ ಸದಸ್ಯರು ಛೇಡಿಸಿದರು. 'ಹಿಜಾಬ್ ವಿಚಾರದಿಂದ ಕಾಂಗ್ರೆಸ್ ಹೈರಾಣಾಗಿದೆ. ಅದಕ್ಕಾಗಿ ಈ ವಿಚಾರವನ್ನು ತಂದಿದೆ' ಎಂದು ಆರಗ ತಿರುಗೇಟು ಕೊಟ್ಟರು. ಬಿಜೆಪಿಯ ಸಿ.ಟಿ. ರವಿ, 'ರಾಷ್ಟ್ರಧ್ವಜ ಹಿಡಿದುಕೊಂಡವರ ಮೇಲೆ ಗುಂಡು ಹಾರಿಸಿದವರು ನೀವು. ನಿಮಗೆ ಮಾತನಾಡುವ ಹಕ್ಕಿಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದರು. ಆಗ ಪುನಃ ಕಾಂಗ್ರೆಸ್ ಹಾಗೂ ಬಿಜೆಪಿ ಸದಸ್ಯರ ಮಧ್ಯೆ ವಾಕ್ಸಮರ ನಡೆಯಿತು.

'ಈಶ್ವರಪ್ಪ ಆರ್‌ಎಸ್‌ಎಸ್ ಜೀತದಾಳು'

ಬೆಂಗಳೂರು: 'ಈ ದೇಶದಲ್ಲಿ ಸಂವಿಧಾನದ ಬದಲಿಗೆ ಮನುಸ್ಮೃತಿ ಬಂದರೆ ಈಶ್ವರಪ್ಪ ಮಂತ್ರಿಯಾಗಲು ಆಗುತ್ತಾ? ಬಿಡ್ತಾರಾ? ಕುರಿ ಕಾಯ್ಕೊಂಡು, ಕಸ ಹೊಡ್ಕೊಂಡು ಇರಬೇಕಾಗುತ್ತದೆ. ಇವರು ಗೊತ್ತಿಲ್ಲದೇ ಮಾತನಾಡುತ್ತಾರೆ. ಪಾಪ ಇವರು ಆರ್‌ಎಸ್‌ಎಸ್‌ನವರ ಜೀತದಾಳು ಆಗಿದ್ದಾರೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದ್ದಾರೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆರ್‌ಎಸ್‌ಎಸ್‌ನವರೇ ಈಶ್ವರಪ್ಪ ಅವರಿಂದ ದೇಶದ್ರೋಹದ ಹೇಳಿಕೆ ಕೊಡಿಸಿದ್ದಾರೆ ಎಂದು ದೂರಿದರು.

ದೆಹಲಿಯ ಕೆಂಪು ಕೋಟೆಯಲ್ಲಿ ರೈತರು ತಮ್ಮ ರೈತ ಧ್ವಜವನ್ನು ರಾಷ್ಟ್ರ ಧ್ವಜದ ಕೆಳಗೆ ಹಾರಿಸಿದ್ದಕ್ಕೆ ಅವರ ಮೇಲೆ ದೇಶ ದ್ರೋಹದ ಪ್ರಕರಣ ದಾಖಲಿಸಲಾಗಿದೆ. ಈಶ್ವರಪ್ಪ ಅವರಿಗೆ ಒಂದು, ರೈತರಿಗೆ ಒಂದು ಕಾನೂನಿದೆಯಾ? ಯಾವಾಗಲು ಸಂವಿಧಾನ, ರಾಷ್ಟ್ರ ಗೀತೆ, ರಾಷ್ಟ್ರ ಧ್ವಜ ಬದಲಾವಣೆ ಆಗಬೇಕು ಎನ್ನುವವರು ಬಿಜೆಪಿ ಮತ್ತು ಆರ್‌ಎಸ್‌ಎಸ್‌ನವರು ಒಂದು ದಿನವೂ ಇವುಗಳಿಗೆ ಗೌರವ ಕೊಟ್ಟಿಲ್ಲ ಎಂದು ಸಿದ್ದರಾಮಯ್ಯ ಹರಿಹಾಯ್ದರು.

ಮಾತು ಮುಂದುವರಿಸಿದ ಸಿದ್ದರಾಮಯ್ಯ, 'ಈಶ್ವರಪ್ಪ ಅವರು 2006ರಿಂದಲೂ ಸಚಿವರಾಗಿದ್ದವರು, ಅನುಭವಿಗಳು, ಹಿರಿಯರು. ಅವರು ಗೌರವದಿಂದ ಮಾತನಾಡುತ್ತಾರೆ ಎಂದು ಭಾವಿಸಿದ್ದೆ. ಆದರೆ, ಅವರು ಸಂವಿಧಾನ, ರಾಷ್ಟ್ರಧ್ವಜಬಗೆಗೆ ಬಹಳ ಅಗೌರವದಿಂದ ಮಾತನಾಡಿದ್ದಾರೆ' ಎಂದರು.

'ರಾಷ್ಟ್ರ ಗೌರವದ ಸಂಕೇತಗಳಿಗೆ ಅಗೌರವ ನಿರ್ಬಂಧಿಸುವ ಕಾಯ್ದೆ 1971 ಜಾರಿಯಲ್ಲಿದೆ. ಅದರ ಸೆಕ್ಷನ್ 2ರ ಪ್ರಕಾರ, ರಾಷ್ಟ್ರಧ್ವಜಕ್ಕೆ ಅಪಮಾನ ಮಾಡುವ ಹೇಳಿಕೆ ನೀಡಿದವರಿಗೆ ಮೂರು ವರ್ಷಗಳವರೆಗೆ ಜೈಲು ಶಿಕ್ಷೆ ವಿಧಿಸುವ ಅಥವಾ ದಂಡ ವಿಧಿಸುವ ಅಥವಾ ಎರಡನ್ನೂ ಶಿಕ್ಷೆ ರೂಪದಲ್ಲಿ ಜಾರಿ ಮಾಡಬಹುದು. ರಾಷ್ಟ್ರ ಗೀತೆ, ರಾಷ್ಟ್ರ ಧ್ವಜ, ರಾಷ್ಟ್ರ ಲಾಂಛನಕ್ಕೆ ತೋರುವ ಅಗೌರವವು ದೇಶದ್ರೋಹ ಪ್ರಕರಣದಡಿ ಬರಲಿದೆ ಎಂದು ಭಾರತೀಯ ದಂಡ ಸಂಹಿತೆಯಲ್ಲಿದೆ' ಎಂದು ಗಮನ ಸೆಳೆದರು.

ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ. ಮಾಧುಸ್ವಾಮಿ, 'ಹೇಳಿಕೆಗೂ ಸಂವಾದಕ್ಕೂ ವ್ಯತ್ಯಾಸ ಇದೆ. ಈಶ್ವರಪ್ಪ ಅವರೊಂದಿಗೆ ಟಿ.ವಿ.ಯವರು ಸಂವಾದ ನಡೆಸುತ್ತಾ ಇದ್ದರು. ಈ ವೇಳೆ, ಟಿ.ವಿಯವರು, ಕೆಂಪು ಕೋಟೆಯಲ್ಲಿ ರಾಷ್ಟ್ರ ಧ್ವಜ ಹಾರಿಸುತ್ತೀರಾ' ಎಂದು ಕೇಳಿದ್ದಾರೆ. ಅದಕ್ಕೆ ಈಶ್ವರಪ್ಪ, 'ಮುಂದಿನ 100, 500 ವರ್ಷಗಳಲ್ಲಿ ಕೆಂಪುಕೋಟೆಯಲ್ಲಿ ಕೇಸರಿ ಧ್ವಜ ಹಾರಿದರೂ ಹಾರಬಹುದು' ಎಂದಷ್ಟೇ ಹೇಳಿದ್ದಾರೆ. ಈಗ ರಾಷ್ಟ್ರಧ್ವಜವೇ ಪರಮ ಶ್ರೇಷ್ಠ ಎಂದೂ ಹೇಳಿದ್ದಾರೆ. ಇದು ದೇಶದ್ರೋಹದ ಪ್ರಕರಣ ಅಲ್ಲ. ನಿಲುವಳಿ ಸೂಚನೆ ವ್ಯಾಪ್ತಿಗೂ ಬರುವುದಿಲ್ಲ' ಎಂದು ಪ್ರತಿಪಾದಿಸಿದರು.

ಭೋಜನ ವಿರಾಮದ ಬಳಿಕ ಸಭಾಧ್ಯಕ್ಷ ಕಾಗೇರಿ ಈ ವಿಷಯದ ಕುರಿತು ರೂಲಿಂಗ್ ನೀಡಿ, ಸಿದ್ದರಾಮಯ್ಯ ಪ್ರಸ್ತಾಪಿಸಿದ ವಿಷಯ ನಿಲುವಳಿ ಸೂಚನೆಗೆ ಅರ್ಹವಲ್ಲ ಎಂದು ತಿಳಿಸಿ, ಕಲಾಪವನ್ನು ಗುರುವಾರಕ್ಕೆ ಮುಂದೂಡಿದರು.

261 ಎಕರೆ ಭೂಕಬಳಿಕೆ: ಎಸಿಬಿ ತನಿಖೆ

ಹೊಸಕೋಟೆ: ನಕಲಿ ದಾಖಲೆ ಸೃಷ್ಟಿಸಿದ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹೊಸಕೋಟೆ ತಾಲ್ಲೂಕು ಸೂಲಿಬೆಲೆ ಹೋಬಳಿಯ ಶಾಂತನಪುರ ಗ್ರಾಮದ ಸರ್ವೆ ನಂ. 9ರಲ್ಲಿ ಒಟ್ಟು 261.13 ಎಕರೆ ಜಮೀನಿಗೆ ಅಕ್ರಮವಾಗಿ ದಾಖಲೆಗಳನ್ನು ಸೃಷ್ಟಿಸಿ, ಭೂ ಕಬಳಿಕೆ ಮಾಡಿರುವ ಪ್ರಕರಣದ ತನಿಖೆಯನ್ನು ಭ್ರಷ್ಟಾಚಾರ ನಿಗ್ರಹ ದಳಕ್ಕೆ (ಎಸಿಬಿ) ವಹಿಸಲಾಗುವುದು' ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಬಿಜೆಪಿಯ ರಘುನಾಥ್ ರಾವ್ ಮಲ್ಕಾಪೂರೆ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ಒಟ್ಟು 46.24 ಎಕರೆ ಜಮೀನಿಗೆ ಸಂಬಂಧಿಸಿದಂತೆ ಕರ್ನಾಟಕ ಭೂ ಕಂದಾಯ ಕಾಯ್ದೆಯಡಿ 14 ಜನರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. 9 ಪ್ರಕರಣಗಳು ವಿಚಾರಣಾ ಹಂತದಲ್ಲಿದೆ. ಮೂರು ಪ್ರಕರಣಗಳಲ್ಲಿ ಪ್ರತಿವಾದಿಗಳು ಮೃತಪಟ್ಟಿರುವುದರಿಂದ ಅವರ ಕಾನೂನುಬದ್ಧ ವಾರಸುದಾರರ ಮಾಹಿತಿ ಪಡೆದು ಹೊಸತಾಗಿ ವಿಚಾರಣೆ ನಡೆಸಲಾಗುವುದು' ಎಂದರು.

'ಇದು ಸರ್ಕಾರಿ ಖರಾಬು ಜಮೀನು ಆಗಿದ್ದು, ದಾಖಲೆಗಳು ಅಕ್ರಮವೆಂದು ಕಂಡುಬಂದ ಪ್ರಕರಣಗಳಲ್ಲಿ ಮಂಜೂರಾತಿ ಮತ್ತು ಖಾತೆ ಬದಲಾವಣೆಯ ನೈಜತೆ ಬಗ್ಗೆ

ಆರ್. ಅಶೋಕ

ಭೂ ಕಂದಾಯ ಕಾಯ್ದೆಯಡಿ ಸ್ವಯಂ ಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ' ಎಂದರು.

'ತಾಲ್ಲೂಕು ಕಚೇರಿಯಲ್ಲಿ ಲಭ್ಯವಿರುವ ಮೂಲ ದಾಖಲೆಯಂತೆ ಈ ಜಮೀನಿನಲ್ಲಿ ತಲಾ 4 ಎಕರೆಯಂತೆ ಒಟ್ಟು 50 ಜನರಿಗೆ 200 ಎಕರೆ ಮಂಜೂರು ಆಗಿರುವುದು ಭೂ ಮಂಜೂರಿ ಕಡತದಿಂದ ಗೊತ್ತಾಗಿದೆ. ಈ ಜಮೀನನ್ನು ಪರಿಶಿಷ್ಟ ಜಾತಿ ಮತ್ತು ಪಂಗಡದ ಜನರಿಗೆ ಸರ್ಕಾರ ಮಂಜೂರು ಮಾಡಿದ್ದರೂ ಅವರನ್ನು ಬಲವಂತವಾಗಿ ಹೊರ ಹಾಕಿ ಭೂ ಕಬಳಿಕೆ ಮಾಡಿರುವ ಪ್ರಕರಣಗಳಲ್ಲಿ 'ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಭೂ ಪರಭಾರೆ ನಿಷೇಧ ಕಾಯ್ದೆ' (ಪಿಟಿಸಿಎಲ್) ಉಲ್ಲಂಘನೆಗೆ ಸಂಬಂಧಿಸಿದಂತೆ ಉಪ ವಿಭಾಗ ಕಚೇರಿಯಲ್ಲಿ ಆರು ಪ್ರಕರಣಗಳ ದಾಖಲಿಸಲಾಗಿದೆ. ಅಲ್ಲದೆ, ಈ ಜಮೀನು ವಶಕ್ಕೆ ಪಡೆದು, ಮೂಲ ಮಂಜೂರಿದಾರರಿಗೆ ಮರು ಮಂಜೂರಾತಿ ಆದೇಶ ಹೊರಡಿಸಲಾಗಿದೆ' ಎಂದರು.

'ಎರಡನೇ ಬಾರಿಯೂ ಮೂಲ ಮಂಜೂರಿದಾರರು ಜಮೀನು ಮಾರಾಟ ಮಾಡಿದ್ದಾರೆ. ಪಿಟಿಸಿಎಲ್ ಕಾಯ್ದೆ ಉಲ್ಲಂಘಿಸಿ ಜಮೀನು ಪರಬಾರೆ ಆಗಿರುವುದನ್ನು ಗಮನಿಸಿ ಎರಡನೇ ಬಾರಿಗೆ ಉಪ ವಿಭಾಗಾಧಿಕಾರಿಗಳ ಕಚೇರಿಯಲ್ಲಿ ಪ್ರಕರಣ ದಾಖಲಿಸಿಕೊಂಡು, ವಿಚಾರಣೆ ಬಳಿಕ ಆ ಜಮೀನುಗಳನ್ನು ಕೂಡಾ ಸರ್ಕಾರದ ವಶಕ್ಕೆ ಪಡೆಯಲಾಗಿದೆ' ಎಂದೂ ಅಶೋಕ ವಿವರಿಸಿದರು.

'ಜಮೀನು ವಶಕ್ಕೆ ಪಡೆದಿರುವ ಉಪ ವಿಭಾಗಾಧಿಕಾರಿಯ ಆದೇಶ ಪ್ರಶ್ನಿಸಿ ಮಂಜೂರಿದಾರರ ವಾರಾಸುದಾರರು ಮತ್ತು ಕ್ರಯದಾರರು ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಪಿಟಿಸಿಎಲ್ ಕಾಯ್ದೆಯ ಕಲಂ 5(ಎ) ಅನ್ವಯ ಪ್ರಕರಣ ದಾಖಲಿಸಿದ್ದಾರೆ. ಜಮೀನು ಮಂಜೂರಿದಾರರ ವಾರಾಸುದಾರರು ದಾಖಲಿಸಿರುವ ಆರು ಮೇಲ್ಮನವಿ ಪ್ರಕರಣಗಳು ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿದೆ. ಈ ನಡುವೆ ಅವರು ಹೈಕೋರ್ಟ್‌ನಲ್ಲಿ ಆರು ರಿಟ್ ಅರ್ಜಿಗಳನ್ನು ದಾಖಲಿಸಿದ್ದಾರೆ. ಈ ಪೈಕಿ, ನಾಲ್ಕರಲ್ಲಿ ಹೈಕೋರ್ಟ್ ತಡೆಯಾಜ್ಞೆ ನೀಡಿದೆ. ಎರಡು ಪ್ರಕರಣಗಳು ವಿಚಾರಣಾ ಹಂತದಲ್ಲಿವೆ. ಹೀಗಾಗಿ ಮಂಜೂರಿದಾರರಿಗೆ ಜಮೀನು ಹಿಂದಿರುಗಿಸಲು ಸಾಧ್ಯ ಆಗಿಲ್ಲ' ಎಂದು ಅವರು ಹೇಳಿದರು.

ಎರಡು ಮಸೂದೆ ಮಂಡನೆ

ಬೆಂಗಳೂರು: ಯಾವುದೇ ಗೃಹ ನಿರ್ಮಾಣ ಸಹಕಾರ ಸಂಘದ ನಿವೇಶನ ಹಂಚಿಕೆದಾರನಿಗೆ ಹಸ್ತಾಂತರಣ ಪತ್ರದ ಮೇಲಿನ ಕರಾರು ಮಾಡಿಕೊಂಡ ದಿನದಂದು ಇದ್ದ ನಿವೇಶನ ಮಾರುಕಟ್ಟೆ ಮೌಲ್ಯದ ಮೇಲೆ ಸ್ಟಾಂಪು ಶುಲ್ಕ ಪಾವತಿಸುವ ಉದ್ದೇಶಕ್ಕಾಗಿ 'ಕರ್ನಾಟಕ ಸ್ಟಾಂಪು(ತಿದ್ದುಪಡಿ) ವಿಧೇಯಕ'ವನ್ನು ವಿಧಾನಸಭೆಯಲ್ಲಿ ಬುಧವಾರ ಮಂಡಿಸಲಾಯಿತು.

ಆರ್ಥಿಕ ಅಪರಾಧಗಳಿಗೆ ಒಳಗಾದ ಸಂತ್ರಸ್ತರ ಸ್ವತ್ತುಗಳನ್ನು ವಶಪಡಿಸಿಕೊಳ್ಳುವ ಉದ್ದೇಶಕ್ಕಾಗಿ ಕ್ರಿಮಿನಲ್ ಕಾನೂನು ತಿದ್ದುಪಡಿ ಮಸೂದೆಯನ್ನು ಮಂಡಿಸಲಾಯಿತು.

2023 ರ ಚುನಾವಣೆಯ 'ಟ್ರೈಲರ್' ಪ್ರದರ್ಶನ: ಕುಮಾರಸ್ವಾಮಿ

ಬೆಂಗಳೂರು: ವಿಧಾನಸಭೆಯಲ್ಲಿ ಇವತ್ತು ನಡೆದ ವಿದ್ಯಮಾನ ಪ್ರಜಾಪ್ರಭುತ್ವವನ್ನೇ ಅಣಕಿಸುವಂತೆ ಇದ್ದು, 2023 ರ ಚುನಾವಣೆಯಲ್ಲಿ ಏನೆಲ್ಲಾ ನಡೆಯುತ್ತದೆ ಎಂಬುದರ ಟ್ರೈಲರ್ ತೋರಿಸಿದ್ದಾರೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ವ್ಯಂಗ್ಯವಾಡಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸದನದಲ್ಲಿ ನಡೆದ ಘಟನೆಗಳು ಪ್ರಜಾಪ್ರಭುತ್ವಕ್ಕೆ ಶೋಭೆಯಲ್ಲ. ರಾಷ್ಟ್ರೀಯ ಪಕ್ಷಗಳು ತಮ್ಮ ಹಿತಕ್ಕಾಗಿ ಕನ್ನಡಿಗರ ಹಣವನ್ನು ಪೋಲು ಮಾಡುತ್ತಿವೆ. ರಾಜ್ಯದಲ್ಲಿ ಈಗ ಉದ್ಭವಿಸಿರುವ ಶೈಕ್ಷಣಿಕ ಬಿಕ್ಕಟ್ಟಿನ ಬಗ್ಗೆ ಪ್ರಸ್ತಾಪಿಸಲು ನಮಗೆ ಅವಕಾಶವೇ ಸಿಗಲಿಲ್ಲ' ಎಂದರು.

'ಕಾಂಗ್ರೆಸ್ ನಾಯಕರ ವರ್ತನೆಯನ್ನು ಗಮನಿಸಿದೆ. ಅವರಲ್ಲಿ ಕೆಲವರು ತೊಡೆ ತಟ್ಟಿಕೊಂಡು ಗೂಳಿಗಳ ರೀತಿಯಲ್ಲಿ ನುಗ್ಗುತ್ತಿದ್ದರು. ರಾಷ್ಟ್ರೀಯ ಪಕ್ಷವೊಂದರ ರಾಜ್ಯ ಅಧ್ಯಕ್ಷರು ಮತ್ತು ಸಚಿವರು ಪರಸ್ಪರ ಪದ ಬಳಕೆ ದೇವರಿಗೇ ಪ್ರೀತಿ. ಪವಿತ್ರವಾದ ಸದನದ ಸಮಯ ಹಾಳು ಮಾಡಿದರು. ಸಂಸದೀಯ ವ್ಯವಸ್ಥೆಗೆ ಕಳಂಕ ತರುವ ಕೆಲಸವಿದು' ಎಂದು ಹೇಳಿದರು.

'ರಾಜ್ಯದಲ್ಲಿ ಶೈಕ್ಷಣಿಕ ಬಿಕ್ಕಟ್ಟಿನ ಬಗ್ಗೆ ನಮ್ಮ ಪಕ್ಷವೂ ನಿಲುವಳಿ ಸೂಚನೆ ಮಂಡಿಸಿತ್ತು. ಕಾಂಗ್ರೆಸ್ ಅಧಿಕೃತ ವಿರೋಧ ಪಕ್ಷ ಎನ್ನುವ ಕಾರಣಕ್ಕೆ ಸಭಾಧ್ಯಕ್ಷರು ಅವರಿಗೆ ಮೊದಲು ಅವಕಾಶ ನೀಡಿದರು. ಜ್ವಲಂತ ವಿಷಯವನ್ನು ಪ್ರಸ್ತಾಪಿಸುವ ನಮ್ಮ ಅವಕಾಶ ಹಾಳು ಮಾಡಿಲಾಯಿತು' ಎಂದು ಅವರು ಬೇಸರ ವ್ಯಕ್ತಪಡಿಸಿದರು.

ಕೇಂದ್ರದ 'ಒಂದು ಶ್ರೇಣಿ, ಒಂದು ಪಿಂಚಣಿ' ನೀತಿಯನ್ನು ಪ್ರಶ್ನಿಸಿದ ಸುಪ್ರೀಂಕೋರ್ಟ್

ನವದೆಹಲಿ: ಸಶಸ್ತ್ರ ಪಡೆಗಳಲ್ಲಿನ 'ಒಂದು ಶ್ರೇಣಿ, ಒಂದು ಪಿಂಚಣಿ' (ಒಆರ್‌ಒಪಿ) ನೀತಿ ಕುರಿತು ಕೇಂದ್ರ ಸರ್ಕಾರವನ್ನು ಬುಧವಾರ ಪ್ರಶ್ನಿಸಿರುವ ಸುಪ್ರೀಂಕೋರ್ಟ್, ವಾಸ್ತವವಾಗಿ ನೀಡಿದ್ದಕ್ಕಿಂತ ಹೆಚ್ಚಿನದ್ದನ್ನು ಕೊಟ್ಟಿರುವುದಾಗಿ ಹೇಳುತ್ತಿರುವುದು ಅತಿಶಯೋಕ್ತಿ ಎಂದು ಹೇಳಿದೆ.

ನ್ಯಾಯಾಲಯ ಇದೇ ವೇಳೆ ಕೇಂದ್ರದ 'ಮಾರ್ಪಡಿಸಿದ ಅಶ್ಯೂರ್ಡ್ ಕೆರಿಯರ್ ಪ್ರೋಗ್ರೆಷನ್' (ಎಂಎಸಿಪಿ) ಯೋಜನೆಯನ್ನೂ ಪ್ರಶ್ನಿಸಿದೆ.

'ಕೇಂದ್ರ ಸರ್ಕಾರವು ಒಆರ್‌ಒಪಿ ನೀತಿಯನ್ನು ಹೇಗೆ ಜಾರಿಗೊಳಿಸಿದೆ ಮತ್ತು ಸೈನಿಕರಿಗೆ ಯಾವ ಪ್ರಯೋಜನಗಳನ್ನು ವಿಸ್ತರಿಸಿದೆ' ಎಂದು ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್, ಸೂರ್ಯಕಾಂತ್, ವಿಕ್ರಮ್‌ನಾಥ್ ಅವರನ್ನೊಳಗೊಂಡ ಪೀಠ ಕೇಳಿದೆ.

ಕೇಂದ್ರದ ಪರವಾಗಿ ಹೆಚ್ಚುವರಿ ಸಾಲಿಸಿಟರ್ ಜನರಲ್ ಎನ್. ವೆಂಕಟರಾಮನ್ ಹಾಜರಾದರು.

ರಾಷ್ಟ್ರಧ್ವಜ ಹಿಡಿದು ಧರಣಿ ನಡೆಸಿದ ಕಾಂಗ್ರೆಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆಯಲ್ಲಿ ಕಾಂಗ್ರೆಸ್ ಶಾಸಕರು ರಾಷ್ಟ್ರ ಧ್ವಜ ಹಿಡಿದು ಪ್ರತಿಭಟನೆ ನಡೆಸಿದ್ದು, ಆಡಳಿತ ಮತ್ತು ವಿರೋಧ ಪಕ್ಷಗಳ ಮಧ್ಯೆ ಜಟಾಪಟಿಗೆ ಕಾರಣವಾಯಿತು.

ಕಾಂಗ್ರೆಸ್ ಶಾಸಕರು 'ಬಿಜೆಪಿಗೆ ಧಿಕ್ಕಾರ', 'ಆರ್‌ಎಸ್‌ಎಸ್ ಕೈಗೊಂಬೆ ಸರ್ಕಾರ', 'ದೇಶದ್ರೋಹಿ ಸರ್ಕಾರ' ಇತ್ಯಾದಿ ಘೋಷಣೆ ಕೂಗಿದರು. ಇದಕ್ಕೆ ಪ್ರತಿಯಾಗಿ ಬಿಜೆಪಿ ಸದಸ್ಯರೂ ಕಾಂಗ್ರೆಸ್ ವಿರುದ್ಧ ಘೋಷಣೆಗಳನ್ನು ಕೂಗಿದರು. ಈ ಸಂದರ್ಭದಲ್ಲಿ ರಾಷ್ಟ್ರಧ್ವಜವನ್ನು ಎತ್ತಿ ಹಿಡಿದು ಆಡಿಸುತ್ತಿದ್ದರು. ಸಭಾಧ್ಯಕ್ಷರು ಎಚ್ಚರಿಕೆ ಮಾತುಗಳನ್ನು ಆಡಿದರೂ ಶಾಸಕರು ಕಿವಿಗೆ ಹಾಕಿಕೊಳ್ಳಲಿಲ್ಲ.

ತಮ್ಮ ಮಾತಿಗೆ ಕಿವಿಗೊಡದ ಕಾರಣ ಕೆರಳಿದ ಸಭಾಧ್ಯಕ್ಷರು, ರಾಷ್ಟ್ರಧ್ವಜಕ್ಕೆ ಅಗೌರವ ತೋರಿಸುತ್ತಿದ್ದೀರಿ. ಧರಣಿಗೆ ಈ ರೀತಿ ರಾಷ್ಟ್ರಧ್ವಜ ಬಳಸುತ್ತಿರುವುದು ಸರಿಯಲ್ಲ. ಇದು ಸದನದ ಗೌರವಕ್ಕೂ ಚ್ಯುತಿ ತರುತ್ತದೆ ಎಂದು ಕಾಗೇರಿ ಗದರಿದರೂ ಧರಣಿ ನಿರತರು ಮಾತ್ರ ಅದಕ್ಕೆ ಕಿವಿಗೊಡಲಿಲ್ಲ. ಸದನದಲ್ಲಿ ಗದ್ದಲ ತಾರಕಕ್ಕೇರಿತು.

ಆಗ ಮಧ್ಯ ಪ್ರವೇಶಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, 'ನೀವು ಈ ರೀತಿ ಪ್ರತಿಭಟನೆಗೆ ರಾಷ್ಟ್ರಧ್ವಜ ಬಳಸುತ್ತಿರುವುದು ಕಾನೂನಿಗೆ ವಿರುದ್ಧವಾದುದು. ಧ್ವಜ ಸಂಹಿತೆಯನ್ನು ಉಲ್ಲಂಘಿಸಿದ್ದೀರಿ. ಪಕ್ಷಕ್ಕೆ 100 ವರ್ಷಕ್ಕೂ ಹೆಚ್ಚಿನ ಇತಿಹಾಸ ಇದೆ ಎಂದು ಹೇಳುತ್ತೀರಿ. ಆದರೆ, ರಾಷ್ಟ್ರಧ್ವಜವನ್ನು ಯಾವ ರೀತಿ ಗೌರವ ತೋರಿಸಬೇಕು ಎಂಬುದು ಗೊತ್ತಿಲ್ಲ. ರಾಜಕಾರಣಕ್ಕಾಗಿ ರಾಷ್ಟ್ರಧ್ವಜ ಬಳಸುತ್ತಿದ್ದೀರಿ' ಎಂದು ಹರಿಹಾಯ್ದರು.

'ಈ ಹಿಂದೆ ಹುಬ್ಬಳ್ಳಿಯಲ್ಲಿ (ಈದ್ಗಾ ಮೈದಾನ) ನಿಮ್ಮ ಅವಧಿಯಲ್ಲಿ ರಾಷ್ಟ್ರಧ್ವಜ ಹಾರಿಸಲು ಬಿಡಲಿಲ್ಲ. ಆಗ ಗಲಾಟೆ ಆದಾಗ ಗೋಲಿಬಾರ್ ಮಾಡಿಸಿ ಆರು ಮಂದಿಯನ್ನು ಕಗ್ಗೊಲೆ ಮಾಡಿಸಿದಿರಿ. ನಿಮ್ಮ ಸರ್ಕಾರ ಹೋದ ಮೇಲೆ ಅಲ್ಲಿ ರಾಷ್ಟ್ರಧ್ವಜ ಹಾರಿಸಲು ಅವಕಾಶ ಸಿಕ್ಕಿತು. ರಾಷ್ಟ್ರ ಧ್ವಜ ಹಾರಿಸಲು ಅವಕಾಶ ನೀಡದ ನೀವು ನಮಗೆ ಪಾಠ ಹೇಳಬೇಕಾಗಿಲ್ಲ. ರಾಷ್ಟ್ರಧ್ವಜದ ಬಗ್ಗೆ ಉದ್ದುದ್ದ ಭಾಷಣ ಮಾಡುವ ನಿಮಗೆ ರಾಷ್ಟ್ರಧ್ವಜ ಹೇಗೆ ಗೌರವದಿಂದ ಕಾಣಬೇಕು ಎಂಬುದು ಗೊತ್ತಿಲ್ಲ' ಎಂದು ತಿವಿದರು.

ಸಚಿವ ವಿ.ಸುನಿಲ್‌ಕುಮಾರ್ ಮಾತನಾಡಿ , ರಾಷ್ಟ್ರ ಧ್ವಜವನ್ನು ಕಾಂಗ್ರೆಸ್ ಪಕ್ಷ ತನ್ನ ರಾಜಕೀಯ ಪ್ರತಿಭಟನೆಗಾಗಿ ಸದನದಲ್ಲಿ ಬಳಕೆ ಮಾಡಿರುವುದು ಸದನ, ಸಂವಿಧಾನ ಮತ್ತು ತಿರಂಗ ಧ್ವಜಕ್ಕೆ ಮಾಡಿದ ಅಪಮಾನ ಎಂದು ಹರಿಹಾಯ್ದರು.

'ಸರ್ಕಾರಿ ಶಾಲೆಗಳ ಮರುರೂಪಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರಿ ಶಾಲೆಗಳನ್ನು ಆದ್ಯತೆಯ ಮೇರೆಗೆ ಮರುರೂಪಿಸಲು ಬಜೆಟ್‌ನಲ್ಲಿ ಸರ್ಕಾರ ದಿಟ್ಟ ಕ್ರಮಗಳನ್ನು ಪ್ರಕಟಿಸಬೇಕು' ಎಂದು ಪಿಇಎಸ್ ವಿಶ್ವವಿದ್ಯಾಲಯದ ಕುಲಾಧಿಪತಿ ಪ್ರೊ.ಎಂ.ಆರ್. ದೊರೆಸ್ವಾಮಿ ಸಲಹೆ ನೀಡಿದ್ದಾರೆ.

'ರಾಜ್ಯದ 48 ಸಾವಿರಕ್ಕೂ ಹೆಚ್ಚು ಸರ್ಕಾರಿ ಶಾಲೆಗಳನ್ನು ಮರುರೂಪಿಸುವ ಅಗತ್ಯ ಇದೆ. ಮೂಲಸೌಕರ್ಯ, ಶಿಕ್ಷಕ–ವಿದ್ಯಾರ್ಥಿ ಅನುಪಾತ, ಶೈಕ್ಷಣಿಕ ಗುಣಮಟ್ಟ ಮತ್ತು ವಿದ್ಯಾರ್ಥಿಗಳ ಸಮಗ್ರ ವ್ಯಕ್ತಿತ್ವ ವಿಕಸನದ ಅಂಶಗಳನ್ನು ವಿಶ್ಲೇಷಿಸಿದಾಗ ಸರ್ಕಾರಿ ಶಾಲೆಗಳ ಸ್ಥಿತಿ ಬದಲಾಗದಿರುವುದು ದುರದೃಷ್ಟಕರ. ಸ್ವಾತಂತ್ರ್ಯ ದೊರೆತು ಏಳು ದಶಕಗಳು ಶಾಲೆಗಳ ಪರಿಸ್ಥಿತಿ ಸುಧಾರಿಸಿಲ್ಲ' ಎಂದು ಅವರು ಹೇಳಿದ್ದಾರೆ.

'ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯ ಸರ್ಕಾರಗಳು ಕೈಗೊಂಡಿರುವ ಉಪಕ್ರಮಗಳು ಗಮನಾರ್ಹವಾದುದು. ಆಂಧ್ರಪ್ರದೇಶ ಸರ್ಕಾರವು ಸಮಗ್ರ ಶಾಲಾ ಅಭಿವೃದ್ಧಿ ಯೋಜನೆಯನ್ನು



ಪ್ರೊ.ಎಂ.ಆರ್. ದೊರೆಸ್ವಾಮಿ

ಈಗಾಗಲೇ ಅನುಷ್ಠಾನಗೊಳಿಸಿದೆ. ಇದೇ ರೀತಿ ತೆಲಂಗಾಣ ಸರ್ಕಾರವು ₹7,289 ಕೋಟಿ ಅನುದಾನದ ಅಡಿ 'ಮನ ಊರು ಮನ ಬಡಿ' ಯೋಜನೆ ಅಡಿ ಸರ್ಕಾರಿ ಶಾಲೆಗಳನ್ನು ಅಭಿವೃದ್ಧಿಪಡಿಸಲು ಇದೇ ತಿಂಗಳಲ್ಲಿ ನಡೆದ ಸಂಪುಟ ಸಭೆಯಲ್ಲಿ ತೀರ್ಮಾನಿಸಿದೆ' ಎಂದು ಅವರು ವಿವರಿಸಿದ್ದಾರೆ.

'ಕರ್ನಾಟಕ ರಾಜ್ಯವು ಜಾಗತಿಕವಾಗಿ ಶೈಕ್ಷಣಿಕ ನೆಲೆಯಾಗಿದೆ. ಹೀಗಾಗಿ, ದೇಶಕ್ಕೆ ನಾಯಕನ ಸ್ಥಾನದಲ್ಲಿದ್ದುಕೊಂಡು ದೆಹಲಿ ಶಾಲೆಗಳಂತೆ ಅಭಿವೃದ್ಧಿ ಮಾಡಬೇಕು. ಈ ನಿಟ್ಟಿನಲ್ಲಿ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ಮೂಲಕ ಮತ್ತು ಸರ್ಕಾರೇತರ ಸಂಸ್ಥೆಗಳ ಬೆಂಬಲ ಪಡೆದು ಮುಖ್ಯಮಂತ್ರಿ ಅವರು ₹15 ಸಾವಿರ ಕೋಟಿಗಳನ್ನು ಅನುದಾನದ ರೂಪದಲ್ಲಿ ಬಿಡುಗಡೆ ಮಾಡಬೇಕು' ಎಂದು ಕೋರಿದ್ದಾರೆ.

ದೇಶದ್ರೋಹ ಪ್ರಕರಣ ದಾಖಲಿಸಿ: ಡಿಕೆಶಿ

ಸಚಿವ ಕೆ.ಎಸ್. ಈಶ್ವರಪ್ಪ ವಿರುದ್ಧ ದೇಶದ್ರೋಹದ ಪ್ರಕರಣ ಇಷ್ಟರಲ್ಲೇ ದಾಖಲಿಸಿಕೊಳ್ಳಬೇಕಿತ್ತು. ಸಂಪುಟದಿಂದ ವಜಾಗೊಳಿಸಲು ರಾಜ್ಯಪಾಲರು ಮುಖ್ಯಮಂತ್ರಿಯವರಿಗೆ ಸೂಚಿಸಬೇಕಿತ್ತು. ಮುಖ್ಯಕಾರ್ಯದರ್ಶಿ ಆಗಲಿ, ಪೊಲೀಸ್ ಮಹಾ ನಿರ್ದೇಶಕರಾಗಲಿ ಸ್ವಯಂ ಪ್ರೇರಿತರಾಗಿ ಅವರ ವಿರುದ್ಧ ದೇಶದ್ರೋಹ ಪ್ರಕರಣ ದಾಖಲಿಸಬೇಕಿತ್ತು. ಇದ್ಯಾವುದೂ ಆಗಿಲ್ಲ ಎಂದರೆ ಏನರ್ಥ? ನಾವು–ನೀವು ಸೇರಿ ಇಂತಹ ದೇಶದ್ರೋಹಿಗಳ ವಿರುದ್ಧ ಹೋರಾಟ ಮಾಡಬೇಕು.

ಡಿ.ಕೆ.ಶಿವಕುಮಾರ್, ಕಾಂಗ್ರೆಸ್ ಶಾಸಕ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ವಿಧಾನ ಪರಿಷತ್ ಕಲಾಪವನ್ನು ಬುಧವಾರ ವಿದ್ಯಾರ್ಥಿನಿಯರು ವೀಕ್ಷಿಸಿದರು –ಪ್ರಜಾವಾಣಿ ಚಿತ್ರ

ಗುದ್ದಾಟದ ಕಡೆ ಕೈ–ಕಮಲ 'ಕಲಿ'ಗಳ ನಡೆ

ಒಂದನೇ ಪುಟದಿಂದ...

ಈ ವೇಳೆ ಶಿವಕುಮಾರ್ ಅವರನ್ನು ರಾಮಲಿಂಗಾರೆಡ್ಡಿ, ಎಚ್.ಕೆ.ಪಾಟೀಲ ಮತ್ತಿತರರು ಸಮಾಧಾನಪಡಿಸಲು ಯತ್ನಿಸಿದರು. ಕೋಪದಿಂದಲೇ ಕುದಿಯುತ್ತಿದ್ದ ಶಿವಕುಮಾರ್ ಅವರು ಈಶ್ವರಪ್ಪ ಕುಳಿತ ಸ್ಥಳಕ್ಕೆ ನುಗ್ಗಿದರು. ಈಶ್ವರಪ್ಪ ಸಹ 'ಬಾ ಬಾ ಮುಟ್ಟು' ಎಂದು ಮುನ್ನುಗಿದರು. ಪರಸ್ಪರರು ಏಕವಚನದಿಂದ ಬೈದಾಡಿಕೊಂಡರು.

ಇದರಿಂದ ಸದನದಲ್ಲಿ ಗದ್ದಲದ ವಾತಾವರಣ ಸೃಷ್ಟಿಯಾಯಿತು. ಈ ಮಧ್ಯೆ, ವಿಧಾನಸಭಾಧ್ಯಕ್ಷರು ಮೈಕ್ ಬಂದ್ ಮಾಡಿಸಿದರು. ಎರಡು ಪಕ್ಷದ ಸದಸ್ಯರ ಜಟಾಪಟಿ ತೀವ್ರಗೊಳ್ಳುತ್ತಿದ್ದಂತೆ ಸಭಾಧ್ಯಕ್ಷರು ಕಲಾಪವನ್ನು ಮಧ್ಯಾಹ್ನ 3 ಗಂಟೆಗೆ ಮುಂದೂಡಿದರು.

ಆ ಬಳಿಕವೂ ಎರಡು ಪಕ್ಷದ ಸದಸ್ಯರ ವಾಕ್ಸಮರ ಮುಂದುವರಿಯಿತು. 'ನಮಗೆ ಹೊಡೆಯಿರಿ' ಎಂದು ಸವಾಲು–ಪ್ರತಿ ಸವಾಲು ಹಾಕಿದರು. ಶಿವಕುಮಾರ್ ಅವರನ್ನು ಕಾಂಗ್ರೆಸ್ ಸದಸ್ಯರು ಹಾಗೂ ಈಶ್ವರಪ್ಪ ಅವರನ್ನು ಬಿಜೆಪಿ ಸದಸ್ಯರು ಸಮಾಧಾನಪಡಿಸಿ ದೂರ ಕರೆದುಕೊಂಡು ಹೋದರು. ಆ ನಂತರವೂ ಕಾಂಗ್ರೆಸ್ ಸದಸ್ಯರು, 'ದೇಶದ್ರೋಹಿ ಈಶ್ವರಪ್ಪ ಅವರನ್ನು ಸಂಪುಟದಿಂದ ವಜಾ ಮಾಡಬೇಕು' ಎಂದು ಘೋಷಣೆ ಕೂಗಿದರು.

ಕಾಂಗ್ರೆಸ್‌ನಿಂದ ದಾರಿ ತಪ್ಪಿಸುವ ಕೆಲಸ: ಬೊಮ್ಮಾಯಿ

ಕೇಸರಿ ಧ್ವಜವನ್ನು 100–500 ವರ್ಷಗಳ ನಂತರ ಹಾರಿಸಲು ಸಾಧ್ಯವಾಗಬಹುದು ಎಂದು ಈಶ್ವರಪ್ಪ ಹೇಳಿದ್ದಾರೆ. ಈಗ ರಾಷ್ಟ್ರಧ್ವಜವನ್ನು ಒಪ್ಪಿಕೊಂಡಿದ್ದು, ಎಲ್ಲರೂ ಗೌರವ ನೀಡಬೇಕು ಎಂದೂ ಅವರು ಹೇಳಿದ್ದಾರೆ. ಆದರೆ, ಕಾಂಗ್ರೆಸ್ ಪಕ್ಷ ಅವರ ಹೇಳಿಕೆಯ ಆಯ್ದ ಭಾಗಗಳನ್ನು ಮಾತ್ರ ಉಲ್ಲೇಖಿಸಿ ಜನರ ಮತ್ತು ಸದನದ ದಾರಿ ತಪ್ಪಿಸುವ ಕೆಲಸ ನಡೆಸಿದೆ. ಸಚಿವರ ಹೇಳಿಕೆಯಲ್ಲಿ ಕಾನೂನಾತ್ಮಕವಾಗಿ ಯಾವುದೇ ಉಲ್ಲಂಘನೆಯಾಗಿಲ್ಲ. ಇಲ್ಲ ಸಲ್ಲದ ವಿಚಾರಗಳನ್ನು ಪ್ರಸ್ತಾಪಿಸುತ್ತಿರುವುದು ಕಾಂಗ್ರೆಸ್‌ನ ರಾಜಕೀಯ ದಿವಾಳಿತನಕ್ಕೆ ಸಾಕ್ಷಿ.

ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ಹೇಳಿಕೆಯ ದುರುಪಯೋಗ: ಈಶ್ವರಪ್ಪ

100 ರಿಂದ 500 ವರ್ಷಗಳ ಬಳಿಕ ಕೇಸರಿ ಧ್ವಜ ಹಾರಬಹುದು ಎಂದು ಹೇಳಿದ್ದೆ. ಆದರೆ, ನನ್ನ ಹೇಳಿಕೆಯನ್ನು ಕಾಂಗ್ರೆಸ್‌ನವರು ದುರುಪಯೋಗಪಡಿಸಿಕೊಂಡಿದ್ದಾರೆ. ಡಿ.ಕೆ. ಶಿವಕುಮಾರ್ ಜೈಲಿಗೆ ಹೋಗಿ ಬಂದವರು. ಈಗ ಜಾಮೀನಿನ ಮೇಲೆ ಹೊರಗೆ ಇದ್ದಾರೆ. ರಾಜ್ಯವನ್ನು ಲೂಟಿ ಹೊಡೆದವರು. ಅವರ ಅಪ್ಪ ದೇಶದ್ರೋಹಿ. ನನ್ನ ಹೇಳಿಕೆಯನ್ನು ತಿರುಚಿದ ಅವನನ್ನೇ ಬಂಧಿಸಬೇಕು.

ಕೆ.ಎಸ್.ಈಶ್ವರಪ್ಪ, ಗ್ರಾಮೀಣಾಭಿವೃದ್ಧಿ ಸಚಿವ

ಭೋಜನ ವಿರಾಮದ ಬಳಿಕ ಸಂಜೆ 4 ಕ್ಕೆ ಸಮಾವೇಶಗೊಂಡಾಗ, ಕಾಂಗ್ರೆಸ್ ಸದಸ್ಯರು ಧರಣಿ ಮುಂದುವರಿಸಿದರು. 'ರಾಷ್ಟ್ರಧ್ವಜದ ಕುರಿತು ಸಚಿವ ಈಶ್ವರಪ್ಪ ಅವರು ನೀಡಿರುವ ಹೇಳಿಕೆಯನ್ನು ವಿರೋಧಿಸಿ ನಿಲುವಳಿ ಸೂಚನೆಯಡಿ ವಿಷಯ ಪ್ರಸ್ತಾಪಿಸಲು ಅವಕಾಶವಿಲ್ಲ' ಎಂದು ಸಭಾಧ್ಯಕ್ಷ ಕಾಗೇರಿ ಕೊನೆಯಲ್ಲಿ ರೂಲಿಂಗ್ ನೀಡಿದರು. ಧರಣಿ ಮತ್ತು ಗದ್ದಲ ಮುಂದುವರಿದಾಗ ಕಲಾಪವನ್ನು ಗುರುವಾರಕ್ಕೆ ಮುಂದೂಡಲಾಯಿತು.

ರಾಜ್ಯದ ಕೆಲವೆಡೆ ಪ್ರತಿಭಟನೆ, ಮುಂದುವರೆದ ವಾಕ್ಸಮರ

ಹಿಜಾಬ್: ತರಗತಿ ಬಹಿಷ್ಕರಿಸಿದ ವಿದ್ಯಾರ್ಥಿನಿಯರು

ಒದನೇ ಪುಟದಿಂದ...

ಪ್ರತಿಭಟನೆ: ಹಿಜಾಬ್ ಧರಿಸಿ ಬಂದ ವಿದ್ಯಾರ್ಥಿನಿಯರಿಗೆ ಪ್ರವೇಶ ನಿರಾಕರಿಸಿದ್ದರಿಂದ ಬೆಳಗಾವಿಯ ಕೆಎಲ್‌ಇ ಸಂಸ್ಥೆಯ ಲಿಂಗರಾಜು ಪಿಯು ಕಾಲೇಜು, ಚಿಕ್ಕಮಗಳೂರಿನ ಎಂಇಎಸ್ ಮತ್ತು ಮೌಂಟನ್ ವ್ಯೂ ಕಾಲೇಜಿನ ಕೆಲವು ವಿದ್ಯಾರ್ಥಿನಿಯರು ಪ್ರತಿಭಟನೆ ನಡೆಸಿದರು.

ಹುಬ್ಬಳ್ಳಿಯ ಜೆ.ಸಿ. ನಗರದ ಮೂರುಸಾವಿರ ಮಠ ವಿದ್ಯಾವರ್ಧಕ ಸಂಘದ ಕಲಾ ಮತ್ತು ವಾಣಿಜ್ಯ ಮಹಿಳಾ ಮಹಾವಿದ್ಯಾಲಯದ 10ಕ್ಕೂ ಹೆಚ್ಚು ಪದವಿ ವಿದ್ಯಾರ್ಥಿನಿಯರು 'ಹಿಜಾಬ್ ಧರಿಸಿಯೇ ತರಗತಿ ಹೋಗುತ್ತೇವೆ' ಎಂದು ಪಟ್ಟು ಹಿಡಿದಿದ್ದರಿಂದ ಕಾಲೇಜು ಆವರಣದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು. ನಂತರ ಕಾಲೇಜಿಗೆ ಅನಿರ್ದಿಷ್ಟಾವಧಿ ರಜೆ ಘೋಷಣೆ ಮಾಡಲಾಯಿತು. ಚಿತ್ರದುರ್ಗ ಜಿಲ್ಲೆ ಹೊಸದುರ್ಗದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ 6 ಹಾಗೂ ಉರ್ದು ಶಾಲೆಯಲ್ಲಿ 40 ವಿದ್ಯಾರ್ಥಿನಿಯರು ಗೈರುಹಾಜರಾದರು.

ರಾಮನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ 40ಕ್ಕೂ ಹೆಚ್ಚು ವಿದ್ಯಾರ್ಥಿನಿಯರು ತರಗತಿಯಿಂದ ಹೊರಗೆ ಉಳಿದರು. ಕೋಲಾರ ಹಾಗೂ ಬಂಗಾರಪೇಟೆಯ ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿಯರು ಸಹ ತರಗತಿ ಬಹಿಷ್ಕರಿಸಿ ಪೋಷಕರೊಂದಿಗೆ ಮನೆಯತ್ತ ಹೆಜ್ಜೆ ಹಾಕಿದರು.

ತುಮಕೂರು ನಗರದ ಎಂಪ್ರೆಸ್ ಸರ್ಕಾರಿ ಬಾಲಕಿಯರ ಪದವಿಪೂರ್ವ ಕಾಲೇಜಿನಲ್ಲಿ ವಿದ್ಯಾರ್ಥಿನಿಯರು ಪ್ರತಿಭಟನೆ ನಡೆಸಿದರು. ಹಿಜಾಬ್ ತೆಗೆದುಬಂದರೆ ಮಾತ್ರ ಪ್ರವೇಶ ನೀಡಲಾಗುವುದು. ಇಲ್ಲವಾದರೆ ಅವಕಾಶ ಇಲ್ಲ ಎಂದು ಸ್ಪಷ್ಟಪಡಿಸಿದರು. ಇದಕ್ಕೆ ಒಪ್ಪದಿದ್ದಾಗ 'ಅಲ್ಲಾಹು ಅಕ್ಬರ್' ಎಂದು ಘೋಷಣೆ ಕೂಗಿದರು.

ಕಲಬುರಗಿಯ ಐವಾನ್ 'ಇ ಶಾಹಿ ಬಡಾವಣೆಯ ಪಾಲಿಟೆಕ್ನಿಕ್ ಕಾಲೇಜಿನ 15, ಯಾದಗಿರಿ ಕನ್ನಡ ಪದವಿ ಪೂರ್ವ ಕಾಲೇಜಿನ 15 ಹಾಗೂ ಶಹಾಪುರದಲ್ಲಿ 25 ವಿದ್ಯಾರ್ಥಿನಿಯರು ಕಾಲೇಜಿನಿಂದ ಹೊರ ನಡೆದರು.

ರಾಯಚೂರಿನ ಅನುದಾನಿತ ಎಸ್‌ಎಸ್‌ಆರ್‌ಜಿ ಪದವಿ ಮಹಿಳಾ ಮಹಾವಿದ್ಯಾಲಯದ ವಿದ್ಯಾರ್ಥಿನಿಯರು 'ಹಿಜಾಬ್ ನಮ್ಮ ಹಕ್ಕು' ಎಂದು ಘೋಷಣೆ ಕೂಗುತ್ತ ಪ್ರತಿಭಟಿಸಿದರು. ಮಾನ್ವಿಯ ಬಾಪುಮಿಯಾ ಸಾಹುಕಾರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಹಿಜಾಬ್ ಧರಿಸಿದ್ದ 15 ವಿದ್ಯಾರ್ಥಿನಿಯರನ್ನು ತರಗತಿಯಿಂದ ಹೊರಗಡೆ ಕಳುಹಿಸಲಾಯಿತು.

ಹಿಜಾಬ್ ತೆಗೆದು ತರಗತಿಗೆ: ಉಡುಪಿಯ ಸರ್ಕಾರಿ ಬಾಲಕಿಯರ ಪದವಿಪೂರ್ವ ಕಾಲೇಜಿನ ಆರು ವಿದ್ಯಾರ್ಥಿನಿಯರು ಬುಧವಾರ ಕಾಲೇಜಿಗೆ ಗೈರಾಗಿದ್ದರು. ಇತರ ಮುಸ್ಲಿಂ ವಿದ್ಯಾರ್ಥಿನಿಯರು ಕಾಲೇಜು ಆವರಣಕ್ಕೆ ಹಿಜಾಬ್ ಧರಿಸಿ ಬಂದರು. ಬಳಿಕ ಅದನ್ನು ತೆಗೆದು ತರಗತಿಗೆ ತೆರಳಿದರು.

ಗದುಗಿನ ಗಂಗಿಮಡಿಯಲ್ಲಿರುವ ಉರ್ದು ಶಾಲೆ, ಲಕ್ಷ್ಮೇಶ್ವರದ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿಯೂ ಹಿಜಾಬ್‌ಗೆ ಸಂಬಂಧಿಸಿ ಕೆಲ ಹೊತ್ತು ಗೊಂದಲ ನಿರ್ಮಾಣವಾಗಿತ್ತು. ಬಳಿಕ ಪರಿಸ್ಥಿತಿ ತಿಳಿಯಾಗಿ ವಿಜ್ಞಾನ ವಿಭಾಗದ ವಿದ್ಯಾರ್ಥಿನಿಯರು ಹಿಜಾಬ್ ತೆಗೆದು ತರಗತಿಗೆ ತೆರಳಿ ಪೂರಕ ಪರೀಕ್ಷೆ ಬರೆದರು.

ಹೊಸಪೇಟೆಯ ಥಿಯೋಸಫಿಕಲ್ ಕಾಲೇಜಿನ ಕೆಲ ವಿದ್ಯಾರ್ಥಿನಿಯರು ಹಿಜಾಬ್ ತೆಗೆದು ತರಗತಿಗೆ ಹಾಜರಾದರು. ಚಿತ್ರದುರ್ಗ ಜಿಲ್ಲೆ ಹೊಸದುರ್ಗದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ನಾಲ್ವರು ಮಾತ್ರ ತರಗತಿಗೆ ಹಾಜರಾಗಿದ್ದರು. ಹಿರಿಯೂರು, ಮೊಳಕಾಲ್ಮೂರು, ಚಳ್ಳಕೆರೆ, ಹೊಳಲ್ಕೆರೆಯಲ್ಲಿ ಎಂದಿನಂತೆ ತರಗತಿಗಳು ನಡೆದವು.

ರಿಪ್ಪನ್‌ಪೇಟೆಯಲ್ಲೂ ಹಲವು ವಿದ್ಯಾರ್ಥಿನಿಯರು ಕಾಲೇಜಿಗೆ ಗೈರಾಗಿದ್ದರೆ, ಭದ್ರಾವತಿಯ ಸಂಚಿಹೊನ್ನಮ್ಮ ಪ್ರೌಢಶಾಲೆಯ 70 ವಿದ್ಯಾರ್ಥಿನಿಯರು ಹಿಜಾಬ್ ತೆಗೆಯಲು ನಿರಾಕರಿಸಿ ಶಾಲಾ ಆವರಣದಲ್ಲೇ ಸಮಯ ಕಳೆದರು.

ಶಿರಾಳಕೊಪ್ಪದ ಬಾಲಕಿಯರ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಹೈಕೋರ್ಟ್ ಮಧ್ಯಂತರ ಆದೇಶದ ಪ್ರತಿಯನ್ನು ಓದಿ ಹೇಳಿದರೂ ವಿದ್ಯಾರ್ಥಿನಿಯರು ಹಿಜಾಬ್ ಧರಿಸಲು ಅನುಮತಿ ನೀಡಬೇಕು ಎಂದು ಪಟ್ಟು ಹಿಡಿದರು.

ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರಿನ ರಥಬೀದಿ ಸರ್ಕಾರಿ ಪದವಿ ಕಾಲೇಜಿನ ಇಬ್ಬರು, ಮೂಲ್ಕಿಯ ಪೊಂಪೈ ಪದವಿ ಕಾಲೇಜಿನ 26 ಹಾಗೂ ವಿಟ್ಲ ಸರ್ಕಾರಿ ಪ್ರಥಮ ದರ್ಜೆ ಪದವಿ ಕಾಲೇಜಿನ 11 ವಿದ್ಯಾರ್ಥಿನಿಯರು ಹಿಜಾಬ್ ತೆಗೆಯಲು ನಿರಾಕರಿಸಿ, ಮನೆಗೆ ವಾಪಸಾದರು. ಚಿಕ್ಕಮಗಳೂರು ಜಿಲ್ಲೆ ಕಡೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ 14, ಎನ್.ಆರ್. ಪುರದ ಸರ್ಕಾರಿ ಪದವಿಪೂರ್ವ ಕಾಲೇಜಿನ ಎಂಟು ವಿದ್ಯಾರ್ಥಿನಿಯರು ವಾಪಸ್ ಹೋದರು.

ಉಡುಪಿಯ ಜಿ.ಶಂಕರ್ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಕೆಲ ವಿದ್ಯಾರ್ಥಿನಿಯರು ತರಗತಿಗೆ ಹಾಜರಾಗದೆ ಮನೆಗೆ ತೆರಳಿದರೆ, ಇನ್ನು ಕೆಲವರನ್ನು ವಿಶ್ರಾಂತಿ ಕೊಠಡಿಯಲ್ಲಿ ಕೂರಿಸಲಾಗಿತ್ತು.

ಶಿರಸಿ ತಾಲ್ಲೂಕಿನ ಚೈತನ್ಯ ಪದವಿಪೂರ್ವ ಕಾಲೇಜು, ಎಂ.ಇ.ಎಸ್. ಪದವಿಪೂರ್ವ ಕಾಲೇಜು, ಪ್ರೊಗ್ರೆಸ್ಸಿವ್ ಪದವಿಪೂರ್ವ ಕಾಲೇಜು, ಚಿಪಗಿಯ ಜೆ.ಎಂ.ಜೆ. ಪದವಿ ಪೂರ್ವ ಕಾಲೇಜು, ಬನವಾಸಿಯ ಸರ್ಕಾರಿ ಪದವಿ ಪೂರ್ವ ಕಾಲೇಜು ಮತ್ತು ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ 62 ವಿದ್ಯಾರ್ಥಿನಿಯರು ಹಿಜಾಬ್ ತೆಗೆಯಲು ಒಪ್ಪಲಿಲ್ಲ.

ಹೊಸಪೇಟೆ ನಗರದ ಕೆಎಸ್‌ಪಿಎಲ್ ಕಾಲೇಜಿನ 12 ವಿದ್ಯಾರ್ಥಿನಿಯರು ಹಿಜಾಬ್ ತೆಗೆಯಲು ನಿರಾಕರಿಸಿ ತರಗತಿಗಳಿಗೆ ಗೈರಾದರು.

ಮೈಸೂರಿನ ರಾಜೀವ್ ನಗರದ ಸರ್ಕಾರಿ ಪದವಿಪೂರ್ವ ಕಾಲೇಜಿನ 14 ವಿದ್ಯಾರ್ಥಿನಿಯರು, ಹಾಸನ ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್ ಕಾಲೇಜಿನ 11 ವಿದ್ಯಾರ್ಥಿನಿಯರು, ಬೇಲೂರಿನ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರೌಢಶಾಲಾ ವಿಭಾಗದ 39 ವಿದ್ಯಾರ್ಥಿನಿಯರು, ಕೊಡಗು ಜಿಲ್ಲೆಯ ನೆಲ್ಲಿಹುದಿಕೇರಿಯ ಕರ್ನಾಟಕ ಪಬ್ಲಿಕ್ ಶಾಲೆಯ 38 ವಿದ್ಯಾರ್ಥಿನಿಯರು, ಶನಿವಾರಸಂತೆ ಪಟ್ಟಣದ ಭಾರತಿ ವಿದ್ಯಾಸಂಸ್ಥೆ ಪ್ರಥಮ ದರ್ಜೆ ಕಾಲೇಜಿನ ಆರು ವಿದ್ಯಾರ್ಥಿನಿಯರು ಕಾಲೇಜಿಗೆ ಪ್ರವೇಶಿಸದೆ ಮನೆಗೆ ಹಿಂದಿರುಗಿದರು.

ಹಿಜಾಬ್ ಧರಿಸಲು ಅವಕಾಶ ಕೋರಿ ವಿದ್ಯಾರ್ಥಿನಿಯರು ತಮ್ಮ ಸಮುದಾಯದವರ ಜೊತೆ ಸೇರಿ ಹುಬ್ಬಳ್ಳಿಯ ಜೆಸಿ ನಗರದ ಮಹಿಳಾ ಮಹಾವಿದ್ಯಾಲಯದ ಮುಂಭಾಗ ಬುಧವಾರ ಪ್ರತಿಭಟನೆ ನಡೆಸಿದರು

ಪ್ರಜಾವಾಣಿ ಚಿತ್ರ

'ನಾವೇನೂ ಕೊಲೆ ಮಾಡಲು ಬಂದಿಲ್ಲ, ಓದೋಕೆ ಬಂದಿರೋದು'

ಶಿವಮೊಗ್ಗದ ಡಿವಿಎಸ್ ಕಾಲೇಜಿನಲ್ಲಿ ಹಿಜಾಬ್ ಧರಿಸಿ ಬಂದಿದ್ದ ವಿದ್ಯಾರ್ಥಿನಿಗೆ ಹಿಜಾಬ್ ತೆಗೆದು ಕಾಲೇಜು ಒಳಗೆ ಪ್ರವೇಶ ಮಾಡುವಂತೆ ಉಪನ್ಯಾಸಕರು ಸೂಚಿಸಿದರು. ಇದರಿಂದ ಸಿಟ್ಟಿಗೆದ್ದ ವಿದ್ಯಾರ್ಥಿನಿ, 'ನಾನು ಕೊಲೆ ಮಾಡಲು ಬಂದಿಲ್ಲ, ಓದುವುದಕ್ಕೆ ಬಂದಿರೋದು. ಹಿಜಾಬ್ ನಮ್ಮ ಹೆಮ್ಮೆ, ನಾನು ತೆಗೆಯಲ್ಲ' ಎಂದು ಆಕ್ರೋಶ ಹೊರಹಾಕಿದ್ದಾರೆ. ಇನ್ನು ಹಿಜಾಬ್ ತೆಗೆಯಲು ಒಪ್ಪದ ಹಲವು ವಿದ್ಯಾರ್ಥಿನಿಯರು ಮನೆಗೆ ತೆರಳಿದ್ದಾರೆ.

ಹಿಜಾಬ್: ಹೈಕೋರ್ಟ್‌ನಲ್ಲಿ ಮುಂದುವರಿದ ವಿಚಾರಣೆ

'ಮುಸ್ಲಿಮರೇ ಗುರಿ – ಧರ್ಮ ರಾಜಕಾರಣ'

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಸರ್ಕಾರ ಪೂರ್ವಗ್ರಹ ಭಾವನೆ ತೋರಿದೆ
- ಸಿಡಿಸಿಗಳು ಪ್ರಜಾಪ್ರಭುತ್ವಕ್ಕೆ ಮಾರಕ
- ಕಾಲೇಜುಗಳಲ್ಲಿ ಹಿಜಾಬ್ ಧರಿಸಬೇಕೆಂಬ ಕಾನೂನಿಲ್ಲ

ಬೆಂಗಳೂರು: 'ನಮ್ಮ ದೇಶದಲ್ಲಿ ನೂರಾರು ಧಾರ್ಮಿಕ ಚಿಹ್ನೆ, ಧಾರಣೆಗಳಿದ್ದು ಬಹು ತೆರನಾದ ಅವುಗಳನ್ನು ಶಾಂತಿಯಿಂದ ಪಾಲನೆ ಮಾಡುತ್ತಿರುವಾಗ ರಾಜ್ಯ ಸರ್ಕಾರ ಹಿಜಾಬ್ ವಿಷಯವನ್ನು ಹೆಕ್ಕಿ ತೆಗೆಯುವ ಮೂಲಕ ಶಾಲೆ-ಕಾಲೇಜುಗಳಲ್ಲಿ ಸಮವಸ್ತ್ರ ನಿರ್ಬಂಧ ಹೇರಿದೆ. ಮುಸ್ಲಿಂ ವಿದ್ಯಾರ್ಥಿನಿಯರನ್ನು ಗುರಿಯಾಗಿಸಿಕೊಂಡು ಧರ್ಮ ರಾಜಕಾರಣ ಮಾಡುತ್ತಿದೆ' ಎಂದು ಹಿಜಾಬ್ ಪ್ರಕರಣದ ಅರ್ಜಿದಾರರ ಪರ ಹಿರಿಯ ವಕೀಲ ರವಿವರ್ಮ ಕುಮಾರ್ ಬಲವಾದ ಆರೋಪ ಮಾಡಿದರು.

ಹಿಜಾಬ್ ಧರಿಸಿ ಪ್ರವೇಶಿಸುವುದನ್ನು ನಿರ್ಬಂಧಿಸಿದ್ದ ಕೆಲ ಶಾಲೆ-ಕಾಲೇಜುಗಳ ನಿರ್ಧಾರ ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ದಾಖಲಾಗಿರುವ ಎಲ್ಲ ರಿಟ್ ಅರ್ಜಿಗಳ ವಿಚಾರಣೆಯನ್ನು, ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ, ನ್ಯಾಯಮೂರ್ತಿಗಳಾದ ಕೃಷ್ಣ ಎಸ್.ದೀಕ್ಷಿತ್ ಮತ್ತು ಖಾಜಿ ಜೈಬುನ್ನೀಸಾ ಮೊಹಿಯುದ್ದೀನ್ ಅವರಿದ್ದ ಮೂವರು ಸದಸ್ಯರ ಸಾಂವಿಧಾನಿಕ ನ್ಯಾಯಪೀಠ ಬುಧವಾರ ಮುಂದುವರಿಸಿತು.

ಅರ್ಜಿದಾರ ವಿದ್ಯಾರ್ಥಿನಿಯರ ಪರ ವಾದ ಮುಂದುವರಿಸಿದ ರವಿವರ್ಮ ಕುಮಾರ್, 'ಶಾಲೆ-ಕಾಲೇಜು ತರಗತಿಗಳಿಗೆ ಹಾಜರಾಗಬೇಕಾದರೆ ಹಿಜಾಬ್ ಧರಿಸುವಂತಿಲ್ಲ ಎಂಬ ನಿಷೇಧ, ನಿಯಮ ಅಥವಾ ಕಾನೂನು ಎಲ್ಲಿಯೂ ಇಲ್ಲ. ಸರ್ಕಾರ ಹೊರಡಿಸಿರುವ ಆದೇಶದಲ್ಲಿ ಹಿಜಾಬ್ ಹೊರತುಪಡಿಸಿ ಬೇರೆ ಯಾವ ಧರ್ಮದ ಚಿಹ್ನೆಯನ್ನೂ ಪರಿಗಣಿಸಿಲ್ಲ. ಮುಸ್ಲಿಂ ಎಂಬ ಒಂದೇ ಒಂದು ಕಾರಣಕ್ಕೆ ಪೂರ್ವಗ್ರಹ ಪೀಡಿತ ಭಾವನೆಯಿಂದ ಹಿಜಾಬ್ ಅನ್ನು ಮಾತ್ರವೇ ಗುರಿಯಾಗಿಸಿಕೊಂಡು ಸರ್ಕಾರ ಪೊಲೀಸ್ ಬಲ ಪ್ರಯೋಗಿಸುತ್ತಿದೆ' ಎಂದು ಆರೋಪಿಸಿದರು.

'ಪೊಲೀಸ್ ಬಲ' ಎಂಬ ಪದ ಪ್ರಯೋಗಕ್ಕೆ ಆಕ್ಷೇಪ ವ್ಯಕ್ತಪಡಿಸಿದ ನ್ಯಾಯಪೀಠ, 'ಇದರ ಅರ್ಥ ವಿವರಿಸುವಂತೆ' ಕೇಳಿತು. ಇದಕ್ಕೆ ರವಿವರ್ಮ ಕುಮಾರ್, 'ಪೊಲೀಸ್ ಬಲ ಎಂದರೆ ಮೇಲ್ವಿಚಾರಣೆ ಮತ್ತು ನಿಯಂತ್ರಣ' ಎಂದು ಉತ್ತರಿಸಿದರು. 'ಇದನ್ನು ತಿದ್ದಿದ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್, 'ಅದನ್ನು ಪೇರೆಂಟಲ್ ಪವರ್ ಎನ್ನುತ್ತಾರೆಯೇ ಹೊರತು ಪೊಲೀಸ್ ಪವರ್ ಅಲ್ಲ' ಎಂದು ಸ್ಪಷ್ಟಪಡಿಸಿದರು.

ವಾದ ಮುಂದುವರಿಸಿದ ರವಿವರ್ಮ ಕುಮಾರ್, 'ನಿಯಮದ ಪ್ರಕಾರ ಸರ್ಕಾರಿ ಪದವಿಪೂರ್ವ ಕಾಲೇಜುಗಳಲ್ಲಿ ಸಮವಸ್ತ್ರ ಕಡ್ಡಾಯವೇ ಅಲ್ಲ. ಹಾಗೊಂದು ವೇಳೆ ಸಮವಸ್ತ್ರದ ಕುರಿತು ವಿದ್ಯಾರ್ಥಿಗಳಿಗೆ ಒತ್ತಡ ಹೇರಿದ್ದೇ ಆದಲ್ಲಿ ಅದು ಕಾನೂನು ಬಾಹಿರ ಮತ್ತು ಅಂತಹ ಕಾಲೇಜು ಪ್ರಾಂಶುಪಾಲರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬಹುದು. ಆದರೆ, ಇಲ್ಲಿ ಕಾಲೇಜು ಆಡಳಿತ ಮಂಡಳಿ ವಿದ್ಯಾರ್ಥಿಗಳ ವಿರುದ್ಧವೇ ಕ್ರಮ ತೆಗೆದುಕೊಂಡಿರುವುದು ವಿಪರ್ಯಾಸ' ಎಂದರು.

ಶಾಲೆ-ಕಾಲೇಜು ತರಗತಿಗಳಲ್ಲಿ ಈಗಾಗಲೇ ಮುಸ್ಲಿಂ ವಿದ್ಯಾರ್ಥಿನಿಯರ ಸಂಖ್ಯೆ ಕಡಿಮೆ ಇದೆ. ಸರ್ಕಾರ ಹಿಜಾಬ್ ನಿರ್ಬಂಧಿಸಿರುವುದು ಮುಸ್ಲಿಂ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಹಿನ್ನಡೆಯಾಗಿದೆ'

ರವಿವರ್ಮ ಕುಮಾರ್ ಹಿರಿಯ ವಕೀಲ

'ಸಮವಸ್ತ್ರ ಕಡ್ಡಾಯಗೊಳಿಸುವ ಜವಾಬ್ದಾರಿಯನ್ನು ಕಾಲೇಜು ಆಡಳಿತ ಮಂಡಳಿಗೆ (ಸಿಡಿಸಿ) ನೀಡಲಾಗಿದೆ. ಈ ಸಿಡಿಸಿಗೆ ಸ್ಥಳೀಯ ಶಾಸಕರೇ ಅಧ್ಯಕ್ಷರು. ವಿಪರ್ಯಾಸ ಎಂದರೆ ಶಾಸಕ ಸರ್ಕಾರಕ್ಕೆ ಅಧೀನವಾಗಿ ಕಾರ್ಯ ನಿರ್ವಹಿಸುವುದೇ ಸಮರ್ಥನೀಯವಲ್ಲ. ಸಮವಸ್ತ್ರದ ವಿಚಾರದಲ್ಲಂತೂ ಸ್ಥಳೀಯ ಶಾಸಕರ ಉಮೇದುವಾರಿಕೆ ಒಪ್ಪಂತಹುದಲ್ಲ. ಯಾವುದೇ ಪಕ್ಷದ ಶಾಸಕ ತನ್ನ ರಾಜಕೀಯ ಪಕ್ಷ ಮತ್ತು ಅದರ ಸಿದ್ಧಾಂತದ ಪ್ರತಿನಿಧಿ ಆಗಿರುತ್ತಾನೆ. ಅದನ್ನು ಮಕ್ಕಳ ಮೇಲೆ ಹೇರಿ ಒಪ್ಪುವಂತೆ ಮಾಡಲು ಸಾಧ್ಯವೇ, ಇವರನ್ನೆಲ್ಲಾ ಒಳಗೊಂಡು ಸಿಡಿಸಿ ರಚಿಸುವುದೇ ಕಾನೂನು ಬಾಹಿರ ಮತ್ತು ಪ್ರಜಾಪ್ರಭುತ್ವಕ್ಕೆ ಮಾರಕ. ಈ ಸಮಿತಿಗಳು ಶಾಸನಬದ್ಧ ಅಲ್ಲವಾದ್ದರಿಂದ ರದ್ದುಪಡಿಸಬೇಕು' ಎಂದು ರವಿವರ್ಮ ಕುಮಾರ್ ಪ್ರತಿಪಾದಿಸಿದರು.

ಮಧ್ಯಂತರ ಅರ್ಜಿ: ವಿಚಾರಣೆ ಆರಂಭದಲ್ಲಿ ರಿಟ್ ಅರ್ಜಿಗಳಿಗೆ ಸಂಬಂಧಿಸಿದಂತೆ 20ಕ್ಕೂ ಹೆಚ್ಚು ಮಧ್ಯಂತರ ಅರ್ಜಿಗಳು ಸಲ್ಲಿಕೆಯಾಗಿರುವುದನ್ನು ಗಮನಿಸಿದ ನ್ಯಾಯಪೀಠ, 'ಹೀಗೆ ನಿರಂತರವಾಗಿ ಮಧ್ಯಂತರ ಅರ್ಜಿಗಳನ್ನು ಸಲ್ಲಿಸುತ್ತಿದ್ದರೆ, ಪ್ರಕರಣವನ್ನು ತ್ವರಿತವಾಗಿ ಇತ್ಯರ್ಥಗೊಳಿಸುವುದಾದರೂ ಹೇಗೆ' ಎಂದು ಪ್ರಶ್ನಿಸಿ, 'ಎಲ್ಲಾ ಮಧ್ಯಂತರ ಅರ್ಜಿಗಳ ವಿಚಾರಣೆ ಅಗತ್ಯವಿಲ್ಲ' ಎಂದು ವಿಚಾರಣೆಯನ್ನು ಫೆ.17ಕ್ಕೆ ಮುಂದೂಡಿದೆ.

ಹಿಜಾಬ್ ನಿರ್ಬಂಧ ನಿರಂಕುಶ ಕ್ರಮ

'ಹಿಜಾಬ್ ನಿರ್ಬಂಧಿಸಿರುವ ಸರ್ಕಾರದ ಕ್ರಮ ನಿರಂಕುಶ ಕ್ರಮ. ಈ ರೀತಿಯ ಆದೇಶ ಹೊರಡಿಸುವ ಮುನ್ನ ಸಮಿತಿಯಿಂದ, ಶಿಕ್ಷಕರು-ಪೋಷಕರ ಅಹವಾಲನ್ನೂ ಆಲಿಸಬೇಕಿತ್ತು. ಯಾರನ್ನೂ ಕೇಳದೆ ಹೀಗೆ ಆದೇಶ ಹೊರಡಿಸಿರುವುದು ಏಕಪಕ್ಷೀಯ' ಎಂದು ಬಾಂಬೆ ಹೈಕೋರ್ಟ್‌ನ ಹಿರಿಯ ವಕೀಲ ಯೂಸುಫ್ ಮುಚ್ಚಳ ಪ್ರತಿಪಾದಿಸಿದರು.

'ಸಂವಿಧಾನದಲ್ಲಿ ಪ್ರತಿಯೊಬ್ಬರಿಗೂ ಅಭಿವ್ಯಕ್ತಿ ಸ್ವಾತಂತ್ರ್ಯ ನೀಡಲಾಗಿದೆ. ಹೀಗಾಗಿ, ಸಮವಸ್ತ್ರದ ಹೆಸರಲ್ಲಿ ಬೇರೆಯವರ ಹಕ್ಕುಗಳನ್ನು ಮೊಟಕುಗೊಳಿಸಲಾಗದು. ಮುಸ್ಲಿಂ ಹೆಣ್ಣು ಮಕ್ಕಳು ಹಿಜಾಬ್ ಧರಿಸುವುದು ತಮ್ಮ ಸಂಪ್ರದಾಯ ಹಾಗೂ ಹಕ್ಕು ಎಂದು ಭಾವಿಸಿದ್ದಾರೆ. ಸರ್ಕಾರ ಇದನ್ನು ಗೌರವಿಸಬೇಕು. ಹಿಜಾಬ್ ಹೆಸರಲ್ಲಿ ಅವರ ಶಿಕ್ಷಣದ ಹಕ್ಕನ್ನು ಕಿತ್ತುಕೊಳ್ಳಬಾರದು' ಎಂದರು.

'ಬಡ ಮುಸ್ಲಿಂ ವಿದ್ಯಾರ್ಥಿನಿಯರೇ ಗುರಿ'

'ಶಾಲೆ-ಕಾಲೇಜುಗಳಿಗೆ ಹೋಗುವ ಹೆಣ್ಣುಮಕ್ಕಳು ಬಿಂದಿ, ಬಳೆ ತೊಡುತ್ತಾರೆ. ಸಿಖ್ಖರು, ಮುಸ್ಲಿಮರು ಗಡ್ಡ ಬಿಟ್ಟಿರುತ್ತಾರೆ. ಕ್ರಿಶ್ಚಿಯನ್ ವಿದ್ಯಾರ್ಥಿನಿಯರು ಕ್ರಾಸ್ ಧರಿಸುತ್ತಾರೆ. ಸಿಖ್ ವಿದ್ಯಾರ್ಥಿಗಳು ಟರ್ಬನ್ ಸುತ್ತಿರುತ್ತಾರೆ. ಇವೆಲ್ಲಾ ಅವರವರ ಧಾರ್ಮಿಕ ಕುರುಹುಗಳು. ಎಲ್ಲರೂ ತಂತಮ್ಮ ಧಾರ್ಮಿಕ ಗುರುತುಗಳನ್ನು ಬಳಸುತ್ತಾರೆ. ಇದ್ಯಾವುದನ್ನೂ ನಿರ್ಬಂಧಿಸದ ಸರ್ಕಾರ, ಬಡ ಮುಸ್ಲಿಂ ವಿದ್ಯಾರ್ಥಿನಿಯರ ಹಿಜಾಬ್ ನಿರ್ಬಂಧಿಸಿದ್ದೇಕೆ' ಎಂದು ರವಿವರ್ಮ ಕುಮಾರ್ ನ್ಯಾಯಪೀಠವನ್ನು ಪ್ರಶ್ನಿಸಿದರು.

'ಶಾಲಾ-ಕಾಲೇಜು ತರಗತಿಗಳು ಸಮಾಜದ ವೈವಿಧ್ಯತೆಯ ಪ್ರತಿಬಿಂಬವಾಗಿರಬೇಕು. ಆದರೆ, ಈಗ ಧರ್ಮದ ಆಧಾರದಲ್ಲಿ ತಾರತಮ್ಯ ಎಸಗಲಾಗುತ್ತಿದೆ. ಶಾಸಕರ ಕರ್ತವ್ಯ ಮೂಲಭೂತ ಸೌಕರ್ಯ ಕಲ್ಪಿಸುವುದು ವಿನಃ ಸಿಡಿಸಿಯಲ್ಲಿನ ಸಮವಸ್ತ್ರ ವಿಚಾರದಲ್ಲಿ ಮೂಗು ತೂರಿಸುವುದಲ್ಲ' ಎಂದರು.

'ಕೋರ್ಟ್ ಆದೇಶ ಉಲ್ಲಂಘಿಸಿ ಹಿಜಾಬ್ ತೆರವು'

ಬೆಂಗಳೂರು: 'ಹಿಜಾಬ್ ವಿವಾದದಲ್ಲಿ ಹೈಕೋರ್ಟ್ ನೀಡಿರುವ ಮಧ್ಯಂತರ ಆದೇಶವನ್ನು ತಪ್ಪಾಗಿ ಅರ್ಥೈಸುವ ಮೂಲಕ ಮುಸ್ಲಿಂ ವಿದ್ಯಾರ್ಥಿಗಳು ಮತ್ತು ಶಿಕ್ಷಕರ ಹಿಜಾಬ್ ಅನ್ನು ಬಲವಂತವಾಗಿ ತೆಗೆಸಲು ಕೆಲ ಪಟ್ಟಭದ್ರ ಹಿತಾಸಕ್ತಿಗಳು ಕಾನೂನುಬಾಹಿರ ಕೃತ್ಯಗಳನ್ನು ಮಾಡುತ್ತಿವೆ' ಎಂದು ಮುಸ್ಲಿಂ ಸಂಘಟನೆಗಳು ಖಂಡನೆ ವ್ಯಕ್ತಪಡಿಸಿವೆ.

ಈ ಸಂಬಂಧ ಕರ್ನಾಟಕ ಮುಸ್ಲಿಂ ಮುತ್ತಹಿದ ಮಹಾಜ್, ಜಮಾತ್ ಇ ಇಸ್ಲಾಮಿ ಹಿಂದ್ , ಜಮೀಯತ್ ಉಲ್ಲಾ ಉಲೇಮಾ ಸೇರಿದಂತೆ ವಿವಿಧ ಮುಸ್ಲಿಂ ಸಂಘಟನೆಗಳು ಹಾಗೂ ಸಮುದಾಯದ ಮುಖಂಡರು ಬುಧವಾರ ಜಂಟಿ ಸುದ್ದಿಗೋಷ್ಠಿ ನಡೆಸಿದರು.

'ಯಾವ ಕಾಲೇಜು ಅಭಿವೃದ್ಧಿ ಸಮಿತಿಗಳು (ಸಿಡಿಸಿ) ವಸ್ತ್ರ ಸಂಹಿತೆ ನಿಗದಿಪಡಿಸಿವೆಯೋ ಮತ್ತು ಯಾವ ಶೈಕ್ಷಣಿಕ ಸಂಸ್ಥೆಗಳು ಸಮವಸ್ತ್ರ ನೀತಿಯನ್ನು ಜಾರಿ ಮಾಡಿವೆಯೊ ಅವುಗಳಿಗೆ ಮಾತ್ರವೇ ಈ ಆದೇಶ ಸೀಮಿತ' ಎಂದು ಕೋರ್ಟ್ ಸ್ಪಷ್ಟಪಡಿಸಿದ್ದರೂ ಕೆಲ ಶಾಲಾ ಆಡಳಿತಗಳು ಹಿಜಾಬ್ ವಿಚಾರದಲ್ಲಿ ವಿದ್ಯಾರ್ಥಿನಿಯರು ಹಾಗೂ ಶಿಕ್ಷಕಿಯರನ್ನು ಅವಮಾನಿಸುತ್ತಿವೆ' ಎಂದು ಮುಸ್ಲಿಂ ಸಮುದಾಯದ ಮುಖಂಡರು ದೂರಿದರು.

'ಕೆಲ ಸುದ್ದಿ ವಾಹಿನಿಗಳೂ ಹಿಜಾಬ್ ತೆರವು ಮಾಡುವ ದೃಶ್ಯಗಳನ್ನು ತಮಗೆ ಬೇಕಾದಂತೆ ಚಿತ್ರೀಕರಿಸಿ, ಕೀಳುಮಟ್ಟದ ಕೆಲಸ ಮಾಡಿರುವುದು ಖಂಡನೀಯ. ಶಾಂತಿ ಕದಡಲು ಪ್ರಯತ್ನಿಸುತ್ತಿರುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದರು.

'ಮುಸ್ಲಿಂ ಸಮುದಾಯದ ಯಾವುದೇ ವಿದ್ಯಾರ್ಥಿನಿ ಅಥವಾ ಅವರ ಪೋಷಕರು ಇಂತಹ ಕೃತ್ಯಗಳಿಂದ ನೊಂದಿದ್ದರೆ, ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ದೂರು ಸಲ್ಲಿಸಲು ಮುಂದೆ ಬರಬಹುದು. ಅವರ ಬೆಂಬಲಕ್ಕೆ ನಾವೆಲ್ಲ ನಿಲ್ಲುತ್ತೇವೆ' ಎಂದೂ ಹೇಳಿದರು.

THE FEDERAL BANK LIMITED
Regd. Office: Aluva, Kerala.
ZONAL OFFICE: 1st Floor, Halcyon Complex, No.9, St Marks Road, Bangalore-560 001.
e-mail: bgrr-cpc@federalbank.co.in Phone: 080-22074610/604/613/624/625 Web: www.federalbank.co.in

BGRR/PvtSale/2021-22 **PUBLIC NOTICE GOLD AUCTION** 16/02/2022

Notice is hereby given to the public in general and the account holders in particular that e-auction of the pledged gold ornaments in the below mentioned account/s will be conducted by Federal Bank Ltd, on 23.02.2022 through online portal, https://gold.samil.in Interested buyers may log on to the auction portal or contact the Bank at contact@federalbank.co.in for further information.

Branch name	Rupeek	Branch name	Rupeek	Branch name	Rupeek
Bangalore J P Nagar	18276100232756/85255	Bangalore J P Nagar	18276100240429/2104953	Bangalore J P Nagar	18276100236278/2099952
Bangalore J P Nagar	18276100240973/2105763	Bangalore J P Nagar	18276100239538/2063015	Bangalore J P Nagar	18276100217252/2062095
Bangalore J P Nagar	18276100234240/2097403	Bangalore J P Nagar	18276100232715/2095286	Bangalore J P Nagar	18276100241559/2106616
Bangalore J P Nagar	18276100240544/2105174	Bangalore J P Nagar	18276100240353/2104939	Bangalore J P Nagar	18276100243985/2109915
Bangalore J P Nagar	18276100243498/2109051	Bangalore J P Nagar	18276100233556/2096121	Bangalore J P Nagar	18276100232582/2095346
Bangalore J P Nagar	18276100264809/2133321	Bangalore J P Nagar	18276100231469/2093793	Bangalore J P Nagar	18276100260757/2129640
Bangalore J P Nagar	18276100258835/2127260	Bangalore J P Nagar	18276100235684/2099349	Bangalore J P Nagar	18276100256409/2124421
Bangalore J P Nagar	18276100240809/2105441	Bangalore J P Nagar	18276100258132/2083664	Bangalore J P Nagar	18276100213939/2056800
Bangalore J P Nagar	18276100256912/2124805	Bangalore J P Nagar	18276100239975/2104572	Bangalore J P Nagar	18276100234281/2097503
Bangalore J P Nagar	18276100264890/2133271	Bangalore J P Nagar	18276100256896/2124711	Bangalore J P Nagar	18276100237482/2101334
Bangalore J P Nagar	18276100237474/2101335	Bangalore J P Nagar	18276100260195/2128894	Bangalore J P Nagar	18276100230644/2092784
Bangalore J P Nagar	18276100239504/2104000	Bangalore J P Nagar	18276100264452/2133036	Bangalore J P Nagar	18276100237441/2101084
Bangalore J P Nagar	18276100233648/2096568	Bangalore J P Nagar	18276100238837/2103294	Bangalore J P Nagar	18276100234216/2097402
Bangalore J P Nagar	18276100258553/2126927	Bangalore J P Nagar	18276100200019/2035451	Bangalore J P Nagar	18276100188958/82971
Bangalore J P Nagar	18276100242029/2106987	Bangalore J P Nagar	18276100240569/2068305	Bangalore J P Nagar	18276100216288/2059929
Bangalore J P Nagar	18276100240833/2105427	Bangalore J P Nagar	18276100211941/2052095	Bangalore J P Nagar	18276100229893/2052723
Bangalore J P Nagar	18276100241864/2106819	Bangalore J P Nagar	18276100212758/2054111	Bangalore J P Nagar	18276100243399/2108790
Bangalore J P Nagar	18276100240163/2104653	Bangalore J P Nagar	18276100240866/2105625	Bangalore J P Nagar	18276100239983/2104388
Bangalore J P Nagar	18276100234356/103251	Bangalore J P Nagar	18276100234372/2036332	Bangalore J P Nagar	18276100240536/2105104
Bangalore J P Nagar	18276100210349/77352	Bangalore J P Nagar	18276100233762/2096558	Bangalore J P Nagar	18276100239280/2027629
Bangalore J P Nagar	18276100241641/2106651	Bangalore J P Nagar	18276100257191/2125220		

Bangalore 16-02-2022 Vice President & Zonal Head

16	50	ಖಾಸಗಿ	ಖುಷ್ಕಿ	2,726.5900000(ಚದುರ ಮೀಟರ್)	0.2726590
17	53	ಸರ್ಕಾರಿ	ಖುಷ್ಕಿ	4,378.6600000(ಚದುರ ಮೀಟರ್)	0.4378660
18	55	ಖಾಸಗಿ	ಖುಷ್ಕಿ	12,298.7000000(ಚದುರ ಮೀಟರ್)	1.2298700
19	56	ಖಾಸಗಿ	ಖುಷ್ಕಿ	7,289.2900000(ಚದುರ ಮೀಟರ್)	0.7289290
20	64	ಸಾಮಾನ್ಯ (ಸರ್ಕಾರಿ/ಖಾಸಗಿ)	ಖುಷ್ಕಿ	318.2170000(ಚದುರ ಮೀಟರ್)	0.0318217
21	73	ಖಾಸಗಿ	ಖುಷ್ಕಿ	10,640.4000000(ಚದುರ ಮೀಟರ್)	1.0640400
22	78	ಖಾಸಗಿ	ಖುಷ್ಕಿ	9,661.3375000(ಚದುರ ಮೀಟರ್)	0.9661340
23	79	ಖಾಸಗಿ	ಖುಷ್ಕಿ	10,543.9000000(ಚದುರ ಮೀಟರ್)	1.0543900
24	80	ಖಾಸಗಿ	ಖುಷ್ಕಿ	3,393.1300000(ಚದುರ ಮೀಟರ್)	0.3393130
25	81	ಖಾಸಗಿ	ಖುಷ್ಕಿ	6,577.4414000(ಚದುರ ಮೀಟರ್)	0.6577440
26	82	ಖಾಸಗಿ	ಖುಷ್ಕಿ	3,527.1900000(ಚದುರ ಮೀಟರ್)	0.3527190
27	83	ಖಾಸಗಿ	ಖುಷ್ಕಿ	4,821.8900000(ಚದುರ ಮೀಟರ್)	0.4821890
28	84	ಖಾಸಗಿ	ಖುಷ್ಕಿ	108.7930000(ಚದುರ ಮೀಟರ್)	0.0108793
29	96	ಖಾಸಗಿ	ಖುಷ್ಕಿ	5,112.3600000(ಚದುರ ಮೀಟರ್)	0.5112360
30	97	ಖಾಸಗಿ	ಖುಷ್ಕಿ	10,271.6000000(ಚದುರ ಮೀಟರ್)	1.0271600
31	98	ಖಾಸಗಿ	ಖುಷ್ಕಿ	6,755.1700000(ಚದುರ ಮೀಟರ್)	0.6755170
ತಾಲೂಕು : ರಾಯಚೂರು				ಗ್ರಾಮ : ತುಂಗಭದ್ರ	
1	04	ಖಾಸಗಿ	ತರಿ/ಖುಷ್ಕಿ	7,626.5150000(ಚದುರ ಮೀಟರ್)	0.7626520
2	09	ಖಾಸಗಿ	ತರಿ	2,514.9510000(ಚದುರ ಮೀಟರ್)	0.2514950
3	10	ಖಾಸಗಿ	ಖುಷ್ಕಿ	1,079.5150000(ಚದುರ ಮೀಟರ್)	0.1079520
4	11	ಖಾಸಗಿ	ಖುಷ್ಕಿ	633.2860000(ಚದುರ ಮೀಟರ್)	0.0633286
5	12	ಖಾಸಗಿ	ಖುಷ್ಕಿ	2,897.8440000(ಚದುರ ಮೀಟರ್)	0.2897840
6	13	ಖಾಸಗಿ	ಖುಷ್ಕಿ	4,834.0530000(ಚದುರ ಮೀಟರ್)	0.4834050
7	155	ಖಾಸಗಿ	ಖುಷ್ಕಿ	2,183.5050000(ಚದುರ ಮೀಟರ್)	0.2183510
8	28	ಖಾಸಗಿ	ಖುಷ್ಕಿ	15,292.0860000(ಚದುರ ಮೀಟರ್)	1.5292100
9	29	ಖಾಸಗಿ	ತರಿ	4,382.6490000(ಚದುರ ಮೀಟರ್)	0.4382650
10	30	ಖಾಸಗಿ	ಖುಷ್ಕಿ /ತರಿ	418.4270000(ಚದುರ ಮೀಟರ್)	0.0418427
11	32	ಖಾಸಗಿ	ತರಿ	195.5790000(ಚದುರ ಮೀಟರ್)	0.0195579
12	33/1	ಖಾಸಗಿ	ಖುಷ್ಕಿ /ತರಿ	4,145.2110000(ಚದುರ ಮೀಟರ್)	0.4145210
13	34	ಖಾಸಗಿ	ಖುಷ್ಕಿ	2,487.9900000(ಚದುರ ಮೀಟರ್)	0.2487990
14	35	ಖಾಸಗಿ	ಖುಷ್ಕಿ /ತರಿ	11,150.0270000(ಚದುರ ಮೀಟರ್)	1.1150000
15	37/2	ಖಾಸಗಿ	ಖುಷ್ಕಿ	630.1660000(ಚದುರ ಮೀಟರ್)	0.0630166
16	38	ಖಾಸಗಿ	ಖುಷ್ಕಿ	19,077.6810000(ಚದುರ ಮೀಟರ್)	1.9077700
17	39	ಖಾಸಗಿ	ಖುಷ್ಕಿ	4,763.7750000(ಚದುರ ಮೀಟರ್)	0.4763770
18	43	ಸಾಮಾನ್ಯ (ಸರ್ಕಾರಿ/ಖಾಸಗಿ)	ಖುಷ್ಕಿ /ತರಿ	14,424.0570000(ಚದುರ ಮೀಟರ್)	1.4424100
19	44/1	ಖಾಸಗಿ	ಖುಷ್ಕಿ	8,275.8900000(ಚದುರ ಮೀಟರ್)	0.8275890
20	44/2	ಖಾಸಗಿ	ಖುಷ್ಕಿ	7,435.9590000(ಚದುರ ಮೀಟರ್)	0.7435960
21	45	ಖಾಸಗಿ	ತರಿ	4,916.7970000(ಚದುರ ಮೀಟರ್)	0.4916800
22	53	ಖಾಸಗಿ	ಖುಷ್ಕಿ	15,815.4520000(ಚದುರ ಮೀಟರ್)	1.5815500
23	54	ಸಾಮಾನ್ಯ (ಸರ್ಕಾರಿ/ಖಾಸಗಿ)	ಖುಷ್ಕಿ /ತರಿ	7,145.3500000(ಚದುರ ಮೀಟರ್)	0.7145350
24	55	ಖಾಸಗಿ	ಖುಷ್ಕಿ	26,453.4000000(ಚದುರ ಮೀಟರ್)	2.6453400
25	56	ಖಾಸಗಿ	ಖುಷ್ಕಿ	5,450.9830000(ಚದುರ ಮೀಟರ್)	0.5450980
26	6	ಸಾಮಾನ್ಯ (ಸರ್ಕಾರಿ/ಖಾಸಗಿ)	ತರಿ/ಖುಷ್ಕಿ	4,021.2720000(ಚದುರ ಮೀಟರ್)	0.4021270
27	69	ಖಾಸಗಿ	ತರಿ	957.5960000(ಚದುರ ಮೀಟರ್)	0.0957596
28	7	ಖಾಸಗಿ	ತರಿ	9,881.7220000(ಚದುರ ಮೀಟರ್)	0.9881720
29	ನದಿ	ಸರ್ಕಾರಿ	ನದಿ	42,514.9940000(ಚದುರ ಮೀಟರ್)	4.2515000
ತಾಲೂಕು : ರಾಯಚೂರು				ಗ್ರಾಮ : ತುಂಟಾಪುರ	
1	11/2	ಖಾಸಗಿ	ಖುಷ್ಕಿ	1,273.6300000(ಚದುರ ಮೀಟರ್)	0.1273630
2	11/3	ಖಾಸಗಿ	ಖುಷ್ಕಿ	4,099.7760000(ಚದುರ ಮೀಟರ್)	0.4099780
3	13	ಖಾಸಗಿ	ಖುಷ್ಕಿ	2,631.5200000(ಚದುರ ಮೀಟರ್)	0.2631520
4	14	ಖಾಸಗಿ	ಖುಷ್ಕಿ	2,540.0700000(ಚದುರ ಮೀಟರ್)	0.2540070
5	15	ಖಾಸಗಿ	ಖುಷ್ಕಿ /ತರಿ	9,200.7500000(ಚದುರ ಮೀಟರ್)	0.9200750
6	17	ಖಾಸಗಿ	ಖುಷ್ಕಿ	999.5500000(ಚದುರ ಮೀಟರ್)	0.0999550
7	174	ಸಾಮಾನ್ಯ (ಸರ್ಕಾರಿ/ಅರಣ್ಯ)	ಖುಷ್ಕಿ	7,340.4300000(ಚದುರ ಮೀಟರ್)	0.7340430
8	18	ಖಾಸಗಿ	ಖುಷ್ಕಿ	343.0540000(ಚದುರ ಮೀಟರ್)	0.0343054
9	19	ಖಾಸಗಿ	ಖುಷ್ಕಿ	5,871.0000000(ಚದುರ ಮೀಟರ್)	0.5871000
10	20	ಖಾಸಗಿ	ಖುಷ್ಕಿ	2,854.1200000(ಚದುರ ಮೀಟರ್)	0.2854120
11	21	ಖಾಸಗಿ	ಖುಷ್ಕಿ	742.6210000(ಚದುರ ಮೀಟರ್)	0.0742621
12	214	ಸರ್ಕಾರಿ	ಖುಷ್ಕಿ	2,133.5600000(ಚದುರ ಮೀಟರ್)	0.2133560
13	215	ಖಾಸಗಿ	ಖುಷ್ಕಿ	2,490.8700000(ಚದುರ ಮೀಟರ್)	0.2490870
14	216	ಖಾಸಗಿ	ಖುಷ್ಕಿ	1,553.6500000(ಚದುರ ಮೀಟರ್)	0.1553650
15	22	ಖಾಸಗಿ	ಖುಷ್ಕಿ /ತರಿ	6,054.6000000(ಚದುರ ಮೀಟರ್)	0.6054600
16	222	ಖಾಸಗಿ	ಖುಷ್ಕಿ	143.8620000(ಚದುರ ಮೀಟರ್)	0.0143862
17	23	ಖಾಸಗಿ	ಖುಷ್ಕಿ	3,741.7500000(ಚದುರ ಮೀಟರ್)	0.3741750
18	233	ಖಾಸಗಿ	ಖುಷ್ಕಿ	551.8810000(ಚದುರ ಮೀಟರ್)	0.0551881
19	234	ಖಾಸಗಿ	ಖುಷ್ಕಿ	16,093.7000000(ಚದುರ ಮೀಟರ್)	1.6093700
20	235	ಖಾಸಗಿ	ಖುಷ್ಕಿ	2,162.9800000(ಚದುರ ಮೀಟರ್)	0.2162980
21	236	ಸರ್ಕಾರಿ	ಖುಷ್ಕಿ	2,409.7000000(ಚದುರ ಮೀಟರ್)	0.2409700
22	237	ಖಾಸಗಿ	ಖುಷ್ಕಿ	3,683.7120000(ಚದುರ ಮೀಟರ್)	0.3683710
23	238	ಸರ್ಕಾರಿ	ಖುಷ್ಕಿ	1,792.6600000(ಚದುರ ಮೀಟರ್)	0.1792660
24	239	ಖಾಸಗಿ	ಖುಷ್ಕಿ	5,093.5000000(ಚದುರ ಮೀಟರ್)	0.5093500
25	24	ಖಾಸಗಿ	ಖುಷ್ಕಿ	10,773.3000000(ಚದುರ ಮೀಟರ್)	1.0773300
26	242	ಖಾಸಗಿ	ಖುಷ್ಕಿ	52.9630000(ಚದುರ ಮೀಟರ್)	0.0052963
27	243	ಖಾಸಗಿ	ಖುಷ್ಕಿ	3,356.8500000(ಚದುರ ಮೀಟರ್)	0.3356850
28	244	ಖಾಸಗಿ	ಖುಷ್ಕಿ	393.1470000(ಚದುರ ಮೀಟರ್)	0.0393147
29	245	ಖಾಸಗಿ	ಖುಷ್ಕಿ	2,219.4690000(ಚದುರ ಮೀಟರ್)	0.2219470
30	246	ಖಾಸಗಿ	ಖುಷ್ಕಿ	965.9340000(ಚದುರ ಮೀಟರ್)	0.0965934
31	247	ಖಾಸಗಿ	ಖುಷ್ಕಿ	1,334.6900000(ಚದುರ ಮೀಟರ್)	0.1334690
32	249	ಖಾಸಗಿ	ಖುಷ್ಕಿ	1,841.4300000(ಚದುರ ಮೀಟರ್)	0.1841430
33	25	ಖಾಸಗಿ	ಖುಷ್ಕಿ	1,674.4500000(ಚದುರ ಮೀಟರ್)	0.1674450
34	250	ಖಾಸಗಿ	ಖುಷ್ಕಿ	42.6590000(ಚದುರ ಮೀಟರ್)	0.0042659
35	251	ಖಾಸಗಿ	ಖುಷ್ಕಿ	4,355.0550000(ಚದುರ ಮೀಟರ್)	0.4355060
36	253	ಖಾಸಗಿ	ಖುಷ್ಕಿ	6,189.6900000(ಚದುರ ಮೀಟರ್)	0.6189690
37	254	ಖಾಸಗಿ	ಖುಷ್ಕಿ	2,608.0300000(ಚದುರ ಮೀಟರ್)	0.2608030
ತಾಲೂಕು : ರಾಯಚೂರು				ಗ್ರಾಮ : ವಡವಟಿ	
1	251	ಖಾಸಗಿ	ಖುಷ್ಕಿ	25,479.3000000(ಚದುರ ಮೀಟರ್)	2.5479300
2	276	ಖಾಸಗಿ	ಖುಷ್ಕಿ	7,483.4100000(ಚದುರ ಮೀಟರ್)	0.7483410
3	291	ಖಾಸಗಿ	ಖುಷ್ಕಿ	83.7790000(ಚದುರ ಮೀಟರ್)	0.0083779
4	292	ಖಾಸಗಿ	ಖುಷ್ಕಿ	995.7890000(ಚದುರ ಮೀಟರ್)	0.0995789
5	293	ಖಾಸಗಿ	ಖುಷ್ಕಿ	11,607.5000000(ಚದುರ ಮೀಟರ್)	1.1607500
6	294	ಖಾಸಗಿ	ಖುಷ್ಕಿ	8,159.7400000(ಚದುರ ಮೀಟರ್)	0.8159740
7	295	ಖಾಸಗಿ	ಖುಷ್ಕಿ	608.9010000(ಚದುರ ಮೀಟರ್)	0.0608901
8	296	ಖಾಸಗಿ	ಖುಷ್ಕಿ	7,914.1600000(ಚದುರ ಮೀಟರ್)	0.7914160
9	297	ಖಾಸಗಿ	ಖುಷ್ಕಿ	5,447.1300000(ಚದುರ ಮೀಟರ್)	0.5447130
10	324	ಖಾಸಗಿ	ಖುಷ್ಕಿ	12,569.6000000(ಚದುರ ಮೀಟರ್)	1.2569600
11	325	ಖಾಸಗಿ	ಖುಷ್ಕಿ	17,233.1000000(ಚದುರ ಮೀಟರ್)	1.7233100
12	326	ಖಾಸಗಿ	ಖುಷ್ಕಿ	14,433.7000000(ಚದುರ ಮೀಟರ್)	1.4433700
13	333 ದಿಂದ 335	ಖಾಸಗಿ	ಖುಷ್ಕಿ	6,445.0600000(ಚದುರ ಮೀಟರ್)	0.6445060
14	336	ಖಾಸಗಿ	ಖುಷ್ಕಿ	15,786.0000000(ಚದುರ ಮೀಟರ್)	1.5786000
15	337	ಖಾಸಗಿ	ಖುಷ್ಕಿ	1,218.8700000(ಚದುರ ಮೀಟರ್)	0.1218870
16	361	ಖಾಸಗಿ	ಖುಷ್ಕಿ	71.1260000(ಚದುರ ಮೀಟರ್)	0.0071126
17	xxl	ಖಾಸಗಿ	ಖುಷ್ಕಿ	1,431.4500000(ಚದುರ ಮೀಟರ್)	0.1431450
ತಾಲೂಕು : ರಾಯಚೂರು				ಗ್ರಾಮ : ಯರಗೇರಾ	
1	182	ಖಾಸಗಿ	ಖುಷ್ಕಿ	487.5590000(ಚದುರ ಮೀಟರ್)	0.0487559
2	183	ಖಾಸಗಿ	ಖುಷ್ಕಿ	1,166.2300000(ಚದುರ ಮೀಟರ್)	0.1166230
3	184	ಖಾಸಗಿ	ಖುಷ್ಕಿ	6,325.1500000(ಚದುರ ಮೀಟರ್)	0.6325150
4	185	ಖಾಸಗಿ	ಖುಷ್ಕಿ	2,545.6400000(ಚದುರ ಮೀಟರ್)	0.2545640
5	196	ಖಾಸಗಿ	ಖುಷ್ಕಿ	161.6830000(ಚದುರ ಮೀಟರ್)	0.0161683
6	197	ಸರ್ಕಾರಿ	ಖುಷ್ಕಿ	14,532.3000000(ಚದುರ ಮೀಟರ್)	1.4532300
7	198	ಖಾಸಗಿ	ಖುಷ್ಕಿ	957.8680000(ಚದುರ ಮೀಟರ್)	0.0957868
8	215	ಖಾಸಗಿ	ಖುಷ್ಕಿ	28,641.9000000(ಚದುರ ಮೀಟರ್)	2.8641900
9	226	ಖಾಸಗಿ	ಖುಷ್ಕಿ	21,859.7000000(ಚದುರ ಮೀಟರ್)	2.1859700
10	227	ಖಾಸಗಿ	ಖುಷ್ಕಿ	22,890.4000000(ಚದುರ ಮೀಟರ್)	2.2890400
11	248	ಖಾಸಗಿ	ಖುಷ್ಕಿ	9,480.7200000(ಚದುರ ಮೀಟರ್)	0.9480720
12	276	ಖಾಸಗಿ	ಖುಷ್ಕಿ	11,190.6000000(ಚದುರ ಮೀಟರ್)	1.1190600
13	277	ಖಾಸಗಿ	ಖುಷ್ಕಿ	11,443.1000000(ಚದುರ ಮೀಟರ್)	1.1443100
14	278	ಖಾಸಗಿ	ಖುಷ್ಕಿ	6,075.5200000(ಚದುರ ಮೀಟರ್)	0.6075520
15	279	ಖಾಸಗಿ	ಖುಷ್ಕಿ	10,431.4000000(ಚದುರ ಮೀಟರ್)	1.0431400
16	280	ಖಾಸಗಿ	ಖುಷ್ಕಿ	7,849.8830000(ಚದುರ ಮೀಟರ್)	0.7849880
17	282	ಖಾಸಗಿ	ಖುಷ್ಕಿ	9,534.3900000(ಚದುರ ಮೀಟರ್)	0.9534390
18	319/1	ಸಾಮಾನ್ಯ (ಸರ್ಕಾರಿ/ಅರಣ್ಯ)	ಖುಷ್ಕಿ	40,504.7960000(ಚದುರ ಮೀಟರ್)	4.0504800
19	347	ಸಾಮಾನ್ಯ (ಸರ್ಕಾರಿ/ಅರಣ್ಯ)	ಖುಷ್ಕಿ	33,711.1870000(ಚದುರ ಮೀಟರ್)	3.3711200
20	513	ಖಾಸಗಿ	ಖುಷ್ಕಿ	19,112.8000000(ಚದುರ ಮೀಟರ್)	1.9112800
21	514	ಖಾಸಗಿ	ಖುಷ್ಕಿ	7,642.8100000(ಚದುರ ಮೀಟರ್)	0.7642810
22	520	ಖಾಸಗಿ	ಖುಷ್ಕಿ	11,176.3000000(ಚದುರ ಮೀಟರ್)	1.1176300
23	521	ಖಾಸಗಿ	ಖುಷ್ಕಿ	12,337.4000000(ಚದುರ ಮೀಟರ್)	1.2337400
24	524	ಖಾಸಗಿ	ಖುಷ್ಕಿ	2,300.3200000(ಚದುರ ಮೀಟರ್)	0.2300320
25	529	ಖಾಸಗಿ	ಖುಷ್ಕಿ	10,664.5000000(ಚದುರ ಮೀಟರ್)	1.0664500
26	530	ಖಾಸಗಿ	ಖುಷ್ಕಿ	24,805.6000000(ಚದುರ ಮೀಟರ್)	2.4805600
27	531	ಖಾಸಗಿ	ಖುಷ್ಕಿ	2,660.0400000(ಚದುರ ಮೀಟರ್)	0.2660040
28	544	ಖಾಸಗಿ	ಖುಷ್ಕಿ	8,243.3800000(ಚದುರ ಮೀಟರ್)	0.8243380
29	545	ಖಾಸಗಿ	ಖುಷ್ಕಿ	12,299.1230000(ಚದುರ ಮೀಟರ್)	1.2299100
30	546	ಖಾಸಗಿ	ಖುಷ್ಕಿ	2,675.8800000(ಚದುರ ಮೀಟರ್)	0.2675880
31	615	ಖಾಸಗಿ	ಖುಷ್ಕಿ	12,278.0000000(ಚದುರ ಮೀಟರ್)	1.2278000
32	616	ಖಾಸಗಿ	ಖುಷ್ಕಿ	8,956.2500000(ಚದುರ ಮೀಟರ್)	0.8956250
33	619	ಖಾಸಗಿ	ಖುಷ್ಕಿ	11,476.6000000(ಚದುರ ಮೀಟರ್)	1.1476600
		ಒಟ್ಟು		**3,589,661.5126**	**358.9662**

[F. No. NHAI/LA/RO-BNG/KNT/HOSPET/3A]
RAJESH GUPTA, Director

ದಾಂಪತ್ಯ ಜೀವನಕ್ಕೆ ಕಾಲಿಡಲಿದ್ದಾರೆ ಕಿರಿಯ ವಯಸ್ಸಿನ ಮೇಯರ್, ಶಾಸಕ

ಸಚಿನ್‌ದೇವ್ ಆರ್ಯ

ತಿರುವನಂತಪುರ: ದೇಶದಲ್ಲಿ ಅತಿ ಚಿಕ್ಕ ವಯಸ್ಸಿನಲ್ಲೇ ಮೇಯರ್ ಹುದ್ದೆ ಅಲಂಕರಿಸಿದ ತಿರುವನಂತಪುರ ಮಹಾನಗರ ಪಾಲಿಕೆ ಮೇಯರ್ ಆರ್ಯ ರಾಜೇಂದ್ರನ್ ಅವರು, ಕೇರಳದ ಅತ್ಯಂತ ಕಿರಿಯ ವಯಸ್ಸಿನ ಶಾಸಕ ಕೆ.ಎಂ.ಸಚಿನ್‌ದೇವ್ ಅವರನ್ನು ವರಿಸಲಿದ್ದಾರೆ.

ಇಬ್ಬರೂ ಸಿಪಿಎಂ ಪಕ್ಷದವರೇ ಆಗಿದ್ದು, ಎರಡೂ ಕುಟುಂಬದವರು ವಿವಾಹದ ಪ್ರಸ್ತಾವಕ್ಕೆ ಸಮ್ಮತಿ ಸೂಚಿಸಿದ್ದಾರೆ.

ಆರ್ಯ ಅವರು ತಿರುವನಂತಪುರ ಮೂಲದವರಾಗಿದ್ದರೆ, ಸಚಿನ್‌ದೇವ್ ಅವರು ಕೋಯಿಕ್ಕೋಡ್‌ನವರು. ಇಬ್ಬರೂ ಸ್ಟೂಡೆಂಟ್ ಫೆಡರೇಷನ್ ಆಫ್ ಇಂಡಿಯಾ (ಎಸ್‌ಎಫ್‌ಐ) ಸಂಘಟನೆಯಲ್ಲಿ ಜೊತೆಯಾಗಿ ಕಾರ್ಯ ನಿರ್ವಹಿಸಿದ್ದಾರೆ.

ಆರ್ಯ ಅವರು ಮೇಯರ್ ಆದಾಗ ಅವರ ವಯಸ್ಸು 21. ಅನನ್ಯ ಅವರ ಪದವಿ ವ್ಯಾಸಂಗ ಮಾಡುತ್ತಿದ್ದರು.

ಸಚಿನ್‌ದೇವ್ (28) ಅವರು ಎಲ್‌ಎಲ್‌ಬಿ ಪದವೀಧರರಾಗಿದ್ದು, ಎಸ್‌ಎಫ್‌ಐನ ಜಂಟಿ ಕಾರ್ಯದರ್ಶಿಯಾಗಿದ್ದಾರೆ.

'ನಾನು ಮತ್ತು ಸಚಿನ್‌ದೇವ್ ಬಹುಕಾಲದ ಸ್ನೇಹಿತರು. ಒಂದೇ ರಾಜಕೀಯ ಸಿದ್ಧಾಂತವನ್ನು ನಂಬಿರುವವರು. ಮದುವೆಯ ಬಗ್ಗೆ ಪರಸ್ಪರ ಚರ್ಚಿಸಿ ಪೋಷಕರಿಗೆ ಮಾಹಿತಿ ನೀಡಿದೆವು. ವಿವಾಹದ ದಿನಾಂಕವನ್ನು ಪಕ್ಷ ಮತ್ತು ಕುಟುಂಬದವರು ನಿರ್ಧರಿಸುತ್ತಾರೆ' ಎಂದು ಆರ್ಯ ರಾಜೇಂದ್ರನ್ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ್ದಾರೆ.

ತಾಜ್‌ಮಹಲ್‌ನಲ್ಲಿ ಹನುಮಾನ್ ಚಾಲೀಸಾ ಪಠಣಕ್ಕೆ ಯತ್ನ: ಪ್ರತಿಭಟನಕಾರರಿಗೆ ತಡೆ

ಆಗ್ರಾ (ಪಿಟಿಐ): 'ಹಿಜಾಬ್' ವಿರೋಧಿಸಿ ತಾಜ್‌ಮಹಲ್ ಆವರಣದಲ್ಲಿ 'ಹನುಮಾನ್ ಚಾಲೀಸಾ' ಪಠಿಸಲು ಹೊರಟಿದ್ದ ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ), ಸೇವಾ ಭಾರತಿ ಮತ್ತು ದುರ್ಗಾವಾಹಿನಿ ಸಂಘಟನೆಗಳ ಕಾರ್ಯಕರ್ತರನ್ನು ಪೊಲೀಸರು ಮಂಗಳವಾರ ತಡೆದಿದ್ದಾರೆ.

'ತಾಜ್‌ಮಹಲ್ ಅನ್ನು ತೇಜೋ ಮಹಲ್ (ಶಿವಮಂದಿರ) ಎಂದು ಪರಿಗಣಿಸಿ, ಕೇಸರಿ ಬಟ್ಟೆ ಧರಿಸಿ 'ಹನುಮಾನ್ ಚಾಲೀಸಾ' ಪಠಣ ಮಾಡುವುದಾಗಿ ಘೋಷಿಸಿದ್ದೆವು. ಆದರೆ, ಪೊಲೀಸರು ನಮ್ಮನ್ನು ತಡೆದರು' ಎಂದು ವಿಶ್ವ ಹಿಂದೂ ಪರಿಷತ್‌ನ ಬ್ರಜ್ ವಲಯದ ಉಪಾಧ್ಯಕ್ಷ ಅಶೀಶ್ ಆರ್ಯ ತಿಳಿಸಿದ್ದಾರೆ.

'ಸೇವಾಭಾರತಿ ಮತ್ತು ದುರ್ಗಾ ವಾಹಿನಿಯ ಸದಸ್ಯರೊಂದಿಗೆ ನಮ್ಮನ್ನು ಪೊಲೀಸರು ಬಂಧಿಸಿದ ನಂತರ ಹರಿಪರ್ವತ್ ಪೊಲೀಸ್ ಠಾಣೆಯಲ್ಲಿ 'ಹನುಮಾನ್ ಚಾಲೀಸಾ' ಪಠಣ ಮಾಡಿದೆ' ಎಂದೂ ಅವರು ಹೇಳಿದ್ದಾರೆ.

ಸೇವಾಭಾರತಿಯ ಕಾರ್ಯಕರ್ತೆ ಭಾವನಾ ಶರ್ಮಾ, 'ನಾವು ತಾಜ್ ಮಹಲ್ ಆವರಣದಲ್ಲಿ ಶಾಂತಿಯುತವಾಗಿ 'ಹನುಮಾನ್ ಚಾಲೀಸಾ' ಪಠಿಸಲು ಬಯಸಿದ್ದೆವು. ಆದರೆ ತಾಜ್‌ಮಹಲ್‌ನ ಪಾರ್ಕಿಂಗ್ ಸ್ಥಳದಲ್ಲಿ ನಮ್ಮನ್ನು ತಡೆಯಲಾಯಿತು' ಎಂದರು.

'ತಾಜ್‌ಮಹಲ್ ಸಮೀಪದ ಶಿಲ್ಪ ಗ್ರಾಮ್ ಪಾರ್ಕಿಂಗ್ ಸ್ಥಳದಲ್ಲಿ ಪ್ರತಿಭಟನಕಾರರನ್ನು ತಡೆಯಲಾಯಿತು. 'ಹಿಜಾಬ್' ವಿರುದ್ಧದ ಪ್ರತಿಭಟನೆಗೆ ಸಂಬಂಧಿಸಿದ ಮನವಿ ಪತ್ರವನ್ನು ಪ್ರತಿಭಟನಕಾರರಿಂದ ಸ್ವೀಕರಿಸಲಾಗಿದೆ' ಎಂದು ಸಿಟಿ ಎಸ್‌ಪಿ ರಾಜೀವ್ ಕುಮಾರ್ ತಿಳಿಸಿದ್ದಾರೆ.

ಶಾಲಾ- ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ತಮ್ಮ ನಂಬಿಕೆಗೆ ಅನುಗುಣವಾಗಿ ಉಡುಪು ಧರಿಸುವುದನ್ನು ನಿರ್ಬಂಧಿಸಿ, ವಸ್ತ್ರಸಂಹಿತೆ ಪಾಲಿಸಬೇಕು. 'ಹಿಜಾಬ್' ಹೆಸರಿನಲ್ಲಿ ಗಲಾಟೆ ಮಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಪ್ರತಿಭಟನಕಾರರು ಆಗ್ರಹಿಸಿದರು.

ಕುವೆಂಪು ವಿವಿ ದೂರ ಶಿಕ್ಷಣ ನಿರ್ದೇಶನಾಲಯದ ಅವ್ಯವಹಾರ

ಪರೀಕ್ಷೆ ನಡೆಸದೇ ಫಲಿತಾಂಶ: ಪರಿಶೀಲನೆಗೆ ನಾಲ್ಕು ಸಮಿತಿ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಕುವೆಂಪು ವಿಶ್ವವಿದ್ಯಾಲಯದ ದೂರ ಶಿಕ್ಷಣ ನಿರ್ದೇಶನಾಲಯ 2019–20ನೇ ಸಾಲಿನ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸದೇ ದಿಢೀರ್ ಫಲಿತಾಂಶ ಪ್ರಕಟಿಸಿರುವುದರ ಹಿಂದೆ ಹಣಕಾಸಿನ ವ್ಯವಹಾರ ನಡೆದಿದೆ ಎಂಬ ಆರೋಪಗಳನ್ನು ಪರಿಶೀಲಿಸಲು ಹಾಗೂ ವಿದ್ಯಾರ್ಥಿಗಳಿಂದ ಹಣ ಸಂಗ್ರಹಿಸಿದ ಅಧ್ಯಯನ ಕೇಂದ್ರಗಳ ಮೇಲೆ ದಾಳಿ ನಡೆಸಿ, ದಾಖಲೆಗಳನ್ನು ಪರಿಶೀಲಿಸಲು ನಾಲ್ಕು ಪ್ರತ್ಯೇಕ ಸಮಿತಿಗಳನ್ನು ರಚಿಸಲಾಗಿದೆ.

ಸಿಂಡಿಕೇಟ್, ವಿದ್ಯಾವಿಷಯಕ ಪರಿಷತ್, ಅಧ್ಯಾಪಕರ ಒಕ್ಕೂಟದ ವಿರೋಧದ ಮಧ್ಯೆಯೂ ವಿಶ್ವವಿದ್ಯಾಲಯ ಪರೀಕ್ಷೆಗಳನ್ನು ನಡೆಸದೇ ದೂರ ಶಿಕ್ಷಣದ ವಿದ್ಯಾರ್ಥಿಗಳ ಫಲಿತಾಂಶವನ್ನು ಈಚೆಗೆ ಪ್ರಕಟಿಸಿತ್ತು. ಅದರಲ್ಲೂ ತನ್ನ ವ್ಯಾಪ್ತಿ ಅಲ್ಲದ ಅಧ್ಯಯನ ಕೇಂದ್ರಗಳಿಗೂ ಫಲಿತಾಂಶ ಪಟ್ಟಿ ರವಾನಿಸಿರುವುದು ಅವ್ಯವಹಾರ ಶಂಕೆಗೆ ಪುಷ್ಟಿ ನೀಡಿತ್ತು.

ಹಣಕಾಸಿನ ಅವ್ಯವಹಾರ ನಡೆದಿರುವ ಕುರಿತು ಸಿಂಡಿಕೇಟ್‌ನ ಹಲವು ಸದಸ್ಯರು ರಾಜ್ಯಪಾಲರಿಗೆ ದೂರು ನೀಡಿದ್ದರು. ಈ ಕುರಿತು 'ಪ್ರಜಾವಾಣಿ' ಫೆ.12ರ ಸಂಚಿಕೆಯ ಮುಖಪುಟದಲ್ಲಿ 'ನಡೆಯದ ಪರೀಕ್ಷೆ: ಹಣ ಕೊಟ್ಟವರಿಗಷ್ಟೆ ಫಲಿತಾಂಶ?' ಎಂಬ ತಲೆಬರಹದಲ್ಲಿ ವಿಶೇಷ ವರದಿ ಪ್ರಕಟಿಸಿತ್ತು.

ದೂರ ಶಿಕ್ಷಣದ ಮೇಲಿನ ಆರೋಪಗಳನ್ನು ಪರಿಶೀಲಿಸಿ ಒಂದು ವಾರದ ಒಳಗೆ ವರದಿ ನೀಡಲು ವಿಶ್ವವಿದ್ಯಾಲಯದ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗದ ಡೀನ್ ಪ್ರೊ. ರಿಯಾಜ್ ಅಹಮದ್ ನೇತೃತ್ವದಲ್ಲಿ ಮೊದಲ ಸಮಿತಿ ರಚಿಸಲಾಗಿದೆ.

ಪ್ರಾಧ್ಯಾಪಕ ಪ್ರೊ.ಎಂ. ವೆಂಕಟೇಶ್ವರಲು, ಸಿಂಡಿಕೇಟ್ ಸದಸ್ಯ ಧರ್ಮಪ್ರಸಾದ್, ಶಿಕ್ಷಣ ಮಂಡಳಿ ಸದಸ್ಯ ಎಸ್. ಚಂದ್ರಶೇಖರ್ ಸಮಿತಿಯ ಸದಸ್ಯರು. ದೂರ ಶಿಕ್ಷಣ ವಿಭಾಗದ ಉಪ ಕುಲಸಚಿವೆ ಅಂಬುಜಾ ಅವರನ್ನು ಸಮಿತಿಯ ಸಂಚಾಲಕರನ್ನಾಗಿ ನೇಮಿಸಿ ಕುಲಸಚಿವೆ ಜಿ. ಅನುರಾಧಾ ಆದೇಶ ಹೊರಡಿಸಿದ್ದಾರೆ.

ಪರೀಕ್ಷೆ ಇಲ್ಲದೇ ಫಲಿತಾಂಶ ಪ್ರಕಟಿಸಲು ಕೆಲವು ಅಧ್ಯಯನ ಕೇಂದ್ರಗಳು ವಿದ್ಯಾರ್ಥಿಗಳಿಂದ ಹಣ ಸಂಗ್ರಹಿಸಿ ಕೊಟ್ಟಿದ್ದಾರೆ ಎಂಬ ಆರೋಪಗಳ ಹಾಗೂ ವಿಶ್ವವಿದ್ಯಾಲಯಕ್ಕೆ ಸಂದಾಯ ಮಾಡಬೇಕಾದ ಶುಲ್ಕ ಪಾವತಿಯಲ್ಲಿ ವಂಚನೆ ಕುರಿತು ಪರಿಶೀಲಿಸಲು ಮೂರು ಪ್ರತ್ಯೇಕ ಸಮಿತಿಗಳನ್ನು ರಚಿಸಲಾಗಿದೆ.

ಪ್ರತಿಯೊಂದು ಸಮಿತಿಯಲ್ಲೂ ಕಲಾ, ವಾಣಿಜ್ಯ, ವಿಜ್ಞಾನ ವಿಭಾಗದ ಹಿರಿಯ ಪ್ರಾಧ್ಯಾಪಕರು, ಒಬ್ಬರು ಸಿಂಡಿಕೇಟ್ ಸದಸ್ಯರನ್ನು ನೇಮಿಸಲಾಗಿದೆ.

ಸಿಂಡಿಕೇಟ್ ಸದಸ್ಯರಾದ ರಾಮಲಿಂಗಪ್ಪ, ಬಳ್ಳೇಕೆರೆ ಸಂತೋಷ್, ಎಚ್.ಪಿ. ರಮೇಶ್ ಬಾಬು, ಪ್ರಾಧ್ಯಾಪಕರಾದ ಪ್ರೊ.ವಿ.ಕೃಷ್ಣ, ಡಿ.ಎಸ್.ಪೂರ್ಣಾನಂದ, ಎಚ್.ಎನ್.ರಮೇಶ್, ಪ್ರೊ.ಜಿ.ಪ್ರಶಾಂತ ನಾಯಕ್, ಆರ್. ಹಿರೇಮಣಿ ನಾಯ್ಕ, ಪ್ರೊ.ಎಸ್.ಕೆ. ನರಹಿಂಹ ಮೂರ್ತಿ, ಅಂಜನಪ್ಪ, ಜಗನ್ನಾಥ ಕೆ.ಡಾಂಗೆ ಅವರು ಸ್ಥಾನಪಡೆದಿದ್ದಾರೆ.

ನಿರ್ದೇಶಕರ ಎತ್ತಂಗಡಿ

ಹಗರಣ ಬೆಳಕಿಗೆ ಬರುತ್ತಿದ್ದಂತೆ ದೂರ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕ ಎಸ್.ಎನ್.ಯೋಗೀಶ್ ಅವರನ್ನು ಅರ್ಥಶಾಸ್ತ್ರ ಸ್ನಾತಕೋತ್ತರ ವಿಭಾಗಕ್ಕೆ ಮರಳಿ ಕಳುಹಿಸಲಾಗಿದೆ.

ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದ ಪ್ರಾಧ್ಯಾಪಕ ಡಾ.ಪಿ.ಎಸ್.ವಿರಾದಾರ ಅವರನ್ನು ನೂತನ ನಿರ್ದೇಶಕರನ್ನಾಗಿ ನೇಮಿಸಲಾಗಿದೆ. ಯೋಗೀಶ್ ಅವರಿಗೂ ಮೊದಲು ವಿರಾದಾರ ದೂರ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದರು.

ವರದಿ ಪರಿಣಾಮ

ಅಜಿತ್ ಡೋಭಾಲ್ ನಿವಾಸಕ್ಕೆ ನುಗಲು ಪ್ರಯತ್ನಿಸಿದ ವ್ಯಕ್ತಿ ಬಂಧನ



ನಹದೆಹಲಿ (ಪಿಟಿಐ): ರಾಷ್ಟ್ರೀಯ ಭದ್ರತಾ ಸಲಹೆಗಾರ (ಎನ್‌ಎಸ್‌ಎ) ಅಜಿತ್ ಡೋಭಾಲ್ ಅವರ ದೆಹಲಿ ನಿವಾಸಕ್ಕೆ ನುಗ್ಗಲು ಯತ್ನಿಸಿದ ಆರೋಪದ ಮೇಲೆ ಬೆಂಗಳೂರು ಮೂಲದ ವ್ಯಕ್ತಿಯನ್ನು ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆ (ಸಿಐಎಸ್‌ಎಫ್) ಬುಧವಾರ ಬಂಧಿಸಿದೆ.

ಅಜಿತ್ ಡೋಭಾಲ್ ಮನೆಯಲ್ಲಿ ಇರುವಾಗಲೇ ಬೆಳಿಗ್ಗೆ 7.30ರ ವೇಳೆಗೆ ಈ ಘಟನೆ ನಡೆದಿದ್ದು, ಕಾರು ಚಲಾಯಿಸಿಕೊಂಡು ನಿವಾಸದ ಆವರಣ ಪ್ರವೇಶಿಸಲು ಯತ್ನಿಸಿದ ವ್ಯಕ್ತಿಯನ್ನು ಸಿಐಎಸ್‌ಎಫ್ ಯೋಧರು ಬಂಧಿಸಿ, ಪೊಲೀಸರ ವಶಕ್ಕೆ ಒಪ್ಪಿಸಿದರು. ಬಂಧಿತ ವ್ಯಕ್ತಿಯನ್ನು ಶಾಂತನು ರೆಡ್ಡಿ ಎಂದು ಗುರುತಿಸಲಾಗಿದೆ. ಆತ ಮಾನಸಿಕ ಸಮಸ್ಯೆ ಇರುವ ವ್ಯಕ್ತಿಯಂತೆ ಕಾಣುತ್ತಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 47

ನಾದ-ಬಿಂದು ರೂಪ ಶಿವಲಿಂಗ

ಸ್ಥಿರ ಮತ್ತು ಚರರೂಪವಾಗಿರುವ ಈ ಜಗತ್ತೆಲ್ಲವೂ ಬಿಂದು ಮತ್ತು ನಾದಸ್ವರೂಪವಾದುದು. ಬಿಂದುವೆಂದರೆ ಆದಿಶಕ್ತಿ, ನಾದವೆಂದರೆ ಶಿವ. ಆದುದರಿಂದ ಈ ಜಗತ್ತು ಶಿವ ಮತ್ತು ಶಕ್ತಿಸ್ವರೂಪವಾಗಿದೆ. ಬಿಂದುವಿಗೆ ಆಧಾರ ನಾದವಾದರೆ, ಆ ಬಿಂದುವು ಜಗತ್ತಿಗೆ ಆಧಾರವಾಗಿದೆ. ಹೀಗೆ ಬಿಂದು-ನಾದಗಳು ಸ್ಥಿರಚರಾತ್ಮಕವಾದ ಈ ಜಗತ್ತಿಗೆ ಆಧಾರವಾಗಿದೆ. ಜಗತ್ತು ಬಿಂದು-ನಾದಗಳಿಂದ ಕೂಡಿದರೆ ಸಕಲೀಕರಣವಾಗುವುದು. ಅಂದರೆ, ಸಂಪೂರ್ಣತೆಯ ಸೃಷ್ಟಿಮುಖವಾಗುವುದು. ಸಕಲೀಕರಣದಿಂದ ಜಗತ್ತಿನಲ್ಲಿ ಜೀವೋತ್ಪತ್ತಿಯಾಗುವುದು.

ನಾದ-ಬಿಂದುಗಳು ಶಿವ-ಶಕ್ತಿಯ ಸ್ವರೂಪವಾಗಿವೆ. ಶಿವಲಿಂಗವು ಬಿಂದುವಾದ ದೇವಿ ಮತ್ತು ಶಿವನಾದ ನಾದ ಸೇರಿ ರೂಪುಗೊಂಡಿದೆ. ಆದುದರಿಂದ ಜನ್ಮನಿವೃತ್ತಿಗಾಗಿ ಶಿವಲಿಂಗವನ್ನು ಪೂಜಿಸಬೇಕು. ಬಿಂದುರೂಪಳಾದ ದೇವಿಯು ಜಗತ್ತಿಗೆ ಮಾತೆ. ನಾದರೂಪನಾದ ಶಿವನು ಜಗತ್ತಿಗೆ ಪಿತೃ. ಜಗತ್ತಿನ ತಂದೆತಾಯಿಗಳಾದ ಶಿವ-ಶಕ್ತಿಯ ಸ್ವರೂಪದಿಂದ ಇರುವ ಶಿವಲಿಂಗವನ್ನು ಪೂಜಿಸಬೇಕು. ಶಿವನು ಪುರುಷನಾದರೆ, ದೇವಿಯು ಪ್ರಕೃತಿ. ಅವ್ಯಕ್ತವಾದ ಸ್ಫುಟವಲ್ಲದ ವಸ್ತು ಬೀಜಕ್ಕೆ ಆಧಾರವಾದ ಗರ್ಭವುಳ್ಳವನು ಪುರುಷ. ವ್ಯಕ್ತವಾದುದಕ್ಕೆ ಆಧಾರವಾದ ಗರ್ಭವು ಪ್ರಕೃತಿ. ಅದರಂತೆ ಭಗವಂತನಾದ ಶಿವನು ಈ ಜಗತ್ತಿಗೆ ಅವ್ಯಕ್ತವಸ್ತುವಿಗೆ ಆಧಾರವಾದ ಗರ್ಭ ಸ್ವರೂಪನಾದ ಪುರುಷ. ಪುರುಷನು ಪ್ರಕೃತಿಯಲ್ಲಿ ಸೇರುವಿಕೆಯು ಮೊದಲನೆಯ ಜನ್ಮ. ಪ್ರಕೃತಿಯು ವ್ಯಕ್ತವಾಗಿ ಅಂದರೆ, ಕಾಣಿಸುವಂತೆ ಪರಿಣಮಿಸುವುದು ಜಗದ್ರೂಪವಾಗುವುದು. ಅಂದರೆ, ಜನ್ಮ ತಳೆಯುವುದು.

ಹೀಗೆ ಸಕಲ ಜಂತುವೂ ಜನ್ಮವನ್ನೂ ಮೃತ್ಯುವನ್ನೂ ಪುರುಷನಿಂದಲೇ ಪಡೆಯುವುದು. ಪುರುಷನಿಂದ ಮಾಯೆಯಾದ ಪ್ರಕೃತಿ ಮೂಲಕ ಜನ್ಮವಾಗುವುದು. ಜನ್ಮಕಾಲದಿಂದ ಮರಣಕಾಲದವರೆಗೂ ಕ್ಷಯಿಸುವುದರಿಂದ 'ಜೀವ' ಎಂದು ಜಂತುವಿಗೆ ಹೆಸರು. ಈ ಜಂತುಜನ್ಮವನ್ನು ಹೊಂದಿ, ಸಂಸಾರಪಾಶದಿಂದ ಬಂಧಿಸಲ್ಪಡುವುದರಿಂದ ಜೀವನವೆಂದು ಹೆಸರು. ಆದುದರಿಂದ ಈ ಜನ್ಮ ಮತ್ತು ಸಂಸಾರಪಾಶಗಳ ಮುಕ್ತಿಗಾಗಿ 'ಜನ್ಮಲಿಂಗ'ವನ್ನು ಪೂಜಿಸಬೇಕು. ಶಿವಲಿಂಗವನ್ನು ಜನ್ಮನೈವೇದ್ಯದಿಂದ ಅರ್ಚಿಸಬೇಕು.

ಪ್ರಕೃತಿಮಯವಾದ ಇಂದ್ರಿಯಗಳಿಗೆ ಭೋಗವನ್ನುಂಟುಮಾಡುವುದರ ಮೂಲಕ ವೃದ್ಧಿ ಮಾಡುವ ಪ್ರಕೃತಿಗೆ 'ಭಗ' ವೆಂದು ಹೆಸರು. ಪ್ರಕೃತಿರೂಪವಾದ ಭಗದಿಂದ ಜನಿಸುವಂಥದ್ದಕ್ಕೆ ಭೋಗವೆಂದು ಹೆಸರು. ಆದುದರಿಂದ ಜನ್ಮಕ್ಕೆ ಪ್ರಧಾನವಾದ ಭಗವು ಪ್ರಕೃತಿಮಾತೆ. ಅಂತಹ ಪ್ರಕೃತಿಯುಳ್ಳ ಶಿವನಿಗೆ 'ಭಗವಂತ'ನೆಂದು ಹೆಸರು. ಭಗವಂತನೇ ಭೋಗವನ್ನು ಕೊಡುವವನು. ಭಗ(ಪ್ರಕೃತಿ)ಕ್ಕೆ ಸ್ವಾಮಿಯಾದುದರಿಂದ ಭಗವಂತನನ್ನು 'ಭರ್ಗ'ನೆಂದು ಹೇಳುವರು. ಅಂತಹ ಭಗದಿಂದ ಶಿವಲಿಂಗವು ಕೂಡಿರುವುದು. ಭಗವೂ ಲಿಂಗದೊಡನೆ ಸೇರಿರುವುದು. ಆದುದರಿಂದ ಇಹಪರಗಳೆರಡರಲ್ಲಿ ನಿತ್ಯವೂ ಭೋಗ ಪಡೆಯಲು ಭಗವಂತನಾದ ಶಿವಲಿಂಗವನ್ನು ಪೂಜಿಸಬೇಕು.

ಸೂರ್ಯನು ಲೋಕ ಪ್ರಸವಿತೃ. ಅಂದರೆ, ಲೋಕ ಸೃಷ್ಟಿಕರ್ತೃ. ಜಗತ್ತಿನ ಪ್ರಸವಕ್ಕೆ ಸೂರ್ಯನೆ ಕಾರಣವಾಗಿರುವುದರಿಂದ ಆತನನ್ನು 'ಪ್ರಸವಕರ್ತ'ನೆಂದು ತಿಳಿಯಬಹುದು. ಲಿಂಗದಲ್ಲಿ ಪ್ರಸವಕರ್ತನಾದ ಮತ್ತು ಶಿವರೂಪವಾದ ಸೂರ್ಯನನ್ನು ಪೂಜಿಸಬೇಕು. ಕಾರಣಿಭೂತವಾದ ವಸ್ತುವನ್ನು ಜ್ಞಾಪಿಸುವುದಕ್ಕೆ ಲಿಂಗವೆಂದು ಹೆಸರು. ಕಾರಣಿಭೂತವಾದ ಶಿವನನ್ನು ಶಿವಲಿಂಗವು ಜ್ಞಾಪಿಸುವುದು. ಶಿವ ಮತ್ತು ಶಕ್ತಿಯರ ಸ್ವರೂಪವೇ ಲಿಂಗ. ತನ್ನ ಚಿಹ್ನೆಯಾದ ಲಿಂಗವನ್ನು ಪೂಜಿಸಿದರೆ, ಶಿವನು ಪ್ರೀತನಾಗಿ ಮುಕ್ತಿ ನೀಡುತ್ತಾನೆ.

ಆದಿತ್ಯವಾರದಲ್ಲಿ ಶಿವಲಿಂಗವನ್ನು ಪೂಜಿಸಿ, ಓಂಕಾರದಿಂದಲೇ ಅರ್ಚಿಸಬೇಕು. ಪಂಚಗವ್ಯಗಳಿಂದ ಅಭಿಷೇಕವನ್ನು ಮಾಡಬೇಕು. ಪಂಚಗವ್ಯಗಳು ಯಾವುದೆಂದರೆ: ಗೋಮಯ, ಗೋಮೂತ್ರ, ಹಸುವಿನ ಹಾಲು, ಮೊಸರು, ತುಪ್ಪ. ಓಂಕಾರವು ಶಿವಧ್ವನಿ ಲಿಂಗವಾದರೆ, ಉದ್ಭವಲಿಂಗವು ನಾದಲಿಂಗ ಮತ್ತು ಯಂತ್ರವು ಬಿಂದುಲಿಂಗ. ಓಂಕಾರದಲ್ಲಿ ಬರುವ 'ಮ'ಕಾರವು ಪ್ರತಿಷ್ಠಾಪಿಸಿದ ಲಿಂಗವಾದರೆ, 'ಉ'ಕಾರವು ಚರಲಿಂಗ. 'ಅಕಾರ'ವು ದೊಡ್ಡದಾದ ಲಿಂಗ. ಈ ಆರು ಲಿಂಗಗಳನ್ನು ಪೂಜಿಸಿದವನು ಜೀವಿಸಿರುವಂತೆಯೇ ಮುಕ್ತಿಯನ್ನು ಹೊಂದುವನು. ರುದ್ರಾಕ್ಷಿಯನ್ನು ಧರಿಸುವುದರಿಂದ ಕಾಲುಭಾಗ ಭಕ್ತಿಯುಂಟಾಗುವುದು. ಭಸ್ಮವನ್ನು ಧರಿಸುವುದರಿಂದ ಅರ್ಧಭಕ್ತಿ, ಪಂಚಾಕ್ಷರೀಮಂತ್ರವನ್ನು ಜಪಿಸಿದರೆ ಮುಕ್ಕಾಲು ಭಾಗ ಭಕ್ತಿ ಉಂಟಾಗುವುದು. ಶಿವನನ್ನು ಪೂಜಿಸುವುದರಿಂದ ಪೂರ್ಣವಾದ ಭಕ್ತಿ ಉಂಟಾಗುವುದು. ಆದ್ದರಿಂದ ಶಿವಲಿಂಗವನ್ನೂ ಶಿವಭಕ್ತನನ್ನೂ ಶ್ರದ್ಧೆಯಿಂದ ಪೂಜಿಸಿದರೆ ಮುಕ್ತಿಯು ಲಭಿಸುವುದು ಎಂದು ಸೂತಮುನಿ ತಿಳಿಸುವುದರೊಂದಿಗೆ ವಿದ್ಯೇಶ್ವರಸಂಹಿತೆಯ ಹದಿನಾರನೇ ಅಧ್ಯಾಯ ಮುಗಿಯುತ್ತದೆ.

ವಿ.ವಿಗಳ ಪದವಿ ಪರೀಕ್ಷೆ: ಮುಂದೂಡಲು ಸೂಚನೆ

ಪ್ರಜಾವಾಣಿ ವಾರ್ತೆ

ಕುಮಾರ್ ನಾಯಕ್

ಬೆಂಗಳೂರು: ಕೋವಿಡ್ ಮತ್ತು ಓಮೈಕ್ರಾನ್ ಸೋಂಕು ಹೆಚ್ಚಳ ಹಾಗೂ ಅತಿಥಿ ಉಪನ್ಯಾಸಕರ ಮುಷ್ಕರದಿಂದಾಗಿ ಪಾಠ- ಪ್ರವಚನಗಳು ಮುಗಿಯದಿರುವ ಕಾರಣ ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿರುವ ಎಲ್ಲ ವಿಶ್ವವಿದ್ಯಾಲಯಗಳ ಸೆಮಿಸ್ಟರ್ ಪರೀಕ್ಷೆಯನ್ನು ಒಂದು ತಿಂಗಳ ಕಾಲ ಮುಂದೂಡುವಂತೆ ಕುಲಸಚಿವರಿಗೆ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಿ.ಕುಮಾರ್ ನಾಯಕ್ ಸೂಚಿಸಿದ್ದಾರೆ.

'ಕೆಲವು ವಿಶ್ವವಿದ್ಯಾಲಯಗಳು ಈಗಾಗಲೇ ಸೆಮಿಸ್ಟರ್ ಪರೀಕ್ಷೆಯ ವೇಳಾಪಟ್ಟಿ ಪ್ರಕಟಿಸಿದ್ದವು. ಆದರೆ, ಮೇಲೆ ಉಲ್ಲೇಖಿಸಿದ ಕಾರಣಗಳನ್ನು ನೀಡಿ ಕಾಲೇಜು ಶಿಕ್ಷಣ ಇಲಾಖೆ ಆಯುಕ್ತರು ಪರೀಕ್ಷೆಯನ್ನು ಮುಂದೂಡುವಂತೆ ಕೋರಿದ್ದರು. ಹೀಗಾಗಿ, ವಿದ್ಯಾರ್ಥಿಗಳ ಹಿತಾಸಕ್ತಿಯನ್ನು ಗಮನಿಸಿ, ಪರೀಕ್ಷೆಯನ್ನು ಮುಂದೂಡುವ ಬಗ್ಗೆ ತೀರ್ಮಾನ ತೆಗೆದುಕೊಳ್ಳುವಂತೆ ಸೂಚಿಸಲಾಗಿದೆ' ಎಂದು ಅವರು ಬುಧವಾರ ತಿಳಿಸಿದ್ದಾರೆ.

ಬಹುತೇಕ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಪಾಠ– ಪ್ರವಚನ ಮುಗಿಯುವ ಮೊದಲೇ ಮೊದಲ ಸೆಮಿಸ್ಟರ್ ಪೂರ್ಣಗೊಳಿಸಿ, ಪರೀಕ್ಷೆಗಳನ್ನು ನಡೆಸಲು ಮುಂದಾದ ಬಗ್ಗೆ 'ಪ್ರಜಾವಾಣಿ'ಯ ಫೆ. 6ರ ಸಂಚಿಕೆಯಲ್ಲಿ 'ಪಾಠವೇ ಮುಗಿದಿಲ್ಲ: ಪರೀಕ್ಷೆಗೆ ಆತುರ' ಶೀರ್ಷಿಕೆಯಲ್ಲಿ ವಿಶೇಷ ವರದಿ ಪ್ರಕಟವಾಗಿತ್ತು.

ವರದಿ ಪರಿಣಾಮ

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)

ಟೆಂಡರ್ ಪ್ರಕಟಣೆ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಎತ್ತಿನಹೊಳೆ ಯೋಜನೆ ನಾಲಾ ಪಂಕ್ತೀಕರಣದಲ್ಲಿ ಬರುವ ವಿದ್ಯುತ್ ಲೈನ್ ಸ್ಥಳಾಂತರಿಸುವ 04 ಕಾಮಗಾರಿಗಳು ಮತ್ತು ಎತ್ತಿನಹೊಳೆ ಯೋಜನೆಯ ಗುರುತ್ವಾ ಕಾಲುವೆ ನಾಲಾ ಪಂಕ್ತೀಕರಣದಲ್ಲಿ ಬರುವ Delivery Chambers ಸ್ಥಳಾಂತರಿಸಿ ಮರು ನಿರ್ಮಾಣದ 01 ಕಾಮಗಾರಿ ಸೇರಿದಂತೆ ಟೆಂಡರ್ ಗಿಟ್ಟ ಮೊತ್ತ ರೂ.4.00 ಲಕ್ಷಗಳಿಂದ ರೂ.75.00 ಲಕ್ಷಗಳ ವರೆಗಿನ ಒಟ್ಟು 05 ಕಾಮಗಾರಿಗಳಿಗೆ "ಶೇಕಡಾವಾರು ದರಗಳಲ್ಲಿ" ಏಕ ಲಕೋಟೆ ಹಾಗೂ ದ್ವಿ ಲಕೋಟೆ ಪದ್ಧತಿಯಲ್ಲಿ ಅರ್ಹ ಗುತ್ತಿಗೆದಾರರಿಂದ, ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್‌ನ್ನು ಇ–ಪೋರ್ಟಲ್‌ನಲ್ಲಿ ದಿ: **17.02.2022** ರಿಂದ ವೀಕ್ಷಿಸಬಹುದಾಗಿದೆ. ಟೆಂಡರ್‌ನ ಅಂದಾಜು ಮೊತ್ತ/ ಇ.ಎಂ.ಡಿ/ಟೆಂಡರ್ ಪ್ರೋಸೆಸಿಂಗ್ ಶುಲ್ಕ/ವೇಳಾ ಪಟ್ಟಿ/ ಗುತ್ತಿಗೆದಾರರ ವರ್ಗ/ ಟೆಂಡರ್ ನಿಯಮ/ ಟೆಂಡರ್ ಪ್ರಕಟಣೆ/ ಏಕ ಅಥವಾ ದ್ವಿ ಲಕೋಟೆ ಇತ್ಯಾದಿ ವಿವರಗಳನ್ನು https://eproc.karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೆ ಯಾವುದೇ ಟೆಂಡರ್‌ಗಳನ್ನು ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ. ತಿದ್ದುಪಡಿ ಪ್ರಕಟಣೆ ಹೊರಡಿಸಿದಲ್ಲಿ ಇ–ಪೋರ್ಟ್‌ಲ್ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಎತ್ತಿನಹೊಳೆ ಯೋಜನಾ ವಿಭಾಗ ನಂ.2, ತುಮಕೂರು.
ದೂರವಾಣಿ ಸಂಖ್ಯೆ:0816–2201844, ಇಮೇಲ್ ವಿಳಾಸ– eeypd2tmk@gmail.com

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
CIN:U85110KA1998SGC02453
ನಂ. 1, 4ನೇ ಮಹಡಿ, ಕಾಫೀ ಮಂಡಳಿ, ಡಾ. ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು–560001. ದೂರವಾಣಿ: 22283074–78, ಫ್ಯಾಕ್ಸ್: 22386015
ವೆಬ್‌ಸೈಟ್: http://www.knnlindia.com
ಸಂ.: ಕನೀನಿನಿ(ಆರ್)/ನೇಮಕಾತಿ(ಗುತ್ತಿಗೆ)/2021–22/6294 ದಿನಾಂಕ: 16.02.2022

ನೇಮಕಾತಿ ಅಧಿಸೂಚನೆ

ಉಪ ಪ್ರಧಾನ ವ್ಯವಸ್ಥಾಪಕರು–ಹಣಕಾಸು, ಸಹಾಯಕ ಪ್ರಧಾನ ವ್ಯವಸ್ಥಾಪಕರು–ಹಣಕಾಸು, ವ್ಯವಸ್ಥಾಪಕರು–ಹಣಕಾಸು, ಸಹಾಯಕ ವ್ಯವಸ್ಥಾಪಕರು–ಹಣಕಾಸು, ಸಹಾಯಕ ಆಡಳಿತ ಅಧಿಕಾರಿ, ಲೆಕ್ಕ ಸಹಾಯಕರು, ಹಿರಿಯ ಸಹಾಯಕರು (ಕಾನೂನು), ಡೆಟಾ ಎಂಟ್ರಿ ಆಪರೇಟರ್, ರಿಸೆಪ್ಷನಿಸ್ಟ್ ಹುದ್ದೆಗಳಿಗೆ (ಒಂದು ವರ್ಷದ ಗುತ್ತಿಗೆ ಆಧಾರದ ಮೇಲೆ) (ON CONTRACT BASIS)

ಕರ್ನಾಟಕ ನೀರಾವರಿ ನಿಗಮ ನಿಯಮಿತವು (ಕನೀನಿನಿ) ಕರ್ನಾಟಕ ಸರ್ಕಾರದ ಉದ್ಯಮವಾಗಿದ್ದು, ರಾಜ್ಯದ ಬೃಹತ್ ಮತ್ತು ಮಧ್ಯಮ ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ. ನಿಗಮವು ಉಪ ಪ್ರಧಾನ ವ್ಯವಸ್ಥಾಪಕರು–ಹಣಕಾಸು, ಸಹಾಯಕ ಪ್ರಧಾನ ವ್ಯವಸ್ಥಾಪಕರು–ಹಣಕಾಸು, ವ್ಯವಸ್ಥಾಪಕರು–ಹಣಕಾಸು, ಸಹಾಯಕ ವ್ಯವಸ್ಥಾಪಕರು–ಹಣಕಾಸು, ಸಹಾಯಕ ಆಡಳಿತ ಅಧಿಕಾರಿ, ಲೆಕ್ಕ ಸಹಾಯಕರು, ಹಿರಿಯ ಸಹಾಯಕರು (ಕಾನೂನು), ಡೆಟಾ ಎಂಟ್ರಿ ಆಪರೇಟರ್, ರಿಸೆಪ್ಷನಿಷ್ಟ್ ಹುದ್ದೆಗಳಿಗೆ ಸೂಕ್ತ ಅಭ್ಯರ್ಥಿಯ ಆಯ್ಕೆಗಾಗಿ ಈ ಅಧಿಸೂಚನೆಯನ್ನು ಹೊರಡಿಸಿದೆ. ಆಸಕ್ತಿಯುಳ್ಳ ಅಭ್ಯರ್ಥಿಗಳು ಹೆಚ್ಚಿನ ವಿವರಗಳಿಗಾಗಿ ಕನೀನಿನಿ ವೆಬ್‌ಸೈಟ್: http://www.knnlinia.com ನಲ್ಲಿ ಪಡೆಯಬಹುದಾಗಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **03.03.2022 ಸಂಜೆ 5.30ರವರೆಗೆ** ಆಗಿದ್ದು, ನೋಂದಾಯಿತ ಕಛೇರಿಯಲ್ಲಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ.

ಸಹಿ/- ವ್ಯವಸ್ಥಾಪಕ ನಿರ್ದೇಶಕರು

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಕ.ನೀ.ನಿ.ನಿ., ವಾರಾಹಿ ಯೋಜನಾ ವಿಭಾಗ ಸಿದ್ದಾಪುರ, ಉಡುಪಿ ಜಿಲ್ಲೆ –576229
ಕಛೇರಿ ಟೆಂಡರ್ ಪ್ರಕಟಣೆ ಸಂಖ್ಯೆ:ಕಾಇಂ/ಕನೀನಿನಿ/ವಾಯೋವಿ/ಪಿಬಿ/ಟೆಂಡರ್/02/2021–22/1324 ದಿನಾಂಕ: 09–02–2022

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿ) (Two tender document system)

ವಾರಾಹಿ ನೀರಾವರಿ ಯೋಜನೆಯ ವಾರಾಹಿ ಯೋಜನಾ ವಿಭಾಗದ ವ್ಯಾಪ್ತಿಯ ಕಾರ್ಯ ನಿರ್ವಹಿಸುತ್ತಿರುವ ... ಕಾಮಗಾರಿಯನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. (1) ಗುತ್ತಿಗೆದಾರರು www.eproc.karnataka.gov.in ... (2) ಟೆಂಡರಿನ ಗುತ್ತಿಗೆ ಮೊತ್ತ ರೂ. 7469.15 ಲಕ್ಷ (3) ... ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ... ದಿನಾಂಕ: 10/02/2022 (4) ... ದಿನಾಂಕ: 15/02/2022 (5) ... ದಿನಾಂಕ: 23/02/2022 (6) ... ದಿನಾಂಕ: 25/02/2022 (7) ಹೆಚ್ಚಿನ ವಿವರಗಳಿಗಾಗಿ http://eproc.karnataka.gov.in, www.knnlindia.com ... www.eproc.karnataka.gov.in ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸಲಾಗುವುದು. (9) The condition no: (I) (iii) and II (iv) for Pre-qualification criteria under original tender notification to read as the intending bidder must pay specified full E.M.D. i.e. Rs. 74,70,000.00 in the e-procurement platform through any of the payment modes as:- a) Credit card b) Direct Debit c) National Electronic fund transfer (NEFT) d)Over the counter (OTC). Tenders without valid E.M.D. shall be rejected

ಸಹಿ/– ಕಾರ್ಯಪಾಲಕ ಇಂಜಿನಿಯರ್, ಕನೀನಿನಿ., ವಾರಾಹಿ ಯೋಜನಾ ವಿಭಾಗ, ಸಿದ್ದಾಪುರ ಉಡುಪಿ ಜಿಲ್ಲೆ
ವಾಸಾಇ/ಸನಿಉ/ಎಂಸಿಎ/649/21–22 ದಿ:16.02.2022

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ, (ಜಿಲ್ಲಾ ನಗರಾಭಿವೃದ್ಧಿ ಕೋಶ) ಹಾವೇರಿ ಜಿಲ್ಲೆ, ಹಾವೇರಿ–581110
ದೂರವಾಣಿ ಸಂಖ್ಯೆ : 08375–249097 ಫ್ಯಾಕ್ಸ್ : 08375–249088
e-mail : dc_haveri@yahoo.co.in
ನಂ:ಮುಸ:UPAC:ಇ.ಕ್ಯಾ:ವಹಿ–45/2017–18 ದಿನಾಂಕ : 15–02–2022

ಇ–ಪ್ರೋಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಹಾವೇರಿ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ನಗರಸಭೆ ಹಾವೇರಿ, ನಗರಸಭೆ ರಾಣೇಬೆನ್ನೂರು, ಪಟ್ಟಣ ಪಂಚಾಯತ ಹಿರೇಕೆರೂರು ಗಳಲ್ಲಿ ಇಂದಿರಾ ಕ್ಯಾಂಟೀನ್‌ಗಳಿಗೆ ಆಹಾರ ಸರಬರಾಜು ಮಾಡಲು ಆಹಾರ ಸರಬರಾಜುದಾರರನ್ನು ಆಯ್ಕೆ ಮಾಡಲು 1 ಪ್ಯಾಕೇಜನಲ್ಲಿ ಈ ಕೆಳಗಿನ ಇಂಡೆಂಟ್ ನಂಬರ್‌ಗಳಿಗೆ ಐಟಂವಾರು ಟೆಂಡರ್‌ನ್ನು ದ್ವಿ–ಲಕೋಟೆ ಪದ್ಧತಿ (Two Covers System) KW-4ರ ನಿಬಂಧನೆಗಳೊಂದಿಗೆ ಇ–ಪ್ರೋಕ್ಯೂರ್‌ಮೆಂಟ್ ಮೂಲಕ ಅಹ್ವಾನಿಸಲಾಗಿದೆ.

ಕ್ರ. ಸಂ.	ನಗರ ಸ್ಥಳೀಯ ಸಂಸ್ಥೆಗಳು	ಟೆಂಡರ ನಂ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ. ಮೊತ್ತ (ರೂ. ಲಕ್ಷಗಳಲ್ಲಿ)
1	ನಗರಸಭೆ ಹಾವೇರಿ, ರಾಣೇಬೆನ್ನೂರು, ಹಾಗೂ ಪಟ್ಟಣ ಪಂಚಾಯತ ಹಿರೇಕೆರೂರು	ಮುಸ/ಯುಪಿಎಸಿ/ಐಸಿ/ವಹಿ–45/2017–18	249.66	3.75

ಇ–ಪ್ರೋಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	19–03–2022 ಸಾಯಂಕಾಲ 4.00 ಘಂಟೆ ಒಳಗಾಗಿ
ತಾಂತ್ರಿಕ ಬಿಡ್ ತೆರೆಯುವ ದಿನಾಂಕ	21–03–2022 ಬೆಳಿಗ್ಗೆ 11.00 ಘಂಟೆಗೆ
ಆರ್ಥಿಕ ಬಿಡ್ ತೆರೆಯುವ ದಿನಾಂಕ	30–03–2022 ಬೆಳಿಗ್ಗೆ 11.00 ಘಂಟೆಗೆ

ಸದರಿ ಕ್ಯಾಟರಿಂಗ್ ಸೇವೆ ವಿವರ ಹಾಗೂ ಇತರೆ ಷರತ್ತುಗಳನ್ನು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ http://eproc.karnataka.gov.in ಮೂಲಕ ಹಾಗೂ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಜಿಲ್ಲಾ ನಗರಾಭಿವೃದ್ಧಿ ಕೋಶದ ತಾಂತ್ರಿಕ ಶಾಖೆಯಿಂದ ಪಡೆದುಕೊಳ್ಳಬಹುದಾಗಿದೆ.

ಸಹಿ/– ಜಿಲ್ಲಾಧಿಕಾರಿಗಳು, ಹಾವೇರಿ ಜಿಲ್ಲೆ, ಹಾವೇರಿ.
ವಾಸಾಸಂಇ/ಹಾವೇರಿ/ಎಂಸಿಎ/464/2021–22

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ, ಚಿಕ್ಕೋಡಿ.
ನಂ.ಲೋ.ಇ./ಚಿ.ವಿ./ಸ.ಇಂ.–1/ಟೆಂಡರ/2021–22/6335 ದಿನಾಂಕ:14/02/2022

ಅಲ್ಪಾವಧಿ ಇ–ಟೆಂಡರ ಪ್ರಕಟಣೆ

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2021–22 ನೇ ಸಾಲಿನ ಲೆಕ್ಕ ಶಿರ್ಷಿಕೆ 8443–ಠೇವಣಿ ವಂತಿಕೆ ಅಡಿ 1 ಕಾಮಗಾರಿಯ ಗುತ್ತಿಗೆ ಇಟ್ಟ ಮೊತ್ತ ರೂ. 219.30 ಲಕ್ಷ ಇರುತ್ತದೆ.
ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು
1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ : 03–03–2022 ರಂದು (11.00 ಗಂಟೆಗೆ), 2)ಆಕ್ಷೇಪಣೆ – ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:05–03–2022 (ಸಾಯಂಕಾಲ 5.30 ಗಂಟೆಯ ವರೆಗೆ), 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : 07–03–2022 (ಸಾಯಂಕಾಲ 5.00 ಗಂಟೆಯವರೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System):09–03–2022 (ಸಾಯಂಕಾಲ 4.30 ಗಂಟೆಗೆ), 5)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ"

ಕಾಮಗಾರಿಯ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ www.eproc.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.
DIPR/BGM/RO-NO-1541/MCA/2021-22

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ, ಚಿಕ್ಕೋಡಿ.
ನಂ.ಲೋ.ಇ./ಚಿ.ವಿ./ಸ.ಇಂ.–3/ಟೆಂಡರ/2021–22/6359 ದಿನಾಂಕ: 14/02/2022

ಅಲ್ಪಾವಧಿ ಇ–ಟೆಂಡರ ಪ್ರಕಟಣೆ

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2021–22 ನೇ ಸಾಲಿನ ಲೆಕ್ಕ ಶಿರ್ಷಿಕೆ 5054–ಎಸ್.ಡಿ.ಪಿ(ಸಾಮಾನ್ಯ) ಅಡಿ 10 ಕಾಮಗಾರಿಗಳು, ಲೆಕ್ಕ ಶಿರ್ಷಿಕೆ 5054–ಎಸ್.ಡಿ.ಪಿ(ಎಸ್.ಸಿ.ಪಿ.) ಅಡಿ 8 ಕಾಮಗಾರಿಗಳು ಹಾಗೂ ಲೆಕ್ಕ ಶಿರ್ಷಿಕೆ 5054–ಎಸ್.ಡಿ.ಪಿ(ಟಿ.ಎಸ್.ಪಿ.) ಅಡಿ 3 ಕಾಮಗಾರಿಗಳು, ಹೀಗೆ ಒಟ್ಟು 21 ಕಾಮಗಾರಿಗಳ ಗುತ್ತಿಗೆ ಇಟ್ಟ ಕನಿಷ್ಠ ಮೊತ್ತ ರೂ. 4.95 ಲಕ್ಷ ಹಾಗೂ ಗರಿಷ್ಠ ಮೊತ್ತ ರೂ. 87.72 ಲಕ್ಷ ಇರುತ್ತದೆ.
ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು
1)ಆಕ್ಷೇಪಣೆ –ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ : 25–02–2022(ಸಾಯಂಕಾಲ 5.30 ಗಂಟೆಯವರೆಗೆ), 2)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:28–02–2022 (ಸಾಯಂಕಾಲ 5.00 ಗಂಟೆಯವರೆಗೆ), 3)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Single Cover System): 02–03–2022 (ಸಾಯಂಕಾಲ 4.30 ಗಂಟೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System): 02–03–2022 (ಸಾಯಂಕಾಲ 4.30 ಗಂಟೆಗೆ), 5)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ"

ಕಾಮಗಾರಿಯ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ www.eproc.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.
DIPR/BGM/RO-NO-1544/MCA/2021-22

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರ ಕಚೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಾಗಲಕೋಟ
ನಂ:ಗ್ರಾಕುನೀಮತ್ತುನೈವಿ/ಬಾಗಲಕೋಟ/ಪಿಬಿ–4,5 ಟೆಂಡರ್/2021–22/2304 ದಿನಾಂಕ:15–02–2022

ಅಲ್ಪಾವಧಿ ಇ-ಪ್ರೋಕ್ಯೂರಮೆಂಟ್-ಟೆಂಡರ ಪ್ರಕಟಣೆ

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಾಗಲಕೋಟ ರವರಿಂದ ಕುಡಿಯುವ ನೀರು ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ.
1) ಹುನಗುಂದ ತಾಲ್ಲೂಕಿನ SDP ಕಾಮಗಾರಿಗಳು
1) Chillapur (Gen) Indent No-38515APT-17.80 lakhs (Call-2)
2) Aihole Indent No -37206 APT-365.40 lakhs
2) ಬದಾಮಿ ತಾಲ್ಲೂಕಿನ SDP ಕಾಮಗಾರಿಗಳು
1) Shirabadagi (Gen) Indent No 38500 APT-89.11 lakhs (Call-2)
2) Chikkaodagali LT-2 Indent No-38453 APT- 113.02 lakhs (Call-2)
3) Gudur sb Indent No-36398 APT-21.74 Lakhs (Call-2)
4) ಲೆಕ್ಕ ಶಿರ್ಷಿಕೆ: ... 2021–22 & SDP
5) ಟೆಂಡರ್ ... ಇ–ಪ್ರೊಕ್ಯೂರ್‌ಮೆಂಟ್ ಪ್ರಕಾರ
6) ಟೆಂಡರ್ ಫಾರ್ಮ ಸಲ್ಲಿಸುವ ಅಂತಿಮ ದಿನಾಂಕ: 23–02–2022 ಸಾಯಂಕಾಲ 5.30 ಗಂಟೆಯ ವರೆಗೆ
7) ತಾಂತ್ರಿಕ ಬಿಡ್ ತೆರೆಯುವ ದಿನಾಂಕ:25–02–2022 ಮಧ್ಯಾಹ್ನ 11.00 ಗಂಟೆಯ ನಂತರ (Two Cover)
8) ಆರ್ಥಿಕ ಬಿಡ್ ತೆರೆಯುವ ದಿನಾಂಕ: 25–02–2022 11.00 ಗಂಟೆಯ ನಂತರ (Single Cover)
9) ಆರ್ಥಿಕ ಬಿಡ್ ತೆರೆಯುವ ದಿನಾಂಕ: 28–02–2022 11.00 ಗಂಟೆಯ ನಂತರ (Two Cover)
... 1) ಟೆಂಡರ ಮೊತ್ತ ... DD/FDR ... 2) ಗುತ್ತಿ ಮೊತ್ತ 12% GST ಯನ್ನು ಸೇರಿಸಿ ...

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರ, ಗ್ರಾ.ಕು.ನೀ ಮತ್ತು ನೈ.ವಿಭಾಗ, ಬಾಗಲಕೋಟ
ವಾ.ಸಾ.ಇ/ಬಾಗಲಕೋಟ/567/2021–22/ಎಂಸಿಎ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರು ಯೋಜನೆ ದಕ್ಷಿಣರವರ ಕಛೇರಿ, ದಕ್ಷಿಣ ವಲಯ ಕಛೇರಿ ಸಂಕೀರ್ಣ, 9ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಜಯನಗರ 2ನೇ ಬ್ಲಾಕ್, ಬೆಂಗಳೂರು – 560011
ನಂ.: ಕಾಪಾಅಯೋ(ದ)/ಇ–ಪ್ರೊಕ್/18/21–22 ದಿನಾಂಕ: 16.02.2022

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಯೋಜನೆ ದಕ್ಷಿಣ, ಬಿಬಿಎಂಪಿ, ಇವರು ಅರ್ಹ ಟೆಂಡರ್‌ದಾರರಿಂದ ಈ ಕೆಳಗಿನ ನಿರ್ಮಾಣ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರ್‌ಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ ಮೊತ್ತ ರೂ.ಗಳಲ್ಲಿ
	ದ್ವಿ ಲಕೋಟೆ ಪದ್ಧತಿ		
1	ಬನಶಂಕರಿ ದೇವಸ್ಥಾನ, ವಾರ್ಡ್ ನಂ. 180ರ ಉದ್ಯಾನವನಗಳಿಗೆ ಜಿಮ್ ಉಪಕರಣಗಳು ಮತ್ತು ಮಕ್ಕಳ ಆಟದ ಉಪಕರಣಗಳನ್ನು ಒದಗಿಸುವುದು.	125.00	2,00,000/–
2	ದಕ್ಷಿಣ ವಲಯ, ಚಿಕ್ಕಪೇಟೆ ಕ್ಷೇತ್ರ, ವಾರ್ಡ್ ನಂ. 118, 119ರಲ್ಲಿ ಎಂ.ಎಸ್. ಕಟ್ಟಡ ನಿರ್ಮಾಣ ಮತ್ತು ವಾರ್ಡ್ ನಂ. 153ರಲ್ಲಿ ಕಿದ್ವಾಯಿ, ನಿಮ್ಹಾನ್ಸ್ ಮತ್ತು ಸಂಜಯಗಾಂಧಿ ಆಸ್ಪತ್ರೆಗಳ ಸುಧಾರಣೆ ಮತ್ತು ನಿರ್ಮಾಣ ಹಾಗೂ ವಾರ್ಡ್ ನಂ. 142ರಲ್ಲಿ ನ್ಯಾಷನಲ್ ಕಾಲೇಜ್ ಮೈದಾನದ ಸಮಗ್ರ ಅಭಿವೃದ್ಧಿ, 2019–20, ಪ್ಯಾಕೇಜ್ ನಂ. 05 (ಜಾಬ್ ಕ್ರಮ ಸಂಖ್ಯೆ 106, 112, 125 & 117 – 4 ಕಾಮಗಾರಿಗಳನ್ನು ಒಗ್ಗೂಡಿಸಿದೆ)	1,400.00	15,00,000/–

ವೇಳಾಪಟ್ಟಿ: (1) ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಪೂರ್ವಭಾವಿ ಸಭೆಯು ಕಾರ್ಯಪಾಲಕ ಅಭಿಯಂತರರು ಯೋಜನೆ (ದಕ್ಷಿಣ) ರವರ ಕಛೇರಿಯಲ್ಲಿ 22.02.2022ರ ಮಧ್ಯಾಹ್ನ 3:00 ಗಂಟೆಗೆ ನಡೆಯಲಿದೆ. (3) ಟೆಂಡರ್‌ಗಳನ್ನು ಆನ್‌ಲೈನ್ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ 28.02.2022ರ ಸಂಜೆ 4:00 ಗಂಟೆಯೊಳಗೆ ಸಲ್ಲಿಸತಕ್ಕದ್ದು ಹಾಗೂ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮಾರ್ಗದರ್ಶನದಂತೆ ತೆರೆಯಲಾಗುವುದು. (4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 03.03.2022ರ ಸಂಜೆ 4:30 ಗಂಟೆ. (5) ಆರ್ಥಿಕ ಬಿಡ್ ತೆರೆಯುವ ದಿನಾಂಕ: 07.03.2022ರ ಸಂಜೆ 4:00 ಗಂಟೆ ಅಥವಾ ತಾಂತ್ರಿಕ ಬಿಡ್ ಅನುಮೋದನೆಯ ನಂತರ. ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಛೇರಿಯಲ್ಲಿ ಕಛೇರಿಯ ಸಮಯದಲ್ಲಿ ಅಥವಾ ವೆಬ್‌ಸೈಟ್ https://eproc.karnataka.gov.in ನಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಯೋಜನೆ (ದಕ್ಷಿಣ), ಬಿಬಿಎಂಪಿ

ಪಟ್ಟಣ ಪಂಚಾಯಿತಿ ಕಾರ್ಯಾಲಯ, ಮೂಡಿಗೆರೆ ಚಿಕ್ಕಮಗಳೂರು ಜಿಲ್ಲೆ – 577132
website : www.mudigeretown.gov.in phone : 08263-220257 Email : mudigerep@yahoo.in
ಸಂ:ಮಪಪಂ/ಕ2/ಸಿ.ಆರ್/2021–22 ದಿನಾಂಕ : 09/02/2022

ಇ–ಟೆಂಡರ್ ಪ್ರಕಟಣೆ

ಮೂಡಿಗೆರೆ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ವಿವಿಧ ಯೋಜನೆಯಡಿ ಬಿಡುಗಡೆಯಾದ ಅನುದಾನದಲ್ಲಿ ... ಕಾಮಗಾರಿಗಳಿಗೆ ... ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಗುತ್ತಿಗೆದಾರರು / ಅಧಿಕೃತ ಮಾರಾಟಗಾರರು ಸರಬರಾಜುದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.
ಇ – ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 22/02/2022
ಇ – ಟೆಂಡರ್ ತೆರೆಯುವ ದಿನಾಂಕ : 24/02/2022

(1) DMA / 2021-22 / WS / WORK_INDENT / 127201 / CALL - 2
(2) DMA / 2021-22 / OW / WORK_INDENT / 127200 / CALL - 2
(3) DMA / 2021-22 / BD / WORK_INDENT / 125241 / CALL - 2
(4) DMA / 2021-22 / OW / WORK_INDENT / 120366 / CALL - 3
(5) DMA / 2021-22 / BD / WORK_INDENT / 126974 / CALL - 2
(6) DMA / 2021-22 / BD / WORK_INDENT / 126520
(7) DMA / 2021-22 / BD / WORK_INDENT / 126515
(8) DMA / 2021-22 / BD / WORK_INDENT / 126512
(9) DMA / 2021-22 / BD / WORK_INDENT / 126517
(10) DMA / 2021-22 / OW / WORK_INDENT / 126508
(11) DMA / 2021-22 / OW / WORK_INDENT / 127553
(12) DMA / 2021-22 / OW / WORK_INDENT / 127554
(13) DMA / 2021-22 / BD / WORK_INDENT / 126504

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 02/03/2022 ಇ–ಟೆಂಡರ್ ತೆರೆಯುವ ದಿನಾಂಕ : 04/03/2022

(1) DMA / 2021-22 / RD / WORK_INDENT / 127828
(2) DMA / 2021-22 / RD / WORK_INDENT / 127827
(3) DMA / 2021-22 / RD / WORK_INDENT / 127826
(4) DMA / 2021-22 / RD / WORK_INDENT / 127829
(5) DMA / 2021-22 / RD / WORK_INDENT / 127830
(6) DMA / 2021-22 / RD / WORK_INDENT / 127831
(7) DMA / 2021-22 / RD / WORK_INDENT / 127832
(8) DMA / 2021-22 / RD / WORK_INDENT / 127841
(9) DMA / 2021-22 / RD / WORK_INDENT / 127845
(10) DMA / 2021-22 / RD / WORK_INDENT / 127842
(11) DMA / 2021-22 / OW / WORK_INDENT / 127846

ಹೆಚ್ಚಿನ ವಿವರಗಳಿಗಾಗಿ WWW.eproc.karnataka.gov.in ಸಂಪರ್ಕಿಸಬಹುದು. ... ಕಾಮಗಾರಿಯ ಅಂದಾಜು ನಿಗದಿಪಡಿಸಲಾಗಿದೆ.
ಸಹಿ/– (ಜಿ.ಕೆ.ಪ್ರಭಾಕರ್) ಅಧ್ಯಕ್ಷರು, ಪ.ಪಂ. ಮೂಡಿಗೆರೆ ಸಹಿ/– (ಮಧುಪ್ ಕೆ) ಉಪಾಧ್ಯಕ್ಷರು, ಪ.ಪಂ. ಮೂಡಿಗೆರೆ ಸಹಿ/– (ಎಸ್.ಡಿ. ಮಂಜುನಾಥ್) ಮುಖ್ಯಾಧಿಕಾರಿ, ಪ.ಪಂ. ಮೂಡಿಗೆರೆ

ಸಂಗೀತ ಮಾಂತ್ರಿಕ ಬಪ್ಪಿ ಲಹಿರಿ ಅಸ್ತಂಗತ

27.11.1952 - 16.02.2022

ಬೆಂಗಳೂರು: ಖ್ಯಾತ ಸಂಗೀತ ನಿರ್ದೇಶಕ ಬಪ್ಪಿ ಲಹಿರಿ (69) ಮುಂಬೈನ ಖಾಸಗಿ ಆಸ್ಪತ್ರೆಯಲ್ಲಿ ಬುಧವಾರ ನಿಧನರಾದರು. ಕಳೆದ ವರ್ಷ ಏಪ್ರಿಲ್‌ನಲ್ಲಿ ಅವರಿಗೆ ಕೋವಿಡ್ ತಗುಲಿತ್ತು, ಮುಂಬೈನ ಬ್ರೀಚ್ ಕ್ಯಾಂಡಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದರು.

ಬಪ್ಪಿ ಲಹಿರಿ ಅವರಿಗೆ ಪತ್ನಿ, ಪುತ್ರ, ಹಾಗೂ ಪುತ್ರಿ ಇದ್ದಾರೆ. ಅವರ ಮೂಲ ಹೆಸರು ಅಲೋಕೇಶ್ ಲಹಿರಿ. ಪಶ್ಚಿಮ ಬಂಗಾಳದ ಜಲ್ಪೈಗುರಿಯಲ್ಲಿ 27 ನವೆಂಬರ್, 1952 ರಂದು ಜನಿಸಿದರು. ತಂದೆ ಅಪರೇಶ್ ಲಹಿರಿ, ತಾಯಿ ಬನ್ಸುರಿ ಲಹಿರಿ.

'ಬಪ್ಪಿ ದಾ' ಎಂದೇ ಜನಪ್ರಿಯರಾಗಿದ್ದ ಇವರು 1970 ಹಾಗೂ 80ರ ದಶಕದ ಹಲವು ಹಿಟ್ ಸಿನಿಮಾಗಳಿಗೆ ಸಂಗೀತ ನಿರ್ದೇಶನ ಮಾಡಿದ್ದರು. ಡಿಸ್ಕೊ ಪ್ರಕಾರದ ನೃತ್ಯ ಸಂಗೀತವನ್ನು ಭಾರತದಲ್ಲಿ ಖ್ಯಾತಿಗೊಳಿಸಿದ ಗಾಯಕರಲ್ಲಿ ಬಪ್ಪಿ ಲಹಿರಿ ಕೂಡ ಒಬ್ಬರು. ಹೀಗಾಗಿಯೇ 'ಡಿಸ್ಕೊ ಕಿಂಗ್' ಎಂಬ ಹೆಸರು ಅವರದಾಗಿತ್ತು. ಅನೇಕ ಚಿತ್ರ ತಾರೆಯರಿಗೆ ಬಪ್ಪಿ ಧ್ವನಿ ನೀಡಿದ್ದರು.

'ಐ ಆ್ಯಮ್ ಎ ಡಿಸ್ಕೊ ಡ್ಯಾನ್ಸರ್' (ಮಿಥುನ್ ಚಕ್ರವರ್ತಿ ಅಭಿನಯ) ಹಾಡು ಬಪ್ಪಿ ಅವರ ಸಂಗೀತ ನಿರ್ದೇಶನದಲ್ಲಿ ಮೂಡಿಬಂದಿದ್ದು, ಸಂಗೀತ ಪ್ರಿಯರನ್ನು ಬಹುವಾಗಿ ಸೆಳೆದಿತ್ತು. ಸಂಗೀತ ನಿರ್ದೇಶನ, ಗಾಯನದ ಜೊತೆಗೆ ಚಿನ್ನದ ಆಭರಣಗಳು, ವಿಭಿನ್ನ ಉಡುಗೆ, ಗಾಢ ಬಣ್ಣದ ಕನ್ನಡಕದಿಂದಲೂ ಬಪ್ಪಿ ಅಭಿಮಾನಿಗಳ ಗಮನ ಸೆಳೆದಿದ್ದರು.

1973ರಲ್ಲಿ ತೆರೆ ಕಂಡ ಹಿಂದಿ ಚಲನಚಿತ್ರ 'ನನ್ಹಾ ಶಿಕಾರಿ' ಅವರು ಸಂಗೀತ ನೀಡಿದ ಮೊದಲ ಚಿತ್ರ. ಆ ಚಿತ್ರದ 'ತು ಮೇರಿ ಮಂಝಿಲ್...' ಹಾಡು ಸಾಕಷ್ಟು ಖ್ಯಾತಿಗಳಿಸಿತು. 'ಚಲ್ತೆ ಚಲ್ತೆ', 'ಆಪ್ ಕಿ ಖಾತಿರ್', 'ಲಹೂ ಕೆ ದೋ ರಂಗ್', 'ವಾರದಾತ್', 'ನಮಕ್ ಹಲಾಲ್', 'ಶರಾಬಿ', 'ಹಿಮ್ಮತ್ ವಾಲಾ', 'ಸತ್ಯಮೇವ ಜಯತೆ', 'ಆಜ್ ಕಾ ಅರ್ಜುನ್', 'ಥಾನೇದಾರ್' ಅವರು ಸಂಗೀತ ನಿರ್ದೇಶಿಸಿದ ಪ್ರಮುಖ ಚಿತ್ರಗಳು.

ಕನ್ನಡದಲ್ಲಿ ಲಹಿರಿ ಛಾಪು: ದ್ವಾರಕೀಶ್ ನಿರ್ಮಾಣ, ನಿರ್ದೇಶನದ 'ಆಫ್ರಿಕಾದಲ್ಲಿ ಶೀಲಾ', ಭಾರ್ಗವ ನಿರ್ದೇಶನದ 'ಕೃಷ್ಣ ನೀ ಬೇಗನೆ ಬಾರೋ', ವಿಷ್ಣುವರ್ಧನ್ ಅಭಿನಯದ 'ಪೊಲೀಸ್ ಮತ್ತು ದಾದಾ', ಅಂಬರೀಷ್ ನಟನೆಯ 'ಗುರು' ಚಿತ್ರಕ್ಕೆ ಬಪ್ಪಿ ಸಂಗೀತ ನೀಡಿದ್ದರು. ನೀನಾಸಂ ಸತೀಶ್ ಅಭಿನಯದ 'ಲವ್ ಇನ್ ಮಂಡ್ಯ' ಚಿತ್ರದ ಕರೆಂಟ್ ಹೋದ ಟೈಮಲಿ... ಹಾಡನ್ನು ಬಪ್ಪಿ ಹಾಡಿದ್ದರು.

2014ರಲ್ಲಿ ಬಿಜೆಪಿ ಸೇರಿದ್ದ ಬಪ್ಪಿ ಅವರು, ಪಶ್ಚಿಮ ಬಂಗಾಳದ ಶ್ರೀರಾಮಪುರ ಲೋಕಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಿ, ತೃಣಮೂಲ ಕಾಂಗ್ರೆಸ್ ಅಭ್ಯರ್ಥಿ ಕಲ್ಯಾಣ್ ಬ್ಯಾನರ್ಜಿ ವಿರುದ್ಧ ಸೋಲು ಕಂಡಿದ್ದರು.

ಮಾಜಿ ಶಾಸಕ ಎಚ್‌.ಡಿ.ಚೌಡಯ್ಯ ಇನ್ನಿಲ್ಲ

ಮಂಡ್ಯ: ಕೆರಗೋಡು ವಿಧಾನಸಭಾ ಕ್ಷೇತ್ರದಿಂದ ನಾಲ್ಕು ಬಾರಿ ಶಾಸಕ, ಒಮ್ಮೆ ವಿಧಾನ ಪರಿಷತ್ ಸದಸ್ಯ ಹಾಗೂ ವಿಧಾನಸಭೆ ವಿರೋಧ ಪಕ್ಷದ ನಾಯಕರೂ ಆಗಿದ್ದ ಡಾ.ಎಚ್‌.ಡಿ.ಚೌಡಯ್ಯ (94) ಮಂಗಳವಾರ ತಡರಾತ್ರಿ ಅನಾರೋಗ್ಯದಿಂದ ನಿಧನರಾದರು.

ತಾಲ್ಲೂಕಿನ ಹೊಳಲು ಗ್ರಾಮದ ಚೌಡಯ್ಯ ಅವರು ಸಹಕಾರ, ಶಿಕ್ಷಣ, ಗ್ರಾಮೀಣಾಭಿವೃದ್ಧಿ ಹಾಗೂ ಕ್ರೀಡಾ ಕ್ಷೇತ್ರದಲ್ಲಿ ಅಪಾರ ಸಾಧನೆ ಮಾಡಿದ್ದಾರೆ. 1960ರಿಂದ 1968ರವರೆಗೆ ತಾಲ್ಲೂಕು ಬೋರ್ಡ್ ಅಧ್ಯಕ್ಷರಾಗಿದ್ದರು. ನಂತರ ಜಿಲ್ಲಾ ಸಹಕಾರ ಬ್ಯಾಂಕ್ ಅಧ್ಯಕ್ಷರೂ ಆಗಿದ್ದರು.

1978ರಲ್ಲಿ ಜನತಾ ಪಕ್ಷದಿಂದ ವಿಧಾನಸಭೆಗೆ ಆಯ್ಕೆಯಾಗಿದ್ದರು. 1983ರ ಚುನಾವಣೆಯಲ್ಲಿ ತಮ್ಮ ರಾಜಕೀಯ ಗುರು ಕೆ.ವಿ.ಶಂಕರಗೌಡ ವಿರುದ್ಧವೇ ಕಾಂಗ್ರೆಸ್‌ನಿಂದ ಸ್ಪರ್ಧಿಸಿ ಗೆದ್ದಿದ್ದರು. 1985ರಲ್ಲಿ ನಡೆದ ಮಧ್ಯಂತರ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಗೆದ್ದು 1986ರಲ್ಲಿ 5 ತಿಂಗಳ ಕಾಲ ವಿಧಾನಸಭೆ ವಿರೋಧ ಪಕ್ಷದ ನಾಯಕರೂ ಆಗಿದ್ದರು.

1992ರಲ್ಲಿ ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆಯಾದರು. 1999ರ ವಿಧಾನಸಭಾ ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಗೆಲುವು ಸಾಧಿಸಿದ್ದರು. 2004ರಿಂದ ಅವರು ಸಕ್ರಿಯ ರಾಜಕಾರಣದಿಂದ ದೂರ ಉಳಿದಿದ್ದರು. 2008ರಲ್ಲಿ ಕೆರಗೋಡು ಕ್ಷೇತ್ರ ಮಂಡ್ಯ ಕ್ಷೇತ್ರದೊಂದಿಗೆ ವಿಲೀನವಾಯಿತು. ಅದಕ್ಕೂ ಮೊದಲು ಅವರು 1968 ಹಾಗೂ 1971ರ ಲೋಕಸಭಾ ಚುನಾವಣೆಗಳಲ್ಲಿ ಎಸ್‌.ಎಂ.ಕೃಷ್ಣ ಅವರ ಎದುರು ಸ್ಪರ್ಧಿಸಿ ಸೋಲು ಕಂಡಿದ್ದರು.

ರಾಜಕೀಯವಾಗಿ ವಿರೋಧಿಗಳಾಗಿದ್ದರೂ ಕೆ.ವಿ.ಶಂಕರಗೌಡರು ತಾವು ಕಟ್ಟಿದ ಜನತಾ ಶಿಕ್ಷಣ ಟ್ರಸ್ಟ್ (ಪಿಇಟಿ)ಗೆ ಚೌಡಯ್ಯ ಅವರನ್ನು ಉತ್ತರಾಧಿಕಾರಿಯನ್ನಾಗಿ ನೇಮಿಸಿದರು. 31 ವರ್ಷಗಳ ಕಾಲ ಪಿಇಟಿ ಅಧ್ಯಕ್ಷರಾಗಿ ಜನತಾ ಶಿಕ್ಷಣ ಸಮೂಹ ಸಂಸ್ಥೆಗಳನ್ನು (ಜಿಎಸ್‌ಎಸ್) ಮುನ್ನಡೆಸಿದ್ದರು. ಹೋರಾಟಗಾರರೂ ಆಗಿದ್ದ ಚೌಡಯ್ಯ ಕಾವೇರಿ, ವರುಣಾ ನಾಲೆ, ಸಹಕಾರ, ಏಕೀಕರಣ ಚಳವಳಿ ಸೇರಿ ಹಲವು ಹೋರಾಟಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು.

ಕ್ರೀಡಾ ಮನೋಭಾವ ಹೊಂದಿದ್ದ ಅವರು ಪಿಇಟಿ ಆವರಣದಲ್ಲಿ ಸುಸಜ್ಜಿತ ಕ್ರೀಡಾ ಸಂಕೀರ್ಣ ನಿರ್ಮಾಣ ಮಾಡಿದ್ದರು. ಅವರು ನಿರ್ಮಿಸಿರುವ ಕ್ರಿಕೆಟ್ ಸ್ಟೇಡಿಯಂ, ಬ್ಯಾಡ್ಮಿಂಟನ್ ಕೋರ್ಟ್, ಈಜುಕೊಳ, ಒಳಾಂಗಣ ಕ್ರೀಡಾಂಗಣದಲ್ಲಿ ರಾಷ್ಟ್ರಮಟ್ಟದ ಟೂರ್ನಮೆಂಟ್‌ಗಳು ನಡೆಯುತ್ತವೆ. 2012ರಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಅವರಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಿತ್ತು.

ಅವರಿಗೆ ಇಬ್ಬರು ಪುತ್ರರು, ಮೂವರು ಪುತ್ರಿಯರು ಇದ್ದಾರೆ. ಹೊಳಲು ಗ್ರಾಮದಲ್ಲಿ ಸಾರ್ವಜನಿಕರ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಬುಧವಾರ ಸಂಜೆ ಅವರ ತೋಟದಲ್ಲಿ ಸಕಲ ಸರ್ಕಾರಿ ಗೌರವಗಳೊಂದಿಗೆ ಅಂತ್ಯಕ್ರಿಯೆ ನಡೆಯಿತು.

ಚನ್ನಬಸವೇಶ್ವರ ರಥೋತ್ಸವ

ಜೋಯಿಡಾದ ಉಳವಿಯಲ್ಲಿ ಶ್ರೀ ಚನ್ನಬಸವೇಶ್ವರ ರಥೋತ್ಸವವು ಬುಧವಾರ ಸರಳವಾಗಿ ನೆರವೇರಿತು. ಕೋವಿಡ್ ನಿರ್ಬಂಧಗಳ ನಡುವೆಯೂ ಸಾವಿರಾರು ಭಕ್ತರು ಸೇರಿ, 'ಅಡಿಕೇಶ್ವರ, ಮಡಿಕೇಶ್ವರ, ಚನ್ನಬಸವೇಶ್ವರ ಮಹಾರಾಜ ಕೀ ಜೈ' ಎಂದು ಘೋಷಣೆ ಕೂಗುತ್ತ ತೇರನ್ನೆಳೆದು ಸಂಭ್ರಮಿಸಿದರು. ಪ್ರಜಾವಾಣಿ ಚಿತ್ರ: ಜ್ಞಾನೇಶ್ವರ ದೇಸಾಯಿ

ಮೃಗಾಲಯ ಪ್ರಾಧಿಕಾರ ದರ್ಶನ್ ರಾಯಭಾರಿ

ಮೈಸೂರು: ಕರ್ನಾಟಕ ಮೃಗಾಲಯ ಪ್ರಾಧಿಕಾರದ ರಾಯಭಾರಿಯಾಗಿ ನಟ ದರ್ಶನ್ ಅವರನ್ನು ನೇಮಿಸಲಾಗಿದೆ.

'ಪ್ರಾಣಿಪ್ರಿಯ ದರ್ಶನ್ ನೇಮಕ ಸಂಬಂಧ ಪ್ರಾಧಿಕಾರದ 149ನೇ ಆಡಳಿತ ಮಂಡಳಿ ಸಭೆಯಲ್ಲಿ ಅನುಮೋದನೆ ನೀಡಲಾಗಿತ್ತು. ಅವರ ಜನ್ಮ ದಿನದ ಪ್ರಯುಕ್ತ ಬುಧವಾರ ಅಧಿಕೃತವಾಗಿ ಘೋಷಣೆ ಮಾಡಲಾಗಿದೆ' ಎಂದು ಪ್ರಾಧಿಕಾರ ಅಧ್ಯಕ್ಷ ಎಲ್‌.ಆರ್‌. ಮಹಾದೇವಸ್ವಾಮಿ ತಿಳಿಸಿದರು.

ಗುಂಡಣ್ಣ

ಅಂಕೋಲಾ: 'ಸುಕ್ರಜ್ಜಿ'ಗೆ ಅನಾರೋಗ್ಯ

ಕಾರವಾರ: ಜಾನಪದ ಗಾಯಕಿ ಸುಕ್ರಿ ಬೊಮ್ಮಗೌಡ ಅವರಿಗೆ ಉಸಿರಾಟದಲ್ಲಿ ಸ್ವಲ್ಪ ತೊಂದರೆ ಕಾಣಿಸಿಕೊಂಡಿದೆ. ಅಂಕೋಲಾದ ಬಡಿಗೇರಿಯ ಅವರ ಮನೆಯಲ್ಲೇ ಚಿಕಿತ್ಸೆ ನೀಡಲಾಗುತ್ತಿದೆ.

ಎರಡು ದಿನಗಳ ಹಿಂದೆ ಅವರ ಆರೋಗ್ಯದಲ್ಲಿ ಸ್ವಲ್ಪ ಏರುಪೇರಾಗಿತ್ತು. ಅದು ಮುಂದುವರಿದ ಕಾರಣ ಆಸ್ಪತ್ರೆಗೆ ಕರೆದುಕೊಂಡು ಹೋಗಲು ಕುಟುಂಬದ ಸದಸ್ಯರು ಮುಂದಾದರು. ಆದರೆ, ಅದಕ್ಕೆ ಅವರು ನಿರಾಕರಿಸಿದ್ದಾರೆ. ಆಮ್ಲಜನಕ ಪೂರೈಕೆ ವ್ಯವಸ್ಥೆಯೊಂದಿಗೆ ಮನೆಯಲ್ಲೇ ಚಿಕಿತ್ಸೆ ಮುಂದುವರಿಸಲಾಗಿದ್ದು, ಆರೋಗ್ಯ ಸ್ಥಿರವಾಗಿದೆ. ಅಂಕೋಲಾದಿಂದ ವೈದ್ಯರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ಶಿವಮೂರ್ತಿ ಶಿವಾಚಾರ್ಯರ ಪೀಠಾರೋಹಣ

ಪ್ರಜಾವಾಣಿ ವಾರ್ತೆ

ಸಿರಿಗೆರೆ (ಚಿತ್ರದುರ್ಗ): ತರಳಬಾಳು ಬೃಹನ್ಮಠದ ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಅವರು 'ತರಳಬಾಳು ಹುಣ್ಣಿಮೆ' ಮಹೋತ್ಸವದ ಅಂತಿಮ ದಿನವಾದ ಬುಧವಾರ ವೇದ ಘೋಷಗಳ ನಡುವೆ ಸದ್ಧರ್ಮ ಸಿಂಹಾಸನಾರೋಹಣ ಮಾಡಿದರು.

ಗುರುಶಾಂತೇಶ್ವರ ದಾಸೋಹ ಭವನದ ಮುಂಭಾಗದಲ್ಲಿ ನಿರ್ಮಿಸಿದ್ದ ಭವ್ಯ ವೇದಿಕೆಗೆ ಸಂಜೆ 6.30ಕ್ಕೆ ಸ್ವಾಮೀಜಿ ಬರುತ್ತಿದ್ದಂತೆ ಭಕ್ತರು ಹರ್ಷೋದ್ಗಾರ ಮಾಡಿದರು. ಗುರುಶಾಂತರಾಜ ದೇಶಿಕೇಂದ್ರ ಸ್ವಾಮೀಜಿ, ಶಿವಕುಮಾರ ಶಿವಾಚಾರ್ಯ ಸ್ವಾಮೀಜಿ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಬಸವ ಧ್ವಜಾರೋಹಣ ನೆರವೇರಿಸಿದರು.

ಸ್ವಾಮೀಜಿ ಅವರು ಪೀಠದ ಮುಂಭಾಗಕ್ಕೆ ಬರುತ್ತಿದ್ದಂತೆ ವೇದ ಘೋಷಣ ಮೊಳಗಿದವು. ಹರ್ಷೋದ್ಗಾರ, ಜಯಘೋಷಗಳು ಕೇಳಿಬಂದವು. ಭಕ್ತರು ಎದ್ದುನಿಂತು ಸಿಂಹಾಸನಾರೋಹಣದ ಕ್ಷಣಕ್ಕೆ ಸಾಕ್ಷಿಯಾದರು. ಮಾಘಶುದ್ಧ ಹುಣ್ಣಿಮೆಯಂದು ಸಿಂಹಾಸನಾರೋಹಣ ಮಾಡುವುದು ತರಳಬಾಳು ಮಠದ ವಾಡಿಕೆ.

ಕೊಟ್ಟೂರು ನಗರದಲ್ಲಿ ನಿಗದಿಯಾಗಿದ್ದ ತರಳಬಾಳು ಹುಣ್ಣಿಮೆ ಮಹೋತ್ಸವವನ್ನು ಕೋವಿಡ್ ಕಾರಣಕ್ಕೆ ಮುಂದೂಡಲಾಯಿತು. ಸಿರಿಗೆರೆಯಲ್ಲಿ ಫೆ.14ರಂದು ಸರಳವಾಗಿ ಆರಂಭವಾದ ಸಮಾರಂಭ ಮೂರು ದಿನ ಜರುಗಿತು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮಾಜಿ ಮುಖ್ಯಮಂತ್ರಿ ಬಿ.ಎಸ್‌. ಯಡಿಯೂರಪ್ಪ, ಕೃಷಿ ಸಚಿವ ಬಿ.ಸಿ.ಪಾಟೀಲ, ಶಿಕ್ಷಣ ಸಚಿವ ಬಿ.ಸಿ.ನಾಗೇಶ್, ನಗರಾಭಿವೃದ್ಧಿ ಸಚಿವ ಭೈರತಿ ಬಸವರಾಜ, ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ, ಸಂಸದ ಜಿ.ಎಂ. ಸಿದ್ದೇಶ್ವರ್, ಶಾಸಕರಾದ ಎಂ.ಚಂದ್ರಪ್ಪ, ಎಸ್‌.ವಿ.ರಾಮಚಂದ್ರ, ಮಾಜಿ ಸಚಿವ ಎಚ್‌. ಆಂಜನೇಯ, ಮಾಜಿ ಶಾಸಕ ಡಿ.ಜಿ. ಶಾಂತನಗೌಡ ಇದ್ದರು.

ಸಿರಿಗೆರೆಯಲ್ಲಿ 'ತರಳಬಾಳು ಹುಣ್ಣಿಮೆ' ಮಹೋತ್ಸವದ ಅಂಗವಾಗಿ ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಅವರ ಅಡ್ಡಪಲ್ಲಕ್ಕಿ ಉತ್ಸವ ನಡೆಯಿತು

'ಭದ್ರಾ ಮೇಲ್ದಂಡೆಗೆ ರಾಷ್ಟ್ರೀಯ ಮಾನ್ಯತೆ'

ಭದ್ರಾ ಮೇಲ್ದಂಡೆ ಯೋಜನೆಗೆ ರಾಷ್ಟ್ರೀಯ ಮಾನ್ಯತೆ ನೀಡಲು ಕೇಂದ್ರ ಸರ್ಕಾರ ಬುಧವಾರ ಅನುಮೋದನೆ ನೀಡಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಇಲ್ಲಿನ ತರಳಬಾಳು ಮಠದ ಆವರಣದಲ್ಲಿ ನಡೆಯುತ್ತಿರುವ ತರಳಬಾಳು ಹುಣ್ಣಿಮೆಯ ಅಂತಿಮ ದಿನದಂದು ನಡೆದ ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಅವರ ಸದ್ಧರ್ಮ ಸಿಂಹಾಸನಾರೋಹಣ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

'ಕೇಂದ್ರ ಸರ್ಕಾರದ ಜಲಶಕ್ತಿ ಮಂತ್ರಾಲಯದ ಉನ್ನತ ಸಮಿತಿ ಭದ್ರಾ ಮೇಲ್ದಂಡೆಗೆ ಸಮ್ಮತಿ ನೀಡಿದೆ. ಇದು ರಾಜ್ಯದ ಮೊದಲ ರಾಷ್ಟ್ರೀಯ ಜಲ ಯೋಜನೆಯಾಗಿದೆ. ಇದರಿಂದ ಕರ್ನಾಟಕಕ್ಕೆ ₹12,500 ಕೋಟಿ ನೆರವು ಸಿಗಲಿದೆ. ಯೋಜನೆ ಅನುಷ್ಠಾನ ಇನ್ನಷ್ಟು ಚುರುಕು ಪಡೆಯಲಿದೆ' ಎಂದರು.

'ಭದ್ರಾ ಮೇಲ್ದಂಡೆ ಯೋಜನೆಯನ್ನು ಬಿ.ಎಸ್‌.ಯಡಿಯೂರಪ್ಪ ಅವರು ರೂಪಿಸಿದ್ದರು. ಇದಕ್ಕೆ ಸಾಕಷ್ಟು ವಿರೋಧವಿತ್ತು. ಇದರ ನಡುವೆಯೂ ದಿಟ್ಟ ತೀರ್ಮಾನ ಕೈಗೊಂಡಿದ್ದರ ಪರಿಣಾಮವಾಗಿ ಯೋಜನೆಗೆ ರಾಷ್ಟ್ರೀಯ ಮಾನ್ಯತೆ ದೊರೆಯಲು ಸಾಧ್ಯವಾಯಿತು. ನಾಲೆಯಿಂದ ಸಾಗರ ಜಲಾಶಯ ಭರ್ತಿಯಾಗಬೇಕು ಎಂಬ ಕನಸು ನನಸಾಗಿದೆ' ಎಂದು ಹೇಳಿದರು.

ವೈಭವದ ಯಲ್ಲಮ್ಮ ದೇವಿ ಮುತ್ತಿನ ಪಲ್ಲಕ್ಕಿ ಉತ್ಸವ

ಪ್ರಜಾವಾಣಿ ವಾರ್ತೆ

ಮದ್ದೂರು (ಮಂಡ್ಯ ಜಿಲ್ಲೆ): ಪಟ್ಟಣದ ರೇಣುಕಾ ಯಲ್ಲಮ್ಮದೇವಿಯ 50ನೇ ವಾರ್ಷಿಕ ಜಾತ್ರಾ ಮಹೋತ್ಸವದ ಅಂಗವಾಗಿ, ದೇವಿಯ 'ಮುತ್ತಿನ ಪಲ್ಲಕ್ಕಿ ಉತ್ಸವ'ವು ಬುಧವಾರ ರಾತ್ರಿ ವೈಭವದಿಂದ ನೆರವೇರಿತು.

ರಾತ್ರಿ 8 ಗಂಟೆಗೆ ಹೊಳೆ ಆಂಜನೇಯಸ್ವಾಮಿ ದೇಗುಲದ ಆವರಣದಲ್ಲಿ ದೇವಿಯ ಉತ್ಸವ ಮೂರ್ತಿಯನ್ನು ಮುತ್ತಿನ ಪಲ್ಲಕ್ಕಿಯಲ್ಲಿ ಪ್ರತಿಷ್ಠಾಪಿಸಲಾಯಿತು. ಹೊಳೆಬೀದಿ, ದೊಡ್ಡಿ ಬೀದಿ, ಮೇಲಿನಗರ ದೊಡ್ಡ ಬೀದಿ, ಗಂಗಾಮತಸ್ಥ ಬೀದಿ, ಪೇಟೆಬೀದಿ ಮೂಲಕ ಮೆರವಣಿಗೆ ಸಾಗಿತು.

ತಿರುಪತಿಯ ತಿರುಮಲ ದೇವಾಲಯದ ಮಂಜು ಬಾಲಾಜಿ ತಂಡದಿಂದ ಮೃದಂಗ ವಾದ್ಯಗೋಷ್ಠಿ, ಕೇರಳದ ಚಂಡವಾದ್ಯ,

ಮದ್ದೂರು ರೇಣುಕಾ ಯಲ್ಲಮ್ಮ ದೇವಿಯ ಮುತ್ತಿನ ಪಲ್ಲಕ್ಕಿ ಉತ್ಸವ ವೈಭವಯುತವಾಗಿ ನೆರವೇರಿತು

ತಮಿಳುನಾಡಿನ ಬ್ಯಾಂಡ್ ಸೆಟ್ ಹಾಗೂ ಸ್ಥಳೀಯ ಕಲಾವಿದರ ತಮಟೆ-ನಗಾರಿವಾದನ ಮೆರವಣಿಗೆಗೆ ರಂಗು ತಂದಿತು. ವೀರಗಾಸೆ, ಡೊಳ್ಳು ಕುಣಿತ, ಗಾರುಡಿ ಗೊಂಬೆ, ಜನಪದ ನೃತ್ಯ ಗಮನ ಸೆಳೆದವು.

ಬೆಳಿಗ್ಗೆ 7.30ಕ್ಕೆ ಮಹಾಚಂಡಿಕಾ ಹೋಮ ಆರಂಭವಾಯಿತು. ನಂತರ ಪೂರ್ಣಾಹುತಿ, ಮಧ್ಯಾಹ್ನ ಮಹಾಮಂಗಳಾರತಿ, ತೀರ್ಥ ಪ್ರಸಾದ ಹಾಗೂ ಮಹಿಳೆಯರಿಂದ ತಂಬಿಟ್ಟಿನ ಆರತಿ ಕಾರ್ಯಕ್ರಮಗಳು ನಡೆದವು.

ಮಧ್ಯಾಹ್ನ ಭಕ್ತರಿಗೆ ಅನ್ನಸಂತರ್ಪಣೆ ಆಯೋಜಿಸಲಾಗಿತ್ತು. ಬುಧವಾರ ಇಡೀ ರಾತ್ರಿ ಪಟ್ಟಣದ ಬೀದಿಗಳಲ್ಲಿ ಪಲ್ಲಕ್ಕಿ ಉತ್ಸವ ನಡೆಯಿತು. ಮೆರವಣಿಗೆಯುದ್ದಕ್ಕೂ ಪಟಾಕಿ ಸಿಡಿಸಲಾಯಿತು. ರೇಣುಕಾ ಎಲ್ಲಮ್ಮ ದೇವಿಯ ಉತ್ಸವ ಮೂರ್ತಿಯು ಗುರುವಾರ ಬೆಳಿಗ್ಗೆ ದೇಗುಲಕ್ಕೆ ಹಿಂದಿರುಗಲಿದೆ. ವಿಶೇಷ ಕ್ಷೀರಾಭಿಷೇಕ, ತೀರ್ಥಪ್ರಸಾದ ವಿನಿಯೋಗದೊಂದಿಗೆ ಜಾತ್ರೆಗೆ ತೆರೆಬೀಳಲಿದೆ.

THE FEDERAL BANK LIMITED
Regd. Office: Aluva, Kerala.
ZONAL OFFICE: 1st Floor, Halcyon Complex, No.9, St Marks Road, Bangalore-560 001.
e-mail: bgrr-cpc@federalbank.co.in Phone: 080-22074610/604/613/624/625

BGRR/PvtSale/2021-22 **NOTICE FOR PRIVATE SALE OF GOLD** 17/02/2022

Notice is hereby given for the information of all concerned that Gold Ornaments pledged in the following Gold Loan accounts, with the under mentioned Branches of the Bank, which are overdue for redemption and which have not been regularized so far in spite of repeated notices, will be put for Private sale, in the respective Branches on any date after 11-03-2022 as shown below:

Br. Ainapur: Karchi Building, Opposite Pattan Panchayath, Ainapur, Taluk Athani, Belgaum- 591 303, Ph. No. 08339-254084. :-
14976100015861,14976100016430,14976100017834,14976400004391,14976400004540,14976400004748,14976400007881,14976400008558.

Br. Athani: Near Head Post Office, Near Ganesh Mandir, A / P Athani, Athani, Belgaum- 591 304, Ph no.0 8289-252725 :-
15076100021008,15076100021016,15076400026855,15076400026863,15076400032036,15076400032093,15076400027721,15076400027739,15076400027804,15076400027911,15076400027986,15076400028141,15076400035971,15076400032739,15076400028497,15076400033190,15076400029156,15076400029412,15076400037407,15076400026657,15076400027762,15076400028133,15076400032663,15076400028331,15076400033554.

Br. Bagalkot :- Prema Arcade, Engineering college circle, Vidyagiri PO, Bagalkot - 587102, Ph. no. 08354-233399 :-
15076100021008,15076100021016,15076400026855,15076400026863,15076400032036,15076400032093,15076400027721,15076400027739,15076400027804,15076400027911,15076400027986,15076400028141,15076400035971,15076400032739,15076400028497,15076400033190,15076400029156,15076400029412,15076400037407,15076400026657,15076400027762,15076400028133,15076400032663,15076400028331,15076400033554.

Br. Belgaum/Tilakwadi: Near 3rd Railway Gate, Khanapur Road, Tilakwadi, Belgaum- 590 006. Ph. No. 0831-2495439 :-
15306100038391,15306100043128,15306100043136,15306100040090,15306100039621,15306100044571,15306100043698,15306100044563,15306400005082,15306400010728,15306400010926,15306400009498,15306400009381,15306400010751,15306400010538,15306400004663,15306400010876,15306400004085,15306400004648,15306400004655,15306400004945,15306400010132,15306400009464,15306400010785,15306400010918,15306400004119.

Br. Belgaum/City: Ground Floor, Vijaylaxmi Arcade, Opp: Khade Bazar Police station, Narvekar Galli, Belgaum- 590002, Ph-0831-2421460 :-
15096100247320,15096100245720,15096100245712,15096100245779,15096100245837,15096100245886,15096100245944,15096100245985,15096100245993,15096100246033,15096400018603,15096400018868,15096400021078,15096400017100,15096400021391,15096400017308,15096400017290,15096400018520,15096400021573,15096400021599,15096400021615,15096400021664,15096400021656,15096400017506,15096400021839,15096400021888,15096400020161,15096400022001,15096400022019,15096400019015,15096400017258,15096400022027,15096400018777,15096400018918,15096400016573,15096400016581,15096400020492,15096400017324,15096400017340,15096400017720.

Br. Bellary: Modi Chambers, 2nd Cross, Gandhi Nagar, Bellary- 583 103, Ph. no. 08392-258667 :-
15896400063032,15896400114249,15896400127944,15896400073429,15896400073437,15896400082404,15896400100081,15896400103697,15896400125211,15896400070821,15896400096404,15896400115873,15896400116236,15896400073221,15896400084095,15896400084103,15896400104463,15896400126326,15896400109710,15896400116798,15896400120147,15896400115808,15896400128140,15896400133256,15896400079566,15896400073908,15896400117093,15896400123018,15896400124636,15896400124644,15896400133405,15896400064675,15896400065482,15896400036335,15896400122606,15896400134486,15896400051805,15896400134775,15896400127407,15896400117465,15896400117473,15896400115865,15896400056556,15896100156581,15896400117259,15896400064030,15896400115212,15896400116962,15896400116541,15896400114587,15896100155542,15896400076992,15896400102996,15896400117614,15896400067736,15896400083964,15896400064725,15896400071290,15896400117630,15896400071795,15896400072488,15896400115063,15896400114298,15896400114801,15896400121475,15896400077693,15896400090043,15896400081463,15896400082057,15896400115915,15896400116467,15896400116947,15896400115451,15896400073312,15896400084046,15896400084079,15896400084087,15896400084061,15896400084053,15896400091173,15896400098319,15896400116806,15896400129387,15896400078949,15896400115014,15896400075606,15896400077610,15896400045757,15896400071837,15896400122937,15896400118398,15896400123158,15896400079806,15896400116814,15896400072314,15896400072306,15896400064873,15896400084137,15896400084020,15896400084038,15896400114256,15896400115337,15896400113217,15896400080556,15896400083915,15896400052043.

Br. Challakere: Chaitanya Arcade, Bangalore Road, Challakere, Chitradurga- 577522, Ph. no. 08195-222456 :-
18976400021342,18976400021342,18976400021342,18976400021342,18976400021193,18976400021193,18976400021193,18976400021193,18976100040840.

Br. Chitrdurga: OppVasaviMahal, Basaveshwara Talkies Road, Chitradurga -577 501, Ph No.08194–220931 :-
15946400042922,15946400033418,15946400031032,15946400031594,15946400043110,15946400037609,15946400039811,15946400029978,15946400043409,15946400037104,15946400036023,15946400034663,15946400030398,15946400030687,15946400042526,15946400031545,15946400025703,15946400037872,15946400032857,15946400033772,15946400031065,15946400030752,15946400038904,15946100075941,15946400038078,15946400043946,15946400029812,15946400033608,15946400032295,15946400029275,15946400030026,15946400042765,15946400037385,15946400043433,15946400038995,15946400039571,15946400040116,15946100081394,15946400029515,15946400042807,15946400042799,15946400043672,15946400042757,15946400041460,15946400026487,15946400031008,15946400039951,15946400038359,15946400040173,15946400041494,15946400026057,15946400026222,15946400033111,15946400041213,15946400040272,15946400017403,15946400035918,15946400032378,15946400034374,15946400031834,15946400039449,15946400031602,15946400039373,15946400031339,15946400028178,15946100082582,15946400036759,15946400035900,15946400041973,15946400038102,15946400032436,15946400043052,15946100079604,15946400043417,15946400024292,15946400030430,15946400043706,15946400041528,15946400032501,15946400039746,15946400043003,15946400043136,15946400043607,15946400042492,15946400029382,15946400037344,15946400029341,15946400043797,15946400031636,15946400042856,15946400038060,15946400029739,15946400031180,15946400031156,15946400020563,15946400041999,15946400029432,15946400032758.

Br. Davanagere: Raghavendra Plaza, NO.200/1A & 200/1B, 3rd Main, 7th Cross, 28th Ward, P J Extension, Davangere-577002, Ph. no. 08192-2225112:-
22976100002018,22976100000194,22976100000491,22976100000707,22976100001754,22976100002034,22976100002067,22976100002075,22976100000962,22976100000970,22976100001069,22976100002133,22976400004656,22976400004854,22976400005315,22976400005349,22976400001249,22976400002551,22976400001959,22976400001256,22976400001579,22976400001181,22976400003641,22976400006198,22976400003773,22976400001504,22976400001728,22976400006677,22976400006693,22976400003328,22976400004094,22976400004144,22976400004805,22976400004813,22976400004987,22976400005182,22976400005232,22976400005281,22976400005455,22976400005489,22976400005463,22976400005471,22976400005646,22976400005869,22976400005919,22976400005927,22976400005885,22976400005893,22976400005901,22976400006008,22976400006107,22976400006206,22976400006289,22976400006297,22976400003823,22976400006552,22976400006560,22976400006586,22976400006578,22976400006701,22976400006594,22976400006602,22976400006685,22976400006719,22976400006735,22976400006743,22976400006750,22976400006768,22976400006784,22976400006834,22976400006842,22976400006867,22976400006818,22976400006891,22976400006982,22976400007048.

Br. Dharwad: Inamdhar Desai Arcade, Opp Spandhana Hospital, Vivekananda Circle, Saptapur, Dharwad-580 001, Ph no. 0836-2445280 :-
16386400064544,16386400057449,16386400064569,16386400064551,16386400061391,16386400035288,16386100018725,16386400055872,16386400064965,16386100022792,16386400064585,16386400031576,16386400064577,16386400066473,16386400066374,16386400066382,16386400063868,16386400065269,16386400065921,16386400065939,16386400065244,16386400065574,16386400065889,16386400066499,16386400063306,16386400061763,16386400053828,16386400055559,16386400055542,16386400066481,16386400058504,16386400058512,16386400058520,16386400062746,16386400064312,16386400064320,16386400065509,16386400059437,16386400057753,16386400062704,16386400063132,16386400062597,16386400065210,16386400066309,16386400066366,16386400062126,16386400064734,16386400065863, 16386400065871,16386400064742,16386400057373,16386400065848,16386400040502,16386400064981,16386400064502,16386400062902,16386400063678,16386400063660,16386400065137,16386400064270,16386400064338,16386400055450,16386400049701,16386100022784,16386400051343,16386400066390,16386400064619,16386400064601,16386400065772,16386400066085.

Br. Gulbarga: Plot No.7, 1st Floor, Main Road, Super Market, Gulbarga- 585 101, Ph. no.0 8472-230107 :-
16046100054522,16046400022021,16046100059315,16046400021908,16046400019126,16046400020025,16046400025891,16046400025453,16046400025164,16046400012923,16046400025735,16046400021783,16046400016643,16046400021965,16046400026048,16046400022203,16046400017096,16046400017112,16046400022542,16046400022450,16046400020868,16046400016403,16046400016429,16046400021601,16046400016569,16046400019605,16046400021924,16046400026055,16046400026402.

Br. Ganeshpur: Plot No. 19, BUDA Scheme No 51, Near Military Hospital, Ganeshpur Main Road, Belgaum- 590009, Ph no.0 831-2446719 :-
14956100100442,14956400011919,14956400010259,14956100100699,14956400006489,14956400008733.

Br. Gangawati: Building No 2-12-81,82,83, Malleswara Complex, Koppal road, Gangawati - 583227 Ph no.0 8533-271861 :-
16856400035934,16856400062623,16856400060064,16856400068711,16856400073117,16856400016124,16856400038458,16856400023443,16856400060452,16856400070030,16856400069750,16856400066806,16856400045644,16856400070212,16856400038532,16856400068497,16856400036031,16856400069818,16856400043748,16856400029507,16856400043722,16856400076045,16856400045859,16856400068067,16856400075906,16856400067200,16856400048093,16856400038854,16856400060460,16856400026800,16856400070451,16856400033525,16856400041015,16856400038227,16856400061229,16856400051428,16856400060692,16856400063670,16856400069834,16856400060114,16856400039217,16856400063738,16856400074289,16856400074271,16856400043136,16856400060486,16856400074263,16856400051501,16856400069016,16856400027543,16856400044092,16856400048465,16856400073455,16856400059587,16856400061088,16856400061591,16856400061427,16856400039126,16856400061633.

Br. Hubli: Swastik Central, Niligin Road, New Cotton Market, Hubballi, Dharwad- 580 029, Ph. no.0 836-2369449 :-
13386400046536,13386100389087,13386400061089,13386100387719,13386100390564,13386400061824,13386100401072,13386400042634,13386400060388,13386400057285,13386100397650,13386100385077,13386400037543,13386400049902,13386400059125,13386400049399,13386400045512,13386400049704,13386100401155,13386400061410,13386100398724,13386100388758,13386400060685,13386100378759,13386400051015,13386400056329,13386400061881,13386100378742,13386400052104,13386400059208,13386400061907,13386100390325,13386400049936,13386400046460,13386400058648,13386100393907,13386400050660,13386100394483,13386100390382,13386400053755,13386400044747,13386400050215,13386400061279,13386400042543,13386400051361,13386100400884,13386400049092,13386400050678,13386400061444,13386400050934,13386400061261,13386400056360,13386400061469,13386100382561,13386100389749,13386400059802,13386400061485,13386400057707,13386400056253,13386400049787,13386400061451,13386400042477,13386100400918,13386100390275,13386400060909,13386100394236,13386100395845,13386400056295,13386400045959,13386100390119,13386400060594,13386100396413,13386100395746,13386400058630,13386400050439,13386400050611,13386400031512,13386400061725,13386100394079,13386400060735,13386100390093,13386400055826,13386400051080,13386400060651,13386100388451,13386400055834,13386400054902,13386200162863,13386400045488,13386400055842,13386400049175,13386100391380,13386400061097,13386400050785,13386100395084,13386400055586,13386400061816,13386400049241,13386400048003,13386100401163,13386100388246,13386400048482,13386100384278,13386400048805,13386400062087,13386400050926,13386400061584,13386100401122,13386400055032,13386100391901,13386400056980,13386400048953,13386400048516,13386400061519,13386400047484,13386400061493,13386400061311,13386400048730,13386400058770,13386100401676,13386400061303,13386400054837,13386400048946.

Bangalore 17-02-2022 Vice President & Zonal Head

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ನೀವು ಎಲ್ಲಕ್ಕಿಂತ ಹೆಚ್ಚಾಗಿ ಹಣವನ್ನು ಬಯಸುವಿರಾದರೆ, ಖರೀದಿಗೆ ಒಳಗಾಗುತ್ತೀರಿ ಮತ್ತು ನಿಮ್ಮ ಇಡೀ ಜೀವನವನ್ನು ಮಾರಿಕೊಳ್ಳುತ್ತೀರಿ. -ರೂಮಿ

ರಾಜ್ಯಪಾಲರ ಭಾಷಣ: ಬರಿದೇ ಬಡಿವಾರ, ಕಾಣದ ಮುನ್ನೋಟ

‘ನೀರಸ’, ‘ನಿರಾಶಾದಾಯಕ’, ‘ಅಸ್ಪಷ್ಟ’, ‘ಗೊತ್ತು-ಗುರಿ ಇಲ್ಲದ ಭಾಷಣ’- ವಿಧಾನಮಂಡಲದ ಜಂಟಿ ಅಧಿವೇಶನದಲ್ಲಿ ರಾಜ್ಯಪಾಲರು ಭಾಷಣ ಮಾಡಿದಾಗಲೆಲ್ಲ ಸಾಮಾನ್ಯವಾಗಿ ವಿರೋಧ ಪಕ್ಷಗಳ ನಾಯಕರಿಂದ ಕೇಳಿಬರುವ ಪ್ರತಿಕ್ರಿಯೆಗಳಿವು. ಆದರೆ, ಈ ವರ್ಷದ ಭಾಷಣ ಕೇಳಿದ ಯಾರೇ ಆಗಲಿ, ಅದೇ ರೀತಿಯಲ್ಲಿ ಹೇಳುವಂತಾಗಿದೆ. ರಾಜ್ಯ ಸರ್ಕಾರದ ಒಂದು ವರ್ಷದ ಸಾಧನೆ ಮತ್ತು ಮುಂದಿನ ಒಂದು ವರ್ಷಕ್ಕೆ ಅದು ಹಾಕಿಕೊಂಡಿರುವ ಮುನ್ನೋಟದ ಗುರಿಗಳು ರಾಜ್ಯಪಾಲರ ಭಾಷಣದಲ್ಲಿ ಪ್ರತಿಫಲಿತವಾಗಬೇಕು ಎನ್ನುವುದು ಈ ಸಂಪ್ರದಾಯದ ಹಿಂದಿನ ಆಶಯ. ಸರ್ಕಾರವೇ ಸಿದ್ಧಪಡಿಸಿಕೊಡುವ ಈ ಭಾಷಣವನ್ನು ಓದುವವರು ಮಾತ್ರ ರಾಜ್ಯಪಾಲರು. ತನ್ನ ಬೆನ್ನನ್ನು ತಾನೇ ತಟ್ಟಿಕೊಳ್ಳುವ ಚಾಳಿಯಿಂದ ಪ್ರಸ್ತುತ ಸರ್ಕಾರವೂ ಹೊರತಾಗಿಲ್ಲ. ಸರ್ಕಾರವು ಕೋವಿಡ್ ಪರಿಸ್ಥಿತಿ ನಿಭಾಯಿಸಿದ ರೀತಿಯನ್ನು ಹಾಡಿಹೊಗಳಲು ಭಾಷಣದ ಶೇಕಡ 25ರಷ್ಟು ಭಾಗ ಮೀಸಲಾಗಿದೆ. ಕೋವಿಡ್ ಎರಡನೇ ಅಲೆಯ ಸಂದರ್ಭದಲ್ಲಿ ಆಸ್ಪತ್ರೆಗಳಲ್ಲಿ ಹಾಸಿಗೆಗಾಗಿ ಎದ್ದಿದ್ದ ಹಾಹಾಕಾರ, ಆಮ್ಲಜನಕ ಕೊರತೆಯಿಂದ ಸಂಭವಿಸಿದ ಸಾವು-ನೋವು, ಆಂಬುಲೆನ್ಸ್ ಅಲಭ್ಯತೆ ಹಾಗೂ ಜೀವರಕ್ಷಕ ಔಷಧಿಗಳ ತೀವ್ರ ಅಭಾವ... ಇವೆಲ್ಲಾ ಇನ್ನೂ ದುಃಸ್ವಪ್ನವಾಗಿ ಕಾಡುತ್ತಿರುವಾಗ ‘ಸರ್ಕಾರ ಕೋವಿಡ್ ಸನ್ನಿವೇಶವನ್ನು ಸಮರ್ಥವಾಗಿ ನಿಭಾಯಿಸಿತು’ ಎಂದು ಹೇಳಿಕೊಳ್ಳುವುದು ನಗೆಪಾಟಲಿಗೆ ಈಡಾಗುವಂಥದ್ದು. ಭಾಷಣದಲ್ಲಿ ನೀಡಲಾಗಿರುವ ಅಂಕಿ-ಅಂಶಗಳು ಸರ್ಕಾರದ ವೈಫಲ್ಯವನ್ನು ಮರೆಮಾಚಲು ನಡೆಸಲಾದ ವ್ಯರ್ಥ ಪ್ರಯತ್ನವಲ್ಲದೆ ಬೇರೇನಲ್ಲ. ಕಳೆದ ವರ್ಷದಲ್ಲಿ ಆಡಳಿತದ ನಿರ್ವಹಣೆ ಹೇಗಿತ್ತು ಎನ್ನುವುದರ ಮೌಲ್ಯಮಾಪನವೂ ಈ ಭಾಷಣದಲ್ಲಿ ಆಗಬೇಕಿತ್ತು. ಆದರೆ, ಆಗಿನ ಬಜೆಟ್ ಭಾಷಣದಲ್ಲಿ ಉಲ್ಲೇಖಗೊಂಡ ಹಲವು ವಿವರಗಳನ್ನೇ ಮತ್ತೊಮ್ಮೆ ಹೇಳಿ, ಕೈತೊಳೆದುಕೊಳ್ಳಲಾಗಿದೆ. ಸಚಿವ ಸಂಪುಟದ ಸಭೆಗಳಲ್ಲಿ ಕೈಗೊಂಡ ತೀರ್ಮಾನಗಳ ಕುರಿತು ಸಾರ್ವಜನಿಕರಿಗೆ ಈ ಹಿಂದೆಯೇ ಸಿಕ್ಕಿದ್ದ ಮಾಹಿತಿಯನ್ನೂ ಪುನರುಚ್ಚರಿಸಲಾಗಿದೆ. ವಸ್ತುಸ್ಥಿತಿ ಬೇರೆಯೇ ಆಗಿರುವಾಗ ಈ ಬಡಿವಾರ ಏಕೆ ಮತ್ತು ಹೀಗೆ ಹುಸಿ ಸಂಭ್ರಮಪಡುವುದರಲ್ಲಿ ಯಾವ ಅರ್ಥವಿದೆ?

ಔಪಚಾರಿಕ ಪ್ರಕ್ರಿಯೆಯಾಗಿ ಮಾತ್ರ ಉಳಿದಿರುವ ಈ ಭಾಷಣವು ವಾಸ್ತವಿಕ ಮಾಹಿತಿಗೆ, ಭವಿಷ್ಯದ ನಡೆಯ ಸ್ಪಷ್ಟತೆಗೆ ಹೆಚ್ಚಿನ ಒತ್ತು ನೀಡಬೇಕಾದ ಅಗತ್ಯವಿದೆ

ಕೋವಿಡ್‌ನಿಂದ ನಲುಗಿರುವ ಅರ್ಥವ್ಯವಸ್ಥೆ ಇನ್ನೂ ತೆವಳುತ್ತಿದೆ. ಸರ್ಕಾರದ ಹಣಕಾಸು ಸ್ಥಿತಿ ಚಿಂತಾಜನಕವಾಗಿದೆ. ಸಾಲದ ಹೊರೆ ಮತ್ತಷ್ಟು ಹೆಚ್ಚಿದೆ. ಅದು ಬೆಟ್ಟದಂತೆ ಬೆಳೆಯುತ್ತಲೇ ಇದೆ. ಒಂದೆಡೆ, ಉದ್ಯೋಗ ನಷ್ಟದ ಕಳವಳಕಾರಿ ಸನ್ನಿವೇಶ ಮುಂದುವರಿದಿದ್ದರೆ, ಇನ್ನೊಂದೆಡೆ, ಹೊಸ ಉದ್ಯೋಗಗಳು ನಿರೀಕ್ಷಿಸಿದಂತೆ ಸೃಷ್ಟಿಯಾಗುತ್ತಿಲ್ಲ. ಇಂತಹ ಸಮಸ್ಯೆಗಳನ್ನು ಸರ್ಕಾರ ಹೇಗೆ ನಿಭಾಯಿಸಲಿದೆ ಎನ್ನುವುದರ ಮುನ್ನೋಟ ಭಾಷಣದಲ್ಲಿ ಸ್ಪಷ್ಟವಾಗಿ ಇರಬೇಕಿತ್ತು. ಹಿಜಾಬ್ ವಿವಾದದ ಬೆಂಕಿಯಲ್ಲಿ ಬೆಂದ ಸಮಾಜಕ್ಕೆ ಮುಲಾಮು ಹಚ್ಚಿ, ಕಾಲೇಜು ಅಂಗಳದಲ್ಲಿ ಮತ್ತೆ ಸಾಮರಸ್ಯದ ವಾತಾವರಣ ಮೂಡಿಸಲು ಸಹ ಈ ಅವಕಾಶವನ್ನು ಬಳಸಿಕೊಳ್ಳಬಹುದಿತ್ತು. ಆದರೆ, ಸರ್ಕಾರ ವ್ಯರ್ಥವಾಗಿ ಕೈಚೆಲ್ಲಿತು. ಮೇಕೆದಾಟು ಮತ್ತು ಮಹದಾಯಿ ಯೋಜನೆಗಳ ಕುರಿತ ತನ್ನ ನಿಲುವನ್ನು ಸ್ಫುಟವಾಗಿ ಪ್ರತಿಬಿಂಬಿಸಲು ಇದ್ದ ಅವಕಾಶವನ್ನೂ ನಿರ್ಲಕ್ಷಿಸಲಾಯಿತು. ಹೆಚ್ಚುವರಿ ನೀರಿನ ಹಂಚಿಕೆಯ ವಿಷಯವು ಇತ್ಯರ್ಥವಾಗುವವರೆಗೆ ನದಿಗಳ ಜೋಡಣೆಗೆ ಸಹಮತವಿಲ್ಲ ಎಂಬ ರಾಜ್ಯದ ವಾದವನ್ನು ಗಟ್ಟಿಯಾಗಿ ಪ್ರತಿಪಾದಿಸುವ ಅಂಶ ಕೂಡ ಭಾಷಣದಲ್ಲಿ ಜಾಗ ಪಡೆಯಲಿಲ್ಲ. ಬೆಂಗಳೂರು ನಗರದ ರಸ್ತೆಗಳನ್ನು ಗುಂಡಿಮುಕ್ತಗೊಳಿಸುವ ವಿಚಾರವಾಗಿ ರಾಜ್ಯಪಾಲರು ಮಾತನಾಡಿದರೇನೋ ನಿಜ. ಆದರೆ, ರಸ್ತೆಗಳನ್ನು ಗುಂಡಿಮುಕ್ತಗೊಳಿಸಲು ಸರ್ಕಾರ ರೂಪಿಸಿರುವ ಯೋಜನೆ ಯಾವುದೆಂಬ ವಿವರ ಭಾಷಣದಲ್ಲಿ ಇರಲಿಲ್ಲ. ಹೀಗಾಗಿ ಈ ಭರವಸೆಯೂ ಜನರ ವಿಶ್ವಾಸ ಗಳಿಸುವಲ್ಲಿ ಸಫಲವಾಗಲಿಲ್ಲ. ವಿದೇಶಗಳಲ್ಲಿರುವ ಭಾರತೀಯರ ಜ್ಞಾನವನ್ನು ಇಲ್ಲಿ ಬಳಸಿಕೊಳ್ಳುವುದಕ್ಕಾಗಿ ‘ಮರಳಿ ತಾಯ್ನಾಡಿಗೆ’ ಎಂಬ ಯೋಜನೆಯನ್ನು ಅನುಷ್ಠಾನಕ್ಕೆ ತರಲಾಗುವುದು ಎಂಬ ಘೋಷಣೆ ಮಾತ್ರ ಹೊಸದು. ಆದರೆ, ಯೋಜನೆಯ ಸ್ವರೂಪದ ಕುರಿತು ಅಲ್ಲಿಯೂ ಸ್ಪಷ್ಟತೆ ಇಲ್ಲ.

ಇನ್ನು ರಾಜ್ಯಪಾಲರು ಭಾಷಣ ಓದಿದ್ದು ಹಿಂದಿಯಲ್ಲಿ. ಶಾಸಕರಿಂದ ಮಾತ್ರವಲ್ಲದೆ ಸಾರ್ವಜನಿಕ ವಲಯದಿಂದಲೂ ಈ ಕುರಿತು ವಿರೋಧ ಬಂದಿದ್ದರ ಹಿಂದಿನ ಭಾವವನ್ನು ಅರ್ಥಮಾಡಿಕೊಳ್ಳಬೇಕು. ಸಂವಿಧಾನದ ವಿಧಿ 175 (1)ರ ಪ್ರಕಾರ, ಪ್ರತೀ ವರ್ಷದ ಮೊದಲ ಅಧಿವೇಶನದ ಆರಂಭದಲ್ಲಿ ರಾಜ್ಯಪಾಲರು ಭಾಷಣ ಮಾಡುವುದು ತಪ್ಪದೇ ನಡೆಯಬೇಕಾದ ವಿಧಿ. ಆದರೆ, ಸರ್ಕಾರವೇ ಆ ಭಾಷಣವನ್ನು ಸಿದ್ಧಪಡಿಸಿಕೊಡುವುದರಿಂದ ಕಾಲಾಂತರದಲ್ಲಿ ಅದು ಮಹತ್ವ ಕಳೆದುಕೊಳ್ಳುತ್ತಾ ಬಂದಿದೆ. ರಾಜ್ಯದ ಸದ್ಯದ ಬಿಕ್ಕಟ್ಟುಗಳಿಗೆ ಏನು ಕಾರಣ ಎಂಬುದನ್ನು ವಿಶ್ಲೇಷಿಸುವುದರ ಜತೆಗೆ ಸ್ಪಷ್ಟವಾದ ಮುನ್ನೋಟದ ಬೆಳಕನ್ನೂ ಹೊಂದಿದರೆ ಅಂತಹ ಭಾಷಣ ಪ್ರಸ್ತುತತೆಯನ್ನು ಪಡೆದುಕೊಳ್ಳುತ್ತದೆ. ಔಪಚಾರಿಕಪ್ರಕ್ರಿಯೆಯಾಗಿಮಾತ್ರಉಳಿದಿರುವಈಭಾಷಣವುತನ್ನಮಹತ್ವವನ್ನುಮತ್ತೆಪಡೆಯಬೇಕಾದರೆ ಅದನ್ನು ಸಿದ್ಧಪಡಿಸುವಾಗ ವಾಸ್ತವಿಕ ಮಾಹಿತಿಗೆ, ಭವಿಷ್ಯದ ನಡೆಯ ಸ್ಪಷ್ಟತೆಗೆ ಹೆಚ್ಚಿನ ಒತ್ತು ನೀಡುವುದು ಅಗತ್ಯವಾಗಿದೆ.

ದಿನದ ಟ್ವೀಟ್

ಕೇಳಿ ಕಿವಿಮಾತು

ನಿಂದೆ-ಪ್ರತಿನಿಂದೆ; ಕೇಡು ಬಗೆವ, ನಿಷ್ಕಾರಣವಾಗಿ ವಿಷ ಕಾರುವ ಮಾತುಗಳ ಮನೆಯಾಗುತ್ತಿರುವ ಈ ಲೋಕಕ್ಕೆ ಕಣವಿ ಹೇಳಿದ ಕಿವಿಮಾತು: ‘ನಾವು ಆಡುವ ಮಾತು ಹೀಗಿರಲಿ ಗೆಳೆಯ/ ಮೃದುವಚನ ಮೂಲೋಕ ಗೆಲ್ಲುವುದು ತಿಳಿಯ!’
- ಹಿರಿಯ ಸಮನ್ವಯ ಕವಿಗೆ ಸಂತಾಪಗಳು.

ನಾಗತಿಹಳ್ಳಿ ಚಂದ್ರಶೇಖರ್, ಚಲನಚಿತ್ರ ನಿರ್ದೇಶಕ

ಕಿಡಿನುಡಿ



ತಾಯಿಯ ಹಾಲು ಕುಡಿದಿದ್ದರೆ 52 ವರ್ಷಗಳ ಕಾಲ ನಾಗಪುರದ ಆರ್‌ಎಸ್‌ಎಸ್ ಕಚೇರಿ ಮೇಲೆ ರಾಷ್ಟ್ರಧ್ವಜ ಏಕೆ ಹಾರಿಸಿರಲಿಲ್ಲ? ಆರ್‌ಎಸ್‌ಎಸ್ ಮುಖವಾಣಿ ‘ಆರ್ಗನೈಸರ್’ನ 1947 ಜುಲೈ 17ರ ಸಂಪಾದಕೀಯದಲ್ಲೂ ರಾಷ್ಟ್ರಧ್ವಜದ ಬಗ್ಗೆ ಆಕ್ಷೇಪ ವ್ಯಕ್ತಪಡಿಸಲಾಗಿತ್ತು.

ಬಿ.ಕೆ. ಹರಿಪ್ರಸಾದ್, ವಿಧಾನಪರಿಷತ್ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಸೋಮವಾರ, 17-2-1997

• ಆಂಧ್ರ ಚಂಡಮಾರುತ ಸಂತ್ರಸ್ತರ ನೆರವಿಗೆ ನೆಲಕ್ಕಿಳಿದ ತಾರೆಯರು

ಬೆಂಗಳೂರು, ಫೆ. 16– ವಿಷ್ಣುವರ್ಧನ್ ಬೌಲಿಂಗ್‌ಗೆ ವೆಂಕಟೇಶ್ ಭರ್ಜರಿ ಬೌಂಡರಿ... ಅರ್ಜುನ್ ಸರ್ಜಾ ಮತ್ತು ಪ್ರಕಾಶ್ ರೈ ಅವರಿಂದ ರನ್‌ಗಳ ಸುರಿಮಳೆ... ಚೆಂಡು ತಡೆಯಲು ಹೋಗಿ ಕೈ ಗಾಯ ಮಾಡಿಕೊಂಡು ಅಳಲು ಆರಂಭಿಸಿದ ಶ್ರುತಿ... ನಾಯಕರಾಗಿ ಮಿಂಚಿದ ಚಿರಂಜೀವಿ...

ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಇಂದು ನಡೆದ ಆಂಧ್ರಪ್ರದೇಶ ಚಂಡಮಾರುತ ಸಂತ್ರಸ್ತರ ಪರಿಹಾರ ನಿಧಿಗಾಗಿ ಸಿನಿಮಾ ತಾರೆಯರ ಕ್ರಿಕೆಟ್ ಪಂದ್ಯ ಜನರ ಮನರಂಜಿಸಿತು. ತಮ್ಮ ನೆಚ್ಚಿನ ಕನ್ನಡ ಹಾಗೂ ತೆಲುಗು ನಟನಟಿಯರು ಶ್ವೇತವಸ್ತ್ರಧಾರಿಗಳಾಗಿ ಮೈದಾನಕ್ಕೆ ಬರುತ್ತಲೇ ಶಿಳ್ಳು, ಚಪ್ಪಾಳೆಯ ಸ್ವಾಗತ. ಬೆಳಿಗ್ಗೆ ಭಾರತೀಯ ಸಿನಿಮಾ ರಂಗದ ದಿಗ್ಗಜರಾದ ಡಾ.ರಾಜಕುಮಾರ್ ಹಾಗೂ ಅಕ್ಕಿನೇನಿ ನಾಗೇಶ್ವರ ರಾವ್ ಅವರು ನಾಣ್ಯ ಚಿಮ್ಮುವ ಮೂಲಕ ಕ್ರಿಕೆಟ್ ಪಂದ್ಯವನ್ನು ಉದ್ಘಾಟಿಸಿದರು.

• ರಂಗ ಸರ್ಕಾರಕ್ಕೆ ವಿಷಯ ಆಧರಿಸಿ ಷರತ್ತಿನ ಬೆಂಬಲ

ನವದೆಹಲಿ, ಫೆ. 16– ಪ್ರಧಾನಿ ಎಚ್.ಡಿ. ದೇವೇಗೌಡ ಅವರ ನೇತೃತ್ವದ ಎಂಟೂವರೆ ತಿಂಗಳ ಸಂಯುಕ್ತ ರಂಗ ಸರ್ಕಾರಕ್ಕೆ ನೀಡಿರುವ ಬೇಷರತ್ ಬೆಂಬಲವನ್ನು ಇನ್ನು ಮುಂದೆ ‘ವಿಷಯಾಧಾರಿತ ಷರತ್ತಿನ ಬೆಂಬಲ’ ಆಗಿ ನೀಡಲು ಇಂದು ನಡೆದ ಕಾಂಗ್ರೆಸ್ ಕಾರ್ಯಕಾರಿಣಿ ಸಭೆಯು ತೀರ್ಮಾನಿಸಿದೆ.

50 ವರ್ಷಗಳ ಹಿಂದೆ

ಗುರುವಾರ, 17-2-1972

• ವಿಶ್ವವಿದ್ಯಾಲಯದಲ್ಲಿ ವ್ಯಾಪಕ ಕನ್ನಡ ಮಾಧ್ಯಮಕ್ಕೆ ಅಪೇಕ್ಷೆ

ಮೈಸೂರು, ಫೆ. 16– ಬಿ.ಎಡ್ ಮೊದಲ್ಗೊಂಡು ವಿಶ್ವವಿದ್ಯಾಲಯದ ಎಲ್ಲ ಹಂತಗಳಲ್ಲಿಯೂ ಕನ್ನಡ ಶಿಕ್ಷಣ ಮಾಧ್ಯಮ ಜಾರಿಗೆ ಬರಬೇಕೆಂದು ರಾಜ್ಯದ ಅಭಿವೃದ್ಧಿ ಕಮಿಷನರ್ ಶ್ರೀ ಜಿ.ವಿ.ಕೆ. ರಾವ್ ಅವರು ಇಲ್ಲಿ ಇಂದು ಕಳಕಳಿಯಿಂದ ಅಪೇಕ್ಷಿಸಿದರು.

ರಾಜ್ಯ ಕನ್ನಡ ಅಧ್ಯಾಪಕರ ಪರಿಷತ್ ಏರ್ಪಡಿಸಿದ್ದ ಮೂರನೇ ಕನ್ನಡ ಅಧ್ಯಾಪಕರ ಸಮ್ಮೇಳನವನ್ನು ಉದ್ಘಾಟಿಸಿದ ಶ್ರೀ ರಾವ್ ಅವರು, ತಾವು ಕನ್ನಡ ಶಿಕ್ಷಣ ಮಾಧ್ಯಮದ ಬಗೆಗೆ ‘ಅಂಧಾಭಿಮಾನದಿಂದ ಮಾತನಾಡುತ್ತಿಲ್ಲ. ಆದರೆ, ನಿಜಸ್ಥಿತಿಯನ್ನು ಅರಿತು ಹೇಳುತ್ತಿದ್ದೇನೆ’ ಎಂದು ಸ್ಪಷ್ಟಪಡಿಸಿದರು.

• ಬಂಡುಕೋರ ಕಾಂಗ್ರೆಸ್ಸಿಗರಿಗೆ ಮತ ನೀಡಿಕೆ ವ್ಯರ್ಥ: ಇಂದಿರಾ

ಅಕೋಲ, ಫೆ. 16– ಚುನಾವಣೆಗಳಲ್ಲಿ ಅಧಿಕೃತ ಅಭ್ಯರ್ಥಿಗಳ ವಿರುದ್ಧ ಸ್ಪರ್ಧಿಸಿರುವ ಬಂಡುಕೋರ ಕಾಂಗ್ರೆಸ್ಸಿಗರನ್ನು ಇಲ್ಲಿ ಇಂದು ತರಾಟೆಗೆ ತೆಗೆದುಕೊಂಡ ಪ್ರಧಾನಿ ಇಂದಿರಾ ಗಾಂಧಿಯವರು, ಇಂಥವರಿಗೆ ನೀಡಿದ ಮತ ವ್ಯರ್ಥ ಎಂದು ಜನತೆಗೆ ತಿಳಿಸಿದರು.

ವೈಯಕ್ತಿಕ ಹಿತ, ಪ್ರತಿಷ್ಠೆಗಳಿಗೆ ಪ್ರಯತ್ನಿಸುವ ಇವರು ಪಕ್ಷಕ್ಕಾಗಲೀ ರಾಷ್ಟ್ರಕ್ಕಾಗಲೀ ಶ್ರದ್ಧೆಯಿಂದ ಸೇವೆ ಸಲ್ಲಿಸಲಾರರು ಎಂದರು.

ಗಾಂಧಿ ಬಗೆಗಿನ ಅಪಾರ್ಥಗಳನ್ನು ತೊಡೆಯಬಲ್ಲದು ಧರ್ಮಪಾಲ್ ಅವರ ಬರಹ

ಗಾಂಧಿ ಗ್ರಹಿಕೆಗೆ ಧರ್ಮಪಾಲ್ ದೊಂದಿ



ಸೀಮೋಲ್ಲಂಘನ

ಸುಧೀಂದ್ರ ಬುಧ್ಯ

ಗಾಂಧೀಜಿಯ ಬದುಕನ್ನು ಹೇಗೆ ಬಣ್ಣಿಸಬಹುದು? ಗಾಂಧೀಜಿ ಜಗತ್ತನ್ನು ಕಂಡ ರೀತಿಯಿಂದಲೇ, ದೇಶವಾಸಿಗಳನ್ನು ಪರಿಭಾವಿಸಿದ ದೃಷ್ಟಿಯಿಂದಲೇ, ಅವರು ಮಂಡಿಸಿದ ಚಿಂತನೆ, ಅನುಷ್ಠಾನಕ್ಕೆ ಬರುವಂತೆ ರೂಪಿಸಿದ ಕಾರ್ಯಕ್ರಮ ಮತ್ತು ಸಂಸ್ಥೆಗಳಿಂದಲೇ? ಗಾಂಧೀಜಿಯ ಬದುಕನ್ನು ಇಡಿಯಾಗಿ ನೋಡುವಾಗ ಕೆಲವು ಆಕ್ಷೇಪಗಳು, ಅನುಮಾನಗಳು ಮೂಡುತ್ತವೆ. ಗಾಂಧೀಜಿಯ ರಾಜಕೀಯ ಮತ್ತು ಆರ್ಥಿಕ ಚಿಂತನೆಗಳನ್ನು ಅಪ್ರಾಯೋಗಿಕ ಎಂದು ಪರಿಗಣಿಸಲಾಗುತ್ತದೆ. ಅವರದು ಅತಿ ಆದರ್ಶದ ಚಿಂತನೆ ಎನ್ನಲಾಗುತ್ತದೆ.

ಗಾಂಧೀಜಿ ಬದುಕಿದ್ದ ಅವಧಿಯಲ್ಲೂ ಅವರ ಕುರಿತು ಆಕ್ಷೇಪಗಳು ಇದ್ದವು. ಗಾಂಧೀಜಿ ದೇಶವಾಸಿಗಳೊಂದಿಗೆ ನಿರಂತರ ಸಂಪರ್ಕ ಇಟ್ಟುಕೊಳ್ಳಲು ಪ್ರಯತ್ನಿಸಿದರು. ದಣಿವರಿಯದೇ ಬರೆದರು. ತಮ್ಮ ನಿಲುವನ್ನು ಸಮರ್ಥಿಸಿಕೊಳ್ಳುವ, ಪೂರಕ ಮಾಹಿತಿ ನೀಡುವ ಕೆಲಸ ಮಾಡಿದರು. ಆದರೂ ಕೆಲವು ವಿಚಾರಗಳ ಕುರಿತು ಅಸ್ಪಷ್ಟತೆ ಉಳಿಯಿತು.

ಸ್ವಾತಂತ್ರ್ಯಾನಂತರ ಗಾಂಧಿ ಚಿಂತನೆಯನ್ನು ನಿಕಷಕ್ಕೆ ಒಡ್ಡುವ, ಅವು ಪ್ರಾಯೋಗಿಕವೇ ಎಂದು ಪರಿಶೀಲಿಸುವ ಕೆಲಸ ದೊಡ್ಡಮಟ್ಟದಲ್ಲಿ ನಡೆಯಲಿಲ್ಲ. ಸರ್ಕಾರ ತನ್ನದೇ ಆದ ಕಾರ್ಯಒತ್ತಡದಲ್ಲಿ ಮುಳುಗಿತು ಅಥವಾ ಗಾಂಧಿ ಚಿಂತನೆಗಳನ್ನು ಸರಳೀಕರಿಸಿ ನೈರ್ಮಲ್ಯ, ಖಾದಿ ದಿರಿಸು ಮತ್ತು ಗಾಂಧಿ ಭಜನೆಗಳಿಗೆ ಸೀಮಿತಗೊಳಿಸಿತು. ಆದರೆ ಬೆರಳೆಣಿಕೆಯಷ್ಟು ಚಿಂತಕರು ಗಾಂಧೀಜಿ ತೋರಿದ ದಿಕ್ಕಿನಲ್ಲಿ ನಾಲ್ಕು ಹೆಜ್ಜೆ ಮುಂದಿಟ್ಟು ಅವರ ವಿಚಾರಗಳಿಗೆ ಬೆಳಕು ಹಿಡಿಯುವ ಪ್ರಯತ್ನ ಮಾಡಿದರು. ಅವರಲ್ಲಿ ಧರ್ಮಪಾಲ್ ಅಗ್ರಗಣ್ಯರು.

1922ರ ಫೆಬ್ರುವರಿ 19ರಂದು ಜನಿಸಿದ ಧರ್ಮಪಾಲ್, ಗಾಂಧೀಜಿ ಪ್ರಸ್ತಾಪಿಸಿದ್ದ ಕೆಲವು ಸಂಗತಿಗಳ ಕುರಿತು ಹೆಚ್ಚಿನ ಅಧ್ಯಯನ ನಡೆಸಿದರು. ವಸಾಹತುಪೂರ್ವ ಭಾರತದ ಸಾಮಾಜಿಕ ವ್ಯವಸ್ಥೆ, ಶಿಕ್ಷಣ, ವೈಜ್ಞಾನಿಕ ಮತ್ತು ತಾಂತ್ರಿಕ ಸಾಧನೆಗಳ ಕುರಿತು ಗಾಂಧೀಜಿ ಅಂತಃಸ್ಫೂರ್ತಿಯಿಂದ ಹೇಳಿದ್ದಕ್ಕೆ ಪುರಾವೆಗಳು ಸಿಗಬಹುದೇ ಎಂಬ ಸಂಶೋಧನೆ ಕೈಗೊಂಡರು. ಪ್ರಮಾಣಗಳ ಸಹಿತ ಆ ಕುರಿತು ಬರೆದರು. ಗಾಂಧೀಜಿಯನ್ನು ಸಾಮೂಹಿಕ ಸತ್ಯಾಗ್ರಹದ ಕಲ್ಪನೆ ಕೊಟ್ಟ ಮಹಾಪುರುಷ, ರಾಷ್ಟ್ರಪಿತ ಎಂದು ನೋಡಿದರೆ ಸಾಕೇ ಎಂಬ ಪ್ರಶ್ನೆ ಧರ್ಮಪಾಲ್ ಅವರನ್ನು ಕಾಡಿತ್ತು. ಮಾನವ ಇತಿಹಾಸಕ್ಕೆ ಸಂಬಂಧಿಸಿದಂತೆ ಗಾಂಧಿಯನ್ನು ಪ್ಲೇಟೊ, ಬುದ್ಧ, ಜೀಸಸ್ ಅಥವಾ ಲಾವೊತ್ಸೆಗೆ ಸಮನಾಗಿ ನೋಡಬೇಕಿದೆ. ಕನಿಷ್ಠಪಕ್ಷ ಯುರೋಪಿನ ಮಧ್ಯಕಾಲೀನ ಚರ್ಚುಗಳ ಪಾದ್ರಿಗಳಿಗೆ, ಮಾರ್ಟಿನ್ ಲೂಥರ್, ಫ್ರಾನ್ಸಿಸ್ ಬೇಕನ್, ಹೆಗೆಲ್ ಅಥವಾ ಕಾರ್ಲ್‌ಮಾರ್ಕ್ಸ್ ಅವರುಗಳಿಗೆ ಕೊಟ್ಟಷ್ಟು ಪ್ರಾಶಸ್ತ್ಯವನ್ನು ಗಾಂಧಿ ಬದುಕು ಮತ್ತು ಚಿಂತನೆಗಳಿಗೆ ನೀಡಬೇಕಿದೆ ಎಂಬುದು ಧರ್ಮಪಾಲ್ ಅವರ ಆಗ್ರಹವಾಗಿತ್ತು.

‘ಗಾಂಧಿ ಸಮಗ್ರ’ವನ್ನು ಸಂಕಲನ ಮಾಡಿ ಪ್ರಕಟಿಸಿದ್ದೇನೋ ಸರಿ. ಆದರೆ ಆ ಸಂಪುಟಗಳು ಅವರ ಮತ್ತೊಂದು ಸಮಾಧಿಯಾದವೇ? ಮುದ್ರಿತ ಕಾಗದದಿಂದ ಅದನ್ನು ಕಟ್ಟಲಾಯಿತೇ? ಗಾಂಧೀಜಿಯ ವಾಚು, ಚಪ್ಪಲಿಗಳಂತೆ ಗಾಂಧಿ ಸಮಗ್ರದಲ್ಲಿ ಅಡಗಿರುವ ಅವರ ವಿಚಾರಗಳನ್ನು ಬೀಗ ಜಡಿದು ರಕ್ಷಿಸಬೇಕು ಎಂಬ ನಿಲುವನ್ನು ನಾವು ತಳೆದಿದ್ದೇವೆಯೇ ಎಂದು ಧರ್ಮಪಾಲ್ ತೀಕ್ಷ್ಣವಾಗಿ ಪ್ರಶ್ನಿಸಿದ್ದರು. ‘ಗಾಂಧಿ ಸಮಗ್ರ’ ಕುರಿತ ಅಧ್ಯಯನ, ಸಂಶೋಧನೆಗಳು ನಡೆದಿದ್ದರೆ ಇಂದು ಗಾಂಧೀಜಿಯ ಕುರಿತು ಇರುವ ಅನೇಕ ಆಕ್ಷೇಪಗಳು, ಮೂದಲಿಕೆಗಳು ಇಲ್ಲವಾಗುತ್ತಿದ್ದವು, ಹಲವು ವಿಷಯಗಳಲ್ಲಿ ಹೆಚ್ಚಿನ ಸ್ಪಷ್ಟತೆ ಸಿಗುತ್ತಿತ್ತು, ಅವರ ಚಿಂತನೆ ಅಪ್ರಾಯೋಗಿಕ ಎನ್ನುವ ಪೂರ್ವಗ್ರಹ ಕರಗುತ್ತಿತ್ತು ಎನ್ನುವುದು ಧರ್ಮಪಾಲ್ ಅವರ ಅಭಿಪ್ರಾಯವಾಗಿತ್ತು.

ಗಾಂಧೀಜಿ ಅವರ ಪ್ರಯೋಗಗಳ ಪೈಕಿ ಹೆಚ್ಚು ಅಪಾರ್ಥಕ್ಕೆ ಈಡಾಗಿದ್ದು ಬ್ರಹ್ಮಚರ್ಯಕ್ಕೆ ಸಂಬಂಧಿಸಿದ ಪ್ರಯೋಗಗಳು. 1936ರಿಂದ 1947ರವರೆಗಿನ ಅವಧಿಯಲ್ಲಿ ಬ್ರಹ್ಮಚರ್ಯಕ್ಕೆ ಸಂಬಂಧಿಸಿದಂತೆ ಗಾಂಧೀಜಿ ಹೆಚ್ಚಿನ ಪ್ರಯೋಗ ಕೈಗೊಂಡರು. ಇದನ್ನು ತಪ್ಪಾಗಿ ಅರ್ಥೈಸಲಾಯಿತು. 1938ರ ಜೂನ್ ತಿಂಗಳಿನಲ್ಲಿ ಗಾಂಧಿ ಈ ಪ್ರಯೋಗಗಳ ಕುರಿತು ಬರೆದ ಲೇಖನವನ್ನು ಗಾಂಧೀಜಿಯ ಸುತ್ತಲಿದ್ದ ಅವರ ಹಿತೈಷಿಗಳು ತಮ್ಮ ಪ್ರೀತಿಯ ಒತ್ತಡ ಬಳಸಿ ಪ್ರಕಟಗೊಳ್ಳದಂತೆ ತಡೆಯದಿದ್ದರೆ, ಆ ಪ್ರಯೋಗಗಳನ್ನು ಅರ್ಥಮಾಡಿಕೊಳ್ಳಲು ಜನಸಾಮಾನ್ಯರಿಗೆ ಸಾಧ್ಯವಾಗುತ್ತಿತ್ತು.

ಗೋಹತ್ಯೆ ವಿರುದ್ಧದ ಆಂದೋಲನ 1880ಕ್ಕೂ ಹಿಂದೆ ಆರಂಭವಾದ ಮಹತ್ವದ ಚಳವಳಿಯಾಗಿತ್ತು. ಗೋಹತ್ಯೆ ವಿರುದ್ಧದ ಆಂದೋಲನವನ್ನು ರಾಣಿ ವಿಕ್ಟೋರಿಯಾ ವಾಸ್ತವವಾಗಿ ಬ್ರಿಟಿಷರ ವಿರುದ್ಧದ ಮತ್ತು ಮುಸ್ಲಿಮರ ವಿರುದ್ಧವಲ್ಲದ ಆಂದೋಲನವಾಗಿ ಕಂಡಿದ್ದರು ಎನ್ನುವುದನ್ನು ಗಾಂಧೀಜಿ ಒತ್ತಿ ಹೇಳಿದರು. ಆದರೆ ಈ ಬಗ್ಗೆ ಹೆಚ್ಚು ಚರ್ಚೆ ನಡೆಯಲಿಲ್ಲ. ಗೋಹತ್ಯೆ ಎನ್ನುವುದು ಹಿಂದೂ, ಮುಸಲ್ಮಾನರ ನಡುವಿನ ಕಂದರವಾಗಿ ಮಾರ್ಪಟ್ಟಿತು.

ಅಹಿಂಸೆಯ ವ್ಯಾಖ್ಯಾನ ಕೂಡ ಬದಲಾಯಿತು. ಗಾಂಧೀಜಿ ಚಂಪಾರಣ್ ಮತ್ತು ಖೇಡಾದಲ್ಲಿ ನಡೆಸಿದ ಪ್ರಯೋಗಗಳಿಂದ ‘ಬಹುಪಾಲು ಭಾರತೀಯರನ್ನು ದೈಹಿಕವಾಗಿ, ನೈತಿಕವಾಗಿ ಮತ್ತು ಆಧ್ಯಾತ್ಮಿಕವಾಗಿ ದುರ್ಬಲಗೊಳಿಸಲಾಗಿದೆ’ ಎಂಬುದನ್ನು ಕಂಡುಕೊಂಡಿದ್ದರು. ಈಗಾಗಲೇ ದುರ್ಬಲಗೊಂಡಿರುವ ಭಾರತೀಯರಿಗೆ ಅಹಿಂಸೆಯ ಗುಣವನ್ನು ಬೋಧಿಸುವ ಮೊದಲು, ಅವರು ಕಳೆದುಕೊಂಡಿರುವ ಆಯುಧ ಅವರಿಗೆ ಮರಳುವಂತೆ ಮಾಡಬೇಕು ಅರ್ಥಾತ್ ಕಳೆದುಕೊಂಡಿರುವ ‘ಪೌರುಷ’ ಅವರಲ್ಲಿ ಜಾಗೃತವಾಗುವಂತೆ ಮಾಡಬೇಕು ಎಂಬ ನಿರ್ಧಾರಕ್ಕೆ ಗಾಂಧೀಜಿ ಬಂದಿದ್ದರು. ಈ ಬಗ್ಗೆ 1918ರ ಜುಲೈನಲ್ಲಿ ಬರೆದ ಲೇಖನದಲ್ಲಿ ‘ಮನುಷ್ಯನಲ್ಲಿ ಪೂರ್ಣ ಚೈತನ್ಯವಿದ್ದಾಗ ಮತ್ತು ತನ್ನ ಎದುರಾಳಿಯ ಮುಖವನ್ನು ನೇರವಾಗಿ ನೋಡಲು ಸಾಧ್ಯವಿದ್ದಾಗ ಮಾತ್ರ, ಅಂತಹ ಮನುಷ್ಯನಿಗೆ ಅಹಿಂಸೆಯನ್ನು ಬೋಧಿಸಲಾಗುತ್ತಿತ್ತು’ ಎಂದಿದ್ದರು.



ತಂತ್ರಜ್ಞಾನ ಎನ್ನುವುದು ಸಮಾಜದ ಅವಶ್ಯಕತೆಗಳಿಗೆ ತಕ್ಕಂತೆ ಅಭಿವೃದ್ಧಿಗೊಳ್ಳಬೇಕು ಎಂಬುದು ಗಾಂಧೀಜಿಯ ನಿಲುವಾಗಿತ್ತು. ವೇಗ ಮತ್ತು ಪ್ರಗತಿಯ ಗೀಳಿಗೆ ಬಿದ್ದ, ಪ್ರಕೃತಿಯನ್ನು ಒತ್ತಡಕ್ಕೆ ಒಳಪಡಿಸುವ ವಿನ್ಯಾಸದ ಸಮಾಜವನ್ನು ಗಾಂಧೀಜಿ ಕಲ್ಪಿಸಿಕೊಂಡಿರಲಿಲ್ಲ. ಈ ಸಂಗತಿಗಳ ಕುರಿತು ಧರ್ಮಪಾಲ್ ಒತ್ತುಕೊಟ್ಟು ಹೇಳಿದರು.

1931ರಲ್ಲಿ ಸಾಂವಿಧಾನಿಕ ಸುಧಾರಣೆಗಳ ಕುರಿತು ಚರ್ಚಿಸಲು ಬ್ರಿಟನ್ನಿಗೆ ತೆರಳಿದಾಗ, ಬ್ರಿಟಿಷ್ ಆಳ್ವಿಕೆಯ ಅವಧಿಯಲ್ಲಿ ಭಾರತ ಹೇಗೆ ವ್ಯಾಪಕವಾಗಿ ಹಾನಿಗೊಳಗಾಯಿತು ಎಂಬ ಬಗ್ಗೆ ಮಾತನಾಡಲು ಆ ಸಂದರ್ಭವನ್ನು ಗಾಂಧೀಜಿ ಬಳಸಿಕೊಂಡಿದ್ದರು. ಬ್ರಿಟಿಷ್ ಆಳ್ವಿಕೆಗೂ ಮೊದಲು ಭಾರತದಲ್ಲಿ ಸಾಕ್ಷರತೆಯ ಪ್ರಮಾಣ ಹೆಚ್ಚಿತ್ತು ಎಂದು ಗಾಂಧೀಜಿ ನುಡಿದಿದ್ದರು. ಈ ಮಾತು ಧರ್ಮಪಾಲ್ ಅವರನ್ನು ಸಂಶೋಧನೆಯ ಹೊಸ ಹಾದಿಯಲ್ಲಿ ನಿಲ್ಲಿಸಿತ್ತು.

ಭಾರತೀಯ ಸಾಂಪ್ರದಾಯಿಕ ಶಿಕ್ಷಣ ಪದ್ಧತಿಯ ಕುರಿತು ನಡೆದಿದ್ದ ಅಧ್ಯಯನಗಳನ್ನು, ಸಮೀಕ್ಷೆಗಳ ಮೂಲಕ ಸಂಗ್ರಹಿಸಿದ್ದ ಅಂಕಿ-ಅಂಶಗಳನ್ನು ಹೆಕ್ಕಿತೆಗೆದು ಅಂದಿನ ಶಿಕ್ಷಣ ವ್ಯವಸ್ಥೆಯು ತಳ ಸಮುದಾಯ ಮತ್ತು ಮಹಿಳೆಯರು ಸೇರಿದಂತೆ ಹೇಗೆ ಎಲ್ಲ ವರ್ಗದವರನ್ನೂ ಒಳಗೊಂಡಿತ್ತು, ಪಠ್ಯಕ್ರಮ ಹಾಗೂ ಬೋಧನಾ ವಿಧಾನ ಹೇಗಿತ್ತು ಎಂಬ ಸಂಗತಿಗಳ ಕುರಿತು ಧರ್ಮಪಾಲ್ ವಿಸ್ತೃತವಾಗಿ 1983ರಲ್ಲಿ ಬರೆದರು. ಭಾರತದ ಪ್ರಾಚೀನ ಶಿಕ್ಷಣ ವ್ಯವಸ್ಥೆಯನ್ನು ಗಾಂಧೀಜಿ ‘ಎ ಬ್ಯೂಟಿಫುಲ್ ಟ್ರೀ’ ಎಂದು ಕರೆಯುತ್ತಿದ್ದ ಕಾರಣ, ಆ ಹೆಸರನ್ನೇ ತಮ್ಮ ಕೃತಿಗೆ ಉಳಿಸಿಕೊಂಡರು. ವಸಾಹತುಪೂರ್ವ ಶಿಕ್ಷಣ ವ್ಯವಸ್ಥೆಯ ಬಗೆಗೆ ಇದ್ದ ಮಿಥ್ಯೆಗಳನ್ನು ಈ ಕೃತಿಯ ಮೂಲಕ ಧರ್ಮಪಾಲ್ ಹೊಡೆದುಹಾಕಿದರು.

ಗಾಂಧೀಜಿ ಹೇಳಿಕೆಗಳ ಬೆನ್ನುಹತ್ತಿ ಪುರಾವೆ ಹುಡುಕುವ ಪ್ರಯತ್ನದ ಜೊತೆಗೆ ಗಾಂಧಿ ಚಿಂತನೆಗಳು ವಾಸ್ತವದ ನೆಲೆಗಟ್ಟಿಗೆ ಹೊಂದುತ್ತವೆಯೇ ಎಂದು ತರ್ಕಿಸುವ ಕೆಲಸವನ್ನು ಮಾಡಿದ ಧರ್ಮಪಾಲ್, ಗಾಂಧೀಜಿಯನ್ನು ಅರ್ಥಮಾಡಿಕೊಳ್ಳುವಲ್ಲಿ ನಾವು ಸೋತಿದ್ದು ಹೇಗೆ ಎಂಬುದನ್ನೂ ವಿವರಿಸಿದರು. ಸಾಮಾ ಜಿಕ ಮಾಧ್ಯಮಗಳ ಭರಾಟೆಯ ಈ ಕಾಲಘಟ್ಟದಲ್ಲಿ ಅಪಾರ್ಥಗಳಿಗೆ, ತೆಗಳಿಕೆಗೆ, ಕಲ್ಪಿತ ಕತೆಗಳಿಗೆ ವಸ್ತುವಾಗುತ್ತಿರುವ ಗಾಂಧೀಜಿಯನ್ನು ಸಮಗ್ರವಾಗಿ ಗ್ರಹಿಸಲು ಧರ್ಮಪಾಲ್ ಅವರ ಬರಹಗಳು ನೆರವಾಗಬಲ್ಲವು.

ಧರ್ಮಪಾಲ್ ಅವರ ಜನ್ಮಶತಾಬ್ದಿಯ ನೆಪದಲ್ಲಾದರೂ ಅವರನ್ನು ಓದುವ ಮೂಲಕ ಗಾಂಧೀಜಿಯನ್ನು, ತನ್ಮೂಲಕ ವಸಾಹತುಪೂರ್ವ ಭಾರತವನ್ನು ಅರ್ಥಮಾಡಿಕೊಳ್ಳಲು ನಾವು ಪ್ರಯತ್ನಿಸಬಹುದು.

ಚುರುಮುರಿ



ಕ್ರಿಕೆಟ್ ನಸೀಬು

• ಆನಂದ

‘ನಮ್ಮ ಹುಡುಗನಿಗೂ ಕ್ರಿಕೆಟ್ ಕಲಿಸಬೇಕಿತ್ತು ರೀ ಕಾಲೇಜಿಗೆ ಹಾಕೋ ಬದಲು’ ಎಂದು ಹೆಂಡತಿ ಮಾತಿಗೆ ಹಚ್ಚಿದಳು.

‘ಅವನೇನು ವಿರಾಟ್ ಕೊಹ್ಲಿ ಆಗುತ್ತಿದ್ದ-ನೇನು? ಓದಿ ಒಂದು ಒಳ್ಳೇ ನೌಕರಿ ಹಿಡಿದು ಒಳ್ಳೆಯ ಸಂಬಳ ಪಡೆದರೆ ಸಾಲದೇ’ ಎಂದೆ.

‘ನಿಮ್ಮದು ಎನ್‌ಜಿಒ ಮೆಂಟಾಲಿಟಿ. ಬರೀ ಸಂಬಳ ನೆಚ್ಚಿಕೊಂಡಿದ್ದಿರಿ. ಮೇಲುಸಂಪಾದನೆ ಇರಲೇ ಇಲ್ಲ’ ಎಂದು ಸಿಡುಕಿದಳು.

‘ಕ್ರಿಕೆಟ್‌ನಲ್ಲಿ ಮೇಲುಸಂಪಾದನೆ ಇರುತ್ತೇನು?’

‘ಬರೀ ಸಂಪಾದನೇನೇ ಸಾಕು. ನೋಡಿ, 2022 ಐಪಿಎಲ್‌ಗೆ ಆಟಗಾರರ ಹರಾಜು. ಬರೇ ಕೋಟೀಲೇ ಎಲ್ಲ ವ್ಯವಹಾರ. ಪೇಪರಿನಲ್ಲಿ ಬರೀ ಕೊರೊನಾ, ಹಿಜಾಬ್, ರಾಜಕೀಯ ಓದಿದರೆ ಸಾಲದು, ಸ್ಪೋರ್ಟ್ಸ್ ಪೇಜಿನ ಕಡೆಗೂ ಗಮನ ಕೊಡಿ. ಅದ್ಯಾರೋ ಇಶಾನ್ ಕಿಶನ್ ಅಂತೆ 15 ಕೋಟಿ ರೂಪಾಯಿಗೆ ಕೊಂಡಿದ್ದಾರೆ ನೋಡಿ’.

‘ಕೊಳ್ಳೋದು ಅಂದರೆ?’

‘ಹರಾಜು ರೀ, ಬಿಡಿಎ ಸೈಟ್ ಹರಾಜು ಮಾಡೊಲ್ಲವೇ ಹಾಗೆ. ಒಬ್ಬೊಬ್ಬರಿಗೆ ಒಂದೊಂದು ರೇಟು. ಕಾಸಿಗೆ ತಕ್ಕ ಕಜ್ಜಾಯ ತರಹ ಇಲ್ಲಿ ಬ್ಯಾಟಿಗೆ ಬಾಲಿಗೆ ತಕ್ಕ ರೇಟು. ನೋಡಿ, ರಾಜ್ ಅಂಗದ್ ಬಾವಾ ಅನ್ನೋ ಹುಡುಗ ಇನ್ನೂ 19 ತುಂಬಿಲ್ಲ ಎರಡು ಕೋಟಿಗೆ ಬಿಕರಿ ಆಗಿದ್ದಾನೆ. ಇನ್ನೊಬ್ಬ ಅದೇ ವಯಸ್ಸಿನವನಿಗೆ 1.5 ಕೋಟಿ ಸಿಕ್ಕಿದೆ’.

‘ಅಷ್ಟು ದುಡ್ಡು ಕೊಟ್ಟರೆ ಎಷ್ಟು ದುಡೀಬೇಕೋ ಏನೋ?’

‘ಅಯ್ಯೋ! ಅದು 20-20 ಮ್ಯಾಚುರೀ. ಬೌಲರ್ ಆದರೆ 4 ಓವರ್ ಮೇಲೆ ಎಸೆಯೋ ಹಾಗಿಲ್ಲ. ಬ್ಯಾಟಿಂಗ್ ಆದರೆ 10 ಓವರ್ ಆಡಿದರೆ ಹೆಚ್ಚು, ಅಷ್ಟೇ’.

‘ಅಷ್ಟಕ್ಕೇ ಅಷ್ಟೊಂದು ದುಡ್ಡೇ?’

‘ಅದಕ್ಕೇ ನಾನು ಹೇಳಿದ್ದು. ನಮ್ಮ ಹುಡುಗನ್ನ ಕ್ರಿಕೆಟರ್ ಮಾಡಿದ್ದರೆ ನಾವೂ ಜುಂ ಅಂತ ಕೋಟಿಗಟ್ಟಲೆ ಎಣಿಸಬಹುದಿತ್ತು’.

‘ಆದರೆ ಸಚಿನ್ ತೆಂಡೂಲ್ಕರ್ ಮಗನಿಗೆ ಸಿಕ್ಕಿದ್ದು 30 ಲಕ್ಷ ಅಷ್ಟೇ’ ಎಂದೆ. ಅವಳಿಗೆ ಶಾಕ್ ಆಯಿತು.

‘ಎಲ್ಲರಿಗೂ ನಸೀಬು ಇರೊಲ್ಲಮ್ಮಾ’ ಎಂದೆ.

ಸಂಗತ

ತತ್ವಪದ: ಸಹೃದಯದ ಸುದೀಪ್ತ ಸಂಬಂಧ

ಈ ಲೋಕಮೀಮಾಂಸೆಯ ಸಮಗ್ರ ಅಧ್ಯಯನಕ್ಕೆ ಪ್ರಾಧಿಕಾರ ರಚನೆಯಾಗಬೇಕಿದೆ

• ಮಲ್ಲಿಕಾರ್ಜುನ ಕಡಕೋಳ

ಕನ್ನಡ ಸಂಸ್ಕೃತಿಯ ಲೌಕಿಕ ಮತ್ತು ಅಲೌಕಿಕ ಕಸುವನ್ನು ಮೆರೆದುದು ತತ್ವಪದ ಸಾಹಿತ್ಯ. ಪ್ರಪಂಚ ಮತ್ತು ಪಾರಮಾರ್ಥ, ಇಹ ಪರ ಗೆಲ್ಲುವ ‘ಅಚಲ’ ಶಕ್ತಿ ತತ್ವಪದಗಳದ್ದು. ಇಂತಹ ತತ್ವಪದ ಸಾಹಿತ್ಯಕ್ಕೆ ಚಾರಿತ್ರಿಕವಾಗಿ ದಕ್ಕಲೇಬೇಕಿದ್ದ ಪ್ರಧಾನ ಸಾಂಸ್ಕೃತಿಕ ಧಾರೆಯ ಸ್ಥಾನಮಾನ ದಕ್ಕಿಲ್ಲ. ಅದಕ್ಕೆ ಬದಲು ತತ್ವಪದ ಸಾಹಿತ್ಯ ಬಾಹುಳ್ಯದ ಕಾಲಮಾನವನ್ನು ಗಂಭೀರವಾಗಿ ಗುರುತಿಸಲಾಗದೇ ಅದೊಂದು ‘ಕತ್ತಲೆಯುಗ’ ಎಂದು ಬಿಂಬಿಸುವ ಬೀಸುನಿರ್ಲಕ್ಷ್ಯ ತೋರಿದುದು ಚಾರಿತ್ರಿಕ ದುರಂತವೇ ಸೈ! ಹೀಗಂತಲೇ ಇವತ್ತಿಗೂ ಅಮಾವಾಸ್ಯೆಯ ಕತ್ತಲು, ಸತ್ತವರ ಮನೆಯ ಹೆಣದ ಸಾನ್ನಿಧ್ಯದಲ್ಲಿ ಏಕತಾರಿ ನಾದಗಳ ನಡುವೆ ಅಹೋರಾತ್ರಿ ಕೇಳಿಬರುವ ಭಜನೆ ಪದಗಳವು.

ಕಾವ್ಯಮೀಮಾಂಸಕರ ವಿದ್ವತ್‌ಲೋಕ ಮರೆತರೇನಂತೆ, ಜನಸಾಮಾನ್ಯರ ಮಾನಸಲೋಕ ಶತಮಾನಗಳ ಕಾಲ ತತ್ವಪದಗಳನ್ನು ತಮ್ಮ ಜೀವಹೃದಯ, ನಾದ ನಾಭಿಗಳ ತುಂಬಾ ತುಂಬಿಸಿಕೊಂಡು, ಹರಿಗಡಿಯದೆ ಹರಿಸುತ್ತಲೇ ಬಂದಿದೆ. ಅದೊಂದು ಸಹೃದಯದ ಸುದೀಪ್ತ ಸಂಬಂಧ. ತನ್ಮೂಲಕ ನೆಲದ ಪರಿಮಳ ಬದುಕಿ ತೋರಿದೆ. ಅಂತೆಯೇ ಲೋಕಮೀಮಾಂಸೆಯು ಪಂಡಿತ ಮೀಮಾಂಸೆಗಿಂತ ಹಿರಿದಾದುದು. ಅಷ್ಟು-ಮಾತ್ರವಲ್ಲ ಅದಕ್ಕೆ ವರ್ತಮಾನದಲ್ಲೂ ಪ್ರಜಾಸತ್ತಾತ್ಮಕ ಹಿರಿಮೆ ಗರಿಮೆಯ ಪಟ್ಟ ಕಟ್ಟಿಟ್ಟ ರೊಟ್ಟಿಬುತ್ತಿಯಂತಿದೆ.

ಹಾಡುಗಬ್ಬದ ಮೌಖಿಕ ಸಂಸ್ಕೃತಿಯ ತರಹೇವಾರಿ ಭಜನೆಗಳ ಮೂಲಕ ತತ್ವಪದಗಳನ್ನು ಜನಪದರು ಕಾಪಿಟ್ಟುಕೊಂಡು ಬಂದವರು. ಪ್ರಾಯಶಃ ಈ ಕಾರಣಕ್ಕೆಂದೇ ತತ್ವಪದ ಸಾಹಿತ್ಯವು ಜನಪದ ಸಾಹಿತ್ಯ ಪ್ರಕಾರಕ್ಕೆ ಸೇರಿರಬಹುದೆಂಬುದು ಕೆಲವು ಹಳೆಯ ಜಿಜ್ಞಾಸುಗಳ ಅನುಮಾನ. ಇವತ್ತಿಗೂ ಆಕಾಶವಾಣಿ, ದೂರದರ್ಶನದಲ್ಲಿ ಜನಪದ ಸಂಗೀತ ಕಾರ್ಯಕ್ರಮದ ಹೆಸರಲ್ಲಿ ತತ್ವಪದಗಳು ಪ್ರಸಾರಗೊಳ್ಳುವುದನ್ನು ಗಮನಿಸಬಹುದು. ಅದೇನೇ ಇರಲಿ ತತ್ವಪದ ಸಂಸ್ಕೃತಿಯು ಸಾಹಿತ್ಯ ಚರಿತ್ರೆಕಾರರ ಅವಜ್ಞೆಗೊಳ-ಗಾದುದು ಸುಳ್ಳಲ್ಲ. ಶಾಸ್ತ್ರೀಯ ಸಂಗೀತದ ಎಲೈಟ್ ಮಂದಿಯ ವೀಣೆ, ತಂಬೂರಿ ತಂತಿನಾದಗಳ ಮೇಲ್ಪಂಕ್ತಿಯ ಭರಾಟೆಯಲ್ಲಿ ತತ್ವಪದ ಭಜನೆಕಾರರ ಕರಿ ಕುಂಬಳಕಾಯಿಯ ಏಕತಾರಿ ತಂತಿನಾದಗಳು ಮುನ್ನೆಲೆಗೆ ಬಾರದಂತಾಗಿ ಬಿಟ್ಟವು.

ಬಸವಪ್ರಣೀತ ವಚನ ಚಳವಳಿ ಮತ್ತು ಹರಿದಾಸ ಭಕ್ತಿ ಜಾಗರಣೆಯ ತರುವಾಯ ಸಾಮಾಜಿಕ, ಧಾರ್ಮಿಕ ಮತ್ತು ಅನುಭಾವದ ಅನುಸಂಧಾನದಂತೆ ಗುರುಮಾರ್ಗ ಪಂಥ ಪರಂಪರೆಯ ಜನಸಂಸ್ಕೃತಿ ರೂಪಿಸಿದ್ದು ತತ್ವಪದ ಸಾಹಿತ್ಯ ಚಳವಳಿ. ಬ್ರಾಹ್ಮಣ, ಲಿಂಗಾಯತ, ಮುಸಲ್ಮಾನ, ದಲಿತರಾದಿಯಾಗಿ ಸಮಾಜದ ಬಹುಪಾಲು ಜಾತಿಯ ಐನೂರಕ್ಕೂ ಹೆಚ್ಚು ಸಂಖ್ಯೆಯ ತತ್ವಪದಕಾರ ಸಾಧಕ ಸಾಧಕಿಯರು ಕನ್ನಡ ನಾಡಿನಾದ್ಯಂತ ಬಾಳಿ ಬದುಕಿದ್ದನ್ನು ಮಾಹಿತಿಯೊಂದು ಶ್ರುತಪಡಿಸುತ್ತದೆ.

ತತ್ವಪದಕಾರರು ಆಯಾ ಕಾಲದ ಪ್ರಭುತ್ವದ ಅನಾಚಾರ, ಅಹಂಕಾರಗಳಂತಹ ಅನೇಕ ಅಪಸವ್ಯಗಳನ್ನು ಪ್ರಶ್ನಿಸಿ ತಕ್ಷಣವೇ ಪ್ರತಿಭಟನೆಯ ಪದಕಟ್ಟಿ ಹಾಡಿದವರು. ಅಂತೆಯೇ ಅವರು ಭವರೋಗ ವೈದ್ಯರು. ನಮ್ಮ ಬಹುತೇಕ ವೀರಶೈವ ಮಠಗಳು ವಚನ ಸಾಹಿತ್ಯಕ್ಕೆ ತೋರಿದ ಅದಮ್ಯ ಪ್ರೀತಿಯನ್ನು ತತ್ವಪದ ಸಾಹಿತ್ಯಕ್ಕೆ ತೋರಲಿಲ್ಲ. ಅದರಲ್ಲೂ ಕೆಲವು ಮಠಗಳು ವೀರಶೈವ ಪುಣ್ಯಪುರುಷರ ತತ್ವಪದಗಳನ್ನು ಹುಡುಕಿ ಪ್ರಕಟಿಸುವಲ್ಲಿ ಆಸಕ್ತಿ ತೋರಿದವು.

ಇನ್ನುಳಿದ ಹತ್ತಾರು ಹಿಂದುಳಿದ ಜಾತಿಯ ನೂರಾರು ಮಹಿಳೆ ಮತ್ತು ಪುರುಷ ತತ್ವಪದಕಾರರ ಸಾವಿರಾರು ತತ್ವಪದಗಳು ಸಾಮಾನ್ಯ ಜನರ ಸಿರಿಕಂಠದಲ್ಲೇ ಉಳಿದುಕೊಂಡವು. ವಿಶ್ವವಿದ್ಯಾ-ಲಯಗಳ ಕೆಲವು ಪ್ರಾಧ್ಯಾಪಕರ ಪಿಎಚ್.ಡಿ ಮತ್ತು ವಿದ್ವಾಂಸರ ಜ್ಞಾನಾರ್ಜನೆಯ ಹಸಿವು ತೀರಿಕೆಯ ಪುಸ್ತಕ ಸಂಗ್ರಹಗಳಾಗಿ ಪದಗಳು ಪ್ರಕಟಗೊಂಡವು. ಮತ್ತೆ ಕೆಲವು, ತತ್ವಪದ ಮತ್ತು ಸೂಫಿ ಸಂತಲೋಕದ ಮೇಲೆ ಒಳಬೆಳಕು ಚೆಲ್ಲಿದ ಪುಸ್ತಕಗಳು ಬಂದಿವೆ. ಅದನ್ನು ಹೊರತುಪಡಿಸಿದರೆ ಸಂಸ್ಕೃತಿ ಇಲಾಖೆಯ ಕನಕ ಅಧ್ಯಯನ ಮತ್ತು ಸಂಶೋಧನಾ ಕೇಂದ್ರವು ತತ್ವಪದಗಳ ಸಂಗ್ರಹ ಮಾಡಿದೆ. ಅಜಮಾಸು ಮೂವತ್ತೆರಡು ಪುಸ್ತಕಗಳನ್ನು ಪ್ರಕಟಿಸಿದೆ. ಆ ಎಲ್ಲ ಪುಸ್ತಕಗಳು ಮಾಲಿಕೆ ರೂಪ ಧರಿಸಿದ್ದು ಸಹಜವಾಗಿ ಮಾಲಿಕೆ ಸಂಪಾದಕ ಮಂಡಳಿಯ ಸಾಮಾನ್ಯ ಪ್ರಸ್ತಾವನೆಯ ಏಕರೂಪದ ಸಂಪಾದಕೀಯಗಳು ಪ್ರಕಟಗೊಂಡಿವೆ. ಇದು ಒಂದು ಹಂತದ ಆರಂಭ ಮಾತ್ರ.



ಆದರೆ ತತ್ವಪದಗಳ ನಿಗೂಢ ಅಸ್ಮಿತೆ ಕುರಿತು, ತತ್ವಪದಕಾರರ ಬದುಕು, ಬರಹ, ಸಿದ್ಧಿ ಸಾಧನೆಯ ಸಂವೇದನೆಗಳ ಕುರಿತು ಆಮೂಲಾಗ್ರವಾಗಿ ತಿಳಿಯುವ ಕೆಲಸ ಆಗಬೇಕು. ನಾನಾ ಜ್ಞಾನಸಾರ ಶಿಸ್ತು ಮತ್ತು ಅವುಗಳ ಒಳಹೊಳಹುಗಳ ಆಳ ಅಗಲದ ಸಂಶೋಧನೆ ಹಾಗೂ ಸಮಗ್ರ ಅಧ್ಯಯನ ಆಗಲೇಬೇಕಿದೆ. ಬಹುಳಪ್ರಜ್ಞೆಯ ಜೀವಧಾತುವುಳ್ಳ ತತ್ವಪದಗಳು ಬಹುಮುಖಿ ಭಾರತದ ವರ್ತಮಾನಕ್ಕೆ ಅತ್ಯಗತ್ಯವಾಗಿವೆ. ಶಿಶುನಾಳ ಶರೀಫನ ಖಾದರಲಿಂಗ ಪ್ರಜ್ಞೆ ಹಾಗೂ ಕಡಕೋಳ ಮಡಿವಾಳಪ್ಪನ ಫಕೀರ ಪ್ರಜ್ಞೆ ಇಂದಿನ ತುರ್ತು ಅಗತ್ಯ. ಕೋಮು ಸೌಹಾರ್ದ, ಪರಿಣಾಮಕಾರಿ ಭಾವೈಕ್ಯ ಬಿತ್ತಿ ಬೆಳೆಯುವ ಬೀಜಪೈರಿನ ಜವಾರಿಗುಣ ಅವಕ್ಕಿದೆ. ಅಂತೆಯೇ ಕನ್ನಡದ ಈ ತತ್ವಪದಗಳು ಭಾರತದ ಎಲ್ಲ ಭಾಷೆಗಳಿಗೂ ತರ್ಜುಮೆಗೊಂಡು ಆಯಾ ಭಾಷೆಯಲ್ಲಿ ವಾಚಿಕೆಗಳಾಗುವುದು ವಾಜಿಮಿ.

ಕನ್ನಡದ ಸಮಗ್ರ ತತ್ವಪದಗಳು, ಸೂಫಿ ಮತ್ತು ತತ್ವಪದಕಾರರ ಕುರಿತು ಆಳದ ಸಂಶೋಧನೆ, ಸಮಗ್ರ ಅಧ್ಯಯನದ ಅಭಿವೃದ್ಧಿ ಪ್ರಾಧಿಕಾರ ರಚನೆಯಾಗಬೇಕು. ಪ್ರಸ್ತುತ ಮುಂಗಡಪತ್ರದಲ್ಲಿ ಪ್ರಾಧಿಕಾರ ಸ್ಥಾಪನೆಯ ವಿಚಾರ ಮಂಡನೆಯಾಗಲಿ.

ವಾಚಕರ ವಾಣಿ

‘ಪುಸ್ತಕ ಪರಿಚಯ’ ಮಾಸಿಕ ಪ್ರಕಟವಾಗಲಿ

ಇಂದು ಕನ್ನಡ ಪುಸ್ತಕಗಳನ್ನು ಕೊಳ್ಳುವವರೂ ಇಲ್ಲ, ಓದುವವರೂ ಇಲ್ಲ ಎನ್ನುವ ಮಾತುಗಳು ಕೇಳಿಬರುತ್ತವೆ. ಕಾಲಕಾಲಕ್ಕೆ ಪ್ರಕಟವಾಗುವ ಕನ್ನಡ ಪುಸ್ತಕಗಳನ್ನು ಖರೀದಿಸಲು ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ಅದಕ್ಕಾಗಿ ಸಂಗ್ರಹವಾಗುವ ತೆರಿಗೆಯ ಹಣವನ್ನು ಬಿಡುಗಡೆ ಮಾಡದೆ, ಪುಸ್ತಕ ಖರೀದಿಯನ್ನೇ ಸ್ಥಗಿತ ಮಾಡಿರುವ ಸರ್ಕಾರದ ಕನ್ನಡದ ಬಗೆಗಿನ ಔದಾಸೀನ್ಯವೂ ಇದಕ್ಕೆ ಒಂದು ಕಾರಣ. ಪ್ರಕಟವಾಗುವ ಪುಸ್ತಕಗಳ ಮಾಹಿತಿ, ಅದರ ಪರಿಚಯ ಮತ್ತು ದೊರಕುವ ಸ್ಥಳದ ವಿವರವನ್ನು ಓದುಗರಿಗೆ ಒದಗಿಸುವ ವ್ಯವಸ್ಥೆಯೇ ಇಲ್ಲದಿರುವುದೂ ಮತ್ತೊಂದು ಕಾರಣ. ಕನ್ನಡ ಸಾಹಿತ್ಯ ಪರಿಷತ್ ಈಗಲಾದರೂ ಇದನ್ನು ಗಮನಿಸಿ ರಾಜ್ಯದಾದ್ಯಂತ ಇರುವ ಪರಿಷತ್ತಿನ ಶಾಖೆಗಳಲ್ಲಿ ಪುಸ್ತಕ ಮಾರಾಟ ಮಳಿಗೆ ತೆರೆಯಲು ಸಾಧ್ಯವೇ ಪರಿಶೀಲಿಸಬೇಕು. ಇನ್ನು ಬಹುಮುಖ್ಯವಾಗಿ, ಪ್ರಕಟವಾದ ಪುಸ್ತಕಗಳು, ಅದರ ಪರಿಚಯ, ಅದು ಸಿಗುವ ಸ್ಥಳ ತಿಳಿಸುವ ‘ಪುಸ್ತಕ ಪರಿಚಯ’ ಮಾಸಿಕವನ್ನು ಪ್ರಕಟಿಸಲಿ. ಇದರಿಂದ ನಿಜದಲ್ಲಿ ಕನ್ನಡ ಪುಸ್ತಕ ಕೊಳ್ಳುವ, ಓದುವ ಹವ್ಯಾಸಕ್ಕೆ ಕಾಯಕಲ್ಪವಾಗುತ್ತದೆ.

ಸತ್ಯಬೋಧ, ಬೆಂಗಳೂರು

ಎಲ್ಲ ಸಮಸ್ಯೆಗಳ ಮೂಲ ರಾಜಕಾರಣಿ

ಹಿಜಾಬ್- ಕೇಸರಿ ಶಾಲು ವಿವಾದದ ಮೂಲವನ್ನು ವೈ.ಗ.ಜಗದೀಶ್ ತಮ್ಮ ಲೇಖನದಲ್ಲಿ (ಪ್ರ.ವಾ., ಫೆ. 16) ಒಂದಿಷ್ಟು ಅನಾವರಣಗೊಳಿಸಿದ್ದಾರೆ. ಆದರೆ ಹಿಜಾಬ್ ಹಾಕಬೇಕೇ ಬೇಡವೇ ಎಂಬುದು ಆಯಾ ವಿದ್ಯಾರ್ಥಿನಿಯ ಅಥವಾ ಮಹಿಳೆಯ ಆಯ್ಕೆಗೆ ಬಿಟ್ಟ ವಿಷಯ ಎಂದಿದ್ದಾರೆ. ಯಾವುದೇ ಪ್ರಮುಖವಾದ ನಿರ್ಧಾರವನ್ನು-ವಿಷಯ ಕೌಟುಂಬಿಕವಾಗಲೀ ಸಾಮಾಜಿಕವಾಗಲೀ- ಮಹಿಳೆಯ ನಿರ್ಧಾರಕ್ಕೆ ಬಿಡುವುದನ್ನು ಪುರುಷಾಧಿಪತ್ಯ ಒಪ್ಪುವುದಿಲ್ಲ. ಕುಟುಂಬದಲ್ಲೂ ಈ ನಿರ್ಧಾರ ಪುರುಷರದೇ ಆಗಿರುತ್ತದೆ. ನಂತರ ಅವರವರ ಕೋಮಿನ ಧಾರ್ಮಿಕ ನಾಯಕರು, ನಂತರ ಧರ್ಮಸೂಕ್ಷ್ಮದ ವಿಷಯವೆತ್ತಿ ರಾಜಕಾರಣಿಗಳು ಮೂಗು ತೂರಿಸುತ್ತಾ ಇರುತ್ತಾರೆ.

ಈ ಎಲ್ಲಾ ಸಮಸ್ಯೆಗಳ ಮೂಲ ಕಾರಣ ರಾಜಕಾರಣಿಗಳು. ಅಧಿಕಾರಕ್ಕಾಗಿ ಜನರಲ್ಲಿ ವಿಷಬೀಜ ಬಿತ್ತಿ, ಆತಂಕ ಮೂಡಿಸಲು ಯಾವ ಮಟ್ಟಕ್ಕಾದರೂ ಇಳಿಯಲು ಅವರು ಪಕ್ಷಭೇದ ಇಲ್ಲದೆ ಅವಕಾಶವನ್ನು ಹುಡುಕುತ್ತಿರುತ್ತಾರೆ. ಎಲ್ಲಿ ಬೆಂಕಿ ಹಚ್ಚಿದರೆ ತಮ್ಮ ಬೇಳೆ ಬೇಯುತ್ತದೆ ಎಂದು ಕಾಯುತ್ತಿರುತ್ತಾರೆಯೇ ವಿನಾ ಅವರು ಯಾರ ಉದ್ಧಾರವನ್ನೂ ಮಾಡುವುದಿಲ್ಲ. ಶತ ಶತಮಾನಗಳಿಂದ ಅಲ್ಪಸಂಖ್ಯಾತ ಹೆಣ್ಣುಮಕ್ಕಳಿಗೆ ಉನ್ನತ ವಿದ್ಯಾಭ್ಯಾಸ ಸಾಧ್ಯವೇ ಇರಲಿಲ್ಲ. ಕೆಲ ದಶಮಾನಗಳಿಂದೀಚೆಗೆ ಅವರಿಗೆ ಇದು ಸಾಧ್ಯವಾಗುತ್ತಿದೆ. ಆ ಸಮುದಾಯದ ಹೆಣ್ಣು ಮಕ್ಕಳು ಇದನ್ನು ಅರ್ಥಮಾಡಿಕೊಂಡು ಧಾಡಸಿತನದಿಂದ ಮುಂದುವರಿಯಬೇಕಿತ್ತು. ಆದರೆ ಯಾರು ಅವರಿಗೆ ತಿಳಿಹೇಳುವವರು?

ವಿಶಾಲಾಕ್ಷಿ ಶರ್ಮಾ, ಬೆಂಗಳೂರು

ಚೊಕ್ಕ ಚಿನ್ನ

ಮಗುಮನದ ತಾಯಿಕರುಳಿನ
ಮಾನವತೆ ರೂಪುದಳೆದ
ಓ! ಚೆಂಬೆಳಕಿನ ಕವಿ
ವಿದಾಯ ಹೇಳಿದಿರಾ ಬದುಕಿಗೆ!
ನಿಮ್ಮಗಲಿಕೆ ನಾಡಿಗೆ ನಷ್ಟ
ಕಷ್ಟ ಸಹಿಸಿಕೊಳುವುದು ಜನಮನಕೆ
ನೀವು ಚೆನ್ನವೀರ ಕವಿ, ಚೊಕ್ಕಚಿನ್ನ
ಸದಾ ಚಿರ ಕವಿತೆಗಳಲಿ
ನಿಮಗಿದೋ ಪ್ರೀತಿಯ ನುಡಿನಮನ

ಸಿ.ಪಿ.ಸಿದ್ಧಾಶ್ರಮ, ಮೈಸೂರು

ಕಸಾಪ: ಶೈಕ್ಷಣಿಕ ಮಾನದಂಡದ ಔಚಿತ್ಯವೇನು?

ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯತ್ವ ಪಡೆಯಲು ಶೈಕ್ಷಣಿಕ ಅರ್ಹತೆ ನಿಗದಿಪಡಿಸುವ ವಿಚಾರ ತಿಳಿದು ಆಶ್ಚರ್ಯ-ವಾಯಿತು. ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾದ ಕಸಾಪ ಸದಸ್ಯತ್ವ ಪಡೆಯಲು ಈ ಮಾನದಂಡವನ್ನು ಅನುಸರಿಸಲು ಹೊರಟಿರುವುದು ಅಪ್ರಬುದ್ಧವಾದುದು. ಕನ್ನಡ ಓದು ಬರಹ ಬಲ್ಲವರೆಲ್ಲರೂ ಸದಸ್ಯತ್ವ ಪಡೆಯಬಹುದು ಎಂಬುದು ಹಿಂದಿನ ಬೈಲಾದಲ್ಲಿ ಇದೆ. ಆದರೆ ಈಗ ಈ ಉಪನಿಯಮಕ್ಕೆ ತಿದ್ದುಪಡಿ ತಂದು ಶೈಕ್ಷಣಿಕ ಮಾನದಂಡ ನಿಗದಿ ಮಾಡಲು ಮುಂದಾಗಿರುವುದರ ಔಚಿತ್ಯವೇನು?

ಕನ್ನಡದ ಮೇರುನಟ ಡಾ. ರಾಜಕುಮಾರ್ ಅವರು ಓದಿದ್ದು ಮೂರನೆಯ ತರಗತಿಯವರೆಗೆ ಮಾತ್ರ. ಅವರು ಗೋಕಾಕ್ ಚಳವಳಿಯ ಮುಖಾಂತರ ಕನ್ನಡಕ್ಕೆ ಕನ್ನಡತ್ವವನ್ನು ದಕ್ಕಿಸಿಕೊಟ್ಟರು. ಎಸ್‌ಎಸ್‌ಎಲ್‌ಸಿಯನ್ನೋ ಅಥವಾ ಏಳನೇ ತರಗತಿಯನ್ನೋ ಕನಿಷ್ಠ ಅರ್ಹತೆ ಎಂದು ಪರಿಗಣಿಸಿದರೆ ಡಾ. ಡಾ. ರಾಜಕುಮಾರ್ ಅವರಂಥ ಪ್ರತಿಭಾಶಾಲಿಗಳಿಗೆ ಅವಮಾನ ಮಾಡಿದಂತಾಗುತ್ತದೆ. ತೆಲುಗಿನ ಖ್ಯಾತ ನಟ ಅಕ್ಕಿನೇನಿ ನಾಗೇಶ್ವರ ರಾವ್ ಅವರೂ ಹೆಚ್ಚು ಶಿಕ್ಷಣ ಪಡೆದವರಲ್ಲದಿದ್ದರೂ ಪ್ರತಿಭಾವಂತರಾಗಿ ಅವರ ಭಾಷೆಗೆ ಬೆಲೆ ತಂದುಕೊಟ್ಟಿದ್ದರು. ಹಾಗೆಯೇ ಹಿಂದೆ ತಮಿಳುನಾಡಿನ ಮುಖ್ಯಮಂತ್ರಿಯಾಗಿದ್ದ ಕಾಮರಾಜ ನಾಡರ್ ಪ್ರಾಥಮಿಕ ಶಾಲೆಯನ್ನೂ ಪೂರೈಸಿರಲಿಲ್ಲ. ಆದರೆ ರಾಷ್ಟ್ರಮಟ್ಟದಲ್ಲಿ ಜನಪರ ಕೆಲಸಗಳಿಂದ ಪ್ರಸಿದ್ಧಿಯನ್ನು ಪಡೆದಂತಹವರು. ಪ್ರತಿಭೆಗೆ, ಜ್ಞಾನಕ್ಕೆ ಅಕ್ಷರ ಪ್ರಮಾಣವನ್ನು ಮಾನದಂಡ ಮಾಡುತ್ತಿರುವ ಕಸಾಪ ಅಧ್ಯಕ್ಷರ ನಡೆ ಅತ್ಯಂತ ದುರದೃಷ್ಟಕರ. ಇಂತಹ ಅಪರಿಪಕ್ವ ತಿದ್ದುಪಡಿಗಳನ್ನು ವಿರೋಧಿಸಬೇಕು.

ಡಾ. ನಾಗಭೂಷಣ ಬಗ್ಗನಡು, ತುಮಕೂರು

ಬೇಕಾದುದು ಯಾವ ಅಭಿವೃದ್ಧಿಯ ಮಾದರಿ?!

ಉತ್ತರಪ್ರದೇಶದಲ್ಲಿನ ಚುನಾವಣಾ ಸಂದರ್ಭದಲ್ಲಿ ಹುಟ್ಟಿಕೊಂಡಿರುವ ಅಭಿವೃದ್ಧಿ ಮಾದರಿ ತಾಳೆ ಕುರಿತ ವರದಿಯಿಂದ (ಪ್ರ.ವಾ., ಫೆ. 16) ಕರ್ನಾಟಕ ಅನೇಕ ಪಾಠಗಳನ್ನು ಕಲಿಯಬಹುದಾಗಿದೆ. ದೇಶದಲ್ಲಿ ಅಭಿವೃದ್ಧಿಯ ಯಾವುದೇ ಸೂಚಿಯನ್ನು ತೆಗೆದುಕೊಂಡರೂ ಕೇರಳವು ಅನೇಕ ದಶಕಗಳಿಂದಲೂ ಮುಂಚೂಣಿಯಲ್ಲಿರುವುದು ದಾಖಲಾಗಿದೆ. ಇದು ಮಾನವ ಅಭಿವೃದ್ಧಿಯಲ್ಲಿನ ಸಾಧನೆ ಮಾತ್ರವಲ್ಲ. ಕೇರಳದ ತಲಾ ವರಮಾನ 2019-20ರಲ್ಲಿ ₹ 2.22 ಲಕ್ಷವಿದ್ದರೆ ಗುಜರಾತಿನಲ್ಲಿ ಇದು ₹ 2.14 ಲಕ್ಷವಿದೆ. ಉತ್ತರಪ್ರದೇಶದ ತಲಾ ವರಮಾನ ₹ 65,704. ಇದು ಕೇರಳದ ತಲಾ ವರಮಾನದ ಶೇ 30ರಷ್ಟಾಗುತ್ತದೆ. ದೇಶದ ಜನಸಂಖ್ಯೆಯಲ್ಲಿ ಶೇ 2.76ರಷ್ಟು ಪಾಲು ಪಡೆದಿರುವ ಕೇರಳವು ಜಿಡಿಪಿಗೆ ಶೇ 3.79 ಕಾಣಿಕೆ ನೀಡುತ್ತಿದೆ. ಕೇರಳದ ಜನಸಂಖ್ಯೆಯ 6 ಪಟ್ಟು ಅಧಿಕ ಜನಸಂಖ್ಯೆಯಿರುವ ಉತ್ತರಪ್ರದೇಶವು ದೇಶದ ಜಿಡಿಪಿಗೆ ನೀಡುತ್ತಿರುವ ಕಾಣಿಕೆ ಕೇರಳದಕ್ಕಿಂತ ಎರಡು ಪಟ್ಟು ಮಾತ್ರ (ಶೇ 7.35).

ಕರ್ನಾಟಕವು ಕೇರಳ ಅಭಿವೃದ್ಧಿ ಮಾದರಿಯಿಂದ ಪಾಠ ಕಲಿಯಬೇಕೇ ವಿನಾ ಗುಜರಾತ್ ಮಾದರಿ ಅಥವಾ ಉತ್ತರಪ್ರದೇಶದ ಅಭಿವೃದ್ಧಿ ಮಾದರಿಗಳಿಂದಲ್ಲ ಎಂಬುದು ಇಂದು ಸ್ಪಷ್ಟವಾಗಿದೆ.

ಟಿ.ಆರ್.ಚಂದ್ರಶೇಖರ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸೂರ್ಯನತ್ತ ಹೊರಳಿದ ಚೆಂಬೆಳಕು

• ಡಾ. ಜಿ.ಎಂ. ಹೆಗಡೆ

ಏನಾದರೂ ಇರಲಿ ಹಾಡು ನಿಲ್ಲಿಸಬೇಡ
ದೀಪ ಪಟ್ಟನೆ ಆರಿ ಹೋಗಬಹುದು
ನನ್ನೆದೆಯ ಕತ್ತಲೆಯ ಕಣ್ಣುಕಪ್ಪಡಿ ಮತ್ತೆ
ಮೂಲೆ ಮೂಲೆಗೆ ಹೋಗಿ ಹಾಯಬಹುದು...

ತೊಂಬತ್ತು ಮೂರು ವರ್ಷಗಳ ಕಾಲ ಬಾಳಿದ ಚೆಂಬೆಳಕಿನ ಕವಿ ಚೆನ್ನವೀರ ಕಣವಿ ಕನ್ನಡದಲ್ಲಿ ಶಬ್ದಗಳ ದೀಪ ಮಾಲೆಯನ್ನು ಹೆಚ್ಚುತ್ತಾ ಬಂದವರು. ನೂರು ಮಳೆಗಾಲಗಳ ಕಾಲ ಕವಿತೆಯ ಹಾಡು ಹಾಡಬೇಕಾದ ಕವಿಯ ಎದೆಯ ದೀಪ ಇಂದು ಶಾಂತವಾಗಿದೆ. 'ಭಾವಜೀವಿಯು ನಾನು, ನನ್ನೆದೆಯ ನಂಬಿರುವ ಕನಸುಗಳೇ ಕಲ್ಪವೃಕ್ಷ' ಎಂದು ಕವಿ ಮೌನಕ್ಕೆ ಜಾರಿದ್ದಾರೆ.

ಕಣವಿ 'ಚಿರಂತನ ದಾಹ'ದ ಕವಿ. ಆದ್ದರಿಂದಲೇ 'ಜಗವ ತುಂಬಿದ ಬೆಳಕು ನಮಗೇಕೋ ಸಾಲದಿದೆ ಎನಿತು ಮಾನವನೆದೆಯ ಆಳ ಅಗಲ! ಕಾವ್ಯ ಮಾನವತೆಯ ಬೆಳಕಿನ ಪ್ರಭೆ ಹರಡಬೇಕು' ಎಂದು ಅವರು ಹೇಳಿದ್ದರು. ಅವರ ಜೀವನವೇ ಕಾವ್ಯ. ಕಾವ್ಯವೇ ಜೀವನವಾಗಿತ್ತು. ಕಣವಿ ಮೊದಲ ಕವನ ಸಂಕಲನ 'ಕಾವ್ಯಸಾಕ್ಷಿ'ಯಿಂದ ಇತ್ತೀಚಿನ 'ಭೂಮಿ ಬದುಕು' ಸಂಕಲನದವರೆಗೆ ಆರುನೂರು ಕವಿತೆಗಳನ್ನು ರಚಿಸಿದ ಕಣವಿ ಅವರು ಕನ್ನಡದಲ್ಲಿ ಸಮೃದ್ಧವಾದ ಕಾವ್ಯಪರಂಪರೆಯನ್ನು ನಿರ್ಮಿಸಿದವರು.

'ಹೂವು ಹೊರಳುವವು ಸೂರ್ಯನ ಕಡೆಗೆ. ನಮ್ಮ ದಾರಿ ಬರಿ ಚಂದ್ರನವರೆಗೆ' ಪ್ರಸಿದ್ಧವಾದ ಕವಿತೆ. ಮನುಷ್ಯ ಚಂದ್ರನತ್ತ ಪಯಣ ಬೆಳೆಸಿದರೆ ನಿಸರ್ಗ ಸ್ವಯಂಪ್ರಭೆಯ ಸೂರ್ಯನಿಗೆ ಮುಖ ಮಾಡಿದೆ. ಇಂದು ಪ್ರಪಂಚದಲ್ಲಿ ಮನುಷ್ಯ ಅಹಂಕಾರದಿಂದ ನಿಸರ್ಗದ ವಿರುದ್ಧ ಸಾಗುತ್ತಿದ್ದಾನೆ. ಪ್ರಜ್ಞಾ ಪ್ರಕಾಶದಲ್ಲಿ ನಾವು ಮುನ್ನಡೆಯುವ ಅಗತ್ಯವನ್ನು ಅವರು ಪ್ರತಿಪಾದಿಸಿದ್ದಾರೆ. 'ನನ್ನ ನಂಬಿಕೆಯೊಂದು ಆಕಾಶ ನಿಜ ಆದರೆ ತಲೆಬುಡವಿಲ್ಲ. ನಾನೆಷ್ಟು ಬೆಳೆದರೂ ನನಗೆ ನಿಲುಕುವುದಿಲ್ಲ' ಎಂಬುದು ಕಣವಿ ಕಾವ್ಯ ಜಿಜ್ಞಾಸೆಯಾಗಿದೆ.

ವರಕವಿ ಬೇಂದ್ರೆ ಅವರು ಗುರುತಿಸಿದಂತೆ ಚೆನ್ನ–ವೀರ, ಶಿವ–ರುದ್ರ ಹೆಸರಿನಲ್ಲಿ ಅವಿನಾಭಾವ ಸಂಬಂಧವಿದೆ. ಅವರಿಬ್ಬರನ್ನೂ 'ಸಮನ್ವಯ' ಕವಿಗಳೆಂದೂ ಕೆಲವರು ಕರೆದಾಗ ಕಣವಿ ಹಾಗೂ ಶಿವರುದ್ರಪ್ಪ ಇಬ್ಬರೂ ಅದನ್ನು ನಿರಾಕರಿಸಿದರು. ಅವರಿಬ್ಬರದೂ ಅಪೂರ್ವ 'ಸ್ನೇಹ ಕಾರ್ತೀಕ'. ಕಣವಿ ಅವರಿಗೆ 'ನಿಮ್ಮ ಹಾಗೆ ನಿಮ್ಮ ಕವಿತೆ' ಎಂದು ಶಿವರುದ್ರಪ್ಪನವರು ಕವಿತೆಯಲ್ಲಿ ಹೇಳಿದ್ದರೂ ಅವರಿಬ್ಬರ ಕಾವ್ಯದ ದಾರಿ ಬೇರೆಯಾದದ್ದು. ಜನಪರವಾದ ನಿಲುವುಗಳಿಗೆ ಸ್ಪಂದಿಸುತ್ತ ಉದಾರವಾದ ಮಾನವತಾವಾದದಲ್ಲಿ ಕಣವಿ ಅವರು ತಮ್ಮ ಕಾವ್ಯವನ್ನು ನೆಲೆಗೊಳಿಸುತ್ತಾರೆ. ದೇಶದ ಸಮಕಾಲೀನ ಸ್ಥಿತಿಯ ಬಗೆಗೆ ದಟ್ಟವಾದ ವಿಷಾದ ಶಿವರುದ್ರಪ್ಪನವರ ಕವಿತೆ ಪ್ರಕಟಿಸುತ್ತದೆ.

ಕಣವಿ ಅವರು ಕನ್ನಡ ಸಾಂಸ್ಕೃತಿಕ ಪ್ರಪಂಚದ ನಾಯಕರಾಗಿದ್ದರು. ಮೃದು ಮಾತಿನ ಸಜ್ಜನಿಕೆಯ ಕಣವಿ ಅವರು ಕರ್ನಾಟಕದ ತುಂಬಾ ಸಂಚರಿಸಿ ಸಾಹಿತ್ಯ ಪ್ರಸಾರ ಕಾರ್ಯ ನಡೆಸಿದರು. ಯುವ ಮನಸ್ಸುಗಳಿಗೆ ಕಾವ್ಯಪ್ರೀತಿಯನ್ನು ಕಲಿಸಿದರು. ಯಾರೊಡನೆಯೂ ಜಗಳವಾಡದ, ಯಾವುದೇ ವಾಗ್ವಾದದಲ್ಲಿ ಸಿಕ್ಕಿಕೊಳ್ಳದ, ತಮ್ಮ ಸಮತೋಲನವನ್ನು ಕಳೆದುಕೊಳ್ಳದ ವ್ಯಕ್ತಿತ್ವ ಅವರದ್ದಾಗಿತ್ತು. ಹಾಗೆಂದು ಅವರು ಅನ್ಯಾಯದ ವಿರುದ್ಧ ಎಂದೂ ಮೌನಿಯಾಗಿರಲಿಲ್ಲ. ಕರ್ನಾಟಕ ಏಕೀಕರಣ ಚಳವಳಿ, ಗೋಕಾಕ ಚಳವಳಿ, ಕನ್ನಡಪರ ಹೋರಾಟಗಳಲ್ಲಿ ಯಾವಾಗಲೂ ಮುಂಚೂಣಿಯಲ್ಲಿರುತ್ತಿದ್ದರು.

ಗೋಕಾಕ ಚಳವಳಿಯ ಹೋರಾಟದಲ್ಲಿ ಅವರು ಕನ್ನಡಕ್ಕಾಗಿ ಜೈಲು ವಾಸವನ್ನೂ ಅನುಭವಿಸಿದ್ದರು. ಕನ್ನಡ ಶಕ್ತಿಕೇಂದ್ರದ ಅಧ್ಯಕ್ಷರಾಗಿ, ಕೇಂದ್ರ ಕನ್ನಡ ಕ್ರಿಯಾ ಸಮಿತಿಯ ಮಾರ್ಗದರ್ಶಕರಾಗಿ ಭಾಷಾ ಚಳವಳಿಯಲ್ಲಿ ದುಡಿದರು. ಅವರ 'ಹೆಸರಾಯಿತು ಕರ್ನಾಟಕ, ಉಸಿರಾಗಲಿ ಕನ್ನಡ/ ಹಸಿಗೋಡೆಯ ಹರಳಿನಂತೆ ಹುಸಿಹೋಗದ ಕನ್ನಡ' ಗೀತೆ ಗೋಕಾಕ ಚಳವಳಿಯಲ್ಲಿ ರಾಜ್ಯದಾದ್ಯಂತ ಪ್ರಚಾರ ಪಡೆಯಿತು. ಕಣವಿ ಅವರು ಬರೆದ 'ವಿಶ್ವಭಾರತಿಗೆ ಕನ್ನಡದಾರತಿ ಮೊಳಗಲಿ ಮಂಗಳ ಜಯಭೇರಿ' ಗೀತೆ ನನ್ನಲ್ಲಿ ರೋಮಾಂಚನವನ್ನುಂಟು ಮಾಡಿತು ಎಂದು ಕುವೆಂಪು ಅವರ ಉದ್ಗರಿಸಿದ್ದರು.

ಸಿಹಿ ದಾಂಪತ್ಯದ ಸವಿಯೊಂದಿಗೆ ಶಾಂತಾದೇವಿ ಕಣವಿ, ಚೆನ್ನವೀರ ಕಣವಿ

ಚೆನ್ನವೀರ ಕಣವಿ ಅವರು 'ಸುನೀತಗಳ ಸಾಮ್ರಾಟ್' ಎಂದೇ ಪ್ರಸಿದ್ಧರು. ಹೊಸಗನ್ನಡ ಕಾವ್ಯದಲ್ಲಿ ಅವರಷ್ಟು ಸುನೀತಗಳನ್ನು ಬರೆದ ಕವಿ ಇನ್ನೊಬ್ಬರಿಲ್ಲ. ಕಳೆದ ಶತಮಾನದ ನವೋದಯ ಪ್ರಗತಿಶೀಲ, ನವ್ಯ, ನವ್ಯೋತ್ತರ ಚಳವಳಿಗಳಲ್ಲಿ ನಿರಂತರವಾಗಿ ಸುನೀತಗಳನ್ನು ಬರೆಯುತ್ತ ಬಂದ ಚೆನ್ನವೀರ ಕಣವಿ ಅವರು ತಮ್ಮ ಸುನೀತಗಳ ಮೂಲಕ ಒಂದು ಕಲಾಶಾಲೆಯನ್ನೇ ನಿರ್ಮಿಸಿದ್ದಾರೆ. ಬಳ್ಳಾರಿಯ ಲೋಹಿಯಾ ಪ್ರಕಾಶನ ಕಣವಿ ಅವರ 'ಸುನೀತ ಸಂಪದ' (2002) ಮೊದಲ ಆವೃತ್ತಿಯನ್ನು ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತು, 2014ರಲ್ಲಿ ದ್ವಿತೀಯ ಆವೃತ್ತಿಯನ್ನೂ ಪ್ರಕಟಿಸಿವೆ.

'ವ್ಯಕ್ತಿ–ವ್ಯಕ್ತಿತ್ವ' ಭಾಗದಲ್ಲಿ ಬಂದ ನೂರಕ್ಕೂ ಹೆಚ್ಚು ಸುನೀತಗಳು ಕನ್ನಡ ಸಾಹಿತ್ಯ ಪ್ರಪಂಚದ ಮಹಾ ವ್ಯಕ್ತಿಗಳ ಜೀವನ ಸಾಧನೆಯು ಕಾವ್ಯಾಭಿವ್ಯಕ್ತಿಯಾಗಿ ಹೊಮ್ಮಿರುವುದು ಬಹಳ ಮಹತ್ವದ್ದಾಗಿದೆ. 'ನಿಸರ್ಗ ಸ್ಪಂದನ'ದಲ್ಲಿ ಸುಂದರ ಪರಿಸರ ಋತುಮಾನದ ಸೌಂದರ್ಯವನ್ನು ವರ್ಣಿಸುವ ಕವಿತೆಗಳಿವೆ. ಕನ್ನಡದ ಶ್ರೇಷ್ಠ 'ಕವಿ ಕೃತಿ'ಗಳನ್ನು ಓದಿದಾಗ ಉಂಟಾಗುವ ಆನಂದವನ್ನು ಅವರ 'ಕೃತಿ–ಆಕೃತಿ'ಯ ಸುನೀತಗಳು ಹೇಳುತ್ತವೆ. 'ನಿವೇದನೆ' 'ಜಿಜ್ಞಾಸೆ'ಯ ಸುನೀತಗಳಲ್ಲಿಯೂ ಕಣವಿಯವರ ಸುಂದರ ಮನಸ್ಸಿನ ಅಭಿವ್ಯಕ್ತಿಯಿದೆ.

ನಿಸರ್ಗ ಪ್ರೀತಿಯನ್ನು ಕವಿ ಜೀವನದ ಅನಂತ ಪಯಣದುದ್ದಕ್ಕೂ ಕಣವಿ ಅವರು ಸ್ಥಾಯೀಭಾವವಾಗಿ ಪ್ರಕಟಿಸುತ್ತಾ ಬಂದಿದ್ದಾರೆ. ಕನ್ನಡದಲ್ಲಿ ಕುವೆಂಪು ಸೂರ್ಯೋದಯದ ಕವಿ, ಬೇಂದ್ರೆ ಶ್ರಾವಣದ ಕವಿ, ಕಣವಿ ಮಳೆಗಾಲದ ಕವಿ. 'ಒಂದು ಮುಂಜಾವಿನಲಿ ತುಂತುರಿನ ಸೋನೆಮಳೆ ಸೋ ಎಂದು ಶೃತಿ ಹಿಡಿದು ಸುರಿಯುತ್ತಿತ್ತು', 'ಬಾನ ಸಾಣೆಗೆ ಹಿಟ್ಟು ಸಣಿಸಿದಂತೆ ಜಿನುಗಿದೆ ಸೋನೆಯು', 'ಧಾರವಾಡದಲ್ಲಿ ಮಳೆಗಾಲ' ಕವಿತೆಯ ಮೋಹಕ ರೂಪಕಗಳು ಮನಸೆಳೆಯುತ್ತವೆ.

ಕಣವಿ ಅವರಿಗೆ ಹೂವುಗಳೆಂದರೆ ಪಂಚಪ್ರಾಣ. ಮನೆಯ ಹೂದೋಟದಲ್ಲಿ ಅರಳಿದ ಹೂಗಳ ಮಧ್ಯೆ ಹರ್ಷಪಡುತ್ತಿದ್ದರು. ಕಣವಿ ಅವರ ಕವಿತೆಗಳಲ್ಲಿ ವಾತ್ಸಲಭಾವವಿದೆ. ಅವರು ತಮ್ಮ ಮಗಳು 'ರಂಜನಾ'ಳ ಕುರಿತು ಬರೆದ ಕವಿತೆಯಲ್ಲಿ ಎಲ್ಲರ ಮನೆಯ ಮಕ್ಕಳಲ್ಲೂ ಜೀವನೋತ್ಸಹವನ್ನು ಕಾಣುತ್ತಾರೆ. ಬದಲಾಗುತ್ತಿರುವ ಸಾಮಾಜಿಕ ಪರಿಸರಕ್ಕೆ ವ್ಯಗ್ರರಾಗದೆ ಹೊಸ ಪೀಳಿಗೆಯನ್ನು ಸ್ವಾಗತಿಸುವ ಜೀವನದೃಷ್ಟಿ 'ಈಗಿನ ಮಕ್ಕಳು' ಕವಿತೆಯಲ್ಲಿದೆ.

ಕಾಲದ ಅನನ್ಯಶೋಧ ಕಣವಿ ಅವರ ಕಾವ್ಯದ ಮುಖ್ಯ ವಸ್ತುವಾಗಿದೆ. ನಗರದ ಯಾಂತ್ರಿಕ ಬದುಕಿನಲ್ಲಿ ಮನುಷ್ಯ ತನ್ನತನವನ್ನು ಕಳೆದುಕೊಳ್ಳುತ್ತಿದ್ದಾನೆ. ಕಣವಿ ಅವರ 'ಕಾಲ ನಿಲ್ಲುವುದಿಲ್ಲ', 'ಮಧ್ಯಾಹ್ನದ ಮಜಲು', 'ಕಾಲಾತೀತ' ಮೊದಲಾದ ಕವಿತೆಗಳು ಕಾಲದಂಥ ಅಮೂರ್ತ ವಸ್ತುವನ್ನು ಚಿಂತನೆಯ ನಿಕಷಕ್ಕೆ ಒಡ್ಡಿರುವುದು ಗಮನಾರ್ಹವಾಗಿದೆ.

ಚೆನ್ನವೀರ ಕಣವಿ ಅವರು ಸಮಕಾಲೀನ ವಾಸ್ತವಕ್ಕೆ, ಭಾರತದ ಸಮಸ್ಯೆಗಳಿಗೆ ಸದಾ ಸ್ಪಂದಿಸುತ್ತಾ ಬಂದಿದ್ದಾರೆ. ಶೋಷಣೆಯ ವಿರುದ್ಧ ಪ್ರತಿಭಟನೆ, ಸಾಮಾಜಿಕ ಅಸಮಾನತೆಯ ಬಗ್ಗೆ ತೀವ್ರವಾದ ಕಾಳಜಿ, ಭ್ರಷ್ಟಾಚಾರ, ಮೋಸ ವಂಚನೆಯ ವಿರುದ್ಧ ವಿಂಡಬನೆಯ ಪ್ರತಿಕ್ರಿಯೆ ವ್ಯಕ್ತಪಡಿಸುತ್ತ ಬಂದಿದ್ದಾರೆ. ಅವರ ಕವಿತೆಗಳಲ್ಲಿ ಸ್ತ್ರೀಪರ ಕಾಳಜಿ, ಸ್ತ್ರೀ ಸಂವೇದನೆಯ ವಿಚಾರಗಳಿವೆ. ಕಣವಿಯವರ 'ನೀಲಾಂಬಿಕೆ' ಸ್ತ್ರೀಕೇಂದ್ರಿತ ಕವಿತೆಯಾಗಿ ಪ್ರಸಿದ್ಧವಾಗಿದೆ. ಜೀತಪದ್ಧತಿಯ ನರಕಯಾತನೆಯನ್ನು 'ಹಂಗರಹಳ್ಳಿ', 'ಅಂಬೇಡಕರ' ಕವಿತೆಯಲ್ಲಿ ದಲಿತರ ನೋವಿನ ಮಿಡಿತವನ್ನೂ ಕಣವಿ ಕವಿತೆ ಪ್ರತಿಮಿಸಿದೆ. 'ದುಃಖದ ಕಡಲು' ಸುನಾಮಿ ದುರಂತವನ್ನು ಕಾವ್ಯವಾಗಿಸಿದೆ.

ಚೆನ್ನವೀರ ಕಣವಿಯವರು ಸಹೃದಯ ವಿಮರ್ಶಕರೂ ಆಗಿದ್ದರು. ಅವರು ಸಾಹಿತ್ಯ ಚಿಂತನ 'ಕಾವ್ಯಾನುಸಂಧಾನ', 'ಸಮಾಹಿತ', 'ಸಮತೋಲನ', 'ಮಧುರಚೆನ್ನ', 'ವಚನಾಂತರಂಗ', 'ಸಾಹಿತ್ಯ ಸಮಾಹಿತ', 'ಸ್ಮೃತಿಸೌರಭ', 'ಅವಿನಾಭಾವ'ಗಳಲ್ಲಿ ಮಧ್ಯಕಾಲೀನ, ಆಧುನಿಕ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಸಾವಿರಾರು ಪುಟಗಳ ಗದ್ಯ ಸಾಹಿತ್ಯ ವಿಮರ್ಶೆ ಕನ್ನಡಕ್ಕೆ ಕೊಟ್ಟಿದ್ದಾರೆ. 'ಶುಭನುಡಿಯೇ ಹಕ್ಕಿ'ಯಲ್ಲಿ ಹೊಸಕವಿಗಳ ಕವಿತಾ ಸಂಕಲನಗಳಿಗೆ ಮುನ್ನುಡಿ ಬರೆದು ಅವರ ಪ್ರತಿಭೆ ಅರಳುವಂತೆ ಮಾಡಿದ್ದಾರೆ.

ಕಣವಿ ಅವರ ಬಾಳಸಂಗಾತಿ ಶಾಂತಾದೇವಿ ಕಣವಿ ಅವರು ಕನ್ನಡದ ಖ್ಯಾತ ಕಥೆಗಾರ್ತಿಯಾಗಿದ್ದರು. ಎರಡು ವರ್ಷದ ಹಿಂದೆ ಅವರು ಅಗಲಿದಾಗ ಕವಿ ಕಣವಿ ಅವರು ಅಂತರ್ಮುಖಿಯಾದರು. ಇತ್ತೀಚೆಗೆ ಕಣವಿಯವರ ಹೊಸ ಪುಸ್ತಕ 'ಅಭಿನಂದನ' ವಿಮರ್ಶಾಲೇಖನಗಳ ಸಂಗ್ರಹ, ಶಾಂತಾದೇವಿ ಕಣವಿ ಅವರ ಸ್ಮೃತಿ ಸಂಚಯ 'ಸಂಜೆ ಮಲ್ಲಿಗೆ' ಬಿಡುಗಡೆಯ ಸಮಾರಂಭ ಜರುಗಿತು. ಅದೇ ಕವಿ ಕಣವಿ ಅವರು ಭಾಗವಹಿಸಿದ ಕೊನೆಯ ಸಾರ್ವಜನಿಕ ಸಮಾರಂಭವಾಯಿತು.

ಕಣವಿ ಪರಿವಾರ, ಚೆಂಬೆಳಕಿನ ನಿವಾಸ ಈಗ ಶೋಕ ಸಾಗರದಲ್ಲಿ ಮುಳುಗಿದೆ.

ಲೇಖಕ: ಸಾಹಿತಿ, ಕಣವಿ ಅವರ ನಿಕಟವರ್ತಿ

ಕಣವಿಯಂಥವರು ಶತಮಾನಕ್ಕೊಬ್ಬರೆ ...

ಧಾರವಾಡದಲ್ಲಿ ಸಾಹಿತ್ಯ ಸಂಭ್ರಮ ಆರಂಭಿಸಿದಾಗ ಚೆನ್ನವೀರ ಕಣವಿ ಅವರು ಅದರಲ್ಲಿ ಬಹಳ ಸಕ್ರಿಯವಾಗಿ ಭಾಗವಹಿಸಿದ್ದರು. ಅವರು ಸಾಹಿತ್ಯ ಸಂಭ್ರಮದ ಸಲಹಾ ಸಮಿತಿಯ ಗೌರವಾಧ್ಯಕ್ಷರಾಗಿದ್ದರು. ತಮ್ಮ ಸಲಹೆ, ಸೂಚನೆ ಕೊಟ್ಟು ಮಾರ್ಗದರ್ಶನ ಮಾಡುತ್ತಿದ್ದರು. ಹೀಗಾಗಿ ನಿರಂತರವಾಗಿ ಏಳು ವರ್ಷ ಅಷ್ಟೊಂದು ಸಮೃದ್ಧವಾಗಿ ನಡೆದು ಸಾಹಿತ್ಯಾಸಕ್ತರು ಅದರಲ್ಲಿ ಪಾಲ್ಗೊಳ್ಳುವಂತಾಯಿತು.

ಅವರಿಗೆ ಪದ್ಯ ಮಾತ್ರವಲ್ಲ, ಗದ್ಯ ಪುಸ್ತಕವೊಂದನ್ನು ಬರೆದುಕೊಡುವಂತೆ ಪದೇ ಪದೇ ಬೆನ್ನಟ್ಟಿದಾಗ 'ಸ್ಮೃತಿ ಸೌರಭ' ವ್ಯಕ್ತಿ ಚಿತ್ರಣದ ಗದ್ಯ ಸಂಕಲ ಗ್ರಂಥಮಾಲೆಗಾಗಿ ಬರೆದು ಕೊಟ್ಟರು. ನಾವು ಅಷ್ಟೇ ಖುಷಿಯಿಂದ ಪ್ರಕಟಿಸಿದೆವು. ಕಣವಿಯಂಥವರು ಶತಮಾನಕ್ಕೊಬ್ಬರೇ ಹುಟ್ಟುವುದು. ಅವರಂಥ ವ್ಯಕ್ತಿ ನಮ್ಮ ನೆಲದಲ್ಲಿ ಹುಟ್ಟಿದ್ದು ಕನ್ನಡದ ಸುದೈವ.

–ರಮಾಕಾಂತ ಜೋಶಿ, ಮನೋಹರ ಗ್ರಂಥಮಾಲೆ, ಧಾರವಾಡ

ಸುಮ್ಮನಾಯಿತಲ್ಲ ಸುನೀತದ ಧ್ವನಿ

ಕವಿ ಬೇಂದ್ರೆಯವರ ನಂತರ ಧಾರವಾಡದ ಸಾಹಿತ್ಯಕ್ಷೇತ್ರಕ್ಕೆ ಚೆನ್ನವೀರ ಕಣವಿ ಬಹುದೊಡ್ಡ ಕೊಡುಗೆ. ಅವರೊಂದಿಗಿನ ಒಡನಾಟಗಳು ಮನಸ್ಸಿಗೆ ಖುಷಿನೀಡುವಂಥವು. ಸಾಕಷ್ಟು ಗೀತೆ ಬರೆದರು, ನವ್ಯ ಧ್ವನಿ ಉಳಿಸಿಕೊಂಡು ನವೋದಯದ ಜೊತೆಗೆ ಹೆಜ್ಜೆ ಹಾಕಿದರು. ಮಾಸ್ತಿ ಕನ್ನಡದ ಮೊದಲ 'ಸುನೀತ' ಬರೆದರು. ಬೇಂದ್ರೆಯವರು ವ್ಯಕ್ತಿ ಚಿತ್ರಣ ಬರೆದರು. ವಿಶೇಷವಾಗಿ ಕನ್ನಡ ಭಾಷೆ, ಛಂದಸ್ಸು, ಲಯ ಸೇರಿಸಿ ಕಣವಿ 'ಸುನೀತ' ಮುಂದುವರಿಸಿದರು. ಅದರಲ್ಲಿ ಯಶಸ್ಸು ಕಂಡರು.

ತಮ್ಮ ಮೃದು ಮಾತಿನಿಂದ ಎಲ್ಲರನ್ನೂ ಹತ್ತಿರಕ್ಕೆ ಕರೆದುಕೊಂಡರು. ಯಾರೇ ಪದ್ಯ, ಲೇಖನ ಕೇಳಿದರೆ, ಬೆನ್ನುಡಿ, ಹಿನ್ನುಡಿ ಕೇಳಿದರೂ ಇಲ್ಲವೆನ್ನದೇ ಬರೆದುಕೊಡುವ ಗುಣ ಅವರಲ್ಲಿತ್ತು. ಅಂತಹ ಸರಳ ಸಜ್ಜನಿಕೆ ಅವರದ್ದು. ಬೇಂದ್ರೆ ಅವರದ್ದು ಆವೇಶದ ಕವನ ವಾಚನವಾದರೆ, ಕಣವಿ ಅವರದ್ದು ಧ್ವನಿ ಮತ್ತು ಅರ್ಥಕ್ಕೆ ಸಂಬಂಧಪಟ್ಟು ಕವಿತೆ ವಾಚನ. ಅದನ್ನು ನಾವು ಅವರಿಂದ ಕಲಿತೆವು. ಎಂದೂ ಯಾರನ್ನೂ ಎದುರು ಹಾಕಿಕೊಳ್ಳದ ಗುಣ ಅವರಲ್ಲಿತ್ತು. ಇತ್ತೀಚಿನ ವರ್ಷಗಳಲ್ಲಿ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಎಲ್ಲ ಗೌರವಾದರಗಳನ್ನೂ ಪಡೆದ, ತನ್ನ ಹೆಸರನ್ನು ಉಳಿಸಿಕೊಂಡಿದ್ದ ಕವಿ, ಸಾಹಿತಿಯಿದ್ದರೆ ಅದು ಕಣವಿಯವರು ಅನ್ನಬಹುದು.

–ಡಾ.ಸಿದ್ಧಲಿಂಗ ಪಟ್ಟಣಶೆಟ್ಟಿ, ಕವಿ, ನಾಟಕಕಾರ

ಚಿರನಿದ್ರೆಗೆ ಜಾರಿದ ಕಣವಿ

ಒಂದನೇ ಪುಟದಿಂದ...

ಬಂಗಾರ ಪ್ರಶಸ್ತಿ, ದುಬೈ ಯುಎಇ ಕನ್ನಡ ಸಂಘದ ಕನ್ನಡ ರತ್ನ ಸೇರಿದಂತೆ ಹಲವು ಪ್ರಶಸ್ತಿಗಳು ಅವರಿಗೆ ಸಂದಿವೆ.

ನಮನ: ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಜಿಲ್ಲಾ ಉಸ್ತುವಾರಿ ಸಚಿವ ಹಾಲಪ್ಪ ಆಚಾರ್, ಶಾಸಕ ಅರವಿಂದ ಬೆಲ್ಲದ, ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯ ಘಟಕದ ಅಧ್ಯಕ್ಷ ಮಹೇಶ ಜೋಶಿ, ಸಾಹಿತಿಗಳಾದ ಕುಂ. ವೀರಭದ್ರಪ್ಪ, ಅಲ್ಲಮಪ್ರಭು ಬೆಟ್ಟದೂರು, ಜಿಲ್ಲಾಧಿಕಾರಿ ನಿತೇಶ್ ಪಾಟೀಲ, ಎಸ್ಪಿ ಪಿ. ಕೃಷ್ಣಕಾಂತ್, ಜಿ.ಪಂ. ಕಾರ್ಯನಿರ್ವಾಹಕ ಅಧಿಕಾರಿ ಡಾ.ಸುರೇಶ ಇಟ್ನಾಳ ಸೇರಿದಂತೆ ಸಾಹಿತಿಗಳು, ಗಣ್ಯರು, ಅಭಿಮಾನಿಗಳು, ವಿದ್ಯಾರ್ಥಿಗಳು ಹಾಗೂ ಸಂಬಂಧಿಕರು ಕಣವಿ ಅವರಿಗೆ ಅಂತಿಮ ನಮನ ಸಲ್ಲಿಸಿದರು.

ಡಾ. ಚೆನ್ನವೀರ ಕಣವಿ ಅವರ ಅಂತ್ಯಕ್ರಿಯೆಯಲ್ಲಿ ಪುತ್ರರಾದ ಶಿವಾನಂದ, ಚಂದ್ರಮೌಳಿ ಅಂತಿಮನಮನ ಸಲ್ಲಿಸಿದರು ಪ್ರಜಾವಾಣಿ ಚಿತ್ರ: ಬಿ.ಎಂ. ಕೇದಾರನಾಥ

ಎಂ.ಎಂ. ಕಲಬುರ್ಗಿ, ಚೆನ್ನವೀರ ಕಣವಿ, ದೇಜಗೌ ಮಾತಿನಲಿ ನಗುವಿನ ಹೊಳೆ ಹರಿಸಿದಾಗ (ಸಂಗ್ರಹ ಚಿತ್ರ)

ಶಿಕ್ಷಣ ಮಾಧ್ಯಮ; ಕಟು ನುಡಿ

ಕನ್ನಡ ಶಾಲೆಗಳ ವಿಲೀನ, ಸರ್ಕಾರಿ ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮ ಆರಂಭ ಕುರಿತ ಸರ್ಕಾರದ ನಿಲುವನ್ನು ಕಣವಿ ಅವರು ಅನೇಕ ಸಲ ಟೀಕಿಸಿದ್ದರು. ಕನಿಷ್ಠ 10ನೇ ತರಗತಿವರೆಗಾದರೂ ಮಕ್ಕಳ ಕಲಿಕೆ ಮಾತೃಭಾಷಾ ಮಾಧ್ಯಮದಲ್ಲಿರಬೇಕು ಎನ್ನುವುದು ಅವರ ಆಶಯ. ಈ ಕುರಿತು ಅಖಿಲ ಕರ್ನಾಟಕ ಕೇಂದ್ರ ಕನ್ನಡ ಕ್ರಿಯಾ ಸಮಿತಿ ರಚಿಸಿ ಸಭೆ ನಡೆಸಿದ್ದ ಅವರು, 'ಕನ್ನಡ ಶಾಲೆಗಳನ್ನು ಮುಚ್ಚುವ ಮೊದಲು ಸರ್ಕಾರ ಆತ್ಮಾವಲೋಕನ ಮಾಡಿಕೊಳ್ಳಬೇಕು' ಎಂದು ಖಾರವಾಗಿ ನುಡಿದಿದ್ದರು.

'ಭಾಷಾ ಮಾಧ್ಯಮ ವಿಚಾರವಾಗಿ ಕಾನೂನು ಹೋರಾಟದಲ್ಲಿ ಹಿನ್ನಡೆಯಾಗಿದೆ. ಸಮಾನತೆ ಹಾಗೂ ಸಾಮಾಜಿಕ ನ್ಯಾಯದ ತಳಹದಿ ಮೇಲೆ ಕನಿಷ್ಠ 10ನೇ ತರಗತಿವರೆಗಾದರೂ ಮಕ್ಕಳ ಕಲಿಕೆ ಮಾತೃಭಾಷಾ ಮಾಧ್ಯಮದಲ್ಲಿರಬೇಕು' ಎಂದು ಆಗ್ರಹಿಸಿದ್ದರು.



ಕಲೆ: ಗುರು ನಾವಳ್ಳಿ

ಜನಶಿಕ್ಷಣ ಕಾರ್ಯ...

ಚೆನ್ನವೀರ ಕಣವಿ ಅವರು ಕನ್ನಡ ನಾಡಿನಲ್ಲಿ ಕಾವ್ಯ ಸಂಸ್ಕೃತಿ ನಿರ್ಮಾಣ ಮಾಡಿದಂತೆ, ಪುಸ್ತಕ ಸಂಸ್ಕೃತಿಯ ಪ್ರಸಾರವನ್ನೂ ಮಾಡಿದರು. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಪ್ರಸಾರಂಗದ ಮೊದಲ ನಿರ್ದೇಶಕರಾಗಿ 500ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದರು. ಗ್ರಾಮಾಂತರ ಪ್ರದೇಶದಲ್ಲಿ ಪ್ರಚಾರೋಪನ್ಯಾಸ ನಡೆಸಿ ಜನಶಿಕ್ಷಣ ಕಾರ್ಯ ಮಾಡಿದರು. ಕನ್ನಡ ಅಧ್ಯಾಪಕರ ಪರಿಷತ್ತಿನ ಸಮಾವೇಶ ಮತ್ತು ಹೋರಾಟಗಳಲ್ಲಿ ಭಾಗವಹಿಸಿ ಮಾರ್ಗದರ್ಶನ ಮಾಡುತ್ತಿದ್ದರು.

ಪ್ರಶಸ್ತಿಯ ಅರ್ಧಮೊತ್ತ ಸಂತ್ರಸ್ತರಿಗೆ...

ಚೆನ್ನವೀರ ಕಣವಿ ಅವರಿಗೆ 2019ರಲ್ಲಿ 'ನೃಪತುಂಗ ಪ್ರಶಸ್ತಿ' ಬಂತು. ಪ್ರಶಸ್ತಿಯ ಅರ್ಧ ಮೊತ್ತವನ್ನು ನೆರೆಯ ಹಾವಳಿಯಿಂದ ಬಳಲಿದ ಬಡ ಸಂತ್ರಸ್ತರಿಗೆ ನೀಡಲು ಸರ್ಕಾರಕ್ಕೆ ಕೊಟ್ಟರು. ತಮಗೆ ಸನ್ಮಾನದ ಸಂದರ್ಭದಲ್ಲಿ ಹೊದಿಸಿದ ಶಾಲುಗಳನ್ನು ಅನಾಥಾಲಯಕ್ಕೆ ಹೋಗಿ ಕೊಡುತ್ತಿದ್ದರು. ಇದು ತಮ್ಮ ಸಾಮಾಜಿಕ ಋಣಸಂದಾಯದ ಭಾಗ ಎಂದು ಅವರು ಹೇಳುತ್ತಿದ್ದರು.

ಸೌಮ್ಯಕವಿಯ ಕಠೋರ ಟೀಕೆ

ರಾಜಕೀಯ ಭ್ರಷ್ಟಾಚಾರದ ಕುರಿತು ಕಣವಿ ಅವರು ತುಸು ಖಾರವಾಗಿಯೇ ಕವಿತೆಗಳನ್ನು ರಚಿಸಿದ್ದಾರೆ. ತಮ್ಮ ಕಠೋರ ವ್ಯಂಗ್ಯದ ನುಡಿಯಲ್ಲಿ ರಾಜಕೀಯವನ್ನು ಟೀಕಿಸಿದ್ದಾರೆ. 'ನಾಡಿನ ತುಂಬ ನೂರು ಜಗದ್ಗುರು/ ಇರುವುದ ಜಗವೊಂದೇ/ ಕಾಡಿನ ತುಂಬ ಬಣ್ಣದ ಹೂಗಳು/ ವಾಸನೆ ಕೆಲವೊಂದೇ; ಬತ್ತಿಹೋದ ಕೆರೆಯಲ್ಲಿ ಬಂಗಲೆಗಳು ಎದ್ದಿವೆ/ ಜಲದೇವತೆಗೆ ಎಷ್ಟೊಂದು ಗೋರಿಗಳು...' ಎಂಬ ಸಾಲುಗಳು ಇದಕ್ಕೆ ಪುರಾವೆ ಒದಗಿಸುತ್ತವೆ.

ಬೆರಗಿನ ಬೆಳಕು

ಗುರುರಾಜ ಕರಜಗಿ

ನಿರಪೇಕ್ಷ ಬದುಕು

ಆರಣ್ಯಕದ ಪುಷ್ಪಗಳ ಮೂಸುವವರಾರು ? |
ಆರಿಹರು ಪತಗದುಡುಪನು ಹುಡುಕಿ ಮೆಚ್ಚಲ್ ? ||
ಬೇರೊಬ್ಬರೆಣಿಕೆಯಿಲ್ಲದೆ ಪ್ರಕೃತಿ ತನಗೆಂದೆ |
ಸ್ವಾರಸ್ಯವೆಸಗುವಳೊ ! – ಮಂಕುತಿಮ್ಮ || 566 ||

ಪದ-ಅರ್ಥ: ಆರಣ್ಯಕದ = ಅರಣ್ಯದ, ಆರಿಹರು = - ಯಾರಿದ್ದಾರೆ, ಪತಗದುಡುಪನು = ಪತಗದ (ಪತಂಗದ) + ಉಡುಪನು, ಮೆಚ್ಚಲ್ = ಮೆಚ್ಚಲು, ಬೇರೊಬ್ಬರೆಣಿಕೆಯಿಲ್ಲದೆ = ಬೇರೊಬ್ಬರ + ಎಣಿಕೆ + ಇಲ್ಲದೆ, ಸ್ವಾರಸ್ಯವೆಸಗುವಳೊ = ಸ್ವಾರಸ್ಯವ + ಎಸಗುವಳೊ.

ವಾಚ್ಯಾರ್ಥ: ಅಡವಿಯಲ್ಲಿರುವ ಹೂವುಗಳನ್ನು ಮೂಸುವವರು ಯಾರು? ಪತಂಗದ ಉಡುಪುಗಳನ್ನು ಹುಡುಕಿ ಮೆಚ್ಚಲು ಯಾರಿದ್ದಾರೆ? ಮತ್ತೊಬ್ಬರ ಮೆಚ್ಚುವಿಕೆಯಿಲ್ಲದೆ ಪ್ರಕೃತಿ ತನಗಾಗಿಯೇ ಅನೇಕ ಸ್ವಾರಸ್ಯಗಳನ್ನು ಉಂಟು ಮಾಡುತ್ತಾಳೆ.

ವಿವರಣೆ: ನನಗೆ ಈ ಕಗ್ಗ ಯಾವಾಗಲೂ ಅತ್ಯಂತ ಅಧ್ಯಾತ್ಮಿಕ ಅನುಭವವನ್ನು ನೀಡುತ್ತದೆ. ಸಾಮಾನ್ಯವಾಗಿ ಇದು ಕಗ್ಗದ ವೈಶಿಷ್ಟ್ಯ. ಅದು ಮೇಲ್ನೋಟಕ್ಕೆ ಒಂದರ್ಥವನ್ನು ನೀಡಿದರೆ, ಸ್ವಲ್ಪ ಒಳಹೊಕ್ಕು ನೋಡಿದರೆ ಅತ್ಯಂತ ಮಾರ್ಮಿಕವಾದ ಅರ್ಥವನ್ನು ಹೊಳೆಯಿಸುತ್ತದೆ.

ಈ ಕಗ್ಗದಲ್ಲಿ ಕಣ್ಣಿಗೆ ಕಾಣದ ಚಮತ್ಕಾರವನ್ನು ಯಾರು ಮೆಚ್ಚುತ್ತಾರೆ ಎಂಬ ಭಾವವಿದೆ. ದಟ್ಟವಾದ ಕಾಡಿನಲ್ಲಿ ಅನೇಕಾನೇಕ ಹೂವುಗಳು ಅರಳಿ ನಿಂತಿವೆ. ಅವುಗಳ ಮೃದುತ್ವವನ್ನು, ಬಣ್ಣವನ್ನು, ಸುವಾಸನೆಯನ್ನು, ಚೆಂದವನ್ನು ಗಮನಿಸುವವರು ಯಾರೂ ಇಲ್ಲ. ಅದು ವ್ಯರ್ಥವಾಯಿತು ಎಂದು ಜನರು ಭಾವಿಸುತ್ತಾರೆ. ಯಾಕೆಂದರೆ ಚಪ್ಪಾಳೆ ತಟ್ಟಿದರೆ ಕಲಾವಿದರಿಗೆ ಸಂತೋಷ. ಚಿತ್ರಕಲೆಯನ್ನು ಮೆಚ್ಚಿ ಪ್ರಶಸ್ತಿ ನೀಡಿದರೆ ಚಿತ್ರಕಾರನಿಗೆ ತೃಪ್ತಿ. ನೋಡುವವರೇ ಇಲ್ಲದೆ ಹೋದರೆ ಆಟಗಾರನಿಗೇನು ಸಮಾಧಾನವಾದೀತು? ಅಂದರೆ ನಮ್ಮ ಸಾಮಾನ್ಯ ಪ್ರಪಂಚದಲ್ಲಿ ಯಾರೂ ಗುರುತಿಸದಿದ್ದರೆ, ಮೆಚ್ಚದಿದ್ದರೆ ಪ್ರಯತ್ನ ನಿಷ್ಪ್ರಯೋಜಕ ಎಂಬ ಭಾವ ಬಲಿತಿದೆ. ಯಾರಿಗೋಸ್ಕರ ಮಾಡಬೇಕು ಎನ್ನಿಸುತ್ತದೆ. ಅಂತೆಯೇ ಅದೇ ಕಾಡಿನಲ್ಲಿ ಹೂವಿನಿಂದ ಹೂವಿಗೆ ಹಾರುವ ಪತಂಗದ ರೆಕ್ಕೆಗಳ ಮೇಲಿನ ಸುಂದರ ಚಿತ್ತಾರಗಳನ್ನು ಮೆಚ್ಚುವವರು ಯಾರು? ಅದನ್ನು ಕಗ್ಗ ಕಾವ್ಯಾತ್ಮಕವಾಗಿ 'ಪತಗದ ಉಡುಪನು' ಎನ್ನುತ್ತದೆ. ಪತಂಗ ಹೊಸ ಹೊಸ ಉಡುಪುಗಳನ್ನು ತೊಡುವುದು ಹಾರಾಡುವುದು ಯಾರಿಗಾಗಿ? ನಾವೆಲ್ಲ ಅಲಂಕಾರ ಮಾಡಿಕೊಳ್ಳುವುದು, ಹೊಸ ಹೊಸ ಬಟ್ಟೆಗಳನ್ನು ಹಾಕಿಕೊಳ್ಳುವುದು ಚೆಂದ ಕಾಣಲಿ ಎಂದಲ್ಲವೆ? ಚೆಂದ ಕಾಣುವುದು ಯಾರಿಗೆ?

ಹಾಗಾದರೆ ಚೆಂದ ಕಾಣುವುದಕ್ಕೆ, ಒಳ್ಳೆಯದನ್ನು ಮಾಡುವುದಕ್ಕೆ ಏನಾದರೂ ಕಾರಣವಿರಬೇಕು ಅಲ್ಲವೆ? ಆದರೆ ಕಾಡಿನ ವಿಷಯ ಹಾಗಲ್ಲ. ಪ್ರಕೃತಿ ಯಾರನ್ನೂ ಮೆಚ್ಚಿಸಲು ನೋಡುವುದಿಲ್ಲ. ಅದು ಏನು ಮಾಡಿದರೂ ತನ್ನ ತೃಪ್ತಿಗೆಂದೇ ಎಲ್ಲವನ್ನು ತುಂಬ ಸ್ವಾರಸ್ಯವಾಗಿ ಮಾಡುತ್ತದೆ.

ಇದು ನಮಗೊಂದು ಸುಂದರ ಪಾಠ. ಬದುಕಿನಲ್ಲಿ ಅದೆಷ್ಟೋ ಜನರಿದ್ದಾರೆ. ಅವರು ಇದ್ದಾರೆಂಬುದೇ ನಮಗೆ ತಿಳಿದಿಲ್ಲ. ಆದರೆ ನಮ್ಮ ಬದುಕಿಗೆ, ಸಂತೋಷಕ್ಕೆ ಅವರ ಕಾಣಿಕೆ ತುಂಬ ದೊಡ್ಡದು. ಅವರು ಮಾಡುವ ಕಾರ್ಯಕ್ಕೆ ಯಾರೊಬ್ಬರ ಮೆಚ್ಚುಗೆ, ಮರ್ಯಾದೆ ದೊರೆಯಲಿಕ್ಕಿಲ್ಲ. ಆದರೆ ಅವರು ಮಾಡುವುದೆಲ್ಲ ತಮ್ಮ ಆತ್ಮತೃಪ್ತಿಗೆ. ಶಿವರುದ್ರಪ್ಪನವರ ಕೋಗಿಲೆ ಹೇಳುವುದೂ ಇದನ್ನೇ ಅಲ್ಲವೆ? 'ಎಲ್ಲ ಕೇಳಲಿ ಎಂದು ನಾನು ಹಾಡುವುದಿಲ್ಲ.... ಹಾಡು ಹಕ್ಕಿಗೆ ಬೇಕೆ ಬಿರುದು ಸನ್ಮಾನ?'. ಅದು ಬಿರುದಿಗೆ, ಸನ್ಮಾನಕ್ಕೆ ಹಾಡುವುದಿಲ್ಲ. ಹಾಡುವುದು ಕೇವಲ ಆತ್ಮತೃಪ್ತಿಗೆ. ಕಗ್ಗದ ಆಶಯವಿರುವುದು, ಈ ತರಹದ ಮನಸ್ಥಿತಿ ನಮಗೆಲ್ಲ ಸಾಧ್ಯವಾದೀತೇ? ಹಾಗಾದರೆ ಕಾಡು ಹೂವಿನ ಹಾಗೆ, ಪತಂಗದ ಹಾಗೆ ನಿರಪೇಕ್ಷೆಯಿಂದ ಬದುಕಬಹುದಲ್ಲವೆ? ನಿರೀಕ್ಷೆಗಳಿಂದ, ಅಪೇಕ್ಷೆಗಳಿಂದ ಬದುಕು ಭಾರವಾಗದೆ ಉಳಿಯಬಹುದು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಗುರುವಾರ ಫೆಬ್ರುವರಿ 17, 2022

ಶ್ರೀ ಪ್ಲವನಾಮ ಸಂವತ್ಸರ ಉತ್ತರಾಯಣ – ಶಿಶಿರ ಋತು ಕುಂಭ ಮಾಸದ 05 ನೇ ದಿನ
ತಿಥಿ: (ಮಾಘ ಕೃಷ್ಣ) ಪ್ರತಿಪದ್ ಗಂ. 22-41 ನಕ್ಷತ್ರ: ಮಘಾ ಗಂ. 16-11 ಯೋಗ: ಅತಿಗಂಡ ಗಂ. 19-46, ಕರಣ: ಬಾಲವ ಗಂ. 10-37. ರಾಹುಕಾಲ : ಮಧ್ಯಾಹ್ನ 01:30 – 03:00 ಸೂರ್ಯೋದಯ : 06-56 ಸೂರ್ಯಾಸ್ತ : 06-33 ಮುಸ್ಲಿಂ ದಿನಾಂಕ : 15 ರಜಬ್ ದಿನ ವಿಶೇಷ : ಮಾಸಿ ಮಾಘಂ ಅದೃಷ್ಟ ಸಂಖ್ಯೆ: 7, 12

ಮೇಷ: ನೂತನ ಗೃಹನಿರ್ಮಾಣ ಆಲೋಚನೆಯು ಕುಟುಂಬದ ಸದಸ್ಯರ ಸಂತಸಕ್ಕೆ ಕಾರಣವಾಗುತ್ತದೆ. ನೀವು ಧರ್ಮ-ಕರ್ಮಗಳಲ್ಲಿ ಆಸಕ್ತಿ ತೋರಿದರೆ, ಕಾರ್ಯಕ್ಷೇತ್ರದಲ್ಲಿ ಹಾಗು ಜೀವನದಲ್ಲಿ ಅಭೀಷ್ಟ ಪಡೆಯಬಹುದು.

ವೃಷಭ: ನಿಮ್ಮ ಪ್ರಾಮಾಣಿಕತೆಗೆ ತಕ್ಕ ಫಲವನ್ನು ಪಡೆಯುತ್ತೀರಿ. ಹೊಸ ವಾಹನ ಖರೀದಿಗೆ ಯೋಚಿಸಿದವರು ಸ್ವಲ್ಪ ದಿನಗಳ ಮಟ್ಟಿಗೆ ತಟಸ್ಥರಾಗಿರಿ. ಒಂದು ಶಿಶುವಿನ ಜನನ ಕುಟುಂಬದ ಸರ್ವರ ಸಂತೋಷಕ್ಕೆ ಕಾರಣವಾಗುತ್ತದೆ.

ಮಿಥುನ: ಆತ್ಮೀಯರಲ್ಲಿ ನಿಮ್ಮ ಭಾವನೆಗಳನ್ನು ಹಂಚಿಕೊಳ್ಳಲು ಸೂಕ್ತವಾದ ಸಮಯ ದೊರಕುವುದು. ವೃತ್ತಿಪರ ಅಧಿಕಾರಕ್ಕಾಗಿ ಸಮಬಲ ಹೋರಾಟ ನಡೆಸುವುದರಲ್ಲಿ ತಪ್ಪಿಲ್ಲ. ಸಂಸಾರದ ಜವಾಬ್ದಾರಿ ಹೆಚ್ಚಲಿದೆ.

ಕರ್ಕಾಟಕ: ಯಂತ್ರಗಳನ್ನು ಬಳಸುವಾಗ ತೊಂದರೆಯಾಗುವ ಸಂಭವವಿದೆ. ತೈಲ ವ್ಯಾಪಾರ ಮಾಡುವವರಿಗೆ ಅಧಿಕ ಲಾಭ. ಹಠ ಸ್ವಭಾವವನ್ನು ಕಡಿಮೆ ಮಾಡುವ ಬಗ್ಗೆ ತೀರ್ಮಾನಿಸಿ. ಗುರು ಹಿರಿಯರ ಆಶೀರ್ವಾದ ಫಲಿಸಲಿದೆ.

ಸಿಂಹ: ಮಾನಸಿಕ ಅಸ್ಥಿರತೆ ಹಾಗೂ ಋಣಾತ್ಮಕ ಚಿಂತನೆ ಆಗಾಗ ಕಾಡಲಿದೆ. ವೃತ್ತಿಯಲ್ಲಿ ಶ್ರಮಪಡುವ ಮನೋಭಾವ ಬೆಳೆಸಿಕೊಳ್ಳಿರಿ. ದೇಹದಲ್ಲಿ ರಕ್ತದ ಒತ್ತಡ ಅಥವಾ ಮೂತ್ರ ಸಂಬಂಧದ ದೋಷಗಳ ಬಗ್ಗೆ ಜಾಗ್ರತೆ ವಹಿಸಿ.

ಕನ್ಯಾ: ಈ ದಿನ ನಿಮ್ಮನ್ನು ಎದುರಾಕಿಕೊಳ್ಳುವವರಿಗೆ ತಕ್ಕ ಉತ್ತರವನ್ನು ದೇವರು ನೀಡುತ್ತಾನೆ. ವಿದ್ಯಾಭ್ಯಾಸದಲ್ಲಿನ ನಿಮ್ಮ ಸಾಧನೆಗೆ ಗುರುಗಳ ಕಡೆಯಿಂದ ಪ್ರೋತ್ಸಾಹ ಸಿಗುವುದು. ಪೀಠೋಪಕರಣಗಳ ಖರೀದಿಗೆ ಶುಭ ದಿನ.

ತುಲಾ: ಹಿಂದೆ ನೀವು ಇತರರಿಗೆ ಕೊಟ್ಟ ಹಣ ಇಂದು ಹಿಂದಿರುಗಿ ಬರುವ ಸೂಚನೆ ಇದೆ. ಕೃಷಿ ಕಾರ್ಯ ವಿಳಂಬವಾಗದಂತೆ ಗಮನವಹಿಸಿ. ಸಭೆ ಸಮಾರಂಭಗಳಲ್ಲಿ ಭಾಗವಹಿಸುವುದರ ಜೊತೆಯಲ್ಲಿ ಜವಾಬ್ದಾರಿ ಹೊರಬೇಕಾಗುವುದು.

ವೃಶ್ಚಿಕ: ಹಿಂದಿನ ದಿನಗಳಿಗೆ ಹೋಲಿಸಿದರೆ ಈ ದಿನ ಸಂಸಾರ ನಿರ್ವಹಣೆ ಸುಲಭವೆನಿಸುವುದು. ಜೀವನದಲ್ಲಿನ ಸಂತೋಷ ಪಡೆಯಲು ಸಾಕಷ್ಟು ಅವಕಾಶಗಳು ಲಭಿಸಲಿವೆ. ವ್ಯಸನಗಳಿಗೆ ಒಳಗಾಗುವ ಪರಿಸ್ಥಿತಿ ತಪ್ಪಿಸಿಕೊಳ್ಳಿರಿ.

ಧನು: ಷೇರು ಖರೀದಿಯಿಂದ ಲಾಭ. ಸ್ವತ್ತು ವಿಚಾರದಲ್ಲಿ ಬಂಧುಗಳು ನೆರವಿಗೆ ಬರಲಿದ್ದು ತಂದೆಯವರ ಮಾತಿನಂತೆ ನಡೆಯುವುದು ಉತ್ತಮ. ದೇವತಾ ಕಾರ್ಯಗಳಿಗಾಗಿ ಪ್ರಯಾಣ ಮಾಡಬೇಕಾಗುವುದು.

ಮಕರ: ಗೃಹ ನಿರ್ಮಾಣ ಕಾರ್ಯವು ನಿಧಾನಗತಿಯಲ್ಲಿ ಸಾಗುವುದರಿಂದ ಮನಸ್ಸಿಗೆ ತುಸು ತಳವಳ, ಆತಂಕ ಮೂಡಲಿದೆ. ವಿನೂತನ ಕೆಲಸ ಪ್ರಾರಂಭಿಸಲು ಸ್ನೇಹಿತರ ಒತ್ತಾಯ. ರಿಯಲ್ ಎಸ್ಟೇಟ್‌ನಿಂದ ಲಾಭ.

ಕುಂಭ: ಆರೋಗ್ಯದಲ್ಲಿ ಹಿಂದಿಗಿಂತಲೂ ಸುಧಾರಣೆ. ದುಡುಕು ನಿರ್ಧಾರಗಳಿಂದ ಕೋರ್ಟ್ ವ್ಯವಹಾರದಲ್ಲಿ ಸೋಲಿನ ಕಹಿ . ಇತರರ ಮಾತನ್ನು ಪರಾಮರ್ಶಿಸುವುದರ ಜೊತೆಗೆ ಮನ್ನಣೆಯೂ ಇರಲಿ.

ಮೀನ: ಸಾಮಾಜಿಕ ಕ್ಷೇತ್ರದಲ್ಲಿನ ಸಮರ್ಥ ಕಾರ್ಯನಿರ್ವಹಣೆಯು ಕೆಟ್ಟ ಜನರ ದೃಷ್ಟಿ ದೋಷಕ್ಕೆ ಕಾರಣವಾಗುವುದು. ಶ್ರಮದ ಕೆಲಸ ಕಡಿಮೆಯಾಗಲಿವೆ. ಕೆಲಸಗಳು ಪೂರ್ವ ಯೋಜನೆಯಂತೆ ನಡೆಯುವುದು ಕಷ್ಟ.

ಪದಬಂಧ 4872

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಅಭ್ಯಾಸ ಮಾಡುವವನು (3)
3.ಸಂತನಿದಾದ ಆನಂದ (3)
5.ಸರಕ್ಕನೆ ಧರಿಸಿಕೊಂಡಿರುವ ಮಾಲೆ (2)
6.ದೇವರಿಗೆ ಬೆಳಗುವ ಸುಗಂಧ ದ್ರವ್ಯ (3)
7.ತಿರುಗಿ ನಿಂತಿರುವ ಹೆಂಡತಿ (2)
9.ನಗರದಲ್ಲಿರುವ ಆಭರಣ (2)
11.ಪುಷ್ಪಗಳನ್ನು ಜೋಡಿಸಿಡುವ ಕರಂಡಕ (3)
13.ಜವಾನನ ಹತ್ತಿರ ನೆರೆದ ಮಂದಿ! (2)
14.ಹೆದರಿಕೆ ಈ ರೀತಿ ಬಂದಿದೆಯಲ್ಲಾ? (3)
15.ಇದು ಹೊಸದು (3)

ಮೇಲಿಂದ ಕೆಳಕ್ಕೆ
1.ಅಕಾರ ಮೊದಲಾದ ವರ್ಣ (3)
2.ಈತ ಬಲು ಕೋಪಿಷ್ಠ (3)
3.ಸಾರವಿರುವ ಕುಟುಂಬ (3)
4.ಸತಿಯ ಹತ್ತಿರವಿರುವ ಉಪಪತ್ನಿ (3)
5.ಒಂದೇ ಕಾಲದಲ್ಲಿದ್ದವನು (5)
8.ಕಡಲಿನ ಮೇಲೆ ಕೈಗೊಳ್ಳುವ ಪಯಣ (5)
10.ಗಣಿಯ ಬಳಿ ಕಲಿತ ಲೆಕ್ಕ ಶಾಸ್ತ್ರ (3)
11.ಇದು ಪುಷ್ಪದ ಶರ (3)
12.ತಡ ಎಂದು ಹೀಗೆ ಹೇಳಿ (3)
13.ಜನರ ನಡುವಿರುವ ಆಳು (3)



4871ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಕಳಪೆಮಾಲು 3.ಆಸರೆ
5.ತಲೆಬರಹ 7.ರಟ್ಟು
9.ಹಗಲು 11.ಕಸ
13.ಪರಮಹಂಸ
15.ಸಂಕುಲ 16.ವರದಿಗಾರ

ಮೇಲಿಂದ ಕೆಳಕ್ಕೆ:
1.ಕಸವರ 2.ಮಾವುತ
4.ಸನ್ನಾಹ 6.ಬಯಲು 8.ಟ್ಟುಗು
9.ಹರಾಮ 10.ಬಿಂಕ
12.ಸದಾಚಾರ 13.ಪರಾಕು
14.ಸಸಾರ

ಸುಡೊಕು 5258

	3		4			2		7
7		4		3			5	
			1			8		3
		7		4				
3		2	9		1			
				6				2
1		8	3		4			5
	2					9	7	8
6		9		2			3	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5257 ಸುಡೊಕು

8	4	5	1	2	6	7	9	3
6	2	9	5	3	7	1	4	8
1	3	7	9	8	4	6	2	5
2	7	8	4	9	1	5	3	6
5	9	3	6	7	8	2	1	4
4	1	6	2	5	3	8	7	9
7	6	4	8	1	9	3	5	2
9	5	1	3	6	2	4	8	7
3	8	2	7	4	5	9	6	1

ಕುಸಿದ ಸೆನ್ಸೆಕ್ಸ್, ನಿಫ್ಟಿ

ಮುಂಬೈ (ಪಿಟಿಐ): ರಷ್ಯಾ ಮತ್ತು ಉಕ್ರೇನ್ ನಡುವಿನ ಬಿಕ್ಕಟ್ಟು ಕಡಿಮೆ ಆಗಿದ್ದರೂ, ಜಾಗತಿಕ ಷೇರುಪೇಟೆಗಳಲ್ಲಿ ಸಕಾರಾತ್ಮಕ ವಹಿವಾಟು ನಡೆದಿದ್ದರೂ ಬುಧವಾರದ ವಹಿವಾಟಿನಲ್ಲಿ ದೇಶಿ ಷೇರು ಮಾರುಕಟ್ಟೆಗಳು ಕುಸಿತ ದಾಖಲಿಸಿದವು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 145 ಅಂಶ ಇಳಿಕೆ ದಾಖಲಿಸಿತು. ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 30 ಅಂಶ ಇಳಿಯಿತು. 'ದೇಶದ ಷೇರು ಮಾರುಕಟ್ಟೆಗಳು ಈಗ ಜಾಗತಿಕ ವಿದ್ಯಮಾನಗಳಿಗೆ ಅನುಗುಣವಾಗಿ ಏರಿಕೆ, ಇಳಿಕೆ ಕಾಣುತ್ತಿವೆ. ಈ ಪರಿಸ್ಥಿತಿಯು ಕೆಲವು ಕಾಲ ಮುಂದುವರಿಯುವ ಸಾಧ್ಯತೆ ಇದೆ' ಎಂದು ರೆಲಿಗೇರ್ ಬ್ರೋಕಿಂಗ್‌ನ ಸಂಶೋಧನಾ ವಿಭಾಗದ ಮುಖ್ಯಸ್ಥ ಅಜಿತ್ ಮಿಶ್ರಾ ತಿಳಿಸಿದ್ದಾರೆ.

ಮಿಡ್ ಕ್ಯಾಪ್ ಮತ್ತು ಲಾರ್ಜ್ ಕ್ಯಾಪ್ ಸೂಚ್ಯಂಕಗಳು ಕೂಡ ಇಳಿಕೆ ಕಂಡವು. ಆದರೆ, ಸ್ಮಾಲ್ ಕ್ಯಾಪ್ ಸೂಚ್ಯಂಕವು ಏರಿಕೆ ದಾಖಲಿಸಿತು. ಉಕ್ರೇನ್ ಗಡಿಯಿಂದ ಕೆಲವು ಸೈನಿಕರನ್ನು ಹಿಂದಕ್ಕೆ ಕರೆಸಿಕೊಳ್ಳಲಾಗುತ್ತಿದೆ ಎಂದು ರಷ್ಯಾ ಪ್ರಕಟಿಸಿದ ನಂತರ ಜಾಗತಿಕ ಷೇರು ಮಾರುಕಟ್ಟೆಗಳು ಏರುಗತಿ ಕಂಡುಕೊಂಡವು. ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು 23 ಪೈಸೆ ಹೆಚ್ಚಳ ಆಗಿ 75.09ಕ್ಕೆ ತಲುಪಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,352
ಇಂದಿನ ಅಂತ್ಯ	17,322
▼	30
ದಿನದ ಕನಿಷ್ಠ	17,257

ವಿನಿಮಯ ದರ

$ ಡಾಲರ್	75.09
£ ಪೌಂಡ್	101.81
€ ಯುರೊ	85.41
¥ ಯೆನ್ (100ಕ್ಕೆ)	65

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹435
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹435

ತೆರಿಗೆ ವಂಚನೆಯ ತನಿಖೆ: ದಾಖಲೆಗಳು, ಲೆಕ್ಕಪತ್ರಗಳ ಪರಿಶೀಲನೆ

ಹುವಾವೆ ಕಚೇರಿಗಳಲ್ಲಿ ಶೋಧ

ನವದೆಹಲಿ (ಪಿಟಿಐ): ತೆರಿಗೆ ವಂಚನೆಗೆ ಸಂಬಂಧಿಸಿದ ತನಿಖೆಯ ಭಾಗವಾಗಿ ಆದಾಯ ತೆರಿಗೆ ಇಲಾಖೆಯು ಚೀನಾದ ಹುವಾವೆ ಕಂಪನಿಗೆ ಸೇರಿದ ಹಲವು ಸ್ಥಳಗಳಲ್ಲಿ ಶೋಧಕಾರ್ಯ ನಡೆಸಿದೆ ಎಂದು ಅಧಿಕೃತ ಮೂಲಗಳು ಬುಧವಾರ ತಿಳಿಸಿವೆ. ಬೆಂಗಳೂರು, ಗುರುಗ್ರಾಮ, ದೆಹಲಿಯಲ್ಲಿ ಮಂಗಳವಾರ ಶೋಧ ಕಾರ್ಯ ನಡೆಸಲಾಗಿದೆ ಎಂದು ಹೇಳಿದ್ದಾರೆ.

ಭಾರತದಲ್ಲಿನ ವಹಿವಾಟು ಮತ್ತು ವಿದೇಶಿ ವರ್ಗಾವಣೆಗೆ ಸಂಬಂಧಿಸಿದಂತೆ ತೆರಿಗೆ ವಂಚನೆ ನಡೆದಿರುವ ಬಗ್ಗೆ ಅಧಿಕಾರಿಗಳು ಕಂಪನಿಯ ಹಣಕಾಸು ದಾಖಲೆಗಳು, ಲೆಕ್ಕಪತ್ರದ ವಿವರಗಳನ್ನು ಪರಿಶೀಲಿಸಿದ್ದಾರೆ. ಕೆಲವು ದಾಖಲೆಪತ್ರಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಮೂಲಗಳು ಹೇಳಿವೆ.

ದೇಶದಲ್ಲಿ ಕಾನೂನುಬದ್ಧವಾಗಿ ಕಾರ್ಯಾಚರಣೆ ನಡೆಸಲಾಗುತ್ತಿದೆ ಎಂದು ಕಂಪನಿಯು ಹೇಳಿಕೊಂಡಿದೆ. 'ಆದಾಯ ತೆರಿಗೆ ಇಲಾಖೆಯ ತಂಡವು ನಮ್ಮ ಕಚೇರಿಗೆ ಭೇಟಿ ನೀಡಿದ್ದು ನಮಗೆ ಮಾಹಿತಿ ಇದೆ. ಭಾರತದಲ್ಲಿ ಕಂಪನಿಯ ಕಾರ್ಯಾಚರಣೆಗಳು ಕಾನೂನು ಮತ್ತು ನಿಬಂಧನೆಗಳಿಗೆ ಅನುಸಾರವಾಗಿ ನಡೆಯುತ್ತಿದೆ ಎನ್ನುವ ವಿಶ್ವಾಸ ಇದೆ. ಹೆಚ್ಚಿನ ಮಾಹಿತಿಗಾಗಿ ನಾವು ಸಂಬಂಧಿತ ಸರ್ಕಾರಿ ಇಲಾಖೆಗಳನ್ನು ಸಂಪರ್ಕಿಸುತ್ತೇವೆ. ನಿಯಮಗಳಿಗೆ ಅನುಗುಣವಾಗಿ ಸಂಪೂರ್ಣವಾಗಿ ಸಹಕರಿಸುತ್ತೇವೆ' ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಖಾಸಗಿತನ ಮತ್ತು ಸುರಕ್ಷತೆಗೆ ಸಂಬಂಧಿಸಿದಂತೆ ಭಾರತವು ಚೀನಾದ 54ಕ್ಕೂ ಅಧಿಕ ಆ್ಯಪ್‌ಗಳನ್ನು ಈಚೆಗಷ್ಟೇ ನಿಷೇಧಿಸಿದೆ.

ಆದಾಯ ತೆರಿಗೆ ಇಲಾಖೆಯು ಚೀನಾದ ಶಿಯೋಮಿ ಮತ್ತು ಒಪ್ಪೊ ಕಂಪನಿಗಳ ಭಾರತದಲ್ಲಿನ ಕಚೇರಿಗಳಲ್ಲಿ ಕಳೆದ ವರ್ಷ ಶೋಧ ಕಾರ್ಯ ನಡೆಸಿತ್ತು. ಭಾರತದ ತೆರಿಗೆ ಕಾಯ್ದೆಯನ್ನು ಉಲ್ಲಂಘಿಸುವ ಮೂಲಕ ಲೆಕ್ಕಕ್ಕೆ ಸಿಗದ ₹ 6,500 ಕೋಟಿ ಮೌಲ್ಯದ ಆದಾಯವನ್ನು ಈ ವೇಳೆ ಪತ್ತೆ ಮಾಡಲಾಗಿತ್ತು. ದೇಶದಲ್ಲಿ 5ಜಿ ಸೇವೆಗಳ ಪರೀಕ್ಷೆ ನಡೆಸಲು ಹುವಾವೆ ಕಂಪನಿಗೆ ಕೇಂದ್ರ ಸರ್ಕಾರವು ಅವಕಾಶ ನೀಡಿಲ್ಲ.

ಮುಖ್ಯಾಂಶಗಳು

- ಬೆಂಗಳೂರು, ಗುರುಗ್ರಾಮ, ದೆಹಲಿಯಲ್ಲಿ ಶೋಧ ನಡೆಸಿದ ಅಧಿಕಾರಿಗಳು
- ಕಾನೂನುಬದ್ಧವಾಗಿ ಕಾರ್ಯಾಚರಣೆ: ಹುವಾವೆ

ಅತಿಥಿ ಉಪನ್ಯಾಸಕ್ಕೆ ಶೇ 18 ಜಿಎಸ್‌ಟಿ

ನವದೆಹಲಿ (ಪಿಟಿಐ): ಅತಿಥಿ ಉಪನ್ಯಾಸ ನೀಡಿ ಗಳಿಸುವ ಆದಾಯಕ್ಕೆ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯ ಅಡಿಯಲ್ಲಿ ಶೇಕಡ 18ರಷ್ಟು ತೆರಿಗೆ ಅನ್ವಯ ಆಗುತ್ತದೆ ಎಂದು ಎಎಆರ್‌ನ (ಆಥಾರಿಟಿ ಫಾರ್ ಅಡ್ವಾನ್ಸ್ ರೂಲಿಂಗ್) ಕರ್ನಾಟಕ ಪೀಠ ಆದೇಶಿಸಿದೆ.

ಅತಿಥಿ ಉಪನ್ಯಾಸ ನೀಡಿ ಗಳಿಸುವ ಆದಾಯವು, ತೆರಿಗೆಗೆ ಅರ್ಹವಾದ ಸೇವೆ ಆಗುತ್ತದೆಯೇ ಎಂಬ ಬಗ್ಗೆ ಅರ್ಜಿದಾರ ಸಾಯಿರಾಮ್ ಗೋಪಾಲಕೃಷ್ಣ ಭಟ್ ಎಂಬುವವರು ಎಎಆರ್‌ನಿಂದ ಸ್ಪಷ್ಟನೆ ಕೋರಿದ್ದರು. ಅತಿಥಿ ಉಪನ್ಯಾಸದ ಸೇವೆಯು ತೆರಿಗೆ ವಿನಾಯಿತಿ ಇರುವ ವರ್ಗದ ಅಡಿಯಲ್ಲಿ ಬರುವುದಿಲ್ಲ. ಇತರ ವೃತ್ತಿಗಳು, ತಾಂತ್ರಿಕ ಮತ್ತು ವಾಣಿಜ್ಯ ಸೇವೆಗಳ ವರ್ಗದ ಅಡಿಯಲ್ಲಿ ಇದು ಬರುತ್ತದೆ. ಹಾಗಾಗಿ, ಈ ಸೇವೆಗೆ ಜಿಎಸ್‌ಟಿ ಅಡಿ ಶೇ 18ರಷ್ಟು ತೆರಿಗೆ ಅನ್ವಯವಾಗುತ್ತದೆ ಎಂದು ಆದೇಶಿಸಲಾಗಿದೆ.

ಎಎಆರ್ ನೀಡಿರುವ ಆದೇಶದ ಅನ್ವಯ, ವಾರ್ಷಿಕವಾಗಿ ₹ 20 ಲಕ್ಷಕ್ಕಿಂತ ಹೆಚ್ಚು ವಹಿವಾಟು ನಡೆಸುವ, ವೃತ್ತಿಪರ ಸೇವೆ ಒದಗಿಸುವವರು ಅತಿಥಿ ಉಪನ್ಯಾಸದಿಂದ ಗಳಿಸುವ ಆದಾಯಕ್ಕೆ ಶೇ 18ರಷ್ಟು ತೆರಿಗೆ ಕೊಡಬೇಕಾಗುತ್ತದೆ.

ಸಂಭಾವನೆ ಪಡೆದು, ಅತಿಥಿ ಉಪನ್ಯಾಸದ ಮೂಲಕ ಜ್ಞಾನವನ್ನು ಹಂಚಿಕೊಳ್ಳುವ ಲಕ್ಷಾಂತರ ಮಂದಿ ಫ್ರೀಲಾನ್ಸಿಗಳಿಗೆ, ಅಕಾಡೆಮಿಕ್ ವಲಯದವರಿಗೆ, ಪ್ರೊಫೆಸರ್‌ಗಳಿಗೆ ಮತ್ತು ಇತರರಿಗೆ ಈ ಆದೇಶವು ಹಲವು ಸಮಸ್ಯೆಗಳನ್ನು ಸೃಷ್ಟಿಸಬಹುದು ಎಂದು ಎಎಂಆರ್‌ಜಿ ಆ್ಯಂಡ್ ಅಸೋಸಿಯೇಟ್ಸ್‌ನ ಹಿರಿಯ ಪಾಲುದಾರ ರಜತ್ ಮೋಹನ್ ಪ್ರತಿಕ್ರಿಯೆ ನೀಡಿದರು. 'ಅರೆಕಾಲಿಕ ತರಬೇತಿದಾರರಾಗಿ ಕೆಲಸ ಮಾಡುತ್ತಿರುವವರು ಕೂಡ ತಾವು ಪಾವತಿಸಬೇಕಿರುವ ಜಿಎಸ್‌ಟಿ ಮೊತ್ತವನ್ನು ಪರಿಶೀಲಿಸಬೇಕಾಗುತ್ತದೆ' ಎಂದು ಮೋಹನ್ ಹೇಳಿದರು.

ಸುದ್ದಿ 2 ನಿಮಿಷ

ವಾರಸುದಾರರಿಲ್ಲದ ಮೊತ್ತ ₹ 21,539 ಕೋಟಿ: ಎಲ್‌ಐಸಿ

ನವದೆಹಲಿ (ಪಿಟಿಐ): ಎಲ್‌ಐಸಿ ಬಳಿ ವಾರಸುದಾರರು ಇಲ್ಲದೇ ಉಳಿದಿರುವ ಮೊತ್ತವು 2021ರ ಸೆಪ್ಟೆಂಬರ್ ಅಂತ್ಯಕ್ಕೆ ₹ 21,539 ಕೋಟಿ ಆಗಿದೆ.

ಎಲ್‌ಐಸಿಯು, ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಗೆ (ಸೆಬಿ) ಸಲ್ಲಿಸಿರುವ ಐಪಿಒ ಕರಡು ಪತ್ರದಲ್ಲಿ ಈ ಮಾಹಿತಿ ಇದೆ. 2021ರ ಮಾರ್ಚ್ ಅಂತ್ಯದ ವೇಳೆಗೆ ವಾರಸುದಾರರು ಇಲ್ಲದೇ ಉಳಿದಿರುವ ಮೊತ್ತವು ₹ 18,495 ಕೋಟಿ ಇತ್ತು. 2020ರ ಮಾರ್ಚ್ ಅಂತ್ಯದ ವೇಳೆಗೆ ಈ ಮೊತ್ತವು ₹ 16,052 ಕೋಟಿಗಳಷ್ಟು ಇತ್ತು.

ಪ್ಯಾನ್ ಜೋಡಣೆ: ಎಲ್‌ಐಸಿ ಪಾಲಿಸಿ ಹೊಂದಿರುವವರು ಪ್ಯಾನ್ ಸಂಖ್ಯೆಯನ್ನು ಪಾಲಿಸಿ ಜೊತೆ ಫೆಬ್ರುವರಿ 28ರೊಳಗೆ ಜೋಡಿಸಬೇಕು ಎಂದು ನಿಗಮ ಹೇಳಿದೆ. ಎಲ್‌ಐಸಿ ಉದ್ಯೋಗಿಗಳು, ಪಾಲಿಸಿದಾರರಿಗೆ ಐಪಿಒ ವೇಳೆ ಷೇರು ಬೆಲೆಯಲ್ಲಿ ರಿಯಾಯಿತಿ ಸಿಗುವ ಸಾಧ್ಯತೆ ಇದೆ. ಪ್ಯಾನ್ ಸಂಖ್ಯೆಯನ್ನು ಎಲ್‌ಐಸಿ ವೆಬ್‌ಸೈಟ್ ಅಥವಾ ಏಜೆಂಟರ ಮೂಲಕ ಜೋಡಿಸಬಹುದು. ಎಲ್‌ಐಸಿ ಪಾಲಿಸಿ ಹೊಂದಿದವರು, ಭಾರತದಲ್ಲಿ ವಾಸಿಸುತ್ತಿರುವವರು ಪಾಲಿಸಿದಾರರ ಮೀಸಲಾತಿ ಕೋಟಾ ಅಡಿ ಬಿಡ್ ಸಲ್ಲಿಸಲು ಅರ್ಹರಾಗಿರುತ್ತಾರೆ.

55 ಸಾವಿಕ್ಕೂ ಅಧಿಕ ಪದವೀಧರರ ನೇಮಕ ಸಾಧ್ಯತೆ: ಇನ್ಫೊಸಿಸ್

ಮುಂಬೈ (ಪಿಟಿಐ): ಇನ್ಫೊಸಿಸ್ ಲಿಮಿಟೆಡ್ ಕಂಪನಿಯು 2022–23ನೇ ಹಣಕಾಸು ವರ್ಷದಲ್ಲಿ ಕಾಲೇಜುಗಳಿಂದ ನೇರವಾಗಿ 55 ಸಾವಿರಕ್ಕೂ ಅಧಿಕ ಪದವೀಧರರನ್ನು ನೇಮಕ ಮಾಡಿಕೊಳ್ಳುವ ಸಾಧ್ಯತೆ ಇದೆ ಎಂದು ಕಂಪನಿಯ ಸಿಇಒ ಸಲೀಲ್ ಪಾರೇಖ್ ತಿಳಿಸಿದ್ದಾರೆ.

ತಂತ್ರಜ್ಞಾನ ವಲಯದಲ್ಲಿ ಎಂಜಿನಿಯರಿಂಗ್ ಮತ್ತು ವಿಜ್ಞಾನ ಪದವೀಧರರಿಗೆ ಹೆಚ್ಚಿನ ಅವಕಾಶಗಳಿವೆ. ಆದರೆ, ಕಡಿಮೆ ಅವಧಿಗಳಲ್ಲಿ ಹೊಸ ಕೌಶಲಗಳನ್ನು ಕಲಿಯಬೇಕಾದ ವೃತ್ತಿ ಇದಾಗಿದೆ ಎನ್ನುವುದನ್ನು ಅರ್ಥಮಾಡಿಕೊಳ್ಳಬೇಕು ಎಂದು ನಾಸ್ಕಾಂ ಕಾರ್ಯಕ್ರಮದಲ್ಲಿ ಅವರು ಹೇಳಿದ್ದಾರೆ.

2021–22ನೇ ಹಣಕಾಸು ವರ್ಷದಲ್ಲಿ ಕಂಪನಿಯ ವರಮಾನವು ಶೇಕಡ 20ರಷ್ಟು ಹೆಚ್ಚಾಗುವ ಅಂದಾಜು ಮಾಡಲಾಗಿದೆ. ಇದರಿಂದಾಗಿ ಹೊಸಬರನ್ನು ನೇಮಿಸಿಕೊಳ್ಳಲು ಹೆಚ್ಚಿನ ಅವಕಾಶ ಸಿಗಲಿದೆ ಎಂದು ಅವರು ತಿಳಿಸಿದ್ದಾರೆ.

ಕಂಪನಿಯು ಕೌಶಲದ ಮೇಲೆ ಹೆಚ್ಚು ಗಮನಹರಿಸುತ್ತದೆ. ಹೊಸಬರನ್ನು ಕೆಲಸಕ್ಕೆ ನಿಯೋಜಿಸುವ ಮೊದಲು ಆರರಿಂದ 12 ವಾರಗಳವರೆಗೆ ತರಬೇತಿ ನೀಡಲಾಗುವುದು ಎಂದಿದ್ದಾರೆ.

ವಿಮಾನ ಇಂಧನ ದರ ಶೇ 5.2ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ವಿಮಾನ ಇಂಧನ (ಜೆಟ್ ಇಂಧನ) ದರವನ್ನು ಬುಧವಾರ ಪ್ರತಿ ಕಿಲೋ ಲೀಟರಿಗೆ ಶೇಕಡ 5.2ರಷ್ಟು ಹೆಚ್ಚಿಸಲಾಗಿದೆ. ಇದರಿಂದಾಗಿ ದೇಶದಾದ್ಯಂತ ವಿಮಾನ ಇಂಧನ ದರವು ಗರಿಷ್ಠ ಮಟ್ಟಕ್ಕೆ ಏರಿಕೆ ಆಗಿದೆ.

ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳ ಅಧಿಸೂಚನೆ ಪ್ರಕಾರ, ದೆಹಲಿಯಲ್ಲಿ ಪ್ರತಿ ಕಿಲೋ ಲೀಟರ್‌ಗೆ ₹ 4,481.63ರಷ್ಟು ಹೆಚ್ಚಾಗಿ ₹ 90,519.79ಕ್ಕೆ ತಲುಪಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ದರ ಏರಿಕೆಗೆ ಅನುಗುಣವಾಗಿ ವಿಮಾನ ಇಂಧನ ದರವನ್ನು ಹೆಚ್ಚಿಸಲಾಗಿದೆ. ಬುಧವಾರದ ದರ ಏರಿಕೆಯನ್ನೂ ಪರಿಗಣಿಸಿದಲ್ಲಿ, ಎರಡು ತಿಂಗಳಿಗೂ ಕಡಿಮೆ ಅವಧಿಯಲ್ಲಿ ಒಟ್ಟು 4 ಬಾರಿ ದರ ಹೆಚ್ಚಳವಾಗಿದೆ.

2008ರ ಆಗಸ್ಟ್‌ನಲ್ಲಿ ಜೆಟ್ ಇಂಧನ ದರವು ಕಿಲೋ ಲೀಟರಿಗೆ ₹ 71,028.26ಕ್ಕೆ ತಲುಪಿತ್ತು. ಆಗ ಕಚ್ಚಾ ತೈಲ ದರ ಬ್ಯಾರಲ್‌ಗೆ ₹ 147 ಡಾಲರ್‌ಗಳಷ್ಟಿತ್ತು.

ಬೆಲೆ ಏರಿಕೆ ವಿವರ (ಕಿಲೋ ಲೀಟರಿಗೆ)	
ಜನವರಿ 1	₹2,039.63
ಜನವರಿ 16	₹3,232.87
ಫೆಬ್ರುವರಿ 1	₹6,743.25
ಫೆಬ್ರುವರಿ 16	₹4,481.63

ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ನಷ್ಟ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಿಸೆಂಬರ್ ತ್ರೈಮಾಸಿಕದಲ್ಲಿ ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್‌ನ ನಷ್ಟದ ಮೊತ್ತವು ₹ 34 ಕೋಟಿಗೆ ಇಳಿಕೆಯಾಗಿದೆ. ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ ಬ್ಯಾಂಕ್ ₹ 279 ಕೋಟಿ ನಷ್ಟ ಅನುಭವಿಸಿತ್ತು.

ಸಾಲ ವಿತರಣೆಯು ಇದುವರೆಗಿನ ಗರಿಷ್ಠ ಮಟ್ಟ ತಲುಪಿದ್ದು, ವಸೂಲಾಗದ ಸಾಲಗಳಿಗೆ ತೆಗೆದಿರಿಸಬೇಕಾದ ಮೊತ್ತದಲ್ಲಿ ಇಳಿಕೆ ಆಗಿದ್ದು ನಷ್ಟ ಕಡಿಮೆ ಆಗಿದ್ದಕ್ಕೆ ಕಾರಣ ಎಂದು ಬ್ಯಾಂಕ್ ತಿಳಿಸಿದೆ.

ಪ್ರಸಕ್ತ ಹಣಕಾಸು ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಬ್ಯಾಂಕ್‌ನ ಒಟ್ಟು ವರಮಾನವು ₹ 799 ಕೋಟಿಗೆ ಹೆಚ್ಚಳ ಆಗಿದೆ. ಹಿಂದಿನ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಬ್ಯಾಂಕ್‌ನ ವರಮಾನವು ₹ 786 ಕೋಟಿ ಆಗಿತ್ತು.

ಟಿಟಿಡಿ: ಉದಯಾಸ್ತಮಾನ ಸೇವಾ ಟಿಕೆಟ್ ಮಾರಾಟ ಆರಂಭ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಮಕ್ಕಳ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣಕ್ಕೆ ಹಣ ಸಂಗ್ರಹಿಸಲು ತಿರುಮಲ ತಿರುಪತಿ ದೇವಸ್ಥಾನಂ (ಟಿಟಿಡಿ) ಒಂದು ಕೋಟಿ ರೂಪಾಯಿಯ 'ಉದಯಾಸ್ತಮಾನ' ಸೇವಾ ಟಿಕೆಟ್‌ಗಳ ಮಾರಾಟಕ್ಕೆ ಚಾಲನೆ ನೀಡಿದೆ.

ಅಭಿಷೇಕವನ್ನು ಒಳಗೊಂಡಂತೆ ಶುಕ್ರವಾರದ ಸೂಪರ್ ಸ್ಪೆಷಲ್ ದರ್ಶನಕ್ಕೆ ₹1.5 ಕೋಟಿ ದರವನ್ನು ಟಿಟಿಡಿ ನಿಗದಿಪಡಿಸಿದೆ.

ಸುಪ್ರಭಾತದಿಂದ ಆರಂಭವಾಗುವ ದಿನದ ಎಲ್ಲ ದೈವಿಕ ಆಚರಣೆಗಳನ್ನು ವೀಕ್ಷಿಸಲು, ಭಕ್ತ ಮತ್ತು ಅವರ ಕುಟುಂಬದ ಐವರು ಸದಸ್ಯರಿಗೆ ಗರ್ಭಗುಡಿ ಮತ್ತು ಇತರ ನಿಗದಿತ ಪ್ರದೇಶಗಳಲ್ಲಿ ಕುಳಿತುಕೊಳ್ಳಲು ಈ ಟಿಕೆಟ್ ಅವಕಾಶ ನೀಡುತ್ತದೆ.

ಟಿಕೆಟ್ ಸಿಂಧುತ್ವದ ಅವಧಿ 25 ವರ್ಷಗಳು (ಪ್ರತಿ ವರ್ಷ ಒಂದು ನಿಗದಿತ ದಿನ) ಅಥವಾ ದಾನಿಗಳ ಜೀವಿತಾವಧಿಯಲ್ಲಿ ಯಾವುದು ಮೊದಲು ಬರುತ್ತದೆಯೇ ಅದು. ಕಂಪನಿ ಅಥವಾ ಸಂಸ್ಥೆಗಳಾಗಿದ್ದರೆ ಟಿಕೆಟ್‌ನ ಸಿಂಧುತ್ವದ ಅವಧಿ 20 ವರ್ಷಗಳಾಗಿರುತ್ತದೆ.

ಟಿಟಿಡಿ ಅಧಿಕೃತ ಪೋರ್ಟಲ್ https://tirupatibalaji.ap.gov.in ನಲ್ಲಿ ಬುಕ್ ಮಾಡಬಹುದು.

ಮುಂಬೈ ಧಾರಣೆ

ಶೇಂಗಾ

16-2-2022

ಜಾವಾ 70/80(ಹೊಸ)	10150-10200
ಜಾವಾ 80/90(ಹೊಸ)	9750-9800
ದಪ್ಪ ಮಧ್ಯಪ್ರದೇಶ(ಹೊಸ)	9150-2000
ದಪ್ಪ ಗುಜರಾತ್(ಹೊಸ)	8400-8450

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1365 (1365)
ಒಂದು ವಾರದ ಡೆಲಿವರಿ	1360 (1360)
ಸೋಯಾ ಕಚ್ಚಾ	1277 (1285)
ಪಾಮ್ ವಾರದ ಡೆಲಿವರಿ	1273 (1273)
ಸೂರ್ಯಕಾಂತಿ ಎಣ್ಣೆ ಕಚ್ಚಾ	1250 (1240)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	49,250 (49,400)
ಬೆಳ್ಳಿ ಕೆ.ಜಿ	63,250 (63,050)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	430-450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750-800
ಹೆರಕಿದ್ದು	1100-1150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250
ಕಾಳು ಮೆಣಸು	530
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-53000
ಕಾರ್ಕಳ	
ಹೊಸತು	40000-44500
ಹಳತು	46000-53000
ಕುಮಟ	
ಚಿಪ್ಪು	24089-29019
ಕೋಕ	20109-26569
ಫ್ಯಾಕ್ಟರಿ	13509-18899
ಹಳೆಚಾಲಿ	46089-48699
ಹೊಸಚಾಲಿ	36509-40699
ಪುತ್ತೂರು	
ಕೋಕ	11000-26000
ಹೊಸತು	27500-45000
ಸಿದ್ದಾಪುರ	
ಬಿಳಿಗೋಟು	22191-31612
ಕೋಕ	20299-28012
ಹೊಸಚಾಲಿ	34099-40239
ಕೆಂಪುಗೋಟು	30789-33389
ರಾಶಿ	45499-47009
ತಟ್ಟಿಬೆಟ್ಟೆ	37899-45399
ಶಿರಸಿ	
ಬೆಟ್ಟೆ	25696-45381
ಬಿಳಿಗೋಟು	20099-33878
ಚಾಲಿ	30539-40800
ರಾಶಿ	43208-46899
ಶಿವಮೊಗ್ಗ	
ಬೆಟ್ಟೆ	46058-51200
ಗೊರಬಲು	17000-34249
ರಾಶಿ	43096-46099
ಸರಕು	51009-74570
ಚನ್ನಗಿರಿ ತುಮ್ಕೋಸ್	
ರಾಶಿ	44299-46500
ಬೆಟ್ಟೆ	35505-40199
ರಾಮನಗರ ರೇಷ್ಮೆ	
ಮಿಶ್ರತಳಿ	400-772
ದ್ವಿತಳಿ	559-999

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16050	16100	16150	251.85 ಸೆಂಟ್ಸ್
ಎಸಿ	7810	7400	7800	
ಆರ್‌ಪಿ	8000	7600	8000	ಲಂಡನ್
ಆರ್‌ಸಿ	4060	3950	4050	2287 ಡಾಲರ್ಸ್

ರಾಣಾ ಕಪೂರ್‌ಗೆ ಜಾಮೀನು

ರಾಣಾ ಕಪೂರ್

ಮುಂಬೈ (ಪಿಟಿಐ): ದೆಹಲಿಯ ಪ್ರಮುಖ ಸ್ಥಳದಲ್ಲಿನ ಆಸ್ತಿ ಮಾರಾಟ ಸಂಬಂಧದ ಪ್ರಕರಣದಲ್ಲಿ ಯೆಸ್ ಬ್ಯಾಂಕ್ ಸಂಸ್ಥಾಪಕ ರಾಣಾ ಕಪೂರ್, ಉದ್ಯಮಿ ಗೌತಮ್ ಥಾಪರ್ ಸೇರಿ ಏಳು ಮಂದಿಗೆ ಇಲ್ಲಿನ ವಿಶೇಷ ಪಿಎಂಎಲ್‌ಎ ಕೋರ್ಟ್ ಬುಧವಾರ ಜಾಮೀನು ನೀಡಿದೆ.

ಪ್ರಸ್ತುತ ಪ್ರಕರಣವು ದೆಹಲಿಯ ಅಮೃತಾ ಶೇರ್ಗಿಲ್ ಮಾರ್ಗ್‌ನಲ್ಲಿರುವ ಆಸ್ತಿಯನ್ನು ಕಪೂರ್ ಅವರ ಪತ್ನಿ ಬಿಂದು ಕಪೂರ್ ಒಡೆತನದ ಕಂಪನಿಗೆ ಮಾರಾಟ ಮಾಡಿದ ಆರೋಪಕ್ಕೆ ಸಂಬಂಧಿಸಿದೆ. ಕಳೆದ ವರ್ಷ ಮುಂಬೈನಲ್ಲಿ ಸಿಬಿಐ ಈ ಸಂಬಂಧ ಪ್ರತ್ಯೇಕ ಎಫ್‌ಐಆರ್ ದಾಖಲಿಸಿತ್ತು.

ಸಿಬಿಐನ ಎಫ್‌ಐಆರ್ ಆಧರಿಸಿ ಜಾರಿ ನಿರ್ದೇಶನಾಲಯ ಪ್ರಕರಣ ದಾಖಲಿಸಿತ್ತು.

ಅಪಘಾತ: ನಾಲ್ವರು ವಿದ್ಯಾರ್ಥಿಗಳ ಸಾವು

ಪ್ರಜಾವಾಣಿ ವಾರ್ತೆ

ಹೊಸಕೋಟೆ (ಬೆಂಗಳೂರು ಗ್ರಾಮಾಂತರ): ಇಲ್ಲಿಗೆ ಸಮೀಪದ ಅಟ್ಟೂರ್ ಗೇಟ್ ಬಳಿಯ ರಾಷ್ಟ್ರೀಯ ಹೆದ್ದಾರಿ-75ರಲ್ಲಿ ಮಂಗಳವಾರ ತಡರಾತ್ರಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ನಾಲ್ವರು ವಿದ್ಯಾರ್ಥಿಗಳು ಸ್ಥಳದಲ್ಲಿಯೇ ಸಾವನ್ನಪ್ಪಿದ್ದಾರೆ.

ಬೆಂಗಳೂರು ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದ ಆಂಧ್ರ ಮೂಲದ ವಿದ್ಯಾರ್ಥಿಗಳು ಮಂಗಳವಾರ ರಾತ್ರಿ ಹೋಟೆಲ್‌ನಲ್ಲಿ ಊಟ ಮುಗಿಸಿ ಮರಳುವಾಗ ಕಾರು ವಿಭಜಕ್ಕೆ ಗುದ್ದಿ ಎದುರಿನಿಂದ ಬರುತ್ತಿದ್ದ ಲಾರಿಗೆ ಡಿಕ್ಕಿ ಹೊಡೆಯಿತು. ಕಾರಿನಲ್ಲಿದ್ದ ಆರು ಜನರ ಪೈಕಿ ಇಬ್ಬರು ಮಾತ್ರ ಬದುಕಿ ಉಳಿದಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ನಿಧನ

ಶ್ರೀಮತಿ ಜಯಮ್ಮನವರು
(ಲೇಟ್ ಚೇರ್ಮನ್ ಶ್ರೀ ಮುನಿನಂಜಪ್ಪನವರ ಧರ್ಮಪತ್ನಿ)
ವೆಂಕಟಾಲ, ಯಲಹಂಕ, ಬೆಂಗಳೂರು–64
ಇವರು ದಿನಾಂಕ 16.2.2022ರಂದು ನಿಧನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ಸ್ವಗ್ರಾಮ ವೆಂಕಟಾಲದಲ್ಲಿ ದಿನಾಂಕ 17.2.22ರಂದು ಗುರುವಾರ ಬೆಳಗ್ಗೆ 11 ಗಂಟೆಗೆ ಮೃತರ ಅಂತ್ಯಕ್ರಿಯೆ ನೆರವೇರಲಿದೆ. ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು: ಕೆಂಪೇಗೌಡ ಮತ್ತು ಚಂದ್ರಮ್ಮ (ಬಿಬಿಎಂಪಿ ಮಾಜಿ ಸದಸ್ಯರು) ಮತ್ತು ಸಹೋದರರು ಹಾಗೂ ಜಯಮುನಿ ಕುಟುಂಬವರ್ಗದವರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

AIR INDIA sats
ಏರ್‌ಪೋರ್ಟ್ ಕೆಲಸಕ್ಕೆ ಬೇಕಾಗಿದ್ದಾರೆ
(ನೇರ ಸಂದರ್ಶನ)
ವಯೋಮಿತಿ: 18–35 ವರ್ಷ
ಲೋಡಿಂಗ್, ಕ್ಯಾಬಿನ್ ಕ್ಲೀನಿಂಗ್ & ಇಕ್ವಿಪ್ಮೆಂಟ್ ಆಪರೇಟರ್
(ಡ್ರೈವರ್: HMV ಲೈಸನ್ಸ್ ಹೊಂದಿರಬೇಕು)
ದಿನಾಂಕ ಮತ್ತು ಸಮಯ:
21–02–2022 (ಸೋಮವಾರ)
22–02–2022 (ಮಂಗಳವಾರ)
ಮತ್ತು
23–02–2022 (ಬುಧವಾರ)
ಬೆಳ್ಳಗ್ಗೆ 9 ಗಂಟೆಯಿಂದ ಸಂಜೆ 5 ಗಂಟೆಯವರೆಗೆ.
ವಿಳಾಸ:
ಏರ್ ಇಂಡಿಯಾ ಸ್ಯಾಟ್ಸ್, ಕಾರ್ಗೋ ಬಿಲ್ಡಿಂಗ್, ಕೆಂಪೇಗೌಡ ಇಂಟರ್ನ್ಯಾಷನಲ್ ಏರ್‌ಪೋರ್ಟ್, ದೇವನಹಳ್ಳಿ, ಬೆಂಗಳೂರು. ಸಂಪರ್ಕಿಸಿ:
080-66783411/14
ROUNAQH

ಹೋಂನರ್ಸ್/ ಮನೆಕೆಲಸಕ್ಕೆ, ಹೆಂಗಸರು/ ಹುಡುಗಿಯರು ಬೇಕಾಗಿದ್ದಾರೆ. (12,000-18,000) ಉಚಿತ ಊಟ- ವಸತಿ. ಉಡುಪಿ: 9845276452, 0820-2557676.

ಬೇಕಾಗಿದ್ದಾರೆ: ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ ಆನ್‌ಲೈನ್ ಕಂಪನಿಗಳಿಗೆ ಎಸ್.ಎಸ್.ಎಲ್.ಸಿ, ಪಿ.ಯು.ಸಿ, ಡಿಗ್ರಿ, ಡಿಪ್ಲೊಮಾದವರು 18,000- 56,000/- ವಸತಿಯೂಟದೊಂದಿಗೆ 8197650569, 7204396011

WORK FROM HOME ಮನೆಯಿಂದಲೇ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8139955155/ 8139988588

ತಕ್ಷಣ ಬೇಕಾಗಿದ್ದಾರೆ ಕರ್ನಾಟಕದ ಎಲ್ಲಾಜಿಲ್ಲೆಗಳಲ್ಲಿನ ಕಂಪನಿಗಳಿಗೆ ಆಫೀಸಗಳಿಗೆ 7th,SSLC,PUC, ಡಿಗ್ರಿಯಾದವರಿಗೆ, (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ ESI/PF ನೊಂದಿಗೆ 16,800-48,000/- 9739066244, 7406066011

TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600- 60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ: 7760014526, 9739544856

Drivers

ಉಬರ್ ಮತ್ತು ಓಲಾಗೆ ಚಾಲಕರು ಬೇಕಾಗಿದ್ದಾರೆ! ಪ್ರತಿ ತಿಂಗಳು ರೂ.30000/- ವರೆಗೆ ಗಳಿಸಬಹುದು. ಎವರೆಸ್ಟ್ ಫ್ಲೀಟ್: 080-47179009 ಅನ್ನು ಸಂಪರ್ಕಿಸಿ.

Engg/ Production Technical

URGENT REQUIREMENT: LED-TECHNICIAN, Looking For Candidates From any ITI/ Diploma, Freshers Can Apply. 9739320044.

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Skilled Labour

DELIVERY PERSON and Electrician Age: 20 to 35 for Reputed Co Contact: 9845054158

ರಿಯಲ್ ಎಸ್ಟೇಟ್ ಸೆಲ್ಲಿಂಗ್

Commerical

General

PROPERTY FOR sale, K.S.S. HOTEL AND LODGING 63cents, Jadkal Near Kollur Temple, it is situated 8km away from Kollur Temple. Karnataka Udupi District, Baindoor Tq, Kollur. Contact: 9606603715

ಭವಿಷ್ಯ

Astrology

★॥ಶ್ರೀಶಕ್ತಿ ಸಾಯಿಬಾಬಾ॥★ ಆರಾಧನೆಯಿಂದ ಪ್ರೀತಿಪ್ರೇಮ, ಸ್ತ್ರೀಪುರುಷ ವಶೀಕರಣ, ದಾಂಪತ್ಯ, ಜನವಶೀಕರಣ, ಧನವಶೀಕರಣ, ಕೋರ್ಟ್_ಕಛೇರಿ, ಸಾಲಬಾಧೆ, ಯಾವುದೇ_ಸಮಸ್ಯೆಯಿದ್ದರೂ. 100% ಶಾಶ್ವತ_ಪರಿಹಾರ. 9591588881

ಸ್ತ್ರೀ-ವಶೀಕರಣ, ಪುರುಷ -ವಶೀಕರಣ, ಮಾಟ-ಮಂತ್ರ, ಶತ್ರುನಾಶ, ಏನೇ ಸಮಸ್ಯೆಗಳಿದ್ದರೂ, 3 ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ. ಉಚಿತ-ಭವಿಷ್ಯ, ಖಚಿತ- ಪರಿಹಾರ. ರೈತರ ಸಮಸ್ಯೆಗಳಿಗೆ ತಾಯತ ಮಾಡಿಕೊಡುತ್ತಾರೆ. ಸಂಪರ್ಕಿಸಿ : ಕೇರಳದ ಪ್ರಖ್ಯಾತ ಜ್ಯೋತಿಷ್ಯರು, ಪಂಡಿತ್ ಸುಮಂತ್ ಕುಮಾರ್ 8722756967.

ಮಾನಸಿಕ ವಶೀಕರಣವಿಧಿ ಕಲಿಯಲಿಚ್ಛಿಸುವವರು: ಮನೆಯಲ್ಲಿನ ಅಶಾಂತಿ, ರೋಗಮುಕ್ತವಾಗಲು, ಪ್ರೇಮಸಂಬಂದವಾಗಲು, ಗ್ರಾಹಕರಿಂದ ವ್ಯಾಪಾರವಾಗಲು, ನೌಕರಿಗಾಗಿ, ಸ್ತ್ರಿಪುರುಷರನ್ನು, ಜನಸಾಮಾನ್ಯರನ್ನು ಸೆಳೆಯುವ ಶಕ್ತಿಯಾಗಲಿಚ್ಛಿಸುವವರು. 8884826120

★॥ವಶೀಕರಣ ಸ್ಪೆಷಲಿಸ್ಟ್॥★ ಸ್ತ್ರೀ_ಪುರುಷ ವಶೀಕರಣ, ಸಂಭೋಗ ವಶೀಕರಣ, ಗಂಡ_ಹೆಂಡತಿ ಸಮಸ್ಯೆ ಇನ್ನೂಯಾವುದೇ ಸಮಸ್ಯೆಗಳಿಗೆ 27 ನಿಮಿಷಗಳಲ್ಲಿ ಶಾಶ್ವತ ಪರಿಹಾರ. 9008968867

★ಅಂಭಾಭವಾನಿ ಜ್ಯೋತಿಷ್ಯಾಲಯ★ ಕೊಳ್ಳೆಗಾಲದ ನಂ.1 'ವಶೀಕರಣ ಸ್ಪೆಷಲಿಸ್ಟ್' ದೇವಿಪ್ರಸಾದ್. (ಉಚಿತ ಭವಿಷ್ಯ ಖಚಿತ ಪರಿಹಾರ)ನಿಮ್ಮ ಸಮಸ್ಯೆಗಳೇನೇಯಿರಲಿ 2 ದಿನದಲ್ಲಿ ಪರಿಹಾರ.9886755306

★॥ನಂ.1 ಸ್ತ್ರೀಪುರುಷ॥★ ವಶೀಕರಣ ಸ್ಪೆಷಲಿಸ್ಟ್ ನಿಮ್ಮ ಯಾವುದೇ ಸಮಸ್ಯೆಗಳಿದ್ದರೂ ಒಂದು ದಿನದಲ್ಲಿ ಶಾಶ್ವತ ಪರಿಹಾರ ಶತಸಿದ್ಧ. ಪಾಂಡುರಂಗ ಗುರೂಜಿ. 9972033162

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರವಾಸ

Travel

8 ದಿನಗಳ ಶಿರಡಿ ಪ್ರವಾಸ. 16-03-2022, 7ದಿನಗಳ ಕೇರಳ ಪ್ರವಾಸ. 04-04-2022, 5ದಿನಗಳ ಶ್ರೀಶೈಲ ಅಹೋಬಿಲಂ ಪ್ರವಾಸ, 21ದಿನಗಳ ಸೆವೆನ್‌ಸಿಸ್ಟರ್ಸ್. 08-04-2022, 8/10 ದಿನಗಳ ಕಾಶ್ಮೀರ್, ವೈಷ್ಣೋದೇವಿ ಪ್ರವಾಸ. 21-03-2022, 04-04-2022, 11-04-2022, 13ದಿನಗಳ ಚಾರ್ ಧಾಮ್‌ಯಾತ್ರಾ. 11-05-2022,25-05-2022, 08-06-2022, 15-06-2022, 11ದಿನಗಳ ಕೋಲ್ಕತಾ ಡಾರ್ಜಿಲಿಂಗ್. 07-04-2022, 21-04-2022, 05-05-2022, 19-05-2022, 7/12 ದಿನಗಳ ಕುಲುಮನಾಲಿ, 22-03-2022, 05-04-2022, 19-04-2022, 03-05-2022,17-05-2022, 13ದಿನಗಳ ಕಾಶಿ,ನೇಪಾಳ, ಮುಕ್ತಿನಾಥ. 04-04-2022, 18-04-2022, 02-05-2022, 16-05-2022. ಶ್ರೀಮಲ್ಲಿಕಾರ್ಜುನ ಟ್ರಾವೆಲ್ಸ್ 9880847001, 9342848791

ಕಾಶಿ, ಪ್ರಯಾಗ, ಗಯಾ, ನೈಮಿಶಾರಣ್ಯ, ಅಯೋಧ್ಯ 24.03.2022,11.04.2022 ರಿಂದ 7 ದಿನಗಳು/ ಉಜ್ಜಯಿನಿ, ಓಂಕಾರೇಶ್ವರ್, ಮಾತ್ರಗಯಾ ಸೋಮನಾಥ್, ದ್ವಾರಕಾ 21.03.2022 ರಿಂದ 10 ದಿನಗಳು/ ಯಮುನೋತ್ರಿ, ಗಂಗೋತ್ರಿ, ಕೇದಾರನಾಥ್, ಬದರಿನಾಥ್, ಕಾಶಿ.,ಗಯಾ 27.04.2022,29.04.2022, 06.05.2022 ರಿಂದ 14/18 ದಿನಗಳು. ಸಂಪರ್ಕಿಸಿ: 26508925, 9980993631 ಶ್ರೀಚೈತನ್ಯ ಟ್ರಾವಲ್ಸ್ ಚಾಮರಾಜಪೇಟೆ, ಬೆಂಗಳೂರು-18

ರೈಲು ಮತ್ತು ಏಸಿ ಬಸ್ಸಿನಲ್ಲಿ 20.05.2022 ಹಾಗೂ 27.05.2022ರಿಂದ 17/22ದಿನಗಳ ನವದೆಹಲಿ, ಕೊಲ್ಕತ್ತಾ,ಕಾಶಿ,ನೇಪಾಳ,ಪುರಿ, ಹರಿದ್ವಾರ. 09.06.2022ರಿಂದ ವಿಮಾನ ಮತ್ತು ಬಸ್ಸಿನಲ್ಲಿ ಚಾರೋಧಾಮ್ 13ದಿನಗಳು ಹಾಗೂ 7ದಿನಗಳ ಕಾಶಿ,ಗಯಾ, ನೈಮಿಷಾರಣ್ಯಾ.ವಿವರಗಳಿಗೆ: ಏಷ್ಯನ್ ಟ್ರಾವೆಲ್ ಲೈನ್ಸ್, #164,ಆರ್.ವಿ.ರಸ್ತೆ, (ಮಿನರ್ವ ಬಸ್‌ಸ್ಟಾಪ್ ಎದುರು) ಬೆಂಗಳೂರು4.ಫೋನ್: 8105657052, 9480182865, 08026565085.

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್. 17/03/22 ನೇಪಾಳ, ಮುಕ್ತಿನಾಥ, ಕಾಶಿ. 14/04/22 ದೆಹಲಿ, ವೈಷ್ಣೋದೇವಿ, ಕುಲು ಮನಾಲಿ. 12/05/22 ಚಾರ್ಧಾಮ್ ಯಾತ್ರಾ. 9880621353

ಪ್ರಜಾವಾಣಿ
BOOK YOUR CLASSIFIEDS ADVERTISEMENT
PRAJAVANI ALL KARNATAKA CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	60	85	70	115
CD Per Sqcm	Single Col		Double Col	Multi Col
	430		450	475

SPECIAL OFFER
PAY 2 And GET 1 Free
PAY 3 And GET 2 Free
PAY 5 And GET 5 Free
condition apply*
For More Details Contact:
Ph:080- 45557160 | 163 | 164 | M: 9880856233
9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ವೆಸ್ಟ್ ಇಂಡೀಸ್ ಎದುರಿನ ಟ್ವೆಂಟಿ20 ಸರಣಿ: ಮುಂಬೈ ಜೋಡಿ ರೋಹಿತ್–ಇಶಾನ್ ಕಿಶನ್ ಅಬ್ಬರ

ಭಾರತಕ್ಕೆ ಭರ್ಜರಿ ಗೆಲುವು

ಕೋಲ್ಕತ್ತ: ಮುಂಬೈ ಜೋಡಿ ರೋಹಿತ್ ಶರ್ಮಾ ಮತ್ತು ಇಶಾನ್ ಕಿಶನ್ ಅವರ ಅಬ್ಬರದ ನಂತರ ಕೆಲಕಾಲ ಎದುರಾಳಿ ಬೌಲರ್‌ಗಳು ಆತಂಕ ಸೃಷ್ಟಿಸಿದರು. ಆದರೆ ಮುಂಬೈನ ಸೂರ್ಯಕುಮಾರ್ ಯಾದವ್ ಮತ್ತು ತಮಿಳುನಾಡಿನ ವೆಂಕಟೇಶ್ ಅಯ್ಯರ್ ಅವರ ಸಮಯೋಚಿತ ಆಟದಿಂದ ಭಾರತ ತಂಡ ಅಮೋಘ ಜಯ ಸಾಧಿಸಿತು.

ಈಡನ್ ಗಾರ್ಡನ್ಸ್ ಕ್ರೀಡಾಂಗಣದಲ್ಲಿ ಬುಧವಾರ ನಡೆದ ವೆಸ್ಟ್ ಇಂಡೀಸ್ ಎದುರಿನ ಟ್ವೆಂಟಿ20 ಸರಣಿಯ ಮೊದಲ ಪಂದ್ಯದಲ್ಲಿ ಇನ್ನೂ ಏಳು ಎಸೆತಗಳು ಬಾಕಿ ಇರುವಾಗ ಭಾರತ ಆರು ವಿಕೆಟ್‌ಗಳ ಗೆಲುವು ದಾಖಲಿಸಿತು.

158 ರನ್‌ಗಳ ಸಾಧಾರಣ ಗುರಿ ಬೆನ್ನತ್ತಿದ ಭಾರತಕ್ಕೆ ನಾಯಕ ರೋಹಿತ್ ಶರ್ಮಾ ಮತ್ತು ವಿಕೆಟ್ ಕೀಪರ್ ಇಶಾನ್ ಕಿಶನ್ ಉತ್ತಮ ಆರಂಭ ಒದಗಿಸಿದರು. ಇಬ್ಬರೂ 64 ರನ್‌ಗಳ ಜೊತೆಯಾಟ ಆಡಿದರು. ರೋಹಿತ್ ಔಟಾದ ನಂತರ ಇಶಾನ್ ಮತ್ತು ವಿರಾಟ್ ಕೊಹ್ಲಿ ಕೂಡ ಉತ್ತಮ ಆಟ ಆಡಿದರು. ಆದರೆ 21

ರವಿ ಬಿಷ್ಣೋಯಿ – ಟ್ವಿಟರ್ ಚಿತ್ರ

ರನ್‌ಗಳ ಅಂತದಲ್ಲಿ ಇಶಾನ್, ಕೊಹ್ಲಿ ಮತ್ತು ರಿಷಭ್ ಪಂತ್ ಔಟಾದಾಗ ಆತಂಕ ಮೂಡಿತು.

ಈ ಸಂದರ್ಭದಲ್ಲಿ ಮೇಲುಗೈ ಸಾಧಿಲು ವೆಸ್ಟ್ ಇಂಡೀಸ್ ಪ್ರಯತ್ನಿಸಿತು. ಆದರೆ 48 ರನ್‌ಗಳ ಜೊತೆಯಾಟವಾಡಿ ಸೂರ್ಯಕುಮಾರ್ ಮತ್ತು ವೆಂಕಟೇಶ್ ಅಯ್ಯರ್ ತಂಡವನ್ನು ದಡ ಸೇರಿಸಿದರು.

ಕೈ ಹಿಡಿದ ನಿಕೋಲಸ್ ಮಿಂಚಿನ ಆಟ: ಟಾಸ್ ಗೆದ್ದ ಭಾರತ ಪ್ರವಾಸಿ ತಂಡವನ್ನು ಬ್ಯಾಟಿಂಗ್‌ಗೆ ಆಹ್ವಾನಿಸಿತು. ವೇಗಿ ಭುವನೇಶ್ವರ್ ಕುಮಾರ್ ಮತ್ತು ಲೆಗ್ ಸ್ಪಿನ್ನರ್ ಯಜುವೇಂದ್ರ ಚಾಹಲ್ ಆರಂಭದಲ್ಲಿ ಪೆಟ್ಟುಕೊಟ್ಟರು. ಚೊಚ್ಚಲ ಟಿ20 ಅಂತರರಾಷ್ಟ್ರೀಯ ಪಂದ್ಯ ಆಡಿದ ಲೆಗ್ ಸ್ಪಿನ್ನರ್ ರವಿ ಬಿಷ್ಣೋಯಿ ಎರಡು ವಿಕೆಟ್ ಗಳಿಸಿ ತಂಡವನ್ನು ಕಾಡಿದರು.

ವಿಕೆಟ್‌ಗಳು ಪತನಗೊಳ್ಳುತ್ತಿದ್ದರೂ ಪೂರನ್ ರನ್ ಕಲೆ ಹಾಕುತ್ತ ಸಾಗಿದರು. ಆರನೇ ವಿಕೆಟ್‌ಗೆ ನಾಯಕ ಕೀರನ್ ಪೊಲಾರ್ಡ್ ಜೊತೆ 45 ರನ್ ಸೇರಿಸಿದ ಅವರು ತಂಡ ಗೌರವಾರ್ಹ ಮೊತ್ತ ಗಳಿಸಲು ನೆರವಾದರು.

ಮೊದಲ ಓವರ್‌ನ ಐದನೇ ಎಸೆತದಲ್ಲಿ ಆರಂಭಿಕ ಬ್ಯಾಟರ್ ಬ್ರೆಂಡನ್ ಕಿಂಗ್ ವಿಕೆಟ್ ಕಬಳಿಸಿ ಭುವನೇಶ್ವರ್ ಮೊದಲು ಮೊದಲ ಪೆಟ್ಟು ನೀಡಿದರು. ನಂತರ ಕೈಲ್ ಮೇಯರ್ಸ್ ಮತ್ತು ಪೂರನ್ 43 ರನ್‌ಗಳನ್ನು ಸೇರಿಸಿದರು. ಈ ಜೊತೆಯಾಟವನ್ನು ಚಾಹಲ್ ಮುರಿದರು. ರಾಸ್ಟನ್ ಚೇಸ್ ವಿಕೆಟ್ ಗಳಿಸುವ ಮೂಲಕ 21 ವರ್ಷದ ಬಿಷ್ಣೋಯ್ ಚೊಚ್ಚಲ ವಿಕೆಟ್ ತಮ್ಮದಾಗಿಸಿಕೊಂಡರು.

ಸ್ಕೋರ್ ಕಾರ್ಡ್

ವೆಸ್ಟ್ ಇಂಡೀಸ್ 7ಕ್ಕೆ 157 (20 ಓವರ್)
ಬ್ರೆಂಡನ್ ಸಿ ಯಾದವ್ ಬಿ ಭುವನೇಶ್ವರ್ 4 (5 ಎ, 4x1), ಮೇಯರ್ಸ್ ಎಲ್‌ಬಿಡಬ್ಲ್ಯು ಬಿ ಯಜುವೇಂದ್ರ 31 (24 ಎ, 4x7), ಪೂರನ್ ಸಿ ಕೊಹ್ಲಿ ಬಿ ಪಟೇಲ್ 61 (43 ಎ, 4x4, 6x5), ಚೇಸ್ ಎಲ್‌ಬಿಡಬ್ಲ್ಯು ಬಿ ರವಿ 4 (10 ಎ), ರೋವ್ಮನ್ ಸಿ ಅಯ್ಯರ್ ಬಿ ರವಿ 2 (3 ಎ), ಅಕೀಲ್ ಸಿ ಮತ್ತು ಬಿ ದೀಪಕ್ 10 (12 ಎ, 6x1), ಪೊಲಾರ್ಡ್ ಔಟಾಗದೆ 24 (19 ಎ, 4x2, 6x1), ಒಡೀನ್ ಸಿ ರೋಹಿತ್ ಬಿ ಪಟೇಲ್ 4 (4 ಎ)
ಇತರೆ (ಲೆಗ್ ಬೈ 6, ವೈಡ್ 11) 17
ವಿಕೆಟ್ ಪತನ: 1-4 (ಬ್ರೆಂಡನ್ ಕಿಂಗ್, 0.5), 2-51 (ಕೈಲ್ ಮೇಯರ್ಸ್, 6.5), 3-72 (ರಾಸ್ಟನ್ ಚೇಸ್, 10.2), 4-74 (ರೋವ್ಮನ್ ಪೊವೆಲ್, 10.5), 5-90 (ಅಕೀಲ್ ಹೊಸೇನ್, 13.5), 6-135 (ನಿಕೋಲಸ್ ಪೂರನ್, 17.6), 7-157 (ಒಡೀನ್ ಸ್ಮಿತ್, 19.6)
ಬೌಲಿಂಗ್: ಭುವನೇಶ್ವರ್ ಕುಮಾರ್ 4-0-31-1, ದೀಪಕ್ ಚಾಹರ್ 3-0-28-1, ಹರ್ಷಲ್ ಪಟೇಲ್ 4-0-37-2, ಯಜುವೇಂದ್ರ ಚಾಹಲ್ 4-0-34-1, ರವಿ ಬಿಷ್ಣೋಯಿ 4-0-17-2, ವೆಂಕಟೇಶ್ ಅಯ್ಯರ್ 1-0-4-0

ಭಾರತ 4ಕ್ಕೆ 162 (18.5 ಓವರ್)
ರೋಹಿತ್ ಸಿ ಸ್ಮಿತ್ ಬಿ ಚೇಸ್ 40 (19 ಎ, 4x4 6x3), ಇಶಾನ್ ಸಿ ಅಲೆನ್ ಬಿ ಚೇಸ್ 35 (42 ಎ, 4x4), ವಿರಾಟ್ ಸಿ ಪೊಲಾರ್ಡ್ ಬಿ ಅಲೆನ್ 17 (13 ಎ, 4x1), ರಿಷಭ್ ಸಿ ಸ್ಮಿತ್ ಬಿ ಕಾಟ್ರೆಲ್ 8 (8 ಎ), ಸೂರ್ಯಕುಮಾರ್ ಔಟಾಗದೆ 34 (18 ಎ, 4x5, 6x1), ವೆಂಕಟೇಶ್ ಔಟಾಗದೆ 24 (13 ಎ, 4x2, 4x1)
ಇತರೆ (ಲೆಗ್ ಬೈ 1, ವೈಡ್ 3) 4
ವಿಕೆಟ್ ಪತನ: 1-64 (ರೋಹಿತ್ ಶರ್ಮಾ, 7.3), 2-93 (ಇಶಾನ್ ಕಿಶನ್, 11.6), 3-95 (ವಿರಾಟ್ ಕೊಹ್ಲಿ, 12.3), 4-114 (ರಿಷಭ್ ಪಂತ್, 14.3)
ಬೌಲಿಂಗ್: ಶೆಲ್ಡನ್ ಕಾಟ್ರೆಲ್ 4-0-35-1, ರೊಮಾರಿಯೊ ಶೆಫರ್ಡ್ 3-0-24-0, ಒಡೀನ್ ಸ್ಮಿತ್ 2-0-31-0, ಅಕೀಲ್ ಹೊಸೇನ್ 4-0-34-0, ರಾಸ್ಟನ್ ಚೇಸ್ 4-0-14-2, ಫ್ಯಾಬಿಯನ್ ಅಲೆನ್ 1.5-0-23-1

ಫಲಿತಾಂಶ: ಭಾರತಕ್ಕೆ 6 ವಿಕೆಟ್‌ಗಳ ಜಯ; ಸರಣಿಯಲ್ಲಿ 1–0 ಮುನ್ನಡೆ. ಮುಂದಿನ ಪಂದ್ಯ–18ರಂದು.

ಭಾರತ ತಂಡದ ನಾಯಕ ರೋಹಿತ್ ಶರ್ಮಾ (ಎಡ) ಮತ್ತು ಇಶಾನ್ ಕಿಶನ್ ರನ್ ಗಳಿಸಿದ ಕ್ಷಣ– ಎಎಫ್‌ಪಿ ಚಿತ್ರ

ಕೆಕೆಆರ್‌ಗೆ ಶ್ರೇಯಸ್ ಸಾರಥ್ಯ

ಕೋಲ್ಕತ್ತ (ಪಿಟಿಐ): ಭಾರತ ತಂಡದ ಬ್ಯಾಟರ್ ಶ್ರೇಯಸ್ ಅಯ್ಯರ್ ಅವರನ್ನು ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಫ್ರಾಂಚೈಸ್ ಕೋಲ್ಕತ್ತ ನೈಟ್ ರೈಡರ್ಸ್ (ಕೆಕೆಆರ್) ತನ್ನ ಹೊಸ ನಾಯಕನನ್ನಾಗಿ ನೇಮಿಸಿದೆ.

ಇತ್ತೀಚೆಗೆ ನಡೆದ ಮೆಗಾ ಹರಾಜು ಪ್ರಕ್ರಿಯೆಯಲ್ಲಿ ಶ್ರೇಯಸ್ ಅವರು ₹ 12.25 ಕೋಟಿ ಮೊತ್ತಕ್ಕೆ ಕೆಕೆಆರ್ ಪಾಲಾಗಿದ್ದರು.2020ರ ಐಪಿಎಲ್ ಆವೃತ್ತಿಯಲ್ಲಿ ಶ್ರೇಯಸ್ ಅಯ್ಯರ್ ಡೆಲ್ಲಿ ಕ್ಯಾಪಿಟಲ್ಸ್ ತಂಡದ ನಾಯಕರಾಗಿದ್ದ ವೇಳೆ ತಂಡವು ಫೈನಲ್ ತಲುಪಿತ್ತು. 2021ರ ಆವೃತ್ತಿಯ ನಂತರ ಅವರು ತಂಡದಿಂದ ಬಿಡುಗಡೆಯಾಗಿದ್ದರು. ಇಯಾನ್ ಮಾರ್ಗನ್ ಬದಲಿಗೆ ಕೆಕೆಆರ್‌ಗೆ ನಾಯಕನ ಅಗತ್ಯ ವಿತ್ತು ಎಂಬುದು ಬಹಿರಂಗ ರಹಸ್ಯವಾಗಿತ್ತು.

‘ಅವರು (ಶ್ರೇಯಸ್) ಗುಣಮಟ್ಟದ ಬ್ಯಾಟ್ಸ್‌ಮನ್ ಆಗಿದ್ದಾರೆ ಮತ್ತು ನಮ್ಮ ತಂಡದ ನಾಯಕರಾಗಿ ಮಿಂಚುತ್ತಾರೆ ಎಂಬ ವಿಶ್ವಾಸವಿದೆ’ ಎಂದು ಕೆಕೆಆರ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ವೆಂಕಿ ಮೈಸೂರು ತಿಳಿಸಿದ್ದಾರೆ.ಹೊಸ ಜವಾಬ್ದಾರಿ ವಹಿಸಿಕೊಳ್ಳಲು ಕಾತರನಾಗಿದ್ದೇನೆ ಎಂದು ಶ್ರೇಯಸ್ ಹೇಳಿದ್ದಾರೆ.

‘ಕೆಕೆಆರ್‌ನಂತಹ ಪ್ರತಿಷ್ಠಿತ ತಂಡವನ್ನು ಮುನ್ನಡೆಸುವ ಅವಕಾಶ ಸಿಕ್ಕಿರುವುದು ದೊಡ್ಡ ಗೌರವ. ಐಪಿಎಲ್ ಒಂದು ಟೂರ್ನಿಯಾಗಿ ವಿವಿಧ ದೇಶಗಳು ಮತ್ತು ಸಂಸ್ಕೃತಿಗಳ ಶ್ರೇಷ್ಠ ಆಟಗಾರರನ್ನು ಒಟ್ಟಿಗೆ ತರುತ್ತದೆ ಮತ್ತು ಅತ್ಯಂತ ಪ್ರತಿಭಾನ್ವಿತ ವ್ಯಕ್ತಿಗಳ ಈ ಪ್ರಮುಖ ತಂಡವನ್ನು ಮುನ್ನಡೆಸಲು ನಾನು ಎದುರು ನೋಡುತ್ತಿದ್ದೇನೆ’ ಎಂದಿದ್ದಾರೆ.

ಆಸ್ಟ್ರೇಲಿಯಾ ಆಟಗಾರರ ಪಾರಮ್ಯ

ಬೆಂಗಳೂರು ಓಪನ್2: ಪ್ರಜ್ವಲ್–ನಿಕಿ ಕ್ವಾರ್ಟರ್ ಫೈನಲ್‌ಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಸ್ಟ್ರೇಲಿಯಾದ ಅಲೆಕ್ಸಾಂಡರ್ ವುಕಿಚ್ ಮತ್ತು ಮ್ಯಾಕ್ಸ್ ಪರ್ಸಲ್ ಅವರು ಬೆಂಗಳೂರು ಓಪನ್–2 ಎಟಿಪಿ ಚಾಲೆಂಜರ್ ಟೆನಿಸ್ ಟೂರ್ನಿಯಲ್ಲಿ ಬುಧವಾರ ಅಮೋಘ ಆಟವಾಡಿ ಪ್ರೇಕ್ಷಕರನ್ನು ರೋಮಾಂಚನಗೊಳಿಸಿದರು.

ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆಯ ಅಂಗಣದಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಅಗ್ರ ಶ್ರೇಯಾಂಕದ ಅಲೆಕ್ಸಾಂಡರ್ ಮತ್ತು ಆರನೇ ಶ್ರೇಯಾಂಕದ ಮ್ಯಾಕ್ಸ್ ಪರ್ಸಲ್ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಬ್ರಿಟನ್‌ನ ಜೇ ಕ್ಲಾರ್ಕ್ ಎದುರಿನ ಪಂದ್ಯದಲ್ಲಿ ಅಲೆಕ್ಸಾಂಡ ರ್6-1, 6-3ರಲ್ಲಿ ಜಯ ಗಳಿಸಿದರೆ ತಮ್ಮದೇ ದೇಶದ ಮಾರ್ಕ್ ಪೊಲ್ಮನ್ಸ್ ಎದುರಿನ ಹಣಾಹಣಿಯಲ್ಲಿ ಮ್ಯಾಕ್ಸ್ 7-6 (7), 4-6, 6-2ರಲ್ಲಿ ಗೆಲುವು ಸಾಧಿಸಿದರು.

ಆಸ್ಟ್ರೇಲಿಯನ್ ಓಪನ್ ಟೂರ್ನಿಯ ಡಬಲ್ಸ್‌ನಲ್ಲಿ ಫೈನಲ್ ಪ್ರವೇಶಿಸಿದ್ದ ಮ್ಯಾಕ್ಸ್ ಇಲ್ಲಿ ಮೊದಲ ಸುತ್ತಿನಲ್ಲಿ ಜೇಸನ್ ಕುಬ್ಲೆರ್ ಎದುರು ಗೆದ್ದು ಗಮನ ಸೆಳೆದಿದ್ದರು. ಬುಧವಾರ ಪೊಲ್ಮನ್ಸ್ ಅವರಿಂದ ತೀವ್ರ ಪೈಪೋಟಿ ಎದುರಿಸಿದ ಅವರು ಪ್ರತಿ ಹಂತದಲ್ಲೂ ಪಟ್ಟುಬಿಡದೆ ಆಟವಾಡಿ ಗೆಲುವಿನತ್ತ ಹೆಜ್ಜೆ ಹಾಕಿದರು.

ಮೊದಲ ಸೆಟ್‌ನಲ್ಲಿ 2–4ರ ಹಿನ್ನಡೆಯಿಂದ ಚೇತರಿಸಿಕೊಂಡ ಅವರು ನಂತರ ಸತತ ನಾಲ್ಕು ಗೇಮ್‌ಗಳನ್ನು ಗೆದ್ದುಕೊಂಡರು. ಆದರೆ ಅಂತಿಮ ಹಂತದಲ್ಲಿ ತಿರುಗೇಟು ನೀಡಿದ ಎದುರಾಳಿ ಆಟಗಾರ ಅವರ ಸರ್ವ್ ಬ್ರೇಕ್ ಮಾಡಿ ಸೆಟ್ ಅನ್ನು ಟೈಬ್ರೇಕರ್‌ನತ್ತ ಕೊಂಡೊಯ್ದರು. ಎರಡನೇ ಸೆಟ್‌ನಲ್ಲಿ ಪೊಲ್ಮನ್ಸ್ ಸಂಪೂರ್ಣ ಆಧಿಪತ್ಯ ಸ್ಥಾಪಿಸಿದರು. ನಿರ್ಣಾಯಕ ಸೆಟ್‌ನಲ್ಲಿ ಭರ್ಜರಿ ಹೊಡೆತಗಳ ಮೂಲಕ ಮ್ಯಾಕ್ಸ್ ಮಿಂಚಿದರು. ಆರಂಭದಲ್ಲಿ 3–0ಯಿಂದ ಮುನ್ನಡೆದಿದ್ದಾಗ ಪೊಲ್ಮನ್ಸ್ ಎರಡು ಗೇಮ್‌ಗಳನ್ನು ಗೆದ್ದು ಆತಂಕ ಸೃಷ್ಟಿಸಿದರು. ಆದರೆ ಮ್ಯಾಕ್ಸ್ ಎದೆಗುಂದದೆ ಆಡಿ ಪಂದ್ಯ ಗೆದ್ದುಕೊಂಡರು.

ಆಸ್ಟ್ರೇಲಿಯಾದ ಅಲೆಕ್ಸಾಂಡರ್ ವುಕಿಚ್ ಚೆಂಡನ್ನು ಹಿಂದಿರುಗಿಸಿದ ವಿಧಾನ – ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ.

ವುಕಿಚ್ ಪಂದ್ಯದುದ್ದಕ್ಕೂ ಆಧಿಪತ್ಯ ಸ್ಥಾಪಿಸಿದರು. ಮೊದಲ ಸೆಟ್‌ನ ಆರಂಭದಲ್ಲಿ 5–1ರ ಮುನ್ನಡೆ ಸಾಧಿಸಿದ ಅವರು ನಂತರ ಯಾವ ಹಂತದಲ್ಲೂ ಹಿಂತಿರುಗಿ ನೋಡಲಿಲ್ಲ.

ಪ್ರಜ್ವಲ್ ದೇವ್–ನಿಕಿ ಮುನ್ನಡೆ: ವೈಲ್ಡ್ ಕಾರ್ಡ್ ಮೂಲಕ ಪ್ರವೇಶ ಪಡೆದ ಭಾರತದ ಎಸ್.ಡಿ.ಪ್ರಜ್ವಲ್ ದೇವ್ ಮತ್ತು ನಿಕಿ ಪೂಣಚ್ಚ ತಮಗಿಂತಲೂ ಹೆಚ್ಚಿನ ರ್‍ಯಾಂಕ್ ಹೊಂದಿರುವ ಕೆನಡಾದ ಸ್ಟೀವನ್ ಡೀಜ್ ಮತ್ತು ಜಪಾನ್‌ನ ರಿಯೊ ನೊಗುಚಿ ವಿರುದ್ಧ 6-2, 6-4ರಲ್ಲಿ ಗೆದ್ದು ಡಬಲ್ಸ್‌ನ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಅರ್ಜುನ್ ಖಾಡೆ ಮತ್ತು ಆಸ್ಟ್ರೇಲಿಯಾದ ಅಲೆಕ್ಸಾಂಡರ್ ಎರ್ಲರ್ ಜೋಡಿ ರಷ್ಯಾದ ಬೋಗ್ಡನ್ ಬಾಬ್ರೊವ್ ಮತ್ತು ಜೆಕ್ ಗಣರಾಜ್ಯದ ಡೊಮೊನಿಕ್ ಪಾಲನ್ ವಿರುದ್ಧ 6-0, 6-3ರಲ್ಲಿ ಗೆದ್ದರು. ಸಾಕೇತ್ ಮೈನೇನಿ ಮತ್ತು ರಾಮ್‌ಕುಮಾರ್ ರಾಮನಾಥನ್ ಭಾರತದವರೇ ಆದ ಯೂಕಿ ಭಾಂಬ್ರಿ ದಿವಿಜ್ ಶರಣ್ ವಿರುದ್ಧ 6-1, 7-5ರಲ್ಲಿ ಗೆಲುವು ಸಾಧಿಸಿದರು.

ಚಳಿಗಾಲದ ಒಲಿಂಪಿಕ್ಸ್: ರೇಸ್ ಕೊನೆಗೊಳಿಸಲು ಆರಿಫ್ ವಿಫಲ

ಬೀಜಿಂಗ್ (ಪಿಟಿಐ): ಭಾರತದ ಆಲ್ಪೈನ್ ಸ್ಕೀಯಿಂಗ್ ಪಟು ಆರಿಫ್ ಖಾನ್ ಅವರಿಗೆ ಚಳಿಗಾಲದ ಒಲಿಂಪಿಕ್ಸ್‌ನ ಸ್ಲಾಲೋಮ್ ವಿಭಾಗದಲ್ಲಿ ರೇಸ್ ಕೊನೆಗೊಳಿಸಲು ಸಾಧ್ಯವಾಗಲಿಲ್ಲ. ಇದರೊಂದಿಗೆ ಕ್ರೀಡಾಕೂಟದಲ್ಲಿ ದೇಶದ ಅಭಿಯಾನ ನಿರಾಶಾದಾಯಕವಾಗಿ ಅಂತ್ಯಗೊಂಡಿತು.

ಜಮ್ಮು ಮತ್ತು ಕಾಶ್ಮೀರದ 31 ವರ್ಷದ ಆರಿಫ್, ಈ ಬಾರಿಯ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಿದ್ದ ದೇಶದ ಏಕೈಕ ಅಥ್ಲೀಟ್ ಆಗಿದ್ದರು. ಭಾನುವಾರ ಜೈಂಟ್ ಸ್ಲಾಲೋಮ್‌ನಲ್ಲಿ 45ನೇ ಸ್ಥಾನ ಪಡೆದಿದ್ದ ಅವರು ಬುಧವಾರ ರನ್ ಒನ್ ಪೂರ್ಣಗೊಳಿಸಲು ವಿಫಲರಾದರು.

ಚಳಿಗಾಲದ ಒಲಿಂಪಿಕ್ಸ್‌ಗೆ ಪದಾರ್ಪಣೆ ಮಾಡಿದ್ದ ಖಾನ್, ರನ್ ಒನ್ ಅನ್ನು ಪೂರ್ಣಗೊಳಿಸಲು ಸಾಧ್ಯವಾಗದ ಕಾರಣ, ಸ್ಲಾಲೋಮ್

ಆರಿಫ್ ಖಾನ್

ವಿಭಾಗದ ರನ್ 2ರಲ್ಲಿ ಸ್ಪರ್ಧಿಸುವುದಿಲ್ಲ. 88 ಸ್ಪರ್ಧಿಗಳ ಪೈಕಿ 52 ಮಂದಿ ಮಾತ್ರ ಸ್ಪರ್ಧೆ ಪೂರ್ಣಗೊಳಿಸಿ ಮುಂದಿನ ಹಂತದಲ್ಲಿ ಭಾಗವಹಿಸಲು ಅರ್ಹತೆ ಗಳಿಸಿದರು.

ಸ್ಪರ್ಧೆಯಲ್ಲಿ ಉತ್ತಮ ಆರಂಭ ಮಾಡಿದ್ದ ಆರಿಫ್, ಮೊದಲ ಹಂತವನ್ನು 14.40 ಸೆಕೆಂಡುಗಳಲ್ಲಿ ಕೊನೆಗೊಳಿಸಿದ್ದರು. 34.24 ಸೆಕೆಂಡುಗಳಲ್ಲಿ ಎರಡನೇ ಹಂತ ಪೂರ್ಣಗೊಂಡಿತ್ತು. ಆದರೆ ಅಂತಿಮ ಹಂತ ಕೊನೆಗೊಳಿಸಲು ಅವರಿಗೆ ಸಾಧ್ಯವಾಗಲಿಲ್ಲ.

ಅಸ್ಟ್ರಿಯಾದ ಜೊಹಾನ್ನಸ್ ಸ್ಟ್ರಾಲ್ಜ್ (ಒಟ್ಟು 53.92 ಸೆ) ರನ್ 1 ಅನ್ನು ಅತಿವೇಗವಾಗಿ ಕೊನೆಗೊಳಿಸಿದರು.

ಐಎಸ್‌ಎಲ್: ಡ್ರಾ ಪಂದ್ಯದಲ್ಲಿ ಒಡಿಶಾ– ಚೆನ್ನೈ

ವಾಸ್ಕೊ: ಚೆನ್ನೈಯಿನ್ ಎಫ್‌ಸಿ ಮತ್ತು ಒಡಿಶಾ ಎಫ್‌ಸಿ ತಂಡಗಳು ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಬುಧವಾರ ಸಮಬಲ ಸಾಧಿಸಿದವು.

ತಿಲಕ್ ಮೈದಾನ ಕ್ರೀಡಾಂಗಣದಲ್ಲಿ ನಡೆದ ಪಂದ್ಯ 2–2ರಿಂದ ಡ್ರಾ ಆಯಿತು. ಚೆನ್ನೈ ಪರ ರಹೀಂ ಅಲಿ (2ನೇ ನಿಮಿಷ), ನೆರಿಜುಸ್ ವಲ್ಸ್‌ಕಿಸ್ (69ನೇ ನಿ.) ಗೋಲು ದಾಖಲಿಸಿದರು. ಒಡಿಶಾ ತಂಡದ ಜೇವಿಯರ್ ಹೆರ್ನಾಂಡೇಜ್ (18ನೇ ನಿಮಿಷ) ಮತ್ತು ಜೋನಾಥನ್ ಕ್ರಿಸ್ಟಿಯನ್ (51ನೇ ನಿಮಿಷ) ಮಿಂಚಿದರು.

ಗುರುವಾರ ಬ್ಯಾಂಬೊಲಿಮ್‌ನಲ್ಲಿ ನಡೆಯುವ ಪಂದ್ಯದಲ್ಲಿ ಜಮ್ಶೆಡ್‌ಪುರ ಎಫ್‌ಸಿ –ನಾರ್ತ್‌ಈಸ್ಟ್ ಯುನೈಟೆಡ್ ಎಫ್‌ಸಿ ಮುಖಾಮುಖಿಯಾಗಲಿವೆ.

ಪ್ರೊ ಕಬಡ್ಡಿ: ಬೆಂಗಾಲ್ ಜಯಭೇರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಘಟಿತ ಆಟವಾಡಿದ ಬೆಂಗಾಲ್ ವಾರಿಯರ್ಸ್ ತಂಡ ಪ್ರೊ ಕಬಡ್ಡಿ ಲೀಗ್‌ನ ಬುಧವಾರದ ಪಂದ್ಯದಲ್ಲಿ ಭರ್ಜರಿ ಜಯ ಗಳಿಸಿ ಪ್ಲೇ ಆಫ್ ಹಂತದ ಕನಸನ್ನು ಜೀವಂತವಾಗಿರಿಸಿಕೊಂಡಿತು.

ವೈಟ್‌ಫೀಲ್ಡ್‌ನ ಶೆರಟಾನ್ ಗ್ರ್ಯಾಂಡ್ ಹೋಟೆಲ್ ಆವರಣದಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಬೆಂಗಾಲ್ ವಾರಿಯರ್ಸ್ 52–21ರಲ್ಲಿ ತಮಿಳ್ ತಲೈವಾಸ್ ಎದುರು ಜಯ ಸಾಧಿಸಿತು.

ನಾಯಕ ಮಣಿಂದರ್ ಸಿಂಗ್ (14 ಪಾಯಿಂಟ್ಸ್) ಅವರ ‘ ಸೂಪರ್’ ರೇಡಿಂಗ್ ಮತ್ತು ಮೊಹಮ್ಮದ್ ನಬಿಭಕ್ಷ್ (13 ಪಾಯಿಂಟ್ಸ್) ಅವರ ಅಲ್‌ರೌಂಡ್ ಆಟಕ್ಕೆ ಅಬೋಜರ್ ಮಿಘಾನಿ ಮತ್ತು ರಣ್ ಸಿಂಘ್ ಅವರ ಟ್ಯಾಕ್ಲಿಂಗ್ ಬಲ ತುಂಬಿತು. ಈ ನಾಲ್ವರ ಆಟ ತಂಡದ ಕೈ ಹಿಡಿಯಿತು. ಸಾಗರ್ ಮತ್ತು ನಾಯಕ ಸುರ್ಜೀತ್ ಸಿಂಗ್ ಅವರನ್ನೊಳಗೊಂಡ ತಮಿಳ್ ತಲೈವಾಸ್‌ನ ಟ್ಯಾಕ್ಲಿಂಗ್ ವಿಭಾಗಕ್ಕೆ ಎದುರಾಳಿ ತಂಡದ ರೇಡರ್‌ಗಳನ್ನು ಕಟ್ಟಿಹಾಕಲು ಸಾಧ್ಯವಾಗಲಿಲ್ಲ.

ಮೊದಲಾರ್ಧದಲ್ಲಿ ಬೆಂಗಾಲ್ ವಾರಿಯರ್ಸ್ ಸಂಪೂರ್ಣ ಆಧಿಪತ್ಯ ಸ್ಥಾಪಿಸಿತ್ತು. ರೇಡಿಂಗ್‌ನಲ್ಲಿ ಸತತ ಪಾಯಿಂಟ್‌ಗಳು ಹರಿದುಬಂದವು. ಹೀಗಾಗಿ ಎಂಟನೇ ನಿಮಿಷದಲ್ಲೇ ತಲೈವಾಸ್ ಆಲ್‌ಔಟ್ ಆಯಿತು. ಪ್ರಥಮಾರ್ಧದ ಮುಕ್ತಾಯಕ್ಕೆ ಮೂರು ನಿಮಿಷ ಬಾಕಿ ಇರುವಾಗ ತಲೈವಾಸ್ ಮತ್ತೊಮ್ಮೆ ಆಲೌಟ್ ಆಯಿತು. ವಿರಾಮಕ್ಕೆ ತೆರಳುವಾಗ ಬೆಂಗಾಲ್ 28–10ರ ಮುನ್ನಡೆ ಸಾಧಿಸಿತ್ತು.

ವಿರಾಮದ ನಂತರ ನಾಲ್ಕನೇ ನಿಮಿಷದಲ್ಲಿ ಎದುರಾಳಿ ಅಂಗಣವನ್ನು ಬೆಂಗಾಲ್ ಮತ್ತೊಮ್ಮೆ ಖಾಲಿ ಮಾಡಿತು. ಪಂದ್ಯದ ಮುಕ್ತಾಯಕ್ಕೆ ನಿಮಿಷಗಳು ಇರುವಾಗ ತಂಡ 40–18ರ ಮುನ್ನಡೆ ಗಳಿಸಿತು. ಮೂರು ನಿಮಿಷ ಬಾಕಿ ಇರುವಾಗ ತಮಿಳ್ ಪಾಳಯ ಮತ್ತೊಮ್ಮೆ ಖಾಲಿಯಾಯಿತು.

ಜೈಪುರ ಜಯಭೇರಿ: ಮತ್ತೊಂದು ಪಂದ್ಯದಲ್ಲಿ ಜೈಪುರ ಪಿಂಕ್ ಪ್ಯಾಂಥರ್ಸ್ 54–35ರಲ್ಲಿ ತೆಲುಗು ಟೈಟನ್ಸ್ ವಿರುದ್ಧ ಗೆದ್ದಿತು. ಅರ್ಜುನ್ ದೇಶ್ವಾಲ್ (14), ಬೃಜೇಂದ್ರ ಸಿಂಗ್ (8) ಮತ್ತು ಸಂದೀಪ್ ಧೂಳ್ ತಂಡದ ಪರವಾಗಿ ಮಿಂಚಿದರು. ತೆಲುಗು ತಂಡಕ್ಕಾಗಿ ರಾಜು ಗಾಲ (9), ಆದರ್ಶ್ ಮತ್ತು ಅಂಕಿತ್ ಬೇನಿವಾಲ್ ತಲಾ 6 ಪಾಯಿಂಟ್ ಗಳಿಸಿ ಮಿಂಚಿದರು.

ಗುರುವಾರ ನಡೆಯುವ ಮೊದಲ ಪಂದ್ಯದಲ್ಲಿ ಯುಪಿ ಯೋಧಾ– ಯು ಮುಂಬಾ ಸೆಣಸಲಿವೆ. ಬಳಿಕ ಬೆಂಗಳೂರು ಬುಲ್ಸ್–ಹರಿಯಾಣ ಸ್ಟೀಲರ್ಸ್ ನಂತರ ದಬಂಗ್ ಡೆಲ್ಲಿ ಮತ್ತು ಪಟ್ನಾ ಪೈರೇಟ್ಸ್ ತಂಡಗಳ ನಡುವೆ ಸೆಣಸಾಟ ನಡೆಯಲಿದೆ.

ಬೆಂಗಾಲ್ ವಾರಿಯರ್ಸ್ ತಂಡದ ಮಣಿಂದರ್ ಸಿಂಗ್ ರೇಡಿಂಗ್ ವೈಖರಿ

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್ಸ್
ಪಟ್ನಾ ಪೈರೇಟ್ಸ್	20	15	4	1	80
ದಬಂಗ್ ಡೆಲ್ಲಿ	20	10	6	4	65
ಯು ಪಿ ಯೋಧಾ	21	9	9	3	63
ಹರಿಯಾಣ ಸ್ಟೀಲರ್ಸ್	20	10	7	3	63
ಜೈಪುರ ಪಿಂಕ್ ಪ್ಯಾಂಥರ್ಸ್	21	10	9	2	62
ಬೆಂಗಳೂರು ಬುಲ್ಸ್	21	10	9	2	61
ಪುಣೇರಿ ಪಲ್ಟನ್	20	11	8	1	60
ಗುಜರಾತ್ ಜೈಂಟ್ಸ್	20	8	8	4	57
ಯು ಮುಂಬಾ	20	7	8	5	53
ಬೆಂಗಾಲ್ ವಾರಿಯರ್ಸ್	21	8	10	3	52
ತಮಿಳ್ ತಲೈವಾಸ್	21	5	10	6	47
ತೆಲುಗು ಟೈಟನ್ಸ್	21	1	16	4	27

(ಬುಧವಾರದ ಪಂದ್ಯಗಳ ಅಂತ್ಯಕ್ಕೆ)

25ಕ್ಕೆ ಫೈನಲ್

ಪ್ರೊ ಕಬಡ್ಡಿ ಲೀಗ್‌ನ ಎಂಟನೇ ಆವೃತ್ತಿಯ ಫೈನಲ್ ಹಣಾಹಣಿ ಇದೇ 25ರಂದು ನಡೆಯಲಿದೆ. ಆಯೋಜಕರಾದ ಮಶಾಲ್ ಸ್ಪೋರ್ಟ್ಸ್ ಅಂತಿಮ ಹಂತದ ವೇಳಾಪಟ್ಟಿಯನ್ನು ಬುಧವಾರ ಬಿಡುಗಡೆ ಮಾಡಿದ್ದು ಇದೇ 21ರಿಂದ ನಾಕೌಟ್ ಪಂದ್ಯಗಳು ನಡೆಯಲಿವೆ.

ಅಗ್ರ ಎರಡು ತಂಡಗಳು ನೇರವಾಗಿ ಸೆಮಿಫೈನಲ್ ಪ್ರವೇಶಿಸಲಿವೆ. ಉಳಿದ ಎರಡು ತಂಡಗಳನ್ನು ನಿರ್ಣಯಿಸಲು ನಾಲ್ಕು ಎಲಿಮಿನೇಟರ್ ಪಂದ್ಯಗಳು ನಡೆಯಲಿವೆ. ಲೀಗ್ ಹಂತದಲ್ಲಿ ಮೂರು ಮತ್ತು ಆರನೇ ಸ್ಥಾನ ಗಳಿಸಿದ ತಂಡಗಳು ಮೊದಲ ಎಲಿಮಿನೇಟರ್‌ನಲ್ಲಿ ಸೆಣಸಲಿವೆ. 22ರಂದು ವಿಶ್ರಾಂತಿ ದಿನವಾಗಿದ್ದು ಸೆಮಿಫೈನಲ್ ಪಂದ್ಯಗಳು 23ರಂದು ನಡೆಯಲಿವೆ. ಲೀಗ್‌ನಲ್ಲಿ ಒಂದನೇ ಸ್ಥಾನ ಪಡೆದ ತಂಡ ಮತ್ತು ಒಂದನೇ ಎಲಿಮಿನೇಟರ್‌ನಲ್ಲಿ ಗೆದ್ದ ತಂಡದ ನಡುವೆ ಮೊದಲ ಸೆಮಿಫೈನಲ್, ಲೀಗ್‌ನಲ್ಲಿ ಎರಡನೇ ಸ್ಥಾನ ಪಡೆದ ತಂಡ ಮತ್ತು ಎರಡನೇ ಎಲಿಮಿನೇಟರ್‌ನಲ್ಲಿ ಗೆದ್ದ ತಂಡದ ನಡುವೆ ಎರಡನೇ ಸೆಮಿಫೈನಲ್‌ನಲ್ಲಿ ಹೋರಾಡಲಿವೆ.

ಬ್ಯಾಡ್ಮಿಂಟನ್: ಮಲೇಷ್ಯಾಗೆ ಮಣಿದ ಭಾರತ

ಷಾ ಆಲಂ, ಮಲೇಷ್ಯಾ (ಪಿಟಿಐ): ವೀರೋಚಿತ ಹೋರಾಟ ಭಾರತ ಮಹಿಳಾ ತಂಡವು ಏಷ್ಯಾ ಬ್ಯಾಡ್ಮಿಂಟನ್ ಟೀಮ್ ಚಾಂಪಿಯನ್‌ಷಿಪ್‌ನ ಮೊದಲ ಪಂದ್ಯದಲ್ಲಿ ಬುಧವಾರ ಮಲೇಷ್ಯಾ ತಂಡದ ಎದುರು 2–3ರಿಂದ ಸೋಲನುಭವಿಸಿತು.

ಉತ್ತಮ ಲಯದಲ್ಲಿದ್ದ ಮಾಳವಿಕಾ ಬಂಸೋಡ್ ಅವರು ಅನಾರೋಗ್ಯದ ಹಿನ್ನೆಲೆಯಲ್ಲಿ ಕೊನೆಯ ಕ್ಷಣದಲ್ಲಿ ಸ್ಪರ್ಧೆಯಿಂದ ಹಿಂದೆ ಸರಿದರು. ಮೊದಲ ಸಿಂಗಲ್ಸ್ ಪಂದ್ಯದಲ್ಲಿ ಆಕರ್ಷಿ ಕಶ್ಯಪ್ 16-21, 21-18, 16-21ರಿಂದ ಕಿಸೊನಾ ಸೆಲ್ವಾಡುರಾಯ್ ಎದುರು ಸೋತರು.

ಡಬಲ್ಸ್ ಜೋಡಿ ಖುಷಿ ಗುಪ್ತಾ – ಮೆಹರೀನ್ ರಿಜಾ 1-21 6-21ರಿಂದ ವಲೇರಿ ಸಿಯೊವ್ ಮತ್ತು ಪರ್ಲಿ ಟ್ಯಾನ್ ಅವರ ಎದುರು ಮುಗ್ಗರಿಸಿದರು. 29 ನಿಮಿಷಗಳ ಸಿಂಗಲ್ಸ್ ಹಣಾಹಣಿಯಲ್ಲಿ ಅಸ್ಮಿತಾ 21-11 21-19ರಿಂದ ಸಿತಿ ನೂರ್‌ಸುಹೈನಿ ಎದುರು ಗೆದ್ದು ತಂಡದ ಜಯದ ಆಸೆ ಜೀವಂತವಾಗಿರಿಸಿದರು. ಆದರೆ ಡಬಲ್ಸ್‌ನಲ್ಲಿ ಅರುಲ್ ಬಾಲಾ ರಾಧಾಕೃಷ್ಣನ್– ನೀಲಾ ವೆಳ್ಳುವನ್ ಅವರು 10-21 12-21ರಿಂದ ಆ್ಯನಾ ಚೆಂಗ್ ಯಿಕ್ ಚೊಂಗ್– ತೊ ಮೇ ಕ್ಸಿಂಗ್ ಎದುರು ಸೋಲುವುದರೊಂದಿಗೆ ಮಲೇಷ್ಯಾಗೆ 3–1ರ ಮುನ್ನಡೆ ಸಿಕ್ಕಿತು.

ಕೊನೆಯಲ್ಲಿ ತಾರಾ 21-16, 21-15ರಿಂದ ಮಿಶಾ ಮೊಹಮ್ಮದ್ ಖೈರುಲ್ ಎದುರು ಜಯಿಸಿ ಹಿನ್ನಡೆಯನ್ನು ತಗ್ಗಿಸಿದರು.

ಉಕ್ರೇನ್‌ನಿಂದ ‘ಏಕತಾ ದಿನ’; ರ್‍ಯಾಲಿಗಳ ಆಯೋಜನೆ

‘ಕ್ರಿಮಿಯಾದಿಂದಲೂ ಸೇನೆ ಹಿಂದಕ್ಕೆ’

ಕೀವ್ (ಎಎಫ್‌ಪಿ): ಕ್ರಿಮಿಯಾದಲ್ಲಿ ಕೈಗೊಂಡಿದ್ದ ಯುದ್ಧ ತಾಲೀಮು ಮುಕ್ತಾಯವಾಗಿದ್ದು, ಸೇನಾ ತುಕಡಿಗಳು ತಮ್ಮ ನೆಲೆಗಳಿಗೆ ವಾಪಸ್ ಆಗುತ್ತಿವೆ ಎಂದು ರಷ್ಯಾ ಬುಧವಾರ ಹೇಳಿದೆ.

‘ನ್ಯಾಟೊ ಪಡೆಗಳನ್ನು ಸೇರಬೇಕು ಎಂಬ ತನ್ನ ಮಹತ್ವಾಕಾಂಕ್ಷೆಯಿಂದ ಉಕ್ರೇನ್ ಹಿಂದೆ ಸರಿಯಬೇಕು’ ಎಂದು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಹೇಳಿದ್ದಾರೆ.

ಪೂರ್ವ ಯುರೋಪ್‌ನ ಭದ್ರತೆಯು ಪಾಶ್ಚಿಮಾತ್ಯ ರಾಷ್ಟ್ರಗಳ ಪ್ರಭಾವದಿಂದ ಮುಕ್ತವಾಗಬೇಕು ಎಂಬ ತಮ್ಮ ನಿಲುವನ್ನು ಸಹ ಅವರು ಪುನರುಚ್ಚರಿಸಿದ್ದಾರೆ. ಟ್ಯಾಂಕ್‌ಗಳು, ಸೇನಾ ವಾಹನಗಳು ಹಾಗೂ ಶಸ್ತ್ರಾಸ್ತ್ರಗಳನ್ನು ರೈಲು ಮೂಲಕ ಕ್ರಿಮಿಯಾದಿಂದ ಸಾಗಿಸಲಾಗುತ್ತಿದೆ ಎಂದು ರಷ್ಯಾ ರಕ್ಷಣಾ ಸಚಿವಾಲಯ ತಿಳಿಸಿದೆ.

ರಷ್ಯಾಕ್ಕೆ ತಕ್ಕ ಉತ್ತರ: ಬೈಡನ್

ವಾಷಿಂಗ್ಟನ್(ಪಿಟಿಐ): ಉಕ್ರೇನ್ ಗಡಿಯಿಂದ ತನ್ನ ಸೇನಾ ತುಕಡಿಗಳನ್ನು ವಾಪಸ್ ಕರೆಸಿಕೊಂಡಿರುವ ರಷ್ಯಾದ ಹೇಳಿಕೆಗಳನ್ನು ಪರಿಶೀಲನೆಗೆ ಒಳಪಡಿಸಲು ಸಾಧ್ಯವಿರುವ ಮತ್ತಷ್ಟು ಸಾಕ್ಷ್ಯಗಳ ಅಗತ್ಯವಿದೆ ಎಂದು ಅಮೆರಿಕ ಪ್ರತಿಕ್ರಿಯಿಸಿದೆ.

‘ಉಕ್ರೇನ್ ಮೇಲೆ ರಷ್ಯಾ ದಾಳಿ ನಡೆಸುವ ಅಪಾಯ ಇನ್ನೂ ಕೊನೆಯಾಗಿಲ್ಲ. ದಾಳಿಯ ಸಾಧ್ಯತೆಗಳು ಇನ್ನೂ ಇವೆ ಎಂಬುದಾಗಿ ನಮ್ಮ ತಜ್ಞರು ಹೇಳಿದ್ದಾರೆ. ಹೀಗಾಗಿ ಉಕ್ರೇನ್ ಮೇಲೆ ನಡೆಯುವ ಯಾವುದೇ ದಾಳಿಗೆ ತಕ್ಕ ಉತ್ತರ ನೀಡಲಾಗುವುದು’ ಎಂದು ಅಮೆರಿಕ ಅಧ್ಯಕ್ಷ ಜೋ ಬೈಡನ್ ಹೇಳಿದ್ದಾರೆ.

ಆದರೆ, ರಷ್ಯಾದ ದಾಳಿ ಬೆದರಿಕೆಗೆ ಬಗ್ಗುವುದಿಲ್ಲ ಎಂದಿರುವ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ, ದೇಶದಾದ್ಯಂತ ‘ಏಕತಾ ದಿನ’ ಹಮ್ಮಿಕೊಂಡಿರುವುದಾಗಿ ಹೇಳಿದ್ದಾರೆ. ರಾಷ್ಟ್ರ ಧ್ವಜದೊಂದಿಗೆ ರ್‍ಯಾಲಿಯಲ್ಲಿ ಪಾಲ್ಗೊಂಡಿದ್ದ ಜನರು, ರಾಷ್ಟ್ರಗೀತೆ ಹಾಡಿ ಒಗ್ಗಟ್ಟು ಪ್ರದರ್ಶಿಸಿದರು.

ರಷ್ಯಾದ ಈ ನಡೆಯಿಂದಾಗಿ ಉಕ್ರೇನ್ ಗಡಿಯಲ್ಲಿ ಸೃಷ್ಟಿಯಾಗಿದ್ದ ಉದ್ವಿಗ್ನತೆ ಮತ್ತಷ್ಟೂ ತಗ್ಗಿದಂತಾಗಿದೆ ಎಂದು ವಿಶ್ಲೇಷಿಸಲಾಗುತ್ತಿದೆ. 2014ರಲ್ಲಿ ಉಕ್ರೇನ್‌ನ ಕ್ರಿಮಿಯಾ ಪ್ರದೇಶವನ್ನು ರಷ್ಯಾ ಆಕ್ರಮಿಸಿಕೊಂಡಿದೆ.

‘ಜಗತ್ತಿನಲ್ಲಿ ಅತಿ ಮಾಲಿನ್ಯದ ನದಿ ರಾವಿ’

ಲಾಹೋರ್ (ಪಿಟಿಐ): ಪಾಕಿಸ್ತಾನದಲ್ಲಿನ ರಾವಿ ನದಿಯು ಜಗತ್ತಿನಲ್ಲಿ ಅತಿ ಮಲಿನಯುಕ್ತವಾದ ನದಿ ಎಂದು ಅಮೆರಿಕ ಮೂಲದ ಸಂಶೋಧನಾ ಅಕಾಡೆಮಿ ಹೇಳಿದೆ.

ಇದಕ್ಕೂ ಮುನ್ನ ಬೊಲಿವಿಯಾ ಮತ್ತು ಇಥಿಯೋಪಿಯಾದಲ್ಲಿನ ಜಲಮೂಲಗಳು ಮಾಲಿನ್ಯಯುಕ್ತವಾಗಿದ್ದವು.

ರಾವಿ ನದಿಯ ಮಾಲಿನ್ಯದಿಂದ ಈ ಪ್ರದೇಶಗಳಲ್ಲಿನ ಸ್ಥಳೀಯ ಜನರು ಗಂಭೀರ ಕಾಯಿಲೆಗಳಿಗೆ ತುತ್ತಾಗುವ ಸಾಧ್ಯತೆ ಇದೆ ಎಂದು ಅಕಾಡೆಮಿ ಎಚ್ಚರಿಸಿದೆ.

ಯಾರ್ಕ್ ವಿಶ್ವವಿದ್ಯಾಲಯವು ಎಲ್ಲಾ ಖಂಡಗಳ 104 ದೇಶಗಳ 258 ನದಿಗಳ 1,052 ಪ್ರದೇಶಗಳಲ್ಲಿ ಈ ಅಧ್ಯಯನ ನಡೆಸಿದೆ.

ಕೋವಿಡ್ ಹೊಸ ಪ್ರಕರಣಗಳು ಶೇ19 ರಷ್ಟು ಇಳಿಕೆ: ಡಬ್ಲ್ಯುಎಚ್‌ಒ

ಜಿನೀವಾ (ಎಪಿ): ಕಳೆದ ವಾರ ಕೋವಿಡ್ ಹೊಸ ಪ್ರಕರಣಗಳು ಶೇ 19 ರಷ್ಟು ಕಡಿಮೆಯಾಗಿದೆ. ಮರಣ ಸಂಖ್ಯೆಯಲ್ಲಿ ಸ್ಥಿರತೆ ಇದೆ ಎಂದು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಹೇಳಿದೆ.

ಕಳೆದ ವಾರ ಜಾಗತಿಕ ಮಟ್ಟದಲ್ಲಿ 1.6 ಕೋಟಿ ಕೋವಿಡ್ ಹೊಸ ಪ್ರಕರಣಗಳು ಮತ್ತು 75 ಸಾವಿರ ಸಾವುಗಳು ಕಂಡು ಬಂದಿವೆ ಎಂದು ವಿಶ್ವಸಂಸ್ಥೆಯ ಆರೋಗ್ಯ ಸಂಸ್ಥೆಯು ತನ್ನ ವಾರದ ವರದಿಯಲ್ಲಿ ಮಂಗಳವಾರ ತಡರಾತ್ರಿ ಹೇಳಿದೆ.

ಪಾಶ್ಚಿಮಾತ್ಯ ಪೆಸಿಫಿಕ್ ಪ್ರದೇಶದಲ್ಲಿ ಮಾತ್ರ ವಾರದ ಕೋವಿಡ್ ಪ್ರಕರಣಗಳಲ್ಲಿ ಶೇ 19 ರಷ್ಟು ಹೆಚ್ಚಳವಾಗಿದೆ. ಆಗ್ನೇಯ ಏಷ್ಯಾದಲ್ಲಿ ದಾಖಲೆ ಮಟ್ಟದಲ್ಲಿ ಶೇ 37 ರಷ್ಟು ಹೊಸ ಪ್ರಕರಣಗಳು ಕಡಿಮೆಯಾಗಿವೆ. ಆದರೆ ಮಧ್ಯಪ್ರಾಚ್ಯದಲ್ಲಿ ಕೋವಿಡ್ ಸಾವಿನ ಸಂಖ್ಯೆ ಶೇ 38 ರಷ್ಟು ಹಾಗೂ ಪಶ್ಚಿಮ ಪೆಸಿಫಿಕ್‌ನಲ್ಲಿ ಮೂರನೇ ಒಂದರಷ್ಟು ಹೆಚ್ಚಾಗಿದೆ.

ರಷ್ಯಾದಲ್ಲಿ ಅತಿ ಹೆಚ್ಚು ಕೋವಿಡ್ ಹೊಸ ಪ್ರಕರಣಗಳು ಪತ್ತೆಯಾಗಿವೆ. ಓಮೈಕ್ರಾನ್ ರೂಪಾಂತರ ತಳಿಯ ಹೆಚ್ಚಳದಿಂದ ಇತ್ತೀಚಿನ ವಾರಗಳಲ್ಲಿ ಇಲ್ಲಿ ಹಾಗೂ ಪೂರ್ವ ಯುರೋಪ್‌ನಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ದ್ವಿಗುಣಗೊಂಡಿದೆ ಎಂದು ವರದಿ ಹೇಳಿದೆ.

ಶ್ರೀಲಂಕಾ: ಪಿಟಿಎ ರದ್ದತಿಗೆ ಮಾನವ ಹಕ್ಕು ಆಯೋಗ ಒತ್ತಾಯ

ಕೊಲಂಬೊ (ಪಿಟಿಐ): ವಿಚಾರಣೆಯಿಲ್ಲದೆ ಶಂಕಿತರನ್ನು ಬಂಧಿಸಲು ಪೊಲೀಸರಿಗೆ ಸಂಪೂರ್ಣ ಅಧಿಕಾರ ನೀಡುವ ಭಯೋತ್ಪಾದನಾ ವಿರೋಧಿ ಕಾಯ್ದೆಯನ್ನು (ಪಿಟಿಎ) ರದ್ದುಗೊಳಿಸುವಂತೆ ಶ್ರೀಲಂಕಾದ ಮಾನವ ಹಕ್ಕುಗಳ ಆಯೋಗವು ಒತ್ತಾಯಿಸಿದೆ.

ಈ ಕಾಯಿದೆಯಿಂದ ಮಾನವ ಹಕ್ಕುಗಳು ಉಲ್ಲಂಘನೆಯಾಗುತ್ತದೆ ಎಂದು ಇಲ್ಲಿಯ ತಮಿಳು, ಮುಸ್ಲಿಂ ರಾಜಕೀಯ ಪಕ್ಷಗಳು ಮತ್ತು ಐರೋಪ್ಯ ಒಕ್ಕೂಟವು ಕಳವಳ ವ್ಯಕ್ತಪಡಿಸಿದ್ದು ಕಾನೂನು ಹಿಂಪಡೆಯಲು ಸರ್ಕಾರದ ಮೇಲೆ ಒತ್ತಡ ಹೇರುತ್ತಿವೆ.

1979ರಲ್ಲಿ ಭಯೋತ್ಪಾದನಾ ವಿರೋಧಿ ಕಾಯ್ದೆಯನ್ನು ಜಾರಿಗೊಳಿಸಲಾಗಿದೆ. ಭಯೋತ್ಪಾದನಾ ಚಟುವಟಿಕೆಗಳಲ್ಲಿ ಭಾಗಿಯಾಗಿರುವ ಶಂಕೆಯ ಮೇರೆಗೆ ವ್ಯಕ್ತಿಯನ್ನು ವಾರಂಟ್ ರಹಿತವಾಗಿ ಬಂಧಿಸುವ ಮತ್ತು ಶೋಧ ನಡೆಸುವ ಸಂಪೂರ್ಣ ಅಧಿಕಾರವನ್ನು ಪೊಲೀಸರಿಗೆ ಕಾಯ್ದೆಯು ನೀಡುತ್ತದೆ.

398 ಕೋಚ್‌ಗಳ ನೇಮಕ: ಸಾಯ್

ನವದೆಹಲಿ (ಪಿಟಿಐ): 2024ರ ಪ್ಯಾರಿಸ್ ಮತ್ತು 2028ರ ಲಾಸ್ ಏಂಜಲೀಸ್ ಒಲಿಂಪಿಕ್ಸ್ ಸೇರಿದಂತೆ ಪ್ರಮುಖ ಕ್ರೀಡಾಕೂಟಗಳಿಗೆ ತಯಾರಿ ನಡೆಸಲು 21 ವಿಭಾಗಗಳಲ್ಲಿ ವಿವಿಧ ಹಂತಗಳಲ್ಲಿ 398 ತರಬೇತುದಾರರನ್ನು ನೇಮಿಸಲಾಗಿದೆ ಎಂದು ಭಾರತ ಕ್ರೀಡಾ ಪ್ರಾಧಿಕಾರ (ಸಾಯ್) ಬುಧವಾರ ತಿಳಿಸಿದೆ.

ತರಬೇತುದಾರರು ಮತ್ತು ಸಹಾಯಕ ತರಬೇತುದಾರರನ್ನು ಒಳಗೊಂಡ ಗುಂಪಿನಲ್ಲಿ ಏಷ್ಯನ್ ಗೇಮ್ಸ್ ಚಿನ್ನದ ಪದಕ ವಿಜೇತ ರೋಯಿಂಗ್ ಪಟು ಬಜರಂಗ್ ಲಾಲ್ ಥಕ್ಕರ್ ಇದ್ದಾರೆ. ಅವರಿಗೆ ರೋಯಿಂಗ್ ತರಬೇತಿಯ ಹೊಣೆ ನೀಡಲಾಗಿದೆ.

ಕಾಮನ್‌ವೆಲ್ತ್ ಚಾಂಪಿಯನ್‌ಷಿಪ್ ಚಿನ್ನದ ಪದಕ ವಿಜೇತೆ ಕುಸ್ತಿಪಟು ಶಿಲ್ಪಿ ಶೆರಾನ್ ಅವರು ಕುಸ್ತಿಯ ಸಹಾಯಕ ಕೋಚ್ ಆಗಿ ಸೇರ್ಪಡೆಗೊಂಡರೆ, ಜಿನ್ಸಿ ಫಿಲಿಪ್ ಅಥ್ಲೆಟಿಕ್ಸ್ ತರಬೇತುದಾರರಾಗಿ ಕಾರ್ಯನಿರ್ವಹಿಸಲಿದ್ದಾರೆ. ಪ್ರಣಾಮಿಕಾ ಬೋರಾ ಅವರು ಬಾಕ್ಸಿಂಗ್ ಕೋಚ್ ಆಗಿ ನೇಮಕಗೊಂಡಿದ್ದಾರೆ.

ಕೊಚ್ಚಿ ಜಯಭೇರಿ

ಹೈದರಾಬಾದ್: ಕೊಚ್ಚಿ ಬ್ಲ್ಯೂ ಸ್ಪೈಕರ್ಸ್ ತಂಡವು ಪ್ರೈಮ್ ವಾಲಿಬಾಲ್ ಲೀಗ್‌ನಲ್ಲಿ ಮೊದಲ ಜಯ ಸಂಪಾದಿಸಿತು.

ಗಚ್ಚಿಬೌಳಿ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ 15-12, 15-11, 14-15, 12-15, 15-10ರಿಂದ ಚೆನ್ನೈ ಬ್ಲಿಟ್ಜ್ ತಂಡವನ್ನು ಪರಾಭವಗೊಳಿಸಿತು. ಈ ಜಯದ ಮೂಲಕ ಕೊಚ್ಚಿ ತಂಡವು ಎರಡು ಅಂಕ ಗಳಿಸಿತು.

ಕ್ವಾರ್ಟರ್‌ಗೆ ಸಾನಿಯಾ– ರಾಡೆಕಾ

ದುಬೈ (ಪಿಟಿಐ): ಜಿದ್ದಾಜಿದ್ದಿನ ಹೋರಾಟದಲ್ಲಿ ಗೆದ್ದ ಭಾರತದ ಸಾನಿಯಾ ಮಿರ್ಜಾ ಮತ್ತು ಜೆಕ್ ಗಣರಾಜ್ಯದ ಲೂಸಿ ರಾಡೆಕಾ ಅವರು ದುಬೈ ಟೆನಿಸ್ ಚಾಂಪಿಯನ್‌ಷಿಪ್‌ನ ಕ್ವಾರ್ಟರ್‌ಫೈನಲ್ ತಲುಪಿದ್ದಾರೆ.

ಮಂಗಳವಾರ ರಾತ್ರಿ ನಡೆದ ಮಹಿಳಾ ಡಬಲ್ಸ್ ವಿಭಾಗದ ಪ್ರೀಕ್ವಾರ್ಟರ್‌ಫೈನಲ್ ಹಣಾಹಣಿಯಲ್ಲಿ ಸಾನಿಯಾ–ಲೂಸಿ 7-6, 5-7, 11-9ರಿಂದ ಚೀನಾ ತೈಪೆಯ ಚಾನ್ ಹೊವಾ ಚಿಂಗ್ ಮತ್ತು ನೆದರ್ಲೆಂಡ್ಸ್‌ನ ಡೆಮಿ ಶೂರ್ಸ್ ವಿರುದ್ಧ ಗೆಲುವು ಸಾಧಿಸಿದರು.

ಸಾನಿಯಾ ಮಿರ್ಜಾ

ಭಾರತ, ಜೆಕ್ ಜೋಡಿಯು ಟೂರ್ನಿಗೆ ವೈಲ್ಡ್‌ಕಾರ್ಡ್ ಪ್ರವೇಶ ಪಡೆದಿದೆ. ಎಂಟರಘಟ್ಟದಲ್ಲಿ ಜಪಾನ್‌ನ ಶುಕೊ ಒಯಮಾ- ಸರ್ಬಿಯಾದ ಅಲೆಕ್ಸಾಂಡ್ರಾ ಕ್ರುನಿಚ್ ಸವಾಲು ಎದುರಿಸಲಿದೆ.

ಖ್ಯಾತ ಸಂಗೀತ ಸಂಯೋಜಕ ಮತ್ತು ಗಾಯಕರಿಗೆ ನಮನಗಳು.



ಎರಡು ವರ್ಷಗಳ ನಂತರ ರಣಜಿ ಟೂರ್ನಿ ಇಂದು ಆರಂಭ; ಒಂಬತ್ತು ಅಂಗಣಗಳಲ್ಲಿ ಹಣಾಹಣಿ

ದೇಶಿ ಕ್ರಿಕೆಟ್ ಸಂಭ್ರಮಕ್ಕೆ ಹೊಸ ಹುರುಪು

ಅಹಮದಾಬಾದ್ (ಪಿಟಿಐ): ದೇಶಿ ಕ್ರಿಕೆಟ್‌ನ ರಾಜ ಎಂದೇ ಪರಿಗಣಿಸಲಾಗಿರುವ ರಣಜಿ ಕ್ರಿಕೆಟ್ ಟೂರ್ನಿಯ ಈ ಋತುವಿನ ಪಂದ್ಯಗಳಿಗೆ ಗುರುವಾರ ಚಾಲನೆ ಸಿಗಲಿದೆ. ಕೋವಿಡ್ ಕಾರಣದಿಂದಾಗಿ ಎರಡು ವರ್ಷ ಟೂರ್ನಿ ನಡೆದಿರಲಿಲ್ಲ. ಆದ್ದರಿಂದ ಈಗ ಕುತೂಹಲ ಹೆಚ್ಚಿದೆ.

ಯುವ ಆಟಗಾರರಿಗೆ ಈ ಟೂರ್ನಿ ಭವಿಷ್ಯದ ಚಿಮ್ಮುಹಲಗೆ. ಇದೇ ಸಂದರ್ಭದಲ್ಲಿ ಅಜಿಂಕ್ಯ ರಹಾನೆ ಮತ್ತು ಚೇತೇಶ್ವರ ಪೂಜಾರ ಅವರಂಥ ಅನುಭವಿ ಆಟಗಾರರಿಗೆ ದೀರ್ಘ ಮಾದರಿಯ ಕ್ರಿಕೆಟ್‌ಗೆ ಮರಳಲು ಮತ್ತೊಮ್ಮೆ ಅವಕಾಶದ ಬಾಗಿಲು. ಬಯೊಬಬಲ್ ವ್ಯವಸ್ಥೆಯಡಿ ಈ ಬಾರಿ ಟೂರ್ನಿ ನಡೆಯುತ್ತಿರುವುದು ವಿಶೇಷ.

ಮೊದಲ ಸುತ್ತಿನ ಪಂದ್ಯಗಳ ಪೈಕಿ ಹಾಲಿ ಚಾಂಪಿಯನ್ ಸೌರಾಷ್ಟ್ರ ಮತ್ತು ದಾಖಲೆ 41 ಬಾರಿಯ ಪ್ರಶಸ್ತಿ ವಿಜೇತ ಮುಂಬೈ ತಂಡಗಳ ನಡುವಿನ ಹಣಾಹಣಿ ತೀವ್ರ ಕುತೂಹಲ ಕೆರಳಿಸಿದೆ. ಮುಂಬೈ ತಂಡದಲ್ಲಿ ರಹಾನೆ ಮತ್ತು ಸೌರಾಷ್ಟ್ರ ಪರವಾಗಿ ಚೇತೇಶ್ವರ ಪೂಜಾರ ಕಣಕ್ಕೆ ಇಳಿಯಲು ಸಜ್ಜಾಗಿದ್ದಾರೆ. ಫಾರ್ಮ್ ಕಳೆದುಕೊಂಡಿರುವ ಇವರಿಬ್ಬರು ಟೂರ್ನಿಯಲ್ಲಿ ಚೇತರಿಸಿಕೊಳ್ಳುವರೇ ಎಂಬುದನ್ನು ಕಾದುನೋಡಬೇಕು.

ಒಂಬತ್ತು ಬಯೊಬಬಲ್‌ಗಳು: ದೇಶದ ಉದ್ದಗಲಕ್ಕೂ ಒಂಬತ್ತು ಕ್ರೀಡಾಂಗಣಗಳಲ್ಲಿ ಪಂದ್ಯಗಳು ನಡೆಯಲಿವೆ. ಇದಕ್ಕಾಗಿ ಒಂಬತ್ತು ಬಯೊ ಬಬಲ್ ಸಿದ್ಧಪಡಿಸ ಲಾಗಿದೆ.

ಐದು ದಿನಗಳ ಕ್ವಾರಂಟೈನ್‌ನಲ್ಲಿದ್ದ ಆಟಗಾರರಿಗೆ ಎರಡು ದಿನಗಳ ಅಭ್ಯಾಸಕ್ಕೆ ಮಾತ್ರ ಅವಕಾಶ ನೀಡಲಾಗಿದೆ. ಹೀಗಿದ್ದೂ ಆಟಗಾರರ ಮುಖದಲ್ಲಿ ಮುನಿಸು ಇಲ್ಲ. ಟೂರ್ನಿ ಆರಂಭವಾಗುತ್ತಿರುವ ಖುಷಿಯಲ್ಲಿದ್ದಾರೆ

ಟೂರ್ನಿಯು ಬ್ಯಾಟರ್ ಮತ್ತು ಬೌಲರ್‌ಗಳಿಬ್ಬರಿಗೂ ಸವಾಲಿನದ್ದಾಗಲಿದೆ. ಅನಗತ್ಯ ಹೊಡೆತಗಳಿಗೆ ಕೈಹಾಕದೆ ಚೆಂಡನ್ನು ವಿಕೆಟ್ ಕೀಪರ್ ಬಳಿಗೆ ಬಿಡುವ 'ಕಲೆ'ಯನ್ನು ಬ್ಯಾಟರ್‌ಗಳು ಮತ್ತೆ ರೂಢಿಸಿಕೊಳ್ಳಬೇಕಾಗಿದೆ. ಬೌಲರ್‌ಗಳು ಸುದೀರ್ಘ ಸ್ಪೆಲ್‌ಗಳಿಗೆ ತಮ್ಮನ್ನು ಹೊಂದಿಸಿಕೊಳ್ಳಬೇಕಾಗಿದೆ. ಈ ಬಾರಿ ಟೂರ್ನಿಯಲ್ಲಿ ಹಿಂದಿನಷ್ಟು ಹೆಚ್ಚು ಪಂದ್ಯಗಳು ಇರುವುದಿಲ್ಲ.

ಎಲೀಟ್ ಹಂತದಲ್ಲಿ ಎಂಟು ತಂಡಗಳು: ಎಲೀಟ್ ಹಂತದಲ್ಲಿ ನಾಲ್ಕು ತಂಡಗಳ ಎಂಟು ಗುಂಪುಗಳನ್ನು ಮಾಡಲಾಗಿದೆ. ಪ್ಲೇಟ್ ಗುಂಪಿನಲ್ಲಿ ಆರು ತಂಡಗಳು ಇವೆ. ಗುಂಪಿನಿಂದ ಒಂದು ತಂಡಕ್ಕೆ ಮಾತ್ರ ಕ್ವಾರ್ಟರ್ ಫೈನಲ್ ಹಂತದಲ್ಲಿ ಆಡಲು ಅವಕಾಶ ಇರುವುದರಿಂದ ಲೀಗ್ ಪಂದ್ಯಗಳಲ್ಲಿ ಭಾರಿ ಪೈಪೋಟಿ ಏರ್ಪಡುವ ಸಾಧ್ಯತೆ ಇದೆ. ನಾಕೌಟ್ ಹಂತದ ಪಂದ್ಯಗಳು ಐಪಿಎಲ್ ಟೂರ್ನಿಯ ನಂತರ ನಡೆಯಲಿವೆ.

ಟೂರ್ನಿಯಲ್ಲಿ ರಾಷ್ಟ್ರೀಯ ತಂಡದ ಆಯ್ಕೆ ಸಮಿತಿಯವರು ಹೊಸ ಪ್ರತಿಭೆಗಳನ್ನು ಹುಡುಕಲಿದ್ದಾರೆ. ನ್ಯೂಜಿಲೆಂಡ್ ಎದುರಿನ ಸರಣಿಯಲ್ಲಿ ತಂಡದಿಂದ ಹೊರಗಿರಿಸಲಾಗಿದ್ದ ಪ್ರಿಯಾಂಕ್ ಪಾಂಚಾಲ್, ಅಭಿಮನ್ಯು ಈಶ್ವರನ್ ಮತ್ತು ಹನುಮ ವಿಹಾರಿ ಮೇಲೆ ಕ್ರಿಕೆಟ್ ಪ್ರೇಮಿಗಳು ದೃಷ್ಟಿ ನೆಟ್ಟಿದ್ದಾರೆ. 19 ವರ್ಷದೊಳಗಿನವರ ವಿಶ್ವಕಪ್‌ನಲ್ಲಿ ಮಿಂಚಿದ್ದ ಯಶ್ ಧೂಳ್ ಮತ್ತು ರಾಜ್ ಬಾವ ಪ್ರಥಮ ದರ್ಜೆ ಕ್ರಿಕೆಟ್ ಪದಾರ್ಪಣೆ ಮಾಡುವ ಸಾಧ್ಯತೆ ಇದೆ.

ವಿಶ್ವಾಸದಲ್ಲಿ ಮನೀಷ್ ಬಳಗ

ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ವಿಶಿಷ್ಟ ಛಾಪು ಮೂಡಿಸಿರುವ ಕರ್ನಾಟಕ ತಂಡ ರೈಲ್ವೇಸ್ ಎದುರಿನ ಮೊದಲ ಪಂದ್ಯದಲ್ಲಿ ಜಯ ಗಳಿಸುವ ವಿಶ್ವಾಸದಲ್ಲಿದೆ. ಈ ಎರಡು ತಂಡಗಳು ಮುಖಾಮುಖಿಯಾದಾಗಲೆಲ್ಲ ಕರ್ನಾಟಕ ಮೇಲುಗೈ ಸಾಧಿಸಿದೆ. ಹಿಂದಿನ ಐದು ಪಂದ್ಯಗಳಲ್ಲಿ ಏಕಪಕ್ಷೀಯ ಆಟವಾಡಿರುವುದರಿಂದ ಭರವಸೆಯಲ್ಲಿದೆ.

2020ರಲ್ಲಿ ನಡೆದ ಪಂದ್ಯದಲ್ಲಿ ರೈಲ್ವೇಸ್ ಎದುರು ಕರ್ನಾಟಕ 10 ವಿಕೆಟ್‌ಗಳ ಜಯ ಸಾಧಿಸಿತ್ತು. 2018ರಲ್ಲಿ 176 ರನ್‌ಗಳಿಂದ, 2017ರಲ್ಲಿ 209 ರನ್‌ಗಳಿಂದ, 2014ರಲ್ಲಿ 136 ರನ್‌ಗಳಿಂದ ಮತ್ತು 2011ರಲ್ಲಿ 51 ರನ್‌ಗಳಿಂದ ಗೆಲುವು ಸಾಧಿಸಿತ್ತು. ಈ ಬಾರಿ ಮನೀಷ್ ಪಾಂಡೆ ತಂಡವನ್ನು ಮುನ್ನಡೆಸುತ್ತಿದ್ದು ಮಯಂಕ್ ಅಗರವಾಲ್, ದೇವದತ್ತ ಪಡಿಕ್ಕಲ್, ಆರ್. ಸಮರ್ಥ್, ಕರುಣ್ ನಾಯರ್ ಮುಂತಾದ ಅನುಭವಿ ಬ್ಯಾಟರ್‌ಗಳ ಬಲ ತಂಡಕ್ಕಿದೆ. ಕೃಷ್ಣಪ್ಪ ಗೌತಮ್, ರೋನಿತ್ ಮೋರೆ, ಶ್ರೇಯಸ್ ಗೋಪಾಲ್ ಮುಂತಾದವರು ಬೌಲಿಂಗ್ ವಿಭಾಗದ ಹೊಣೆ ಹೊರಲಿದ್ದಾರೆ. ಅಮಿತ್ ಮಿಶ್ರಾ, ಅರಿಂದಂ ಘೋಷ್, ಕರ್ಣ ಶರ್ಮಾ, ಹಿಮಾಂಶು ಸಾಂಗ್ವಾನ್ ಅವರ ಮೇಲೆ ರೈಲ್ವೇಸ್ ಭರವಸೆ ಇರಿಸಿಕೊಂಡಿದೆ.

ಪಂದ್ಯದಲ್ಲಿ 10 ವಿಕೆಟ್ ಸಾಧನೆ

ಬೌಲರ್	ವಿಕೆಟ್	ಸ್ಥಳ	ವರ್ಷ
ಅನಿಲ್ ಕುಂಬ್ಳೆ	150ಕ್ಕೆ10	ಬೆಂಗಳೂರು	1997
ಕೆ.ಪಿ.ಅಪ್ಪಣ್ಣ	107ಕ್ಕೆ11	ದೆಹಲಿ	2011
ಕೆ.ಗೌತಮ್	142ಕ್ಕೆ10	ದೆಹಲಿ	2017

ಕರ್ನಾಟಕ–ರೈಲ್ವೇಸ್ ಮುಖಾಮುಖಿ

10 ಪಂದ್ಯ | 6 ಕರ್ನಾಟಕ ಜಯ | 1 ರೈಲ್ವೇಸ್ ಜಯ

ಡ್ರಾ 3

ಕರ್ನಾಟಕದ ಮನೀಷ್ ಪಾಂಡೆ (ಬಲ) ಮತ್ತು ಕೆ.ವಿ.ಸಿದ್ಧಾರ್ಥ್ –ಪ್ರಜಾವಾಣಿ ಚಿತ್ರ

ಮೊದಲ ಸುತ್ತಿನ ಪಂದ್ಯಗಳ ವಿವರ

ಸೆಣಸುವ ತಂಡಗಳು	ಗುಂಪು	ಪಂದ್ಯ ನಡೆಯುವ ಸ್ಥಳ
ಕರ್ನಾಟಕ–ರೈಲ್ವೇಸ್	ಎಲೀಟ್ 'ಸಿ'	ಚೆನ್ನೈ
ಹೈದರಾಬಾದ್–ಚಂಡೀಗಢ	ಎಲೀಟ್ 'ಬಿ'	ಭುವನೇಶ್ವರ್
ಬೆಂಗಾಲ್–ಬರೋಡ	ಎಲೀಟ್ 'ಬಿ'	ಕಟಕ್
ಕೇರಳ–ಮೇಘಾಲಯ	ಎಲೀಟ್ 'ಎ'	ರಾಜ್‌ಕೋಟ್
ಗುಜರಾತ್–ಮಧ್ಯಪ್ರದೇಶ	ಎಲೀಟ್ 'ಎ'	ರಾಜ್‌ಕೋಟ್
ಮಣಿಪುರ–ಅರುಣಾಚಲಪ್ರದೇಶ	ಪ್ಲೇಟ್	ಕೋಲ್ಕತ್ತ
ಜಮ್ಮು ಮತ್ತು ಕಾಶ್ಮೀರ–ಪುದುಚೇರಿ	ಎಲೀಟ್ 'ಸಿ'	ಚೆನ್ನೈ
ಸೌರಾಷ್ಟ್ರ–ಮುಂಬೈ	ಎಲೀಟ್ 'ಡಿ'	ಅಹಮದಾಬಾದ್
ಒಡಿಶಾ–ಗೋವಾ	ಎಲೀಟ್ 'ಡಿ'	ಅಹಮದಾಬಾದ್
ನಾಗಾಲ್ಯಾಂಡ್–ಸಿಕ್ಕಿಂ	ಪ್ಲೇಟ್	ಕೋಲ್ಕತ್ತ
ಬಿಹಾರ್–ಮಿಜೋರಾಂ	ಪ್ಲೇಟ್	ಕೋಲ್ಕತ್ತ
ಜಾರ್ಖಂಡ್–ಛತ್ತೀಸ್‌ಗಢ	ಎಲೀಟ್ 'ಎಚ್'	ಗುವಾಹಟಿ
ದೆಹಲಿ–ತಮಿಳುನಾಡು	ಎಲೀಟ್ 'ಎಚ್'	ಗುವಾಹಟಿ
ಮಹಾರಾಷ್ಟ್ರ–ಅಸ್ಸಾಂ	ಎಲೀಟ್ 'ಜಿ'	ರೋಹ್ಟಕ್
ವಿದರ್ಭ–ಉತ್ತರಪ್ರದೇಶ	ಎಲೀಟ್ 'ಜಿ'	ಗುರುಗಾಂವ್
ಹರಿಯಾಣ–ತ್ರಿಪುರ	ಎಲೀಟ್ 'ಎಫ್'	ದೆಹಲಿ
ಪಂಜಾಬ್–ಹಿಮಾಚಲಪ್ರದೇಶ	ಎಲೀಟ್ 'ಎಫ್'	ದೆಹಲಿ
ಸರ್ವಿಸಸ್–ಉತ್ತರಾಖಂಡ	ಎಲೀಟ್ 'ಇ'	ತಿರುವನಂತಪುರ
ಆಂಧ್ರ–ರಾಜಸ್ಥಾನ	ಎಲೀಟ್ 'ಇ'	ತಿರುವನಂತಪುರ